
ಹೆಚ್.ಜಿ.ರಾಧಾದೇವಿ

# ಬಾರೇ ಭಾಗ್ಯದ ಸಿರಿಯೆ



094.814 308 3
RAD N96.

# ಬಾರೇ ಭಾಗ್ಯದ ಸಿರಿಯೇ

ಸಾಮಾಜಿಕ ಕಾದಂಬರಿ

## ಹೆಚ್.ಜಿ.ರಾಧಾದೇವಿ

ಕೀರ್ತಿ ಪ್ರಕಾಶನ
2, ಎಸ್.ಡಿ.ಎಂ.ಲೇನ್.
ಮನವಾರ್ತಪೇಟೆ, ಬೆಂಗಳೂರು-53

META ENTERED

BARE BHAGYADA SIRIYE–A Social novel by Smt H. G. Radhadevi, Published by Keerthi Prakashana, No 2, S. D. M. Lane, Manavarthipet Bangalore-560053. & Printed at Anitha Printers Bangalore–23

| | | |
|---|---|---|
| First Edition | : | 1996 |
| Title of the Novel | : | BARE BHAGYADA SIRIYE |
| Authoress | : | H. G. Radha devi |
| Rights | : | H. G. Radha devi |
| Cover Design | : | P. S. Kumar |
| Price | : | 32–00 |

| | | |
|---|---|---|
| ಮೊದಲ ಮುದ್ರಣ | : | 1996 |
| ಕೃತಿಯ ಹೆಸರು | : | ಬಾರೇ ಭಾಗ್ಯದ ಸಿರಿಯೇ |
| ಕೃತಿಗಾರ್ತಿ | : | ಹೆಚ್. ಜಿ. ರಾಧಾದೇವಿ |
| ಹಕ್ಕುಗಳು | : | ಲೇಖಕಿಯದು |
| ಬೆಲೆ | : | ರೂ. 32–00 |
| ಪುಟಗಳು | : | 132+8 |
| ಮುದ್ರಕರು | : | ಅನಿತಾ ಪ್ರಿಂಟರ್ಸ್<br>ಮಾಗಡಿ ರಸ್ತೆ<br>ಬೆಂಗಳೂರು–23. |

ಪ್ರಕಾಶಕರು

ಕೀರ್ತಿ ಪ್ರಕಾಶನ

2, ಎಸ್. ಡಿ. ಎಂ. ಲೇನ್

ಬೆಂಗಳೂರು–53

ಫೋನ್ 2253407

8C695CR
594.814 308
RAD N96

# ಮುನ್ನುಡಿ

"ಬಾರೇ ಭಾಗ್ಯದ ಸಿರಿಯೇ" ಕಾದಂಬರಿಯಲ್ಲಿ ಆಧ್ಯಾತ್ಮಿಕ ರಹಸ್ಯಗಳು, ವೈಜ್ಞಾನಿಕ ತತ್ವಗಳು ಒಂದಕ್ಕೊಂದು ಹೇಗೆ ಪೂರಕವಾಗಿವೆ ಎಂಬುದನ್ನು ಪ್ರಸ್ತಾಪಿಸಿದ್ದೇನೆ. ಪ್ರಸಿದ್ಧ ವಿಜ್ಞಾನಿ ಒಬ್ಬರು ವೈದಿಕ ಬ್ರಾಹ್ಮಣನೊರ್ವನ ಬಳಿ ಬಂದು ಚರ್ಚಿಸುವ ಕಥಾ ಭಾಗ ಇದೆ. ದೈವ ಭಕ್ತಿ, ಹಿರಿಯರ ಆರಾಧನೆ, ಧಾರ್ಮಿಕ ಶ್ರದ್ಧೆಗಳಿಂದ ಮನುಷ್ಯನ ಬದುಕಿನ ಉನ್ನತಿ ಸಾಧ್ಯ ಎಂಬುದು ಈ ಕಾದಂಬರಿ ಸೂಚಿಸುತ್ತದೆ.

ನನ್ನ ಕಾದಂಬರಿಗಳ ಬಗ್ಗೆ ಅಪಾರ ಅಭಿಮಾನ ತೋರುತ್ತಿರುವ ನನ್ನ ಪ್ರೀತಿಯ ಅಭಿಮಾನಿಗಳಿಗೆ ಅನಂತ ವಂದನೆಗಳು. ಕಾದಂಬರಿ ಪ್ರಕಟಿಸುತ್ತಿರುವ ಶ್ರೀ ಕೆ. ಶ್ರೀನಿವಾಸನ್ ಅವರಿಗೆ ಅನಂತ ವಂದನೆಗಳು.

ನಿಮ್ಮ ಪ್ರೀತಿಯ ಲೇಖಕಿ

**ಹೆಚ್. ಜಿ. ರಾಧಾದೇವಿ**

# ಅ ರ್ಪ ಣೆ

ಸ್ವಾಮಿಾ ಶ್ರೀ ಲಕ್ಷ್ಮೀ ವೆಂಕಟೇಶ್ವರಾ, ಶ್ರೀ ತಿರುಮಲೆ ತಿರು ಪತಿಯ. ಸಾಮ್ರಾಜ್ಯಾಧಿ ಪತಿಯಾದ ನೀನು ಶ್ರೀ ತಿರುಅನ್ಬಿಲ್ ಕ್ಷೇತ್ರದ ಶ್ರೀ ತಾರಕ ವಿಮಾನ ದೇವಾಲಯದಲ್ಲಿ ಶ್ರೀ ತಿರುವಡಿ ವಾಳ್ಗೈನಂಬಿ ಎಂಬ ಹೆಸರಿನಿಂದ ನೆಲೆಸಿದ್ದಿ, ದಿವ್ಯ ನೂರೆಂಟು ಶ್ರೀ ತಿರುಪತಿಗಳಲ್ಲಿ ನಾಲ್ಕನೆಯದಾದ ಈ ತಿರುಅನ್ಬಿಲ್ ಕ್ಷೇತ್ರವು ಕೊಲ್ಲಡಂ ಕಾವೇ ರಿಯ ಉತ್ತರ ದಡದಲ್ಲಿದೆ ಈ ಕ್ಷೇತ್ರದಲ್ಲಿ ಅಳಹಿಯವಲ್ಲಿ ನಾಚ್ಚಿ ಯಾರ್ ಎಂಬ ಹೆಸರಲ್ಲಿ ಶ್ರೀ ಮಹಾಲಕ್ಷ್ಮೀ ನಿಮ್ಮನ್ನು ಸೇವಿಸು ತ್ತಾಳೆ. ಮುಡುಕ ಪುಷ್ಕರಣಿ ಎಂಬ ಈ ಕ್ಷೇತ್ರದ ಪವಿತ್ರ ತೀರ್ಥದಲ್ಲಿ ಸ್ನಾನ ಮಾಡಿ, ಭ್ರಹ್ಮ ಮತ್ತು ವಾಲ್ಮಿಕಿಗಳಿಗೆ ಪ್ರತ್ಯಕ್ಷನಾದ ನಿನ್ನನ್ನು ವಂದಿಸಿ ಶ್ರೀ ತಿರುವಡಿ ವಾಳ್ಗೈನಂಬಿ ಶ್ರೀ ಗೋವಿಂದಾ ಶರಣು ಎಂದು ಭಜಿಸಿ ಈ ಕೃತಿ ನಿನಗರ್ಪಿಸುತ್ತೇನೆ. ಶ್ರೀ ಲಕ್ಷ್ಮೀ ಪದ್ಮೆಯರರಸ ಶ್ರೀ ವೆಂಕಟೇಶನಾದ ನೀನು ಈ ಎಲ್ಲಾ ಕ್ಷೇತ್ರಗಳಲ್ಲಿ ನೆಲೆಸಿದ್ದಿ ಎಂದು ಮತ್ತೆ ಮತ್ತೇ ನಿನಗೆ ಶರಣಾಗುವೆ.

ಇಂತಿ ವಂದನೆಗಳು

ಸೌ|| ಹೆಚ್. ಜಿ. ರಾಧಾದೇವಿ ಸುದರ್ಶನ್

ಹಯಗ್ರೀವ ಆಚಾರ್ಯರು ಚಿಂತಾಂಬುದಿಯಲ್ಲಿ ಮುಳುಗಿದ್ದರು. ಸಂಸಾರ ಹೂಡಿದ ಮೂವತ್ತು ವರ್ಷದಿಂದ ಆಚಾರ್ಯರು ಎಂದು ಗಾಢ ಚಿಂತೆ ಮಾಡಿರಲಿಲ್ಲ

ಮನೆತನದ ದೇವರು ಶ್ರೀ ಲಕ್ಷ್ಮೀ ಹಯಗ್ರೀವ ಸ್ವಾಮಿ ಹೇಗೋ ಕುಟುಂಬವನ್ನು ನಡೆಸಿಕೊಂಡು ಹೋಗುತ್ತಿದ್ದ. ಆಚಾರ್ಯರು ಎಂದೂ ಆಸ್ತಿಪಾಸ್ತಿ ಮಾಡಬೇಕೆಂದು ಆಸೆ ಪಟ್ಟವರಲ್ಲ, ಮಾಡಿಯೂ ಇರಲಿಲ್ಲ.

ಬಾಲ್ಯದಲ್ಲಿ ತಾತಾ, ಯೌವ್ವನದಲ್ಲಿ ತಂದೆ ಆರಾಧಿಸುತ್ತಾ ಇದ್ದ ಶ್ರೀ ಲಕ್ಷ್ಮೀ ಹಯಗ್ರೀವ ದೇವರಲ್ಲಿ ಅಚಲವಾದ ಭಕ್ತಿ ಬೆಳೆದು ಬಂದಿತ್ತವರಿಗೆ. ಅದು ತಂದೆ ತಾತರಿಂದ ಬಂದ ಆಸ್ತಿ

ತಾತಾ ಇಬ್ಬರ ಹೆಣ್ಣು ಮಕ್ಕಳ ಮದುವೆಯನ್ನು ಮಾಡುವಾಗ ಒಂದು ಚೂರು ಚಿಂತೆ ಮಾಡಿರಲಿಲ್ಲವಂತೆ. ಗಂಡಿನ ಮನೆಯವರು ತಾವಾಗಿ ಕೇಳಿಕೊಂಡು ಬಂದಿದರಂತೆ; ಬಂದ ದಿನವೇ ಹೆಣ್ಣು ತೋರಿಸಿ, ಅವರು ಒಪ್ಪಿದ ಮೇಲೆ ಆ ದಿನವೇ... ನಿಶ್ಚಯವೂ ಮಾಡಿಬಿಟ್ಟರಂತೆ.

ಶ್ರೀ ಲಕ್ಷ್ಮೀ ಹಯಗ್ರೀವ ದೇವರಿಗೆ ಒಂದು ನಮಸ್ಕಾರ ಹಾಕಿ.... "ಸ್ವಾಮಿ ಹೆಣ್ಣು ಮಕ್ಕಳಿಗೆ ಮದುವೆ ಗೊತ್ತಾಗಿದೆ. ಎಲ್ಲಾ ನಿನ್ನ ದಯೆ, ಇನ್ನು ಸಾಂಗಿತವಾಗಿ ಮದುವೆ ಮಾಡುವುದು ನಿನ್ನ ಹೊಣೆ...." ಎಂದು ದೀರ್ಘದಂಡ ನಮಸ್ಕಾರ ಹಾಕಿ ನಿಶ್ಚಿಂತರಾಗಿದ್ದರಂತೆ.

ಸುತ್ತ ಹತ್ತೂರಿನ ಪೌರೋಹಿತ್ಯ ಮಾಡುತ್ತಿದ್ದರು. ಆಚಾರ್ಯರ ಮಗಳಿಗೆ ಮದುವೆ ಎಂದೊಡನೆ ದಿನಸಿ, ತೆಂಗಿನಕಾಯಿ ಬೆಲ್ಲದಿಂದ ಹಿಡಿದು, ವಾಲೆ, ತಾಳಿಯುವರೆಗೂ ಜನ ತಮ್ಮ ತಮ್ಮ ಅನುಕೂಲಕ್ಕೆ ಅನುಸಾರವಾಗಿ ತಾವೇ ತಂದುಕೊಟ್ಟರು.

ಯಾವ ಕೊರತೆ ಇಲ್ಲದಂತೇ ಮೂರು ದಿನಗಳ ಎರಡು ಹೊತ್ತು ಸಾವಿರಾರು ಜನಗಳಿಗೆ ಸಿಹಿ ಊಟ ಹಾಕುವುದರೊಂದಿಗೆ ವರಪೂಜೆ, ಧಾರೆ, ಬೀಗಕಾಡಣದ ಮೂರುದಿನದ ಬೀಗಕಾಡಣದ ಕಾರ್ಯಕ್ರಮಗಳಲ್ಲಿ ಮದುವೆ ಸಾಂಗವಾಗಿ ನೆರವೇರಿತು.

ಕಾವೇರಿ ನಾಲೆ ಕೆಳಗೆ ಗದ್ದೆಗಳಿದ್ದ ಊರಿನ ಶ್ರೀಮಂತ ಚಂದ್ರಪ್ಪಗೌಡ- "ನನಮ್ಮೂರ ಬ್ರಾಹ್ಮಣ ವಧುಗಳು ಅತ್ತೆ ಮನೆಗೆ ಬಂಗಾರ ಇಲ್ಲದೇ ಹೋಗ ಬಾರದೆಂದು ಇಬ್ಬರು ಹುಡುಗಿಯರಿಗೂ ಎರಡೆರಡು ತೊಲ ಬಂಗಾರ ಹಾಕಿದ್ದ ನಂತೆ. ಅದು ಧರ್ಮದ ಕಾಲವಾಯಿತು. ಜನರಲ್ಲಿ ಧರ್ಮವೂ ಇತ್ತು· ನಾಡಿನಲ್ಲಿ ಸಮೃದ್ಧಿಯೂ ಇತ್ತು. ಮುಂದೆ ತಂದೆಯ ಕಾಲದಲ್ಲಿ ಬದುಕಿಗೆ ಕೊರತೆ ಇರಲಿಲ್ಲ. ಪೌರೋಹಿತ್ಯದಿಂದಲೇ ಮನೆ ಸಮುದ್ಧಿಯಾಗಿ ನಡೆಯು ತ್ತಿತ್ತು. ಮೂರು ಹೆಣ್ಣು ಮಕ್ಕಳ ಮದುವೆ, ಯಾರಲ್ಲಿ ಸಾಲಾ ಮಾಡದೆ ಸುಲಲಿತವಾಗಿ ಮಾಡಿ ಗೆದ್ದರು.

ಅಕ್ಕಂದಿರೂ ಅತ್ತೆ ಮನೆಗಳಲ್ಲಿ ಸುಖವಾಗಿದ್ದರು. ಗಂಡಿನವರಲ್ಲಿಯೂ ಆಗೆಲ್ಲಾ ಧರ್ಮ ಬುದ್ಧಿ ಇತ್ತು. ವರದಕ್ಷಿಣೆ ಇತ್ಯಾದಿ ಹಾವಳಿಗಳು ಆಗೆಲ್ಲಾ ಕಾಡಿರಲಿಲ್ಲ. -

ತಂದೆಗೆ ಒಬ್ಬನೇ ಮಗನಾಗಿ ಮನೆತನದಿಂದ ಬಂದ ಪೌರೋಹಿತ್ಯ ಮಾಡುತ್ತಿದ್ದರು ಹಯವದನಾದಚಾರ್ಯರು, ಬೆಳಗ್ಗೆ ಬ್ರಾಹ್ಮಿ ಮುಹೂರ್ತ ದಲ್ಲೆದ್ದು ಹಳ್ಳಿ ಮನೆಯ ಅವಿಶಾಲ ಹಿತ್ತಲಿನ ಸಿಹಿನೀರಿನ ಭಾವಿಯಲ್ಲಿ ತಾವೇ ನೀರು ಸೇದಿ ತಂದು ಹಿತ್ತಲಿನಲ್ಲಿ ತಾವೇ ಬೆಳದಿದ್ದ ತುಳಸಿ, ಮಲ್ಲಿಗೆ, ಪಾರಿಜಾತ, ಗುಲಾಬಿ ಇತ್ಯಾದಿ ಬಗೆಬಗೆ ಹೂಗಳನ್ನು ಗಿಡದಿಂದ ಕಿತ್ತು ಬುಟ್ಟಿಯಲ್ಲಿ ಹಾಕುವಾಗಲೂ ಮಂತ್ರೋಕ್ತವಾದ ಸ್ತೋತ್ರ ಶ್ರೀ ಲಕ್ಷ್ಮಿ ಹಯಗ್ರೀವ ಸ್ತೋತ್ರ ವೇದಾಂತ ದೇಶಿಕಾಚಾರ್ಯರ ಸ್ತೋತ್ರ ಹೇಳಿಕೊಂಡೇ ಅಭ್ಯಾಸ ಮುಂದೆ ದೇವರ ಮನೆಗೆ ಬಂದು ಪಾಂಗಿತವಾಗಿ ಪೂಜೆ ವೇದ ಮಂತ್ರ ಗಳ ಪಠಣೆ ಎಲ್ಲಾ ಮು ಯುವ ವೇಳೆಗೆ ಒಂಭತ್ತೂವರೆ.

ಬೆಳಗ್ಗೆ ನಾಲ್ಕು ಗಂಟೆಗೆ ಎದ್ದವರಿಗೆ ಬರಿ ದೇವರ ಸ್ತೋತ್ರ ಪಠನವೇ ಆಹಾರ. ಒಂದು ತೊಟ್ಟು ನೀರು ಸಹ ಕುಡಿಯದೇ ಮಾಸಲಾಗಿ ಶ್ರೀಲಕ್ಷ್ಮಿ ಹಯಗ್ರೀವ ದೇವರನ್ನು ಪೂಜಿಸುವರು.

ಪೂಜೆ, ಪುನಸ್ಕಾರವೇನೋ ತಂದೆ ತಾತಂದಿರ ಕಾಲದಿಂದ ಇದ್ದಂತೆ ನಡೆಸಿಕೊಂಡು ಬಂದಿದ್ದರು. ಆಚಾರ್ಯರು ಒಳ್ಳೆ ವೇದವಿದ್ಯಾ ಪಾರಾಂಗತರು ಸಹ. ಆದರೆ ಈಗ ಕಾಲ ಬದಲಾಗಿತ್ತು. ಜನರಿಗೆ ದೇವರಲ್ಲಿ ನಂಬಿಕೆ, ಶ್ರದ್ಧೆ ಕಡಿಮೆಯಾಗಿತ್ತು. ಇದಕ್ಕೆ ಜನರನ್ನು ದೂಷಿಸುವ ಹಾಗಿರಲಿಲ್ಲ. ಬದುಕಿನ ಸಮೃದ್ಧಿಯೆ ನಾಶವಾಗಿ ಜನರು ಹೊಟ್ಟೆ ಪಾಡು ನಡೆಸುವುದೇ ಕಷ್ಟ

ಎನ್ನುವಂತೆ ಬೆಲೆಗಳು ಗಗನಕ್ಕೇರಿರುವಾಗ ಜನಗಳು ದೇವರಿಗೆ, ಧರ್ಮಕ್ಕೆ ಮಾಡುವುದಾವಾಗ ?

ಒಂದು ಕಡೆ ಸಮಯದ ಅಭಾವ....ಒಂದು ಕಡೆ ಆರ್ಥಿಕ ಕೊರತೆ, ಅದರ ನಡುವೆ ಕೆಲವು ವೈಚಾರಿಕವಾದಿಗಳ ಸತತವಾಗಿ ಮೆದುಳಿಗೆ ಬಿಂಬಿಸುತ್ತಿದ್ದ. ಪೂಜೆ, ಪುನಸ್ಕಾರ ದೇವರು....ಧರ್ಮ ಎಲ್ಲಾ ಮೂಢನಂಬಿಕೆ ಎಂಬ ಪ್ರಚಾರ, ಈ ಕಾರಣಗಳಿಂದ ವೈದಿಕ ಬ್ರಾಹ್ಮಣರಿಗೆ ಜೀವನ ನಡೆಸುವುದೇ ಕಷ್ಟವಾಗಿತ್ತು. ಆದರೂ ಆಚಾರ್ಯರ ವಿದ್ವತ್, ಮಂತ್ರೋಕ್ತ ಪೂಜೆ, ಅವರ ಕುಟುಂಬವನ್ನೆಂದು ಉಪವಾಸ ಕೆಡವಿರಲಿಲ್ಲ.

ಗಂಡು ಮಕ್ಕಳು ಇಬ್ಬರು ಈ ವೇದಮಂತ್ರಾಧ್ಯಾಯನ ಪೌರೋಹಿತ್ಯ ಒಲ್ಲೆ ಎಂದರು. ಒಬ್ಬ ಮಗ ಬಿ ಎ. ಪಾಸ್ ಮಾಡಿ ಹೈಸ್ಕೂಲ್ ಮೇಸ್ಟ್ರಾಗಿ ಮೈಸೂರಲ್ಲಿ ನೆಲೆಸಿದ ಇನ್ನೊಬ್ಬ ಮಗ ಎಂ ಎ ಓದಿ, ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದ! ದೊಡ್ಡ ಮಗ ಅನಂತ ತಂದೇ ತೋರಿಸಿದ ಹುಡುಗಿಯನ್ನೇ ವಿವಾಹವಾಗಿದ್ದ. ಎರಡನೆ ಮಗ ಗೋವಿಂದ ತನ್ನ ಕಾಲೇಜಿನ ಲೆಕ್ಚರರ್ ಒಬ್ಬಳನ್ನೇ ವಿವಾಹವಾಗಿದ್ದ.

ಅವರೂ ಬ್ರಾಹ್ಮಣರೆ, ಎರಡನೆ ಮಗನ ವಿವಾಹದಲ್ಲಿ ಔಪಚಾರಿಕವಾಗಿ ಭಾಗವಹಿಸಿದ್ದರಷ್ಟೆ. ಸಂಸಾರ ಹೂಡಿದ ಇಬ್ಬರು ಗಂಡುಮಕ್ಕಳು ತಂದೆಗೆ ಏನೂ ಸಹಾಯ ಮಾಡುತ್ತಿರಲಿಲ್ಲ.

ಆ ಬಗ್ಗೆ ಆಚಾರ್ಯರು ಮಕ್ಕಳ ಬಗ್ಗೆ ಒಂದು ಚೂರು ಅಸಮಾಧಾನ ವಿರಲಿಲ್ಲ. ಮೈಸೂರಲ್ಲೆ ಸಂಸಾರ ಹೂಡಿದ್ದ ಗೋವಿಂದ ಜೋರಾಗಿದ್ದ. ಗಂಡಾಹೆಂಡತಿ ಇಬ್ಬರು ಕಾಲೇಜ್ ಲೆಕ್ಚರರ್ ಪೋಸ್ಟಿನಲ್ಲಿದ್ದರಿಂದ ಟಿ. ವಿ., ವೀಡಿಯೊ, ಸೋಫಾ, ಫ್ರಿಜ್‌ಯಿಂದ ಹಿಡಿದು ಎಲ್ಲಾ ಆದುನಿಕ ಸಾಮಾನುಗಳಿತ್ತು.

ನಾಲ್ಕು ವರ್ಷದಿಂದ ಸಮಾಧಾನವಾಗಿದ್ದ ಅನಂತನ ಹೆಂಡತಿ ಈಗ ಗಂಡನನ್ನು ಪೀಡಿಸಲಾರಂಭಿಸಿದಳು.

"ನೋಡಿ ಅವರು ಹೊಸದಾಗಿ ಸಂಸಾರ ಹೂಡಿದವರು ಎಷ್ಟು ಜೋರಾಗಿದ್ದಾರೆ. ನಾವು ನೋಡಿ ನಾಲ್ಕು ವರ್ಷದಿಂದ ಸಂಸಾರ ಹೂಡಿದರೂ ಬಂದೋರಿಗೆ ಕೂಡಲಿಕ್ಕೆ ಒಂದು ಕುರ್ಚಿ ಇಲ್ಲ. ಇನ್ನು ಹಳೇ ಚಾಪೆ ಹಾಕಿ ಕೂಡಿಸ್ತೀವಿ" ಎಂದು ವರಾತ ಮಾಡುತ್ತ....

ಸಾಲಾ ಸೋಲಾ ಮಾಡಿ ಒಂದೊಂದೇ ವಸ್ತು ಕೊಳ್ಳಲಾರಂಭಿಸಿದಳು ಅನಂತ ಗೋವಿಂದನಷ್ಟು ನಿಸ್ಸಂಕೋಚವಾಗಿ ತಂದೆ–ತಾಯಿಗಳ ಬಗ್ಗೆ ವರ್ತಿಸುತ್ತಿರಲಿಲ್ಲ. ಆಗಾಗ ತಾಯಿಗೆ ಸೀರೆ,...ತಂಗೀಗೆ ಸೀರೆಗಳು....ತಂದೆಗೆ ಪಂಚೆ, ಶರಟು, ತಿಂಗಳಿಗೆ ತಾಯಿಗೆ ಒಂದೈವತ್ತು ರೂ. ಗಳಾದರು ಕಳಿಸುತ್ತ ಇದ್ದ. ಈಗ ಹೆಂಡತಿಯ ವರಾತದಲ್ಲಿ ಈ ಎಲ್ಲಾ ಸಹಾಯ ನಿಂತಿತು.

ಹಯಗ್ರೀವಚಾರ್ಯರ ಪತ್ನಿ ಸೀತಮ್ಮ ಈ ಬಗ್ಗೆ ಆಗಾಗ ವ್ಯಥೆಯಿಂದ ಗೋವಿಂದನಿಗೆ ಕೈ ತುಂಬಾ ಬಂದರೂ ತಂದೆ ತಾಯಿ, ತಗ್ಗಿ ಅನ್ನೋ ಪಾಚ್ಚೀನೆ ಇಲ್ಲ. ಅನಂತ ಚೂರು ಪಾರು ಮಾಡ್ತಿದ್ದ ಈಗವನ ಹೆಂಡ್ತೀನ್ನು ಏನು ಮಾಡಲಿಕ್ಕೆ ಬಿಡೋದಿಲ್ಲ. ಇವರಿಗೂ ವಯಸ್ಸಾಯ್ತು. ಅವರಂತು ಯಾವುದೂ ಮನಸ್ಸಿಗೆ ಹಚ್ಚಿಕೊಳ್ಳೋದಿಲ್ಲ. ನಾವು ಮಕ್ಕಳನ್ನು ಸಾಕೋದು ನಮ್ಮ ಕರ್ತವ್ಯ. ಅವರಿಂದ ಏನು ಬಯಸಬಾರದು ಅಂತಾರೆ. ಆದರೆ ಶಾರದನ ಮದುವೆ ಗತಿ ಏನಮ್ಮ? ಎನ್ನುತ್ತಿದ್ದರು.

ತಮ್ಮ ಗೆಳತಿ ಶಾನುಭೋಗರ ಪತ್ನಿ ಗೌರಮ್ಮನ ಜೊತೆ ಆಕೆ ಮನಬಿಚ್ಚಿ ಮಾತಾಡುತ್ತಿದ್ದರು.

ಗೌರಮ್ಮ ಬೇಸರದಿಂದ—"ಈಗಿನ ಕಾಲದಲ್ಲಿ ಗಂಡು ಮಕ್ಕಳಿಗೆ ಮುಪ್ಪಿನ ತಂದೆತಾಯಿ ಸೇವೆ, ತಂಗಿ ಮದುವೆಯ ಹೊಣೆ, ಯಾವುದೂ ಬೇಕಾಗಲ್ರಿ. ಈ ಸಾಧನಗಳು ಬಂದಮೇಲೆ ತಂದೆ ತಾಯಿಗೆ ಒಂದು ಕಾಸಿ ದುಡ್ಡು ಕಳಿಸಿದರೂ ಖರ್ಚಾಗತ್ತೆ ಅನ್ನೋ ಜಿಪುಣತನ, ಮೈಸೂರು ಸೇರಿದ ನನ್ನ ನಾಲ್ಕು ಜನ ಗಂಡು ಮಕ್ಕಳದೂ ಇದೇ ಕಥೆ....

"ಅವರ ಮನೇಲಿ ನಾಲ್ಕು ಗಾಡ್ರೇಜ್ ಬೀರು ಇದೆ. ಅವರು ಸ್ಪೈಟ್ ಮಾಡಿಕೊಂಡರು. ಹೀಗೆ ಒಬ್ಬರ ಮೇಲೊಬ್ಬರು ಪೈಪೋಟಿ ಮಾಡಿಕೊಂಡು ತಾವು ತಾವು ಮಾಡಿಕೊಂಡರೆ ಹೊರತು, ನಮ್ಮ ನಾಗೂ ಮದುವೆಗೆ ಯಾರು ಮಾಡಿದರು. ನಾಗು ಓದಿ, ಬಿ. ಎ. ಪಾಸ್ ಮಾಡಿ ನಂಜನಗೂಡಿನ ಸ್ಕೂಲಲ್ಲಿ ಟೀಚರಾಗಿ ಸಂಪಾದಿಸಿದ್ದೇ ಕೂಡಿಟ್ಟು ಈಗವಳ ಮದುವೆ ಮಾಡ್ತಿದ್ದೀವಿ. ನಾಲ್ಕು ಜನ ಗಂಡು ಮಕ್ಕಳಿದ್ದರೂ ಒಬ್ಬೊಬ್ಬರು ಎರಡೆರಡು ಸಾವಿರ ರೂ. ಸಹ ಹಾಕ್ಲಿಕ್ಕೆ ಸಿದ್ಧರಿಲ್ಲ" ಎಂದರು.

"ನೀವು ಜಾಣರೂ ಗೌರಮ್ಮ, ನಾಗೂಗೆ ಬಿ. ಎ, ಬಿ. ಎಡ್. ಮಾಡಿಸಿದಿರಿ, ಕೆಲಸಕ್ಕೂ ಕಳಿಸಿದಿರಿ ಶಾರದಾಗೆ ಎಸ್ಸೆಲ್ಸಿ ಓದಿಸಿ ಬಿಡಿಸ್ಸಿ

ಬಿಟ್ಟೆವು. ಈ ಹಳ್ಳೀಲಿ ಹೈಸ್ಕೂಲ್ ಇದ್ದದ್ದರಿಂದ ಅಷ್ಟಾದರೂ ಆಯಿತು. ಈಗ ಶಾರದಾಗೂ ಇಪ್ಪತ್ನಾಲಕ್ಕಾಯಿತಮ್ಮ, ಹಾಗೆ ಮುವ್ವತ್ತಾದರೆ ಏನು ಗತಿ ? ನಾವು ಪುರಂದಾಸರಾಗಿದ್ದೀವಿ ಕೈಲಿ ಮೂರು ಕಾಸಿಲ್ಲ. ಈಗಿನ ಕಾಲದಲ್ಲಿ ವರದಕ್ಷಿಣೆ, ಪರೋಪಚಾರ ಏನೂ ಇಲ್ಲದೇ ವಿವಾಹವಾಗುತ್ತಾ ?" ಎಂದು ಚಿಂತಿಸುತ್ತಿದ್ದರು. "ಶಾರದ ಸಾಕ್ಷಾತ್ ಶ್ರೀಲಕ್ಷ್ಮಿ ಇದ್ದಾಗೆ ಇದ್ದಾಳೆ. ಕಾಲ ಬಂದರೆ ಎಲ್ಲಾ ಹೂವೆತ್ತಿದ ಹಾಗೆ ಆಗುತ್ತೆ. ಆಚಾರ್ಯರ ಪೂಜೆ... ನಿಮಗೆ ಫಲ ಕೊಡದೇ ಹೋಗಲ್ಲ. ವೇದಶಾಸ್ತ್ರಗಳಲ್ಲಿ ಅವರಿಗಿರೋ ಪಾಂಡಿತ್ಯ ಯಾರಿಗಿದೆ ? ಮೈಸೂರು ಸೇರಿದ ಮೇಲು ನಮ್ಮ ಡೆಪ್ಟಿ ಕಮಿಷನರ್ ಸಾಹೇಬರು, ಎಲ್ಲ ಕಾರ್ಯಗಳಿಗೂ ಇವರನ್ನೇ ಕರಿತ್ತಾರಲ್ಲ. ನಮ್ಮೆ ಜಮಾನರ ಮುಂದಂತೂ ಆಚಾರ್ಯರನ್ನ ಬಾಯಿ ತುಂಬಾ ಹೊಗಳ್ತಾರಂತೆ" ಎಂದರು.

ಗೌರಮ್ಮ ಯಾವಾಗಲು ಒಳ್ಳೆಯದನ್ನೇ ಗುರುತಿಸಿ ಒಳ್ಳೇದನ್ನೇ ಆಡುವರು. ನಂಜನಗೂಡಿನ ಹತ್ತಿರದ ಈ ಹೋಬಳಿ ಮಟ್ಟದ ಗ್ರಾಮಾಂತರ ಪ್ರದೇಶದಲ್ಲಿರುವ ತಾವು.. .ಸುತ್ತ ನಾಕಾರು ಹಳ್ಳಿಯಿಂದ ಆಗಾಗ ಮುಂಜಿ, ಮದುವೆ, ಸತ್ಯನಾರಾಯಣ ಪೂಜೆ, ಶೆಟ್ಟರು ಮಾಡಿಸುವ ಧಾತ್ರಿಹವನ.... ರೈತರು ಮಾಡಿಸುವ ಭೂತಾಯಿ ಪೂಜೆ ಎಲ್ಲದರಿಂದ ಬಂದ ಕಾಣಿಕೆಯನ್ನೇ ಅವಲಂಬಿಸಿ ಬದುಕುತ್ತ ಇದ್ದವರು, ನಂಜನಗೂಡಿನಲ್ಲಿ ಅಮಲ್ದಾರರಾಗಿದ್ದಾಗಿನಿಂದ ಸುಮಾರು ಹದಿನೈದು ವರ್ಷದಿಂದ ರಾಮಸ್ವಾಮಿಯವರಿಗೂ ಆಚಾರ್ಯರಿಗೂ ಬಿಡಲಾಗದ ನಂಟು.

ವರ್ಷಕ್ಕೊಮ್ಮೆ ನವಗ್ರಹ ಹೋಮ ಹಾಗು.. .ಶ್ರೀ ಸತ್ಯನಾರಾಯಣ ಪೂಜೆ ತಪ್ಪದೇ ಮಾಡಿಸುತ್ತಿದ್ದರು. ಎಲ್ಲರಂತೆ ಜಿಪುಣರಲ್ಲ, ಒಂದು ರೂ ಖರ್ಚು ಮಾಡುವ ಕಡೆ ಒಂಬತ್ತು ರೂ. ಖರ್ಚು ಮಾಡುತ್ತಿದ್ದರು

ಅವರು ಅಧಿಕಾರದಲ್ಲಿ ಮುಂದುವರೆಯುತ್ತ ಯಾವ ಯಾವ ಊರಿಗೆ ಹೋದರೂ, ತಮ್ಮ ಮನೆಯ ಪೂಜೆ, ಪುನಸ್ಕಾರಕ್ಕೆ ಆಚಾರ್ಯರನ್ನೇ ಕರಿಸಿಕೊಳ್ಳುತ್ತಾ ಇದ್ದರು.

ಡೆಪ್ಟಿ ಕಮಿಷನರಾಗಿ ರಿಟೈರಾಗಿ, ಈಗ ಮೈಸೂರಲ್ಲೇ ನೆಲಸಿದ್ದರು. ಇಬ್ಬರು ಗಂಡು ಮಕ್ಕಳು ಡಾಕ್ಟರಾಗಿದ್ದರು. ಒಬ್ಬ ಮಗಳು M.B.B.S ಕೊನೆ ವರ್ಷದಲ್ಲಿದ್ದಳು.

ಈಗಲು ಪ್ರತಿವರ್ಷ ಆಚರಿಸುವ ನವಗ್ರಹ ಜಪಹೋಮ....ಶ್ರೀ ಸತ್ಯ

ನಾರಾಯಣ ಪೂಜೆ ಎಲ್ಲಕ್ಕೆ ಆಚಾರ್ಯರನ್ನೇ ಬರಮಾಡಿಕೊಳ್ಳುವರು ಅವರಿಂದ ಕೈ ತುಂಬ ಬಂದ ಸಂಭಾವನೆಯಲ್ಲಿ ಒಂದೆರಡು ತಿಂಗಳು ಸಂತೃಪ್ತಿಯಾಗಿ ಸಂಸಾರ ನಡೆಯುತ್ತಿತ್ತು. ವಿದ್ವಾಂಸರೆಂದು ವರ್ಷಕ್ಕೊಮ್ಮೆ ಶ್ರೀ ತಿರುಮಲೆ ತಿರುಪತಿಯ ತಿರಚಾನೂರಿನಲ್ಲಿ ನಡೆಯುವ ಶ್ರೀ ಮಾಧ್ವ ಮಹಾಸಭಾದ ವಿದ್ವತ್ ಗೋಷ್ಠಿಯಲ್ಲಿ ಭಾಗವಹಿಸಿ .. ವೇದ, ಶಾಸ್ತ್ರ, ಪುರಾಣಗಳ ಬಗ್ಗೆ ವಿದ್ವತ್ಪೂರ್ಣವಾಗಿ ಸಂಸ್ಕೃತದಲ್ಲಿ ವ್ಯಾಖ್ಯಾನಿಸುತ್ತಿದ್ದರು

ಅಲ್ಲಿ ಸೇರಿದ ಪಂಡಿತ ಗೋಷ್ಠಿಯೆಲ್ಲಾ ತಲೆದೂಗಿ ತಾವು ಒಂದಲ್ಲ ಹತ್ತು ಪ್ರಶ್ನೆ ಕೇಳಿ ಧರ್ಮ ಜಿಜ್ಞಾಸೆಯ ಬಗ್ಗೆ... ತಮ್ಮ ಮನಸ್ಸಿನ ಸಂದೇಹ ಪರಿಹರಿಸಿಕೊಳ್ಳುತ್ತ ಇದ್ದರು. ವಿದ್ವತ್ಸಭೆಯಿಂದ ಬಂದ ಸಂಭಾವನೆಯನ್ನು ಪತ್ನಿ, ಪತ್ನಿ, ಮಗಳ ಜೊತೆ ಮಾಡಿದ ಶ್ರೀ ತಿರುಪತಿ ಪ್ರಯಾಣಕ್ಕೆ ಸರಿ ಹೋಗುತ್ತಿತ್ತು. ಉಳಿದ ಐವತ್ತೋ ನೂರೋ ಉಂಡಿಯಲ್ಲಿ ಹಾಕಿಬಿಡುತ್ತಿದ್ದರು....

ಸಾಲದೆಂದೆನ ಬೇಡಾ....ಸಾಲವನು ಮಾಡದಿರು, ನಾಳೆಗೆಂದು ಸಂಗ್ರಹಿಸಿ ತೆಗೆದಿಡಬೇಡಾ....ಎಂಬ ಶ್ರೀ ಪುರಂಧಾಸರ ಧ್ಯೇಯದಂತೇ ಬದುಕುತ್ತಿದ್ದರು.... ಆಚಾರ್ಯರು ಮೊಟ್ಟಮೊದಲ ಭಾರಿ ಅವರ ಬದುಕಿನಲ್ಲಿ ಒಂದು ಸಮಸ್ಯೆ ತಲೆದೋರಿತ್ತು. ಆಚಾರ್ಯರು ಅದರ ಬಗ್ಗೆ ಚಿಂತಿಸುತ್ತಿದ್ದರು.

ಶಾನುಭೋಗರ ಮಗಳು ನಾಗುವಿನ ಮದುವೆ ಮೈಸೂರಿನ ಭಾರಿ ಛತ್ರದಲ್ಲಿ ನಡೆದಿತ್ತು. ಹಣಕಾಸು ನಾಗುವೇ ಸರಿ ಮಾಡಿಕೊಂಡಿದ್ದರೂ.... ಮೈಸೂರಿನಲ್ಲಿದ್ದ ಅಣ್ಣಂದಿರು ನಿರ್ವಹಣೆ ಮಾತ್ರ ಜೋರಾಗಿ ನಡೆಸಿದ್ದರು.

ಗೆಳತಿ ಮದುವೆಗೆ ಶಾರದಳು ಹೋಗಲೇಬೇಕಾಯಿತು. "ಶಾರದ ಇದ್ರೆ ಮದುವೆ ಮನೇಲಿ ಪಾದರಸದ ಹಾಗೆ ಚಕಪಕಾಂತ ಓಡಾಡ್ತಾಳೆ, ನಾನೊಬ್ಬಳೆ ಏನು ನಿರ್ವಹಿಸಲಾರೆ, ನಾಗೂಂತು ಹಸೆಮಣೆ ಮೇಲಿರ್ತಾಳೇ ..."ಎಂದು ರಾಗಾ ಹಾಡಿ ಗೌರಮ್ಮ ಅವಳನ್ನು ಹೊರಡಿಸಿದರು

ಆಗಾಗ ಶೆಟ್ಟರು ಧಾನ ಕೊಡುತ್ತಿದ್ದ ಒರಟು ನೂಲಿನ ಸೀರೆ....ಕುಪ್ಪುಸ ಕಿಮುಟು ಗಟ್ಟಿದ ಬೆಳ್ಳಿಯೋಲೆಯಲ್ಲೇ ಮುದ್ದಾಗಿ ಕಾಣುವ ಶಾರದ....ಈಗ ಗೆಳತಿ ನಾಗುವಿನ ಸಹಕಾರದಿಂದ ದೇವತೆಯ ವರದಾನ ಪಡೆದ ಸಿಂಡ್ರೆಲಾಳಂತೆ ಶೋಭಿಸಿದಳು.

ತಾನು ಉದ್ಯೋಗದಲ್ಲಿದ್ದಾಗ ಬಗೆಬಗೆ ಸೀರೆಗಳನ್ನು ಕೊಂಡಿದ್ದಳು ನಾಗು. ಗೆಳತಿಗಾಗಿ ಒಂದು ಜೊತೆ ಶ್ರೀ ಗೋಲ್ಡ್ ವಾಲೆ ಜುಂಕಿ, ಎರಡೆಳೆ

ಸರ ತೆಗೆದುಕೊಟ್ಟಳು. ಸ್ನೋ, ಪೌಡರ್, ಕಾಡಿಗೆ, ಕುಂಕುಮ, ಹೂವು, ಧಾರಾಳವಾಗಿ ಉಪಯೋಗಿಸಿದಳು. ಬಣ್ಣಬಣ್ಣದ ಸೀರೆ, ವಾಲೆ ಜುಂಕಿ, ಮುಡಿತುಂಬಾ ಹೂವು, ಸ್ನೋ, ಪೌಡರ್, ಕಾಡಿಗೆ, ಕುಂಕುಮದ ಅಲಂಕಾರ ದಲ್ಲಿ ರೂಪರಾಣಿಯಂತೆ ಕಂಗೊಳಿಸುತ್ತಿದ್ದ ತಮ್ಮ ಮಗಳನ್ನು ನೋಡಿ ಆಚಾರ್ಯರಿಗೆ ಅಚ್ಚರಿ ಆಯಿತು.

ಹೆಣ್ಣಿನ ಕಡೆ ಪುರೋಹಿತರಾಗಿ ಬಂದಿದ್ದವರು ಆಚಾರ್ಯರೆ, ಹೀಗಾಗಿ ಮಗಳನ್ನು ನಿಶ್ಚಿಂತೆಯಾಗಿ ಮೂರು ದಿನ ಕಳಿಸಿದ್ದರು ಸೀತಮ್ಮ, ಮದುವೆ ಮನೆಯಲ್ಲಿ ಅವಳ ರೂಪಶ್ರೀಯಿಂದ ಪ್ರಭಾವಿತನಾದನು ಡಾ|| ಪ್ರಭಾಕರ್. ಪ್ರಭಾಕರ್ ತಂದೆತಾಯಿಗಳು ಹಾಗು ಇಬ್ಬರು ಅಕ್ಕಂದಿರು, ಭಾವಂದಿರು ಗಂಡಿನ ಕಡೆಯ ಗುಂಪಲ್ಲಿ ಬಂದಿದ್ದರು. ಮಿಂಚಿನಂತೆ ಓಡಾಡುತ್ತ....ಎಲ್ಲರ ಬೇಕು ಬೇಡಾ ಪೂರೈಸುತ್ತ, ಕೆಲಸ ನಿರ್ವಹಿಸುವ ಅವಳ ಚಾಕಚಕ್ಯತೆ, ಮೆಲುಮಾತು, ಕಣ್ಸೆಳೆಯುವ ರೂಪಾ ಎಲ್ಲಾ ಗಂಡಿನವರಿಗೆ ಇಷ್ಟವಾಯಿತು.

"ನಾನು ಮದುವೆಯಾಗುವುದಾದರೆ ಇಂಥಾ ಹುಡುಗಿಯನ್ನೆ" ಎಂದ ಪ್ರಭಾಕರ್. "ನಿಜಕ್ಕೂ ಇದೇ ಹುಡುಗಿಯೇ ಆಗಲಿ ವಿಚಾರಿಸೋಣಾ...." ಎಂದರು ಅವನ ತಾಯಿ ಇಂದಿರಮ್ಮ. ವಿಚಾರಿಸಿದಾಗ ಅವರ ಪಾರಿಗಿತ್ತಿ ಕುಸುಮ.

"ನೋಡಮ್ಮ ಹುಡುಗಿ ವೈದಿಕ ಬ್ರಾಹ್ಮಣರ ಮಗಳಂತೆ, ಬರಿ ಎಸ್ಸೆಲ್ಸಿ ಓದಿದ್ದಾಳೆ. ಅಡುಗೆ ಕೆಲಸ, ಮನೆ ಕೆಲಸದಲ್ಲಿ ಪರಿಣಿತಳು. ಹೆಣ್ಣಿನ ಕಡೆ ಪುರೋಹಿತರಿದ್ದಾರಲ್ಲ....ಹಯಗ್ರೀವಾಚಾರ್ಯರು ಅವರ ಮಗಳು" ಎಂದರು.

ಇಂದಿರಮ್ಮ ಕೊಂಚ ಹೆಚ್ಚಾಗಿ "ಏನಂತಿಯಪ್ಪಾ....?" ಎಂದರು. ಇಂದಿರಮ್ಮ ಡಾಕ್ಟರ್, ಅವರ ಪತಿ ಡಾಕ್ಟರ್, ಪ್ರಭಾಕರ ಅವನ ಇಬ್ಬರು ಅಕ್ಕಂದಿರು, ಭಾವಂದಿರು ಎಲ್ಲಾ ವೈದ್ಯ ವೃತ್ತಿಯಲ್ಲಿದ್ದವರು, ಎಲ್ಲರು ಒಟ್ಟಿಗೆ ವಾಸ ಮಾಡುತ್ತಿದ್ದರು, ದೊಡ್ಡ ಬಂಗ್ಲೆ, ಮನೆಯಲ್ಲಿ ಅಡುಗೆಯವರು ಆಳು ಕಾಳುಗಳು....ಪ್ರಭಾಕರ ತಾಯಿಗೆ.

"ನನಗಂತು ಹುಡುಗಿ ತುಂಬ ಇಷ್ಟವಿದೆ" ಎಂದ "ಎಲ್ಲರೂ ಹೊರಗೆ ಹೋಗಿ ದುಡೀತ್ತಿವಿ, ಮನೆ ನಿರ್ವಹಣೆ ಮಾಡೋ ಹುಡುಗಿ ಬಂದರೆ ಒಳ್ಳೆಯದೇ" ಎಂದು ಅವನ ಅಕ್ಕಂದಿರು ಅಭಿಪ್ರಾಯ ಪಟ್ಟರು.

ಮದುವೆ ಮನೆಯಲ್ಲಿ ತಮ್ಮ ಕೋಣೆಯಲ್ಲಿಯೆ ಹಯಗ್ರೀವಾಚಾರ್ಯ ರನ್ನು ಕರೆಸಿಕೊಂಡು ಮಾತಾಡಿದರು.

"ನಿಮ್ಮ ಹುಡುಗಿಯನ್ನ ನಮ್ಮ ಪ್ರಭಾಕರ ಇಷ್ಟಪಟ್ಟಿದ್ದಾನೆ, ನಮ್ಮೆಲ್ಲರಿಗೂ ಇಷ್ಟವಿದೆ" ಎಂದಾಗ ಆಚಾರ್ಯರು ಚಿಂತೆಯಿಂದ—

"ನಿಮ್ಮ ಅಂತಸ್ತೆಲ್ಲಿ ? ನಮ್ಮ ಅಂತಸ್ತೆಲ್ಲಿ. . ತಾಯಿ" ಎಂದರು ಇಂದಿರಮ್ಮ ಮಾತಾಡಿ—

"ಈಗ ಶಾನುಭೋಗರು ಮದುವೆ ಮಾಡಿಕೊಟ್ಟರಲ್ಲ, ಅಷ್ಟರ ಮಟ್ಟಿಗೆ ವಿವಾಹ ಮಾಡಿಕೊಡಿ, ಶಾನುಭೋಗರ ಬೀಗಿತ್ತಿ ಕುಸುಮ ನನ್ನ ವಾರ ಗಿತ್ತಿ, ಈ ಮದುವೆಗೆ ಬಂದ ಒಳಗವೇ ನನ್ನ ಮಗನ ಮದುವೆಗೆ ಬರೋದು" ಎಂದರು. ಆಚಾರ್ಯರು ಚಿಂತಾಕ್ರಾಂತರಾಗಿ "ನಾನು ತುಂಬ ಬಡವಾ ತಾಯಾ....ಯೋಚಿಸಿ ಹೇಳ್ತೀನಿ" ಎಂದರು.

"ನೋಡಿ ಮೂರುತಿಂಗಳು ಟೈಮ್ ತಗೊಳ್ಳಿ, ಅಮೆರಿಕಾಗೆ ಹೋಗಿರೊ ಅವರಪ್ಪ ಬರಬೇಕು, ಆಮೇಲೆ ಮದುವೆ. ನಮಗೇನು ವರದಕ್ಷಿಣೆ ವರೋಪ ಚಾರ ಬೇಕಾಗಿಲ್ಲ. ಲಗ್ನಪತ್ರಿಕ ನಮ್ಮನೇಲೆ ಬೇಕಾವರೆ ಇಟ್ಕೋತೀವಿ

"ಮದುವೆ, ಒಂದು ಇವರು ಮಾಡಕೊಟ್ಟಷ್ಟರ ಮಟ್ಟಿಗೆ ನೀವು ಮಾಡಿ ಕೊಡಿ" ಎಂದರು. ಶಾನುಭೋಗರ ಪತ್ನಿ ಮಧ್ಯೆ ಬಾಯಿ ಹಾಕಿ—

"ಆಗಲಿ....ದೈವಸಂಕಲ್ಪ ಇದ್ದರೇ ಎಲ್ಲಾ ಒದಗಿಬರುತ್ತೆ. ಆಚಾರ್ಯರು ಈ ಊರಿನ ಡೆಪ್ಯುಟಿ ಕಮೀಷನರ್‌ನಿಂದ ಹಿಡಿದು ಎಲ್ಲರಿಗೂ ಬೇಕಾ ದೋರು, ದೇವರ ಮನಸ್ಸಿಗೆ ಬಂದರೆ ಎಲ್ಲಾ ಸುಲಲಿತ ಆಗುತ್ತೆ" ಎಂದರು. ಇಂದಿರಮ್ಮ ಮಾತು ಮುಗಿಸಿ—

"ಸರಿ ನಮ್ಮ ವಿಳಾಸ ತಗೊಂಡಿರಿ" ಎಂದು ವಿಳಾಸ ಕೊಟ್ಟರು.

ಊರಿಗೆ ಬಂದ ಮೇಲೆ ಗೌರಮ್ಮನವರೇನೋ ಸೀತಮ್ಮನ ಮುಂದೆ ವರ್ಣಿಸಿದ್ದು, "ನಿಜಕ್ಕು ಶಾರದ ತುಂಬ ಅದೃಷ್ಟವಂತೇರಿ, ನಮ್ಮ ಬೀಗರ ನಾಲ್ಕು ಜನ ಅಣ್ಣ ತಮ್ಮಂದಿರ ಪೈಕಿ ಇವರೇ ಅತ್ಯಂತ ಶ್ರೀಮಂತರು. ಮನೆ ಯಲ್ಲ ಮೂರು ಮೂರು ಕಾರಿದೆ, ಮೈಸೂರಲ್ಲಿ ನಾಲ್ಕು ಬಂಗಲೆ ಇವೆ. ನಮ್ಮ ನಾಗು ಗಂಡಾ ಇಂಜಿನಿಯರ್ ಆದರೆ ಶಾರದ ಡಾಕ್ಟರ ಹೆಂಡತಿ ಆಗ್ತಾಳೆ. ನಮ್ಮ ನಾಗು ಮಾವಾ ಶಾರದಾನ ಮಾವಾ ಇಬ್ಬರು ಸ್ವಂತ ಅಣ್ಣತಮ್ಮಂ- ದಿರು" ಎಂದು ಬೀಗರ ಕಡೆಯ ವಿಷಯ ಎಲ್ಲಾ ವರ್ಣಿಸಿದರು.

ಗೌರಮ್ಮ ಚಿಂತೆಯಿಂದ—"ಅಷ್ಟು ಶ್ರೀಮಂತರಷ್ಟ ನಾವು ಹೇಗೆ ತೂಗಿ ನೋಡಿರಿ ?" ಎಂದರು.

"ಜನ ಸಜ್ಜನರು, ವರದಕ್ಷಿಣೆ, ವರೋಪಚಾರಕ್ಕ ಏನು ಕೊಡಬೇಡಿ ಅಂತಾರೆ, ಮದುವೆ ಒಂದು ಚೆನ್ನಾಗಿ ಮಾಡಿಕೊಡಿ ಅಂತಾರೆ, ಆಚಾರ್ಯರು ನಾಲ್ಕು ಜನಕ್ಕೆ ಚೆನ್ನಾಗಿ ಬೇಕಾದವರು, ನಿಮ್ಮ ಮನೆತನದ ದೇವರು ನಿಮ್ಮನ್ನ ಕೈ ಬಿಡಲ್ಲ ಕಣ್ರಿ, ಗಂಡು ಮಕ್ಕಳಿಗೂ ಒಂದೊಂದು ಪತ್ರ ಬರೀರಿ" ಎಂದರು

ರಾತ್ರಿ ಆ ಬಗ್ಗೆ ಗಂಡಾ ಹೆಂಡತಿ ಇಬ್ಬರೇ ಚರ್ಚೆ ಮಾಡಿದರು, "ನೋಡಿ ಅಕ್ಕಿ ಇರಲಿಲ್ಲ ಗೋಧಿ ಹಿಟ್ಟಿತ್ತು ಚಪಾತಿ ಮಾಡಿದ್ದೇನೆ. ಹೊನ್ನೆಗೌಡ ತನ್ನ ರೈತರ ಕೈಲಿ ಆಲುಗಡ್ಡೆ ಈರುಳ್ಳಿ ಕಳಿಸಿದ್ದಾ ಹಿತ್ತಲಲ್ಲಿ ದಂಟಿನಸೊಪ್ಪು, ಹುರುಳಿಕಾಯಿ ಬೆಳೆದಿತ್ತು. ಆಲೂಗಡ್ಡೆ, ಹುರುಳಿಕಾಯಿ ದಂಟಿನಸೊಪ್ಪು ಹಾಕಿ ಮಾಡಿದ್ದೇನೆ" ಎಂದರು

"ದೇವರು ಏನು ಕೊಟ್ಟಿದ್ದಾನೋ ಅದನ್ನೇ ಕೊಡು" ಎಂದರು. ಆಚಾರ್ಯರು ಈರುಳ್ಳಿ, ಬದನೆಕಾಯಿ, ಮೂಲಂಗಿ ತಿನ್ನುತ್ತಿರಲಿಲ್ಲ. ಆಸೆ ಯಾದರೆ ಶಾರದ ಅದೆಲ್ಲ ಉಗ್ರಾಣದ ಹಿಂದಿನ ಬಯಲಲ್ಲ ತಾನೆ ಹುಳಿ, ಕೂಟು ಮಾಡುವಳು. ಆಚಾರ್ಯರು ಚಪಾತಿ, ಸಾಗು ತಿಂದು ಶ್ರೀ ಕೃಷ್ಣಾರ್ಪಣ ಮಸ್ತು ಎಂದು ಎದ್ದರು. ಹೊರಗೆ ಬಂದು ನಡುಮನೆಯ ಕಂಬಕ್ಕೆ ಒರಗಿ ಕೂತು "ಸೀತಾ....ಎಲೆ ಅಡಿಕೆ ಇದ್ದರೆ ತೆಗೆದುಕೊಂಡು ಬಾ" ಎಂದರು.

ಸೀತಮ್ಮ ತಟ್ಟೆಯಲ್ಲ ವಿಳ್ಳೆದೆಲೆ, ಅಡಿಕೆ ಇಟ್ಟುಕೊಂಡು ಬಂದರು. ಮಗಳ ಮದುವೆಯ ವಿಷಯ ಮಾತಾಡಬೇಕೆಂದು ಮನಸ್ಸಿನ ತುಂಬಾ ಚಿಂತೆ ತುಂಬಿತ್ತು. ಆದರೆ ಆಚಾರ್ಯರು ಆ ವಿಷಯ ತಮಗೆ ಸಂಬಂಧವೇ ಇಲ್ಲ ದಂತೆ ಕೂತಿದ್ದಾರೆ.

ಸೀತಮ್ಮ . ಮಗಳನ್ನು ಕರೆದು ಅವಳೊಂದಿಗೆ ಊಟಾ ಮಾಡಿದರು. ಎಲೆಗೋಮೆ ಮಾಡಲು ಬಂದಾಗ "ನೀನು ಮಲಗಮ್ಮ, ನಾನು ಕಸಮುಸುರೆ ಮಾಡಿ, ಒಲೆ ಸಾರಿಸಿ, ಮುಸುರೆ ಪಾತ್ರೆ ತೊಳೀತೇನೆ" ಎಂದಳು.

ಬಂಗಾರದಂಥಾ ಮಗಳು, ನೋಡಲು ಎಷ್ಟು ಚೆಲುವೆಯೋ ಕೆಲಸ ಕಾರ್ಯದಲ್ಲಿ ಅಷ್ಟೆ ಜಾಣೆ, ಆದರೆ ಇಂಥಾ ಮಗಳಿಗೆ ಮದುವೆ ಮಾಡಲು ತಮಗೆ ಹಣವಿಲ್ಲ.

ಹಜಾರದಲ್ಲಿ ಗಂಡನೊಂದಿಗೆ ಯಾರೋ ಮಾತಾಡುತ್ತ ಇದ್ದಾರೆ. ಯಾರಿರಬಹುದು ? ಏನೋ ಮುಹೂರ್ತ, ವಾರಾ ಎಂದು ಪಂಚಾಗ ಗುಣಿಸಿ ಹೇಳುತ್ತಿದ್ದರು.

ಕೊಂಚ ಹೊತ್ತಿಗೆ "ಸೀತಾ...." ಎಂದು ಕೂಗಿದರು. ಉಗ್ರಾಣದಲ್ಲಿ ಚಾಪೆ ಹಾಸಿಕೊಂಡು ಮಲಗಿದ್ದ ಸೀತಮ್ಮ ಎದ್ದು ಬಂದರು. ಆ ಮನೆಗೆ ಪ್ರತ್ಯೇಕ ಕೊಠಡಿ ಇರಲಿಲ್ಲ ಅಡಿಗೆ ಮನೆಯ ಮುಂಭಾಗಕ್ಕೆ ಒಂದು ಉಗ್ರಾಣದ ಕೋಣೆ ಇತ್ತು. ಆ ಉಗ್ರಾಣ ತುಂಬುವಷ್ಟು ಸಾಮಾನು ಎಲ್ಲಿಂದ ಬರಬೇಕು. ಅಡಿಗೆ ಮನೆಯ ಗೂಡಿನಲ್ಲಿದ್ದ ಕೆಲವು ಡಬ್ಬಗಳು ತುಂಬುವಷ್ಟು ಸಾಮಾನು ದೊರೆತರೆ ಅದೇ ಭಾಗ್ಯ ಆ ಉಗ್ರಾಣದ ರೂಮಿನಲ್ಲಿ ಚಾಪೆ ಹಾಕಿಕೊಂಡು ತಾಯಿ ಮಗಳು ಮಧ್ಯಾಹ್ನದ ಹೊತ್ತು ನಿದ್ರೆ ಮಾಡುತ್ತಿದ್ದರು

ಗಂಡನ ಕೂಗು ಕೇಳಿ ಹೊರಬಂದ ಸೀತಮ್ಮ ಕಂಬಕ್ಕೆ ಒರಗಿಸಿಟ್ಟ ಗೋಣಿ ಮೂಟೇ ನೋಡಿದರು

"ನೋಡು... ಅಕ್ಕಿ ಇಲ್ಲಾಂತಿದ್ದೆ. ಶ್ರೀ ಹಯಗ್ರೀವ ದೇವರಿಗೆ ಕೇಳಿ ಸಿದೆ. ರಂಗೆಗೌಡ ಮಗನ ಅನ್ನಪ್ರಾಶನ ಮುಹೂರ್ತಕ್ಕೆ ಕೇಳಿ ಬಂದಿದ್ದ. ತನ್ನ ಹೊಲದ್ದು ಸಣ್ಣಕ್ಕಿ ಬಂದಿದೆ. ಅಂತ ಒಂದು ಮೂಟೆ ಅಕ್ಕಿ ಕಳಿಸಿ ದ್ದಾನೆ. ಐವತ್ತು ಸೇರು ಇದೆಯಂತೆ. ಈ ಐವತ್ತು ರೂಪಾಯಿ ದಕ್ಷಿಣೆ ಕೊಟ್ಟಿದ್ದಾನೆ. ಎಣ್ಣೇ ಇಲ್ಲಾಂತಿದ್ದೇಯಲ್ಲ ತರಿಸು." ಎಂದರು. ಸಾತ್ವಿಕ ರಾದ ಸೀತಮ್ಮನಿಗೆ ಏಕೋ ರೋಷ, ಉದ್ವೇಗದಿಂದ ಕಟು ಮಾತುಗಳಾಡುವ ಹಾಗೆ ಆಯಿತು.

"ನಮ್ಮ ದೇವರು ಏಕೆ ನಮ್ಮನ್ನ ಹೀಗೆ ಅಕ್ಕಿ, ಎಣ್ಣೆಗೆ ಪರದಾಡಿಸ್ತಾನೆ. ಅದು ಸಿಕ್ಕಿದ್ದೇ ಮಹಭಾಗ್ಯ ಅನ್ನೋ ಹಾಗೆ ಮಾಡಿದ್ದಾನೆ. ಮಗಳ ಮದುವೆಯ ಬಗ್ಗೆ ಎದೆ ತುಂಬ ಕುದಿ ಇಟ್ಕೊಂಡಿದ್ದೀನಿ. ಅದು ಏಕೆ ನಿಮ್ಮ ದೇವರಿಗೆ ಕೇಳಿಸ್ತಿಲ್ಲ" ಎಂದರು.

ಪತ್ನಿಯ ಆಕ್ರೋಶ ಕಂಡು ಆಚಾರ್ಯರಿಗೆ ವ್ಯಥೆಯಾಯಿತು. ಮುವತ್ತು ವರ್ಷದ ಜೀವನದಲ್ಲಿ ಆಕೆ ಎಂದು ಒಡವೆ, ವಸ್ತು, ಬಂಗಾರ ಸೀರೆ ಎಂದು ಆಸೆ ಪಟ್ಟವರಲ್ಲ. ಮರದ ಬಾಗಿನದಲ್ಲಿ ಬಂದ ನೂಲಿನ ಸೀರೆ ಕುಪ್ಪಸ

ಗಳಲ್ಲಿ ಕರಿಮಣಿ, ತಾಳಿ, ಕಾಲುಂಗುರ ಅರಿಶಿನ ಕುಂಕುಮದಲ್ಲಿ ಹಾಯಾಗಿದ್ದರು

"ಮುತ್ತೈದೆತನಕ್ಕಿಂತ ಬೇರೆ ಭಾಗ್ಯವೇಕೆ ? ನಮ್ಮಪ್ಪಾ ಅದೊಂದು ಕೊಟ್ಟರೆ ಸಾಕು ಅರಶಿನ ಕುಂಕುಮ ಹಚ್ಚಿಕೊಂಡು ಅವರೆದುರಿಗೆ ಜಯ ಜಯಾಂತ ಹೊರಟು ಬಿಟ್ಟರೇ ಸಾಕು "

ಇದೊಂದೇ ಅವರ ಉದ್ಗಾರ. ಇಂಥಾ ಪತ್ನಿ ಈ ದಿನ ಸಿಡಿದು ಬಿದ್ದಂತೆ ಮಾತಾಡಿದಾಗ ಆಚಾರ್ಯರು

"ಕಾಲ ಬಂದಾಗ ಎಲ್ಲಾ ಆಗತ್ತೆ ಸೀತಾ ದೇವರು ಯಾರನ್ನು ಕೈ ಬಿಡಲ್ಲ" ಎಂದರು

"ಇನ್ನು ಯಾವಾಗ್ರಿ ಕಾಲ ಬರೋದು ? ನಿಮ್ಮ ದೇವರೇನೋ ಆದಿಯ ದ್ಯಾಂತ ರಹಿತ ಅನಾದಿಬ್ರಹ್ಮ ಸನಾತನಬ್ರಹ್ಮ ಸನಾತನ ಬ್ರಹ್ಮ ಅಂತ ವರ್ಣಿಸ್ತೀರಿ. ಆದರೆ ನಿಮ್ಮ ಪರಿಮಿತಿ ನೂರು ವರ್ಷ. ಬದುಕಿನುದ್ದ ಬವಣೆಯೆ ಆಯ್ತು. ಶಾರದುಗೆ ಇಪ್ಪತ್ತೈದು ವರ್ಷ ಆಯ್ತು. ಹದಿನಾರಕ್ಕೆ ಮದುವೆ ಆಗಲಿಲ್ಲಾಂತ ಆಶೆ ಪಡಲಿಲ್ಲ. ಹದಿನೆಂಟಕ್ಕೆ ಆಸೆ ಪಡಲಿಲ್ಲ. ಇಪ್ಪತ್ತೈದನೆಯ ವರ್ಷಕ್ಕಾದರೂ ನನ್ನ ಮಗೂಗೆ ಮದುವೆ ಬೇಡವಾ ? ನಿಮ್ಮ ದೇವರಿಗೆ ಕಿವಿ ಇದೆಯಾ ? ನನ್ನ ಮೊರೆ ಏಕೆ ಕೇಳಲ್ಲ. ಶಾರದಂಗೆ ಕಾಲೇಜು ಓದಿಸಿ, ನಾಗು ಹಾಗೆ ಒಂದು ಉದ್ಯೋಗ ಕೊಡಿಸಿದ್ದರೇ ಅವಳು ಸಂಪಾದಿಸಿದ ಹಣ ಅವಳ ಮದುವೆಗೆ ಇಡಬಹುದಾಗಿತ್ತು. ಆಗೆಲ್ಲ ಅದಕ್ಕು ಒಪ್ಪಲಿಲ್ಲ. ಕಾಲ ಬಂದಾಗ ದೇವರು ಹೇಗೋ ಮಾಡ್ತಾನೆ ಅಂದಿರಿ. ಈಗ ಕಾಲ ಬಂದಿದೆ ದೇವರು ಏನು ಮಾಡಿದ. ಯಾರ ರೂಪದಲ್ಲಿಯೂ ನಿಂತು ನಿಂತು ಸಹಾಯ ಕೊಡಿಸಲಿಲ್ಲ

ಕನಸಿನಲ್ಲಿ ಹುಡುಗೀರು ಆಶಿಸಬಹುದಾದಂತ ವರ ಸಿಕ್ಕಿದೆ. ಬರಿ ದುಡ್ಡಿನ ಕಾರಣಕ್ಕೆ ಮದುವೆ ತಪ್ಪಿಹೋದ್ರೆ ನನ್ನ ಹೊಟ್ಟೆ ಉರಿಯಲ್ವೆ ? ನೀವೇನೊ ಗಂಟೆಗಟ್ಟಲೆ ನಿಮ್ಮ ದೇವರನ್ನ ಪೂಜೆ ಮಾಡೋದ್ರಲ್ಲಿ ಜಗತ್ತೇ ಮರೀತೀರೀ ನನಗೆ ತಾನೇ ಎಲ್ಲ ಸಂಕಟಾ...." ಎಂದರು.

ಪತ್ನಿಯ ಅಳಲಿಗೆ ಕಾರಣವಿದೆ ಎಂದು ಆಚಾರ್ಯರಿಗೆ ಗೊತ್ತಿತ್ತು. ಇಬ್ಬರು ಗಂಡು ಮಕ್ಕಳಿಗೂ ಕಾಗದ ಬರೆದಿದ್ದರು.

ಅನಂತ ತನ್ನ ನೂರು ತಾಪತ್ರಯ ತೋಡಿಕೊಂಡು ತನ್ನ ಹೆಂಡತಿಗೆ

ತಿಳಿಯದಂತೆ ಹೇಗಾದರೂ ಎರಡು ಸಾವಿರ ರೂಗಳನ್ನು ಸಾಲ ಮಾಡಿ ಕೊಡುವೆ. ಆದರೆ ನಾನು ಹಣ ಸರಿ ಮಾಡಿಕೊಟ್ಟ ವಿಷಯ ಅವಳಿಗೆ ಗೊತ್ತಾಗಬಾರದು" ಎಂದು ಬರೆದಿದ್ದ.

ಆದರೆ ಅನುಕೂಲಸ್ಥನಾದ ಗೋವಿಂದ "ತಂದೆ ತಾಯಿಗೆ ಬುದ್ಧಿ ಹೇಳುವಂತೇ—

"ನಮಗೆಲ್ಲ ಎಸ್ಸೆಲ್ಸಿ ಮಾತ್ರ ಓದಿಸಿದಿರಿ. ಡಾಕ್ಟರ್, ಅಥವ ಇಂಜನಿಯರಿಂಗ್ ಓದಿಸಲಿಲ್ಲ ಮುಂದೆ ನಾವೇ ಹೇಗೋ ಕಷ್ಟಪಟ್ಟು, ಅನ್ಯಹನಿ ಕಾಲಕ್ಷೇಪಾ ಮಾಡಿ, ಎಂ ಎ. ವರಿಗೆ ಓದಿ ಕೆಲಸಾ ದೊರಕಿಸಿಕೊಂಡೆ. ಈಗ ಡಾಕ್ಟರ್ ಅಳಿಯ ಬೇಕೆಂಬ ಹುಚ್ಚು ಏಕೆ ? ನನ್ನ ಮದುವೆಯಲ್ಲಿ ಸೊಸೆಗೆಂದು ಎರಡೆಳೆ ಸರ, ನಾಲ್ಕು ರೇಶ್ಮೆ ಸೀರೆ ಹಾಕಿದಿರಾ ? ಆಗೆಲ್ಲಾ ಬಡತನದಲ್ಲಿದ್ದ ನೀವು ಈಗ ಒಮ್ಮೆಲೆ ಡಾಕ್ಟರ್ ಅಳಿಯನ್ನ ಅರಿಸುವ ಸ್ಥಿತಿಗೆ ಹೇಗೆ ಬಂದಿರಿ ? ನಾನಂತು ಈ ಮದುವೆಗೆ ಯಾವ ಬಗೆಯ ಸಹಾಯ ಮಾಡುವ ಸ್ಥಿತಿಯಲಿಲ್ಲ.

"ಒಂದು ಹಳ್ಳಿ ಹುಡುಗನ್ನ ಆರಿಸಿ ಹಳ್ಳಿಯ ಮನೆ ಮಾರಾಟ ಮಾಡಿ, ಒಂದು ಮದುವೆ ಶಾಸ್ತ್ರ ಮುಗಿಸಿರಿ ಎಂದಿದ್ದ ಆ ಮನೆಯಲ್ಲಿ ನನಗೆ ಪಾಲು ಬೇಡ. ಶಾರದನ್ನ ಮದುವೆಗೆ ನಾನು ಹಣಕಾಸು ಸಾಲ ಮಾಡಲಾರೆ" ಎಂದು ಬರದಿದ್ದ.

ಶಾನುಭೋಗರೇ ಡೆಪ್ಟಿ ಕಮಿಷನರಿಗೆ ಕಾಗದ ಬರೆದಿದ್ದರು ಅವರು ಸಂತಸದಿಂದ ಆಚಾರ್ಯರಿಗೆ ಉತ್ತರಿಸಿ "ಶಾರದಾಗೆ ನಾಲ್ಕು ರೇಶ್ಮೆಸೀರೆ, ಒಂದು ಜೊತೆ ಚಿನ್ನದ ವಾಲೆ, ನಮ್ಮ ಕಡೆ ಏರ್ಪಿಂದ ಮಾಡಿಸಿ ಕೊಡುತ್ತೇವೆ. ಲಗ್ನ ಪತ್ರಿಕೆ ಆದ ಮೇಲೆ ತಿಳಿಸಿ" ಎಂದಿದ್ದರು.

ಹಳ್ಳಿಯಲ್ಲಿ ಆಚಾರ್ಯರ ಮೇಲೆ ತುಂಬ ವಿಶ್ವಾಸ ಇಟ್ಟವರೂ ತೀರ ಧಾರಾಳ ಸ್ವಭಾವದವರು ಎಂದರೆ ರಂಗೆ ಗೌಡ ಹಾಗೂ ಇನ್ನೊಬ್ಬ ಶ್ರೀಮಂತನೆಂದರೆ ಕರಿಯಪ್ಪ ಸೆಟ್ಟಿ. ರಂಗೆಗೌಡ ಶಾನುಭೋಗರ ಎದುರಿಗೆ

"ಆಚಾರ್ಯರ ಮಗಳ ಮದುವೆ ನಿಶ್ಚಯ ಆದರೆ ಎರಡು ಪಲ್ಲ ಸಣ್ಣಕ್ಕಿ, ಎರಡು ಮೂಟೆ ಬೆಲ್ಲಾ ನನ್ನ ಕಡೆಯಿಂದ ಕೊಡ್ತೀನಿ" ಎಂದ.

ಕರಿಯಪ್ಪ ಸೆಟ್ಟಿ ತೆಂಗಿನ ತೋಟವಿತ್ತು. ಮದುವೆ ಮನೆಗೆ ಚಪ್ಪರ ಹಾಕಿಸಿ ಕೊಡ್ತೀನಿ. ಹಾಗೂ ಐನೂರು ತೆಂಗಿನಕಾಯಿ ಕೆಗೆದು ಕೊಡ್ತೀನಿ." ಎಂದಿದ್ದ.

ಇವರ ಉದಾರದಾನಗಳು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬುವಂತೆ ಇರ್ತಿತು. ನಾಗುವಿನ ಮದುವೆ ಖರ್ಚಿಗೆ ಐವತ್ತು ಸಾವಿರ ರೂ. ಗಳು ಹಿಡಿಸಿದ್ದಿತು. ತಿಂಗಳಿಗೆ ಸಾವಿರ ರೂ ಗಳಂತೆ ಐದು ವರ್ಷ ರಿಕರಿಂಗ್ ಡಿಪಾಸಿಟ್ ಕಟ್ಟಿದ್ದಳು. ಬಡ್ಡಿ ಸಮೇತ ಬಂದ ಹಣದಲ್ಲಿ ಮದುವೆ ಖರ್ಚು ಸೀರೆ, ಬಂಗಾರ ಎಲ್ಲಾ ಪಡೆಸಿಕೊಂಡಿದ್ದಳು.

ತುಂಬ ಶ್ರೀಮಂತರು, ಶಾನು ಭೋಗರು ಮಗಳ ಮದುವೆ ಮಾಡಿದ ಮಟ್ಟಿಗೆ ಮಾಡಬೇಕೆಂದರೆ ಐವತ್ತು ಸಾವಿರ ರೂಗಳಾದರೂ ಬೇಕು

ತಮ್ಮಲ್ಲಿ ಅಪಾರ ವಿದ್ವತ್ತಿದೆ. ವೇದ, ಶಾಸ್ತ್ರ ಪುರಾಣಗಳಲ್ಲಿ ತಾನು ಅದ್ವಿತಿಯ ಪಂಡಿತರು, ದೈವಭಕ್ತಿ, ಈ ವೇದಶಾಸ್ತ್ರ ಪಾಂಡಿತ್ಯವಲ್ಲದೇ ತಮಗೆ ಇನ್ನೇನು ಲೌಕಿಕ ವಿದ್ಯೆ ಗೊತ್ತಿಲ್ಲ.

ಆಚಾರ್ಯರು ಬಹು ಹೊತ್ತು ಚಿಂತಿಸಿದರು, ಗಂಡ ಮನನೊಂದು ಗಾಢ ಚಿಂತೆಯಲ್ಲಿ ಮುಳುಗಿದ್ದು ಕಂಡು ಸೀತಮ್ಮನಿಗೆ ಪಶ್ಚಾತ್ತಾಪವಾಯಿತು

"ನನ್ನ ಕ್ಷಮಿಸೀಂದ್ರೆ, ಮನಸು ಕೆಟ್ಟು ಏನೇನೋ ಮಾತಾಡಿಬಿಟ್ಟೆ. ಅವಳ ಹಣೇಲಿ ಬರೆದಿದ್ದ ಹಾಗೆ ಆಗಲಿ" ಎಂದರು. ಆಚಾರ್ಯರು ಎಚ್ಚೆತ್ತು—

"ನಾಳೆಯಿಂದ ಶ್ರೀ ಲಕ್ಷ್ಮೀದೇವಿಯ ಲಕ್ಷ ಕುಂಕುಮಾರ್ಚನೆ ಪ್ರಾರಂಭಿಸ್ತೀನಿ ಸೀತ, ಹಿಂದೆ ಮನು, ಅಗಸ್ತ್ಯ, ದುರ್ವಾಸ, ಇಂದ್ರಾದಿ ದೇವತೆಗಳು ಆಕೆಯನ್ನು ಆರಾಧಿಸಿ, ಧನ ಬಲ, ಅಧಿಕಾರ, ಐಶ್ವರ್ಯ ಪಡೆದಿದ್ದಾರೆ, ಹಣದ ಕಾರಣದಿಂದ ಮಗಳ ಮದುವೆ ನಿಲ್ಲಬಾರದು. ಶ್ರೀ ಲಕ್ಷ್ಮೀ ಹಯಗ್ರೀವ ಸ್ವಾಮಿ ನಮ್ಮ ಕೈ ಬಿಡಲ್ಲ" ಎಂದರು.

"ಹಾಡೀಂದ್ರೆ ಜಗತ್ತೆಲ್ಲ ದೇವತೆಗಳ ವಶ, ದೇವತೆಗಳೆಲ್ಲ ಮಂತ್ರವಶ, ಮಂತ್ರಗಳೆಲ್ಲ ವೈದಿಕ ಬ್ರಾಹ್ಮಣರ ವಶ" ಅಂತ ಶಾಸ್ತ್ರಗಳಲ್ಲಿದೆ. ವೇದಶಾಸ್ತ್ರ ಚೆನ್ನಾಗಿ ಬಲ್ಲ ಪರಮ ಶ್ರೋತ್ರಿಯರು ನೀವು ನಿಮ್ಮ ಆರಾಧನೆಗೆ ಖಂಡಿತ ಶ್ರೀ ಲಕ್ಷ್ಮೀದೇವಿ ಒಲಿಯುತ್ತಾಳೆ" ಎಂದರು

"ಆಗಲಿ ಸೀತಾ ಇದೇ ಒಂದು ತಪಸ್ಸು, ಇದುವರಿಗೂ ಸಕಾಮಯುತ ಸೇವೆ ಮಾಡಿಲ್ಲ. ನಿಷ್ಕಾಮವಾಗಿ ಆರಾಧಿಸಿದ್ದೆ. ಈ ಸಲ ಇಷ್ಟಾರ್ಥ ಸಂಕಲ್ಪಿಸೇ ಸೇವೆ ಶುರು ಮಾಡ್ತೀನಿ" ಎಂದರು.

*    *    *    *

ಆಚಾರ್ಯರು ಲಕ್ಷ ಕುಂಕುಮಾರ್ಚನೆ ಶ್ರೀ ಲಕ್ಷ್ಮಿದೇವಿಗೆ ಸೇವೆ ಪ್ರಾರಂಭಿಸಿದ್ದಾರೆಂದು ಹಳ್ಳಿಜನಕ್ಕೆ ತಿಳಿದೊಡನೆ ಹಳ್ಳಿಯ ಜನ ಅರಶಿನ, ಕುಂಕುಮ, ಹೂವು ಹಣ್ಣು, ಹಾಲು, ತುಪ್ಪ ಅಕ್ಕಿ, ಗೋಧಿ, ಬೆಲ್ಲ ರಾಶಿ ರಾಶಿ ತಂದು ಹಾಕಲಾರಂಭಿಸಿದರು.

ಬೆಳಗ್ಗೆ ಎಂಟಕ್ಕೆ ಶುರುವಾದರೆ ಸಂಜೆ ಐದು ಗಂಟೆಯವರೆಗೆ ಲಕ್ಷ ಕುಂಕುಮಾರ್ಚನೆ, ಇಪ್ಪತ್ತು ಸಾವಿರ ಅರ್ಚನೆ ಆದೊಡನೆ ರಾಜೋಪಚಾರ.... ಶೋಡಶೋಪಚಾರ....ಪುಷ್ಪಾರ್ಚನೆಗಳು ...ನೈವೇದ್ಯ....ಸ್ತೋತ್ರಗಳು ಶ್ರೀ ವೇದಾಂತ ದೇಶಿಕಾಚಾರ್ಯರ ಶ್ರೀಸ್ತುತಿ, ಶ್ರೀ ಶಂಕರಾಚಾರ್ಯರ ಕನಕ ದಾಸರ ಸ್ತೋತ್ರ ಹಾಗೂ ದಿನಾ ಹೇಳಿಕೊಳ್ಳುವ ಶ್ರೀ ವೇದಾಂತ ದೇಶಿಕಾ ಚಾರ್ಯರ ಶ್ರೀ ಲಕ್ಷ್ಮಿಹಯಗ್ರೀವ ಸ್ತೋತ್ರ, ಶ್ರೀ ಕೂರೇಶರ ಶ್ರೀಸ್ತವ ಶ್ರೀ ಪರಾಶರಭಟ್ಟರ ಶ್ರೀ ಗುಣರತ್ನ ಕೋಶಾ....ಆಚಾರ್ಯರು ಕಂಚಿನ ಕಂಠ ದಲ್ಲಿ ಶ್ರೀ ಲಕ್ಷ್ಮಿದೇವಿಯ ಈ ಸ್ತೋತ್ರಗಳನ್ನು ಸಂಸ್ಕೃತದಲ್ಲಿ ಹೇಳುತ್ತಿ ದ್ದರೇ ಕೇಳುಗರು ತನ್ಮಯರಾಗಿ ಕೇಳುತ್ತಿದ್ದರು.

ಮತ್ತೆ ಇಪ್ಪತ್ತು ಸಾವಿರ ಅರ್ಚನೆ, ಅನಂತರ ಅಗಸ್ತ್ಯರ ಶ್ರೀ ಲಕ್ಷ್ಮಿ ಸ್ತೋತ್ರ, ಶ್ರೀ ದೇವೇಂದ್ರ ಕೃತ ಶ್ರೀಲಕ್ಷ್ಮಿ ಅಷ್ಟಕ, ಶ್ರೀ ಲಕ್ಷ್ಮಿ ಹೃದಯ, ಶ್ರೀ ಲಕ್ಷ್ಮಿ ದಂಡಕ ಈ ಎಲ್ಲಾ ಸಂಸ್ಕೃತ ಸ್ತೋತ್ರ ಆಚಾರ್ಯರು ಹೇಳುತ್ತ ಕೂತರೆ ಆಚಾರ್ಯರ ಪತ್ನಿ ಶ್ರೀ ವಾದರಾಜರ ಕನ್ನಡದ ಶ್ರೀ ಲಕ್ಷ್ಮಿ ಹೃದಯ ಶ್ರೀ ಲಕ್ಷ್ಮಿ ಶೋಭಾನೆ, ಹಾಗು ಶ್ರೀ ಪುರಂದಾಸರ ಶ್ರೀ ಭಾಗ್ಯದ ಲಕ್ಷ್ಮಿ ಬಾರಮ್ಮ....ಶ್ರೀ ವಿಜಯ ದಾಸರ ಶ್ರೀ ಮಹಾಲಕುಮಿ ದೇವಿಯೇ ...ಹಾಗು ಕ್ಷೀರ ಸಾಗರ ಕನ್ನಿಕೇ ಈ ಎಲ್ಲ ಸ್ತೋತ್ರಗಳನ್ನು ಹೇಳಿಕೊಳ್ಳುತ್ತ ಹೊತ್ತು ಹೊತ್ತಿಗೆ ಮಡಿಯಲ್ಲಿ....ಸಿಹಿಯಾದ ನೇವೈದ್ಯ ಮಾಡುವರು

ಮೊದಲನೆ ತಂಡದ ಪೂಜೆಗೆ ಸಕ್ಕರೆ ಪೊಂಗಲ್....ಎರಡನೆ ತಂಡದ ಪೂಜೆಗೆ ಅನ್ನ, ತುಪ್ಪ, ಪಾಯಿಸ ತೊಟ್ಟೆ ಹೋಳಿಗೆ ನೈವೇದ್ಯ.

ಮೂರನೆ ತಂಡ ಇಪ್ಪತ್ತು ಸಾವಿರ ಅರ್ಚನೆ ನಡೆದ ಮೇಲೆ....ಶ್ರೀಸೂಕ್ತ ಭೂಸೂಕ್ತ ಹಾಗು ಶ್ರೀ ಮಧ್ವಾಚಾರ್ಯರು ಮಾಡಿದ ಶ್ರೀ ಲಕ್ಷ್ಮಿಯ ದಿವ್ಯ ಸ್ತೋತ್ರಗಳು ಹೇಳಿಕೊಳ್ಳುತ್ತ ಶೋಡಶೋಪಚಾರದ ಪೂಜೆ ಸಲ್ಲಿಸುವರು. ದೊಡ್ಡ ದೊಡ್ಡ ಪಾತ್ರೆಯಲ್ಲಿ ಕೇಸರಿ ಬಾದಾಮಿ ಹಾಕಿದ ಹಾಲು, ಹಣ್ಣುಗಳು ಆಗಿನ ನೈವೇದ್ಯ....ನಾಲ್ಕನೆ ತಂಡದ ಇಪ್ಪತ್ತು ಸಾವಿರ ಅರ್ಚನೆ ಆದಮೇಲೆ ...

ತೆಂಗಿನ ಕಾಯಿಗಳ ನೈವೇದ್ಯ ಪ್ರತಿದಿನ ನೂರೆಂಟಕ್ಕೂ ಹೆಚ್ಚು ಕಾಯಿಗಳು ಯಾರೋ ಭಕ್ತರು ತಂದುಕೊಟ್ಟದ್ದು....ಇರುತ್ತಿತ್ತು ಒಡೆದು ಯಂತ್ರೋಕ್ತ ವಾಗಿ ನೈವೇದ್ಯ ಮಾಡಿದೊಡನೇ ಪ್ರಸಾದ ನೀಡುವಾಗ ಅವರವರ ಕಾಯಿ ಅವರವರಿಗೆ ನೀಡುತ್ತಿದ್ದರು.

ಐದನೆ ತಂಡದ ಇಪ್ಪತ್ತು ಸಾವಿರ ಅರ್ಚನೆ ಮುಗಿದ ಮೇಲೆ ಬಾಳೆ ಹಣ್ಣಿನ ರಸಾಯನಾ, ಕೋಸಂಬ್ರಿ ನೈವೇದ್ಯ ಅನಂತರ ಮಹಾ ಮಂಗಳಾರತಿ ಪ್ರಸಾದ ವಿತರಣೆ....ಎರಡನೇ ತಂಡದ ಪೂಜೆ ಮುಗಿದು, ದೇವರಿಗೆ ಅನ್ನ ನೈವೇದ್ಯ ಆದಮೇಲೆ....

ಆಚಾರ್ಯರು ಒಂದು ಲೋಟಾ ಹಾಲು ಕುಡಿದು ಎರಡು ಬಾಳೆ ಹಣ್ಣು ತಿನ್ನುತ್ತಿದ್ದರು. ಅನಂತರ ಪೂರ್ತಿ ಐದು ತಂಡದ ಪೂಜೆ, ನೈವೇದ್ಯ ಆದಮೇಲೆ ಜನರೆಲ್ಲಾ ಪ್ರಸಾದ ಪಡೆದು ಹೊರಟ ಮೇಲೆ....

ಮತ್ತೆ ಶ್ರೀ ಲಕ್ಷ್ಮೀದೇವಿಯ ಮೌನ ಜಪಕ್ಕೆ ಕೂಡುವರು. ಶ್ರೀ ಮಹಾ ವಿಷ್ಣು ದೇವ್ಯೈ ನಮಃ ಎಂಬ ಮಂತ್ರ ತಪಸ್ಸಾಗಿ ಹಿಡಿದಿದ್ದರು

ಎಂಟು ಗಂಟೆಯವರೆಗೆ ಜಪ, ಅನಂತರ ರಾತ್ರಿ ಎಂಟುಗಂಟೆಗೆ ಊಟಾ·

ಒಂದು ಯಜ್ಞದ ರೀತಿಯಲ್ಲಿ ನಲವತ್ತೆಂಟು ದಿನ ವೈಭವವಾಗಿ ಶ್ರೀ ಲಕ್ಷ್ಮೀ ಆರಾಧನ ನಡೆಯಿತು ಸೀತಮ್ಮನವರಿಗೆ ಆಶ್ಚರ್ಯ ಆದ ವಿಷಯ ವೆಂದರೆ ಎಲ್ಲೆಲ್ಲಿಂದಲೋ ಸುತ್ತ ನಾಲ್ಕಾರು ಊರುಗಳಿಂದ ಪೂಜೆಗೆ ಪೂಜಾ ದ್ರವ್ಯ ಬರತೊಡಗಿತು. ಶ್ರೋತ್ರಿಯರಾದ ನಾಲ್ಕಾರು ಬ್ರಾಹ್ಮಣರು ಬಂದು ಮಂತ್ರಸ್ತೋತ್ರಗಳಿಗೆ ಕಂಠ ಕೂಡಿಸಿದರು ಶೆಟ್ಟಕ್ಕು, ಒಕ್ಕಲಿಗರು ಬ್ರಾಹ್ಮ ಣರು ಏನೇನು ಸಾಧನಗಳು ತಂದರು.

ದಿನ ಹತ್ತು ಸೇರಕ್ಕಿಯ ಪೊಂಗಲ್ ಹಾಗು ನೂರೆಂಟು ತೆಂಗಿನಕಾಯಿ ನೈವೇದ್ಯದೊಡನೆ ಹಾಲು ಹಣ್ಣು ಅನ್ನ ನೈವೇದ್ಯ ನಡಿಯುತ್ತಿತ್ತು.

ದಿನಾ ಐದು ಜನ ಬ್ರಾಹ್ಮಣ, ಮುತ್ತೈದೆಯರಿಗೆ ಊಟಾ ನೂರಾರು ಜನಕ್ಕೆ ಪ್ರಸಾದ ವಿತರಣೆ ಜೊತೆಗೆ ಅರ್ಚನೆಗೆ ಹೂವುಗಳು ಒದಗಿದ ರೀತಿಯೂ ಸೀತಮ್ಮನಿಗೆ ಅಚ್ಚರಿ, ಒಂದು ದಿನ ನೂರೆಂಟು ಕಮಲದ ಹೂ ತಂದಿತ್ತ ಭಕ್ತನೊಬ್ಬ, ಶ್ರೀ ಲಕ್ಷ್ಮೀದೇವಿಗೆ ಅದನ್ನು ಅಷ್ಟೋತ್ತರದೊಡನೆ ಅರ್ಪಿ ಸಿದರು. ಇನ್ನೊಂದು ದಿನ ಸಾವಿರ ಕೇದಿಗೆ ಗರಿ ತಂದಿದ್ದ ಇನ್ನೊಬ್ಬ ಭಕ್ತ· ಅದನ್ನು ಸಹಸ್ರ ಪುಷ್ಪಾರ್ಚನೆಗೆ ಬಳಸಲಾಯಿತು. ಮಲ್ಲಿಗೆ, ಗುಲಾಬಿ,

ಪಾರಿಜಾತ, ಜಾಜಿ ಎಲ್ಲೆಲ್ಲಿಂದ ಹೂವು ಬರಲಾರಂಭಿಸಿದವು ನಲವತ್ತೆಂಟ ನೆಯ ದಿನ ಒಂದು ಸಾವಿರ ಜನಕ್ಕೆ ಹೋಳಿಗೆ ಪಾಯಸದ ಊಟವಾಯಿತು ಮಂಗಳ ಸಮಾರಂಭ ಭೋಜನ ಎಲ್ಲಾ ನೆರವೇರಿತು. ಅಡಿಗೆಗೆ ಬಂದ ದವಸ ಧಾನ್ಯಗಳು ಅಡಿಗೆ ಮಾಡಲು ಕೈ ಕಟ್ಟಿ ನಿಂತ ಬ್ರಾಹ್ಮಣ, ಮುತ್ತೈದೆ ಯರು ಎಲ್ಲಾ ಸೋಜಿಗವೆನಿಸಿತು ಸೀತಮ್ಮನಿಗೆ.

ಖಾಸಗಿಯಾಗಿ ಯಾರಾದರೂ ಶ್ರೀಮಂತರು ಮಾಡಿಸಿದ್ದರೆ ಇಪ್ಪತ್ತು, ಇಪ್ಪತ್ತೈದು ಸಾವಿರ ರೂ. ಗಳಾಗುತ್ತಿತ್ತು. ಕೈಯಲ್ಲಿ ಬಿಡಿಗಾಸಿಲ್ಲದೆ, ಮಂತ್ರೋಕ್ತವಾಗಿ ಸಂಕಲ್ಪ ಮಾಡಿಬಿಟ್ಟಿದ್ದರು. ಆದರೆ ಸಮಾರಂಭ ಎಷ್ಟು ಅದ್ದೂರಿಯಾಗಿ ನೆರವೇರಿತು.

ಆದರೇ....ಆದರೆ....ಇಂಥಾ ಶ್ರೀ ಲಕ್ಷ್ಮೀ ಸೇವೆ ನಡೆದರೂ ಧನಕನಕ ರಾಶಿ ಸುರಿಯಲಿಲ್ಲವೆ ? ಎಂತೆಂಥಹ ಮಹಾಮಹಿಮರ ಸ್ತೋತ್ರಗಳು ಶ್ರೀ ಶಂಕರಾಚಾರ್ಯರು, ಶ್ರೀ ಕನಕದಾಸರ ಸೋತ್ರ ಹೇಳಿದಾಗ ಒಬ್ಬ ಬಡ ಮುದುಕಿಯ ಮನೆಯಲ್ಲಿ ಬಂಗಾರದ ನೆಲ್ಲಿಕಾಯಿಗಳ ಮಳೆ ಸುರಿಯಿತೆಂದು ಐತಿಹ್ಯವಿದೆ.

ಬಡ ಮುದುಕಿಯೊಬ್ಬಳು ತಾವು ಭಿಕ್ಷೆಗೆ ಹೋದಾಗ ಸಂಕೋಚದಿಂದ ಕೆಲವು ಒಣನೆಲ್ಲಿಕಾಯಿ ಹಾಕಿದ್ದಳಂತೆ. ಆ ಮುದುಕಿಯ ಸದ್ಗುಣ ಕಂಡು ಸಂತಸಗೊಂಡು ಅವರು ಶ್ರೀ ಲಕ್ಷ್ಮೀ, ಈ ಸ್ತೋತ್ರ ಹೇಳಿದಾಗ ಬಂಗಾರದ ನೆಲ್ಲಿಕಾಯಿಗಳು ಆ ಮುದುಕಿಯ ಮನೆಯಲ್ಲಿ ಸುರಿದು ಅವರು ಸಂತುಷ್ಟ ರಾಗಿದ್ದರು

ಶ್ರೀ ವೇದಾಂತ ದೇಸಿಕಾಚಾರ್ಯರ ಶಿಷ್ಯನೊಬ್ಬ ವಿವಾಹ ಮಾಡಿ ಕೊಳ್ಳಲು ಬಯಸಿ ಧನಾಕಾಂಕ್ಷೆಯಿಂದ ಗುರುಗಳ ಪಾದಕ್ಕೆ ಶರಣಾದಾಗ ಆ ಮಹಾಮಹಿಮರು ಶ್ರೀ ಲಕ್ಷ್ಮೀಯನ್ನು ಸ್ರೀ ಸ್ತುತಿ ಮೂಲಕ ಸ್ತುತಿಸಿ ದರು. ಆಗ ಬಂಗಾರದ ಮಳೆಯೆ ಸುರಿಯಿತೆಂಬ ಐತಿಹ್ಯವಿದೆ. ಶ್ರೀ ಅಗಸ್ತ್ಯ ವಿರಚಿತ ಶ್ರೀ ಲಕ್ಷ್ಮೀ ಸ್ತೋತ್ರವೇನು ಕಡಿಮೆ ಮಹಿಮೆಯುಳ್ಳದ್ದೇ ?

ಆದರೆ ಈ ಎಲ್ಲಾ ಸ್ತೋತ್ರ ಧರಿಸಿದ ತಮಗೆ ಶ್ರೀ ಲಕ್ಷ್ಮೀದೇವಿ ಏನು ದಯ ಮಾಡಿದಳು ?

ಯಥಾ ಪ್ರಕಾರ ಅವರಿವರು ತಂದಿಡುವ ಭೋಜನ ಸಾಮಾಗ್ರಿ.. ದಾನ ದಕ್ಷಿಣೆ ಇದರಲ್ಲೆ ದಿನಗಳು ಕಳೆಯುತ್ತಿವೆ. ಮೂರು ತಿಂಗಳು

ಕಳೆದು ಹೋಗುತ್ತಿದೆ ಈ ಚಿಂತೆ ಕೀಟದಂತೆ ಭಾದಿಸುತ್ತಿತ್ತು.

ಶಾರದಳೇ ತಾಯಿಗೆ ಸಮಾಧಾನ ಹೇಳುತ್ತಿದ್ದಳು. "ಚಿಂತೆ ಮಾಡ ಬೇಡಮ್ಮ, ಅಪ್ಪಾ ಹೇಳಿದ ಹಾಗೆ ಋಣಾನುಬಂಧ ಇದ್ದರೆ ಆಗತ್ತೆ. ಇಲ್ಲ ದಿದ್ದರೆ ಇಲ್ಲ" ಎಂದಳು. ನಾಗುವಿನ ತಮ್ಮ ಸತೀಶ ಒಂದು ದಿನ ಬಂದು "ಅಕ್ಕ ಬಂದಿದ್ದಾಳೆ, ಬರಬೇಕಂತೆ" ಎಂದು ಕರೆಯಲು ಬಂದ. ಶಾರದಾ ಉತ್ಸಾಹದಿಂದ "ಅಮ್ಮ ನಾಗು ಬಂದಿದ್ದಾಳಂತೆ ನನಗೆ ಹೇಳಿ ಕಳಿಸಿದ್ದಾಳೆ ಹೋಗಿ ಬರ್ತೀನಿ" ಎಂದು ಉತ್ಸಾಹದಿಂದ ಅವರ ಮನೆಗೆ ಧಾವಿಸಿದಳು.

ಸೀತಮ್ಮನಿಗೆ ಒಳಗೊಳಗೆ ಸಂಕಟ ಶಾರದಳ ವಯಸ್ಸಿನವಳೇ ಆದ ನಾಗು ವಿವಾಹಿತೆ ನಾಳೆ ಬಸುರಿ, ಬಾಣಂತಿ ಎಂಬ ಆರಕ್ಷತೆ ಆದರೆ ಓಡಾಡ ಬೇಕಾದ್ದು ಈ ಹುಡುಗಿ. ಗಂಡಿನವರು ಕೊಟ್ಟ ಮೂರು ತಿಂಗಳ ಗಡುವು ಎಂದೋ ತೀರಿ ಹೋಯಿತು ಶಾರದಳ ಮದುವೆ ತಪ್ಪಿದ ಹಾಗೆ ಲೆಕ್ಕ. ಈ ಹುಡುಗಿ ಏನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ ಗೆಳತಿಯ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾಳೆ ಯೋಚಿಸುತ್ತ ನಿಟ್ಟುಸಿರು ಬಿಟ್ಟರು.

ಮತ್ತೆ ಶಾರದಾ ಬಂದದ್ದು ಆರು ಗಂಟೆಯ ಮೇಲೆ, "ಏಕೆ ಇಷ್ಟು ಹೊತ್ತು ಮಾಡ್ತಿ? ದೀಪಾ ಹಚ್ಚೋದ್ರೊಳಗೆ ಮನೆಗೆ ಬರಬಾರದಾ?" ಎಂದರು.

"ನಾಗೂಗೋಸ್ಕರ ಮೈಸೂರುಪಾಕು ಮಾಡೋದಿತ್ತಮ್ಮ. ಮೈಸೂರು ಪಾಕು ನೀನು ಚೆನ್ನಾಗಿ ಮಾಡ್ತಿ ಅಂತ ಆಂಟಿ ನಂಗೆ ಮಾಡಲಿಕ್ಕೆ ಹಚ್ಚಿದರು. ಆಂಟಿ ಬೊಂಬಾಯಿಬೋಂಡಾ ಮಾಡಿದರು ಟಿಫನ್ ಮುಗಿಸಿಯೇ ಬಂದೆ" ಶಾರದಾ ಉತ್ಸಾಹದಿಂದ ಮಾತಾಡಿದಳು.

ಸೀತಮ್ಮ ಕೋಪದಿಂದ "ಗೆಳತೀನ್ನ ಮಾತಾಡಿಸಿ ಬಾ ಅಂದರೆ ಚಾಕರಿ ಮಾಡಿ ಬರೋದೇ ನಿನ್ನ ಹಣೆಯ ಬರಹ" ಎಂದರು

ತಾಯಿಯ ರೇಗಾಟ ಗಮನಕ್ಕೆ ತಂದುಕೊಳ್ಳಲಿಲ್ಲ ಶಾರದ "ಹೇಗಿದ್ದರೂ ಧಂಡಿಯಾಗಿ ಬಿಟ್ಟುಗಟ್ಟೆ ಉಪ್ಪೇರಿ ಮಾಡಿ ಒಣಗಿಸಿದ್ದೀನಿ ನಾಗೂಗೆ ಎರಡು ತಿಂಗಳಾಗಿದೆಯಂತದ್ದು, ಖಾರವಾಗಿ ಏನಾದರೂ ತಿನ್ನಬೇಕು ಅನಿಸ್ತಿರತ್ತಂತೆ. ನಾನು ನಾಳೆ ಮಸಾಲೆ ರುಬ್ಬಿ ಕೊಟ್ಟು ಮಾತ್ತೀನಿ. ಧಂಡಿಯಾಗಿ ಚಿಪ್ಸ್ ತಗೊಂಡು ಹೋಗಿ ಕೊಡ್ತೀನಿ" ಎಂದಳು.

"ನಿನ್ನ ಸಂಭ್ರಮವೇ ಸಂಭ್ರಮ" ಎಂದು ಬೈದುಕೊಂಡರು ಸೀತಮ್ಮ. ಹಾಲಿನಂತಹ ಇವಳ ಮನದಲ್ಲಿ ಕಲಿಕಲ್ಮಷ ಬಿತ್ತುವುದೇಕೆ ಎಂದು ಸುಮ್ಮ ನಾದರು. ಕೊಂಚ ಹೊತ್ತಿಗೆ ತಟ್ಟೆ ಹಿಡಿದು ನಾಗೂವೇ ಬಂದಳು. "ಬಾಮ್ಮ ಮಗನ ತಾಯಿಯಾ ಆಗ್ತೀಯಂತೆ," ಎಲ್ಲಾ ಚಿಂತೆ ಅದುಮಿ ಸಂತೋಷದಿಂದ ಸ್ವಾಗತಿಸಿದರು. ತಟ್ಟೆಯಲ್ಲಿದ್ದ ಬೇಸನ್ ಉಂಡೆ, ಚಕ್ಕುಲಿ, ಹಣ್ಣುಗಳು ಅವರಿಗೆ ಕುಂಕುಮ ಹಚ್ಚಿ ನೀಡಿದ ನಾಗು "ನಮ್ಮ ಅತ್ತೆ ಮನೆ ತಿಂಡಿ ರುಚಿ ನೋಡಿ" ಎಂದಳು

"ನಮ್ಮನೆಗೆ ಯಾವಾಗ ಊಟಕ್ಕೆ ಬರ್ತಿ ? ಬಸುರಿ ಹುಡುಗಿ. ನನ್ನ ನನ್ನ ಕೈಲಾದ್ದು ರುಚಿರುಚಿಯಾಗಿ ಮಾಡಿ ಹಾಕ್ತೀನಿ" ಎಂದರು.

"ಅಮ್ಮ... ಈಗ ಬಂದು ಮಾತಾಡ್ತಾಳೆ. ನಾಳೆ ನಿಮ್ಮ ಶ್ರೀ ಲಕ್ಷ್ಮಿ ಹಯಗ್ರೀವ ದೇವರಿಗೆ ನೇವೇದ್ಯ ಮಾಡಿಸಬೇಕಂತೇ...." ಎನ್ನುವ ಹೊತ್ತಿಗೆ ಸತೀಶನ ಜೊತೆ ಚೀಲ ಹೊರಸಿಕೊಂಡು ಗೌರಮ್ಮನೆ ಹಾಜರಾದರು.

"ನಾಳೆ ನಮ್ಮ ಶ್ರೀ ಲಕ್ಷ್ಮಿ ಹಯಗ್ರೀವ ದೇವರಿಗೆ ಸಾಂಗಿತವಾಗಿ ಪೂಜೆ ಸಹಸ್ರಮಲ್ಲಿಗೆ ಅರ್ಚನೆ ಸಹಸ್ರ ನಾಮದ ಕೂಡ ಶ್ರೀ ತುಳಸಿ ಅರ್ಚನೆ ಹೋಳಿಗೆ ಪಾಯಿಸದ ಅಡಿಗೆ ನೇವೇದ್ಯ ಆಗಬೇಕು ಕಣ್ರಿ. ಮದುವೆಗೆ ಮುಂಚೆ ಒಂದು ಪೂಜೆ ಮಾಡಿಸಿದ್ದೆ. ಮಲ್ಲಿಗೆ ಹೂವು ಎತ್ತಿದ ಹಾಗೆ ಸ್ವಾಮಿ ಎಲ್ಲಾ ನೆರವೇರಿಸಿದ.

"ಈಗ ನಾಗು ಎರಡು ತಿಂಗಳ ಗರ್ಭಿಣಿ. ಸ್ವಾಮಿ ಎಲ್ಲಾ ಹೂವೆತ್ತಿದ ಹಾಗೆ ನಡೆಸಿಕೊಡಬೇಕು. ಗಂಡು ಮಗು ಆದರೆ ತೊಟ್ಟಿಲಲ್ಲಿ ಮೊದಲ ಹೆಸರು ಮಗೂನ ಕಿವೀಲಿ ಶ್ರೀ ಲಕ್ಷ್ಮಿ ಹಯಗ್ರೀವಾ ಅಂತಲೆ ಕೂಗ್ತೀವಿ" ಎಂದರು.

"ಏನು ಇಷ್ಟೊಂದು ಸಾಮಾನು. ಗೋಧಿಹಿಟ್ಟು ಸಹಿತ ತರಬೇಕಾ ನೀವು ? ನಿಂಗೆಗೌಡನ ಕೃಪೆಯಿಂದ ಗೋಧಿ ಒಂದು ಸಮೃದ್ಧಿ ಇರುತ್ತೆ ನಮ್ಮನೇಲಿ" ಎಂದು ಸೀತಮ್ಮ ನುಡಿದಾಗ—

"ಇರ್‍ಲಿ ಬಿಡಿ. ನಾವು ಕೊಟ್ಟಿರೋದು ದೇವರ ನೈವೇದ್ಯಕ್ಕೆ ನಾಳೆ ಆರು ಗಂಟೆಗೆ ಮಡಿ ಉಟ್ಕೊಂಡು ನಾನು ನಿಮ್ಮ ಜೊತೆ ಅಡಿಗೆಗೆ ಬಂದ್ಬಿಡ್ತೀನಿ" ಎಂದರು ಗೌರಮ್ಮ.

"ಅಪರೂಪಕ್ಕೆ ಮಗಳು ಬಂದಿದ್ದಾಳೆ. ಗೌರಮ್ಮ ನೀವು ಅಲ್ಲಿ ಮಗಳ

ಗೇಸಾರ ಶಿಂತಿ ಮಾಡಿಕೊಳ್ಳಿ. ಸುಬ್ಬಣ್ಣ ಕೈ ಸಹಾಯಕ್ಕಿದ್ದರೆ ಸಾಕು. ಅಡಿಗೆ ನಾನೇ ಮಾಡ್ತೀನಿ" ಎಂದರು ಸೀತಮ್ಮ.

"ಇಲ್ಲ ನಾಗೂಗೆ ಈ ದಿನ ಮೈಸೂರ್‌ಪಾಕ್ ಬೊಂಬಾಯಿ ಬೋಂಡ ಆಗಿವೆ. ಅತ್ತೆ ಮನೆಯಿಂದ ತಂದ ತಿಂಡಿಗಳಿವೆ. ಎರಡು ಮೂರು ದಿನ ನಡೆಯುತ್ತೆ. ನಾಳೆ ನಮ್ಮ ಸ್ವಾಮಿಗೆ ನೈವೇದ್ಯಕ್ಕೆ ಸನ್ನದು ಶ್ರಮ ಸೇವೆ ನಡೆಯಲಿ" ಎಂದರು

ನಮ್ಮ ಮನೆಯಲ್ಲಿ ಇದ್ದು ಊರವರಿಗೆಲ್ಲಾ ದಯ ಮಾಡುವ ದೇವರು ನನ್ನ ಮಗುವಿನ ಮದುವೆ ವಿಷಯಕ್ಕೆ ಕಲ್ಲಾಗಿ ಕೂತನಲ್ಲ ಎಂಬ ಭಾವನೆ ಒಂದು ಕ್ಷಣ ಸರಿದು ಹೋಯಿತು ಸೀತಮ್ಮನವರಲ್ಲಿ.

"ನಾಗೂ ಒಂದು ಸಮಾಚಾರ ಹೇಳಿದಳು ಸೀತಮ್ಮ...." ಎಂದು ಪ್ರಾರಂಭಿಸಿದರು ಸೀತಮ್ಮ ಕುತೂಹಲದಿಂದ ತಲೆ ಎತ್ತಿ "ಏನ್ರಿ ಗೌರಮ್ಮ?" ಎಂದರು.

"ಅಮೇರಿಕಾದಿಂದ ಪ್ರಭಾಕರನ ತಂದೆ ಟ್ರಂಕಾಲ್ ಮಾಡಿ ಹೆಂಡತೀನ್ನ ಕರೆಸಿಕೊಂಡರಂತೆ. ಅಲ್ಲಿ ಒಂದು ಆಸ್ಪತ್ರೇಲಿ ಪ್ರಸೂತಿ ಶಸ್ತ್ರದ ವಿಷಯದಲ್ಲಿ ಏನೊ ವಿಶೇಷ ತರಬೇತಿ ಅಂತೆ ಎಂಟು ತಿಂಗಳು ಆಕೆ ಹೊರಟುಬಿಟ್ಟರು. ಮೊನ್ನೆ ಪ್ರಭಾಕರ ನಾಗೂ ಮನೆಗೆ ಬಂದಿದ್ದನಂತೆ.

"ಏನು ನಿಮ್ಮೂರಿನ ಆಚಾರ್ಯರು ನಮ್ಮ ತಂದೆತಾಯಿಗೆ ಕಾಗದ ಬರಿಯಲೇ ಇಲ್ಲವಲ್ಲ" ಎಂದನಂತೆ

ನಾಗು ಉತ್ತರಿಸಿ "ಏನು ಮೂರು ತಿಂಗಳಲ್ಲಿ ಐವತ್ತು ಸಾವಿರ ರೂಪಾಯಿ ಸರಿ ಮಾಡಿಕೊಳ್ಳಲು ಅವರಿಗಾಗಿಲ್ಲಾನಿಸತ್ತೆ" ಎಂದಳಂತೆ.

"ಈಗ ನಮ್ಮ ತಂದೆ ಬರೋದು ಪೋಸ್ಟ್‌ಪೋನ್ ಆಯಿತು. ನಮ್ಮ ತಾಯಿನೂ ಹೊರಟುಬಿಟ್ಟರು ಇನ್ನು ಒಂದು ಎಂಟು, ಹತ್ತು ತಿಂಗಳು ಅವರಿಗೆ ಟೈಮಿದೆ ಅಂತ ಹೇಳಿ. ನಾನಂತು ಸದ್ಯಕ್ಕೆ ಯಾವ ಹುಡುಗೀನ್ನು ನೋಡ್ಲಿಕ್ಕೆ ಸಹ ಹೋಗಲ್ಲ. ಆ ನಿಮ್ಮ ಗೆಳತಿಯ ಮೇಲೆ ನನಗೆ ತುಂಬಾ ಮನಸ್ಸಿದೆ" ಎಂದರಂತೆ ಎಂದು ಹೇಳಿದರು.

"ಅವರೇನೋ ಎಂಟು ತಿಂಗಳು ಟೈಮ್ ಕೊಟ್ಟಿದ್ದಾರೆ. ಆದರೆ ನಮಗೆ ಆಗ ತಾನೇ ಹಣ ಎಲ್ಲಿಂದ ಬರತ್ತೆ ಹೇಳ್ರಿ? ದೇವರ ಮನೆ ಗೂಡಿನ ತುಂಬ ಬಗೆಬಗೆ ತಾಳೆಗರಿ, ಓಲೆಗರಿ ಗ್ರಂಥಗಳು ವೇದಾ, ಪುರಾಣ,

ಉಪನಿಷತ್ ಇದೇ ನಮ್ಮ ಸಂಪತ್ತು" ಎಂದು ನಿಟ್ಟುಸಿರಿಟ್ಟರು ಸೀತಮ್ಮ.

"ಏನೋ ಮೂರು ತಿಂಗಳಿಗೆ ಆ ವಿಷಯ ಮುಕ್ತಾಯ ಆಯಿತು ಅಂದುಕೊಂಡಿವಿ. ವಿಷಯ ಮುಂದುವರಿದಿರೋದು ಶುಭ ಸೂಚನೆ ಕಣ್ರಿ" ಎಂದರು ಗೌರಮ್ಮ.

ಸೀತಮ್ಮ ನಿರಾಶೆಯಿಂದ ನಕ್ಕರು– "ಮೊದಲಿಂದ ನಮ್ಮ ಶಾರದ ವಿಷಯದಲ್ಲಿ ಒಳ್ಳೆ ಮಾತೇ ಆಡ್ತಿದ್ದೀರಿ. ನಿಮ್ಮ ಅಭಿಮಾನವೇ ನಮ್ಮ ಶಾರದನ್ನ ಗೆಲ್ಲಿಸಬೇಕು ಕಣ್ರಿ" ಎಂದರು.

ದೊಡ್ಡ ಎರಡು ಡಬ್ಬಗಳಲ್ಲಿ ಶಾರದ ಏನೋ ತಂದಳು. "ಏನು ತಂದೆ ಯಮ್ಮ ಗೆಳತೀಗೆ ?" ಎಂದರು ಗೌರಮ್ಮ

"ನಾಗೂಗೆ ನಾನು ಮಾಡಿದ ಉಪ್ಪೇರಿ, ಚಟ್ನಿಪುಡಿ" ಎಂದಳು ಶಾರದ ನಗುತ್ತ. ಗೌರಮ್ಮನು ನಕ್ಕು ತೆಗೆದುಕೊಂಡರು.

ಮಾರನೆಯ ದಿನ ಶ್ರೀ ಲಕ್ಷ್ಮಿ ಹಯಗ್ರೀವ ಸ್ವಾಮಿಗೆ ಪಾಂಗಿತವಾಗಿ ಪೂಜೆ, ಹೋಳಿಗೆ ಪಾಯಿಸದ ನೈವೇದ್ಯವಾಯಿತು. ಕಾಸುಭೋಗರ ಕುಟುಂಬ ಆಚಾರ್ಯರ ಕುಟುಂಬ ಅಲ್ಲದೇ ಇನ್ನು ನಾಕಾರು ಜನ ಬ್ರಾಹ್ಮಣರ ಊಟಾ ಆಯಿತು.

"ಅಡಿಗೆ ಧಂಡಿಯಾಗಿ ಉಳಿದು ಬಿಟ್ಟಿದೆ. ರಾತ್ರೀಗೂ ಇಲ್ಲೇ ಬಂದು ಬಿಡಿ ಗೌರಮ್ಮ...." ಎಂದರು ಸೀತಮ್ಮ.

"ಅಯ್ಯೋ ! ನಿಮ್ಮನೇಗೆ ಬರಹೋಗೋದು ಕಮ್ಮೀನಾ ? ಶ್ರೀ ಲಕ್ಷ್ಮಿ ಹಯಗ್ರೀವ ದೇವರು ತನ್ನ ಪ್ರಸಾದ ಸ್ವೀಕರಿಸಲು ಯಾರನ್ನು ಕರಿಸಿಕೋತಾನೋ ?" ಎಂದರು ಗೌರಮ್ಮ

ಆ ವೇಳೆಗೆ ಹೊರಗಡೆ—"ಸ್ವಾಮಿಾ ಆಚಾರ್ಯರೇ ಇದ್ದೀರಾ ?" ಎಂಬ ಶಬ್ದ "ಓಹೋ ! ಬನ್ನಿ ಬನ್ನಿ ಡೆಪ್ಟಿ ಕಮಿಷನರ್ ಸಾಹೇಬರು" ಎಂದು ಆಚಾರ್ಯರು ಸ್ವಾಗತಿಸುವುದು ಕೇಳಿಸಿತು.

ಶಾರದ ಹೊರಗಿನಿಂದ ಬಂದು "ಅಮ್ಮ ಡೆಪ್ಟಿ ಕಮಿಷನರು ಸಾಹೇಬರು ಅವರ ಜೊತೆ ಇನ್ನೊಬ್ಬ ಸೂಟುಬೂಟು ಧಾರಿ ಬಂದಿದ್ದಾರೆ" ಎಂದಳು.

"ಏನು ಡೆಪ್ಟಿ ಕಮಿಷನರ್ ಸಾಹೇಬರು ಬಹಳ ಅಪರೂಪಕ್ಕೆ ದಯ ಮಾಡಿಸಿದ್ರಿ ?" ಎಂದು ಆಚಾರ್ಯರು ಕುಶಲ ವಿಚಾರಿಸಿದಾಗ ಅತ ನಕ್ಕು–

"ಸರ್ಕಾರ ನನ್ನ ಡೀ ಸಿ. ಪದವಿಯಿಂದ ನಿವೃತ್ತಿ ಮಾಡಿ ನಾಲ್ಕು ವರುಷ ಆದರೂ ಆಚಾರ್ಯರ ಪಾಲಿಗೆ ಮಾತ್ರ ನಾನು ಯಾವಾಗಲು ಡೆಪ್ಟಿ ಕಮೀಷನರ್...." ಎಂದು ನಕ್ಕರು.

"ನಿಮ್ಮನ್ನ ನೋಡೋಣಾಂತ ಒಂಭತ್ತು ಗಂಟೆಗೆ ನನ್ನ ಕಾರಲ್ಲಿ ಹೊರಟೆವು. ಇವರು ನಮ್ಮ ಅಳಿಯನ ದೊಡ್ಡಪ್ಪನ ಮಗ ಸ್ವಾಮಿನಾಥ್ ಅಂತ ದೆಹಲಿಯಲ್ಲಿರ್ತಾರೆ. ನನ್ನ ಕಾರು ನನ್ನ ಹಾಗೆ ಓಲ್ಡ್ ಆಗಿದೆ ದಾರಿಯಲ್ಲಿ ಕಾರು ಕೆಟ್ಟು ಗದ್ದಲ ಆಯ್ತು ಅಂತು.. ಇಂತು ರಿಪೇರಿ ಮಾಡಿಸಿ ಬಂದೆವು" ಎಂದರು

ಆಚಾರ್ಯರು ಎದ್ದು—"ಒಂಭತ್ತು ಗಂಟೆಗೆ ಮನೆಯಿಂದ ಹೊರ ಟೋರಾ ? ಮೊದಲು ಏಳಿ, ಕಾಲು ತೊಳೆದುಕೊಂಡು ಭೋಜನ ಮಾಡಿ ಆಮೇಲೆ ನಿಧಾನವಾಗಿ ಮಾತನಾಡೋಣಾ" ಎಂದರು ಪಂಚೆ ಶಲ್ಯ ಉಟ್ಟು ಕಾಲು ತೊಳೆದು ಬಂದ ಅತಿಥಿಗಳಿಬ್ಬರು ಒಳಗೆ ಬರುವ ಹೊತ್ತಿಗೆ ಸೀತಮ್ಮ ಬಾಳೆಲೆ ಹಾಕಿ ಕೋಸಂಬ್ರಿ, ಪಲ್ಯ, ಚಟ್ನಿ ಎಲ್ಲಾ ಬಡಿಸಿದ್ದರು "ಶ್ರೀ ಲಕ್ಷ್ಮಿ ಹಯಗ್ರೀವ ಸ್ವಾಮಿ ಪ್ರಸಾದ ತಗಬೇಕೂಂತ ಮನೆಯಿಂದ ಬೇಗ ಹೊರಟೆವು. ಆದರೆ ತಲುಪಿದ್ದು ಈ ಎರಡು ಗಂಟೆ ಮಧ್ಯಾಹ್ನದಲ್ಲಿ, ಅಮ್ಮಾ ವರಿಗೆ ತೊಂದರೆ ಆಯ್ತೇನೋ ?" ಎಂದರು

ಸೀತಮ್ಮ ಕೈ ಮುಗಿದು "ತೊಂದರೆ ಏನಿಲ್ಲ ಸಾಹೇಬರೇ. ನಿಮ್ಮ ಸ್ವಾಮಿ ಇವತ್ತು ಭರ್ಜರಿಪೂಜೆ ಮಾಡಿಸಿಕೊಂಡು ಹೋಳಿಗೆ ಪಾಯಿಸ ದಡಿಗೆಯ ನೈವೇದ್ಯ ಮಾಡಿಸಿಕೊಂಡಿದ್ದಾನೆ ಪ್ರಸಾದಕ್ಕೆ ನೀವು ಬಂದಿದ್ದು ಶುಭ" ಎಂದರು.

ಡಿ ಸಿ. ರಾಮರಾಯರು ಆಗಂತುಕನೊಡನೆ ದೇವರ ಮನೆ ಹೊಕ್ಕು ದೇವರಿಗೆ ನಮಸ್ಕರಿಸಿ ಆಚಾರ್ಯರು ನೀಡಿದ ತೀರ್ಥ ಸ್ವೀಕರಿಸಿ ತೀರ್ಥದ ತಟ್ಟೆಗೆ ನೂರು ರೂ ಹಾಕಿದರು, ಆಗಂತುಕನೂ ನೂರು ರೂ. ನೋಟು ಹಾಕಿದ.

ಇಬ್ಬರು ಹೊರಬಂದು ಬಾಳೆಲೆಯ ಮುಂದೆ ಕೂತರು. ಸೀತಮ್ಮ... ಉಪಚರಿಸಿ ಹೊಟ್ಟೆತುಂಬ ಬಡಿಸಿದರು "ಶಾಮಿಗೆ ಪಾಯಿಸ, ಕಡಲೆಬೇಳೆ

ಅಂಬೋಡೆ, ಕಾಯಿ ಹೂರಣದ ಒಬ್ಬಟ್ಟು ನಿಮ್ಮ ಅಮೇರಿಕಾದಲ್ಲಿ ಸಿಕ್ಕುತ್ತೇನಪ್ಪಾ ?" ಎಂದರು. ಆತ ನಸುನಕ್ಕರು.

ಆಚಾರ್ಯರು ಕುತೂಹಲದಿಂದ "ಇವರು ಅಮೇರಿಕಾ ದೇಶದಿಂದ ಬಂದವರಾ ? ದೆಹಲಿ ಎಂದಿರಲ್ಲಾ ?" ಎಂದರು.

ಡಿ ಸಿ. ರಾಮರಾಯರು ನಕ್ಕು—"ದೆಹಲಿಯಲ್ಲಿ ಇವರ ಕುಟುಂಬ ಇರೋದು. ಇವರು ಐದು ವರುಷದಿಂದ ಅಮೇರಿಕಾದಲ್ಲಿದ್ದಾರೆ ಮೊನ್ನೆ ದೆಹಲಿಗೆ ಬಂದಿದ್ದರು. ಇವರ ಪತ್ನಿ, ನನ್ನ ಮಗಳು ಇಬ್ಬರು ಮಾರಗಿತ್ತಿಯ ರಾಗ್ತಾರೆ. ನನ್ನ ಮಗಳು ದೆಹಲಿಯಲ್ಲೇ ಇರೋದು ಗೊತ್ತಲ್ಲ" ಎಂದರು.

"ಇವರು....ನಿಮ್ಮ ಹತ್ತಿರ ಮಾತಾಡಬೇಕಂತೆ. ಅದಕ್ಕೆ ಕರ್ಕೊಂಡ ಬಂದೆ. ಇವರು ಪ್ರಸಿದ್ಧ ವಿಜ್ಞಾನಿಗಳು" ಎಂದು ಆಚಾರ್ಯರಿಗೆ ಹೇಳುತ್ತಿದ್ದರು.

ಸೀತಮ್ಮನಿಗೆ ಕೊಂಚ ನಿರಾಶೆ ಆಯಿತು ಸೂಟು–ಬೂಟುಧಾರಿಯಾದ ಯಾವ ತರುಣನ್ನ ನೋಡಿದರೂ ಆಕೆಗೆ ಶಾರದಳ ನೆನಪಾಗಿ ಆತ ಅವಿವಾಹಿತನೇನೋ ಮಗಳನ್ನು ನೋಡಲು ಕರೆ ತಂದಿದ್ದಾರೇನೋ ಎನಿಸುತ್ತಿತ್ತು. ಆತ ವಿವಾಹಿತ ಎಂಬುದು ಮಾತಿನ ಮಧ್ಯೆ ತಿಳಿದಾಗ ನಿರಾಶೆಯೂ ಆಗಿತ್ತು. ಮಜ್ಜಿಗೆ ಅನ್ನ ಮುಗಿಸಿ ಅತಿಥಿಗಳಿಬ್ಬರು ಎದ್ದರು ಕೈ ತೊಳೆದು ಬಂದು ಹಜಾರದಲ್ಲಿ ಕುಳಿತರು. ಆಚಾರ್ಯರು ಎಲೆ ಅಡಿಕೆ ಹರಿವಾಣ ಮುಂದಿಟ್ಟರು. "ಕೊಂಚ ಮಲಗುತ್ತೀರಾ ?" ಎಂದರು. "ನೋಡಿ ಆಚಾರ್ಯರೇ....ಎಲೆ ಅಡಿಕೆ ಹಾಕೋದು ಮಲಗೋದು ಎರಡು ನಾನೊಬ್ಬನೆ. ಇವರು ನಿಮ್ಮ ಹತ್ತಿರ ಜ್ಞಾನಾರ್ಜನೆಗೆ ಕೆಲವು ವಿಷಯ ತಿಳ್ಕೋಬೇಕೂಂತ ಬಂದಿದ್ದಾರೆ.

ಸ್ವಾಮಿನಾಥನ್ ನಮ್ಮ ಭಾರತ ದೇಶದ ಸುಪ್ರಸಿದ್ಧ ವಿಜ್ಞಾನಿ ಇವರಿಗೆ ಭಾರತದ ಪ್ರಸಿದ್ಧ ಯುವ ವಿಜ್ಞಾನಿ ಪ್ರಶಸ್ತಿ ಸಿಕ್ಕಿ ಆರು ವರ್ಷಗಿಳಾಯಿತು. ಭೌತವಿಜ್ಞಾನದಲ್ಲಿ ಎಂ. ಎಸ್. ಸಿ, ಪಿ ಹೆಚ್ ಡಿ ಪಡೆದು, ದೆಹಲಿಯ ಪ್ರಸಿದ್ಧ ವಿಜ್ಞಾನ ಸಂಸ್ಥೆ ಸೇರಿದ ಇವರು ಶಬ್ದ ತರಂಗಗಳ ಬಗ್ಗೆ ವಿಶೇಷ ಸಂಶೋಧನ ಮಾಡಿದ್ದಾರೆ.

ಪ್ರಸಿದ್ಧ ವಿಜ್ಞಾನಿ ಸಿ.ವಿ. ರಾಮನ್ ಅವರು ಬೆಳಕಿನ ಕಿರಣಗಳ ಬಗ್ಗೆ ಸಂಶೋಧನೆ ನಡೆಸಿದ ಹಾಗೆ ಇವರು ಶಬ್ದ ತರಂಗಗಳ ಬಗ್ಗೆ ಸಂಶೋಧನೆ

ನಡೆಸಿ, ಅದರ ವೈವಿಧ್ಯಗಳ ಕುರಿತು ಈಗಾಗಲೇ ಅನೇಕ ಪ್ರಬಂಧ ಮಂದಿಸಿದ್ದಾರೆ.

ನಮ್ಮ ದೇಶಕ್ಕಿಂತ ಇವರಿಗೆ ಈ ವಿಷಯದಲ್ಲಿ ಹೊರದೇಶದಲ್ಲೇ ಜಾಸ್ತಿ ಮನ್ನಣೆ ಸಿಕ್ಕಿದೆ. ಅಮೇರಿಕಾದ ಪ್ರಸಿದ್ಧ ವಿಜ್ಞಾನ ಸಂಸ್ಥೆಯೊಂದು ಇವರಿಗೆ ಫೆಲೊಷಿಪ್ ನೀಡಿ ಕರೆಸಿಕೊಂಡಿದೆ

ಅಲ್ಲಿ ಇವರು ಅಮೇರಿಕಾದ ಪ್ರಸಿದ್ಧ ವಿಜ್ಞಾನಿ ಸ್ಯಾಮ್ಸನ್ಸ್ ರಿಚರ್ಡ್ ಅವರೊಂದಿಗೆ ಪ್ರಯೋಗದಲ್ಲಿ ತೊಡಗಿದ್ದಾರೆ ಈಗ ಅವರು ಕೈಗೊಂಡಿರುವ ಸಂಶೋಧನೆ ಆಕಾಶಕಾಯದಲ್ಲಿ ಶಬ್ದ ತರಂಗಗಳು ಎಂದು ಈ ಬಗ್ಗೆ ಇವರು ಸಿದ್ಧಾಂತಗಳನ್ನು ಮಂಡಿಸಿ, ಪ್ರಬಂಧಗಳನ್ನು ಬರೆಯಲಿದ್ದಾರೆ ಈ ಹಿಂದೆ ಇವರು ಬರೆದ ಪ್ರಬಂಧಗಳು ಅಂತರಾಷ್ಟ್ರೀಯ ಮಟ್ಟದ ಖ್ಯಾತ ವೈಜ್ಞಾನಿಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅನೇಕ ವೈಜ್ಞಾನಿಕ ಸಮ್ಮೇಳನ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಲು ಇವರು ಈಗಾಗಲೆ ಜಪಾನ್, ಇಂಗ್ಲೆಂಡ್, ಅಮೆರಿಕಾಗಳಿಗೆ ಹೋಗಿ ಬಂದಿದ್ದಾರೆ

ಈಗ ನ್ಯೂಯಾರ್ಕಿನ ಒಂದು ಖಾಸಗಿ ಸಂಸ್ಥೆಯಲ್ಲಿ ಮಿಸ್ಟರ್ ಸ್ಯಾಮ್ಸನ್ಸ್ ರಿಚರ್ಡ್ ಅವರೊಂದಿಗೆ ಸಂಶೋಧನೆಯಲ್ಲಿ ತೊಡಗಿದ್ದಾರೆ" ಎಂದು ಸುದೀರ್ಘವಾಗಿ ಪರಿಚಯ ಮಾಡಿದರು. ಈ ವಿಜ್ಞಾನಿಗೆ ನನ್ನಲ್ಲಿ ಏನು ಕೆಲಸಾ ಎಂದು ಆಚಾರ್ಯರು ಒಳಒಳಗೆ ಯೋಚಿಸಿದರು

ಸ್ವಾಮಿನಾಥ್ ಈಗ ಪ್ರಾರಂಭಿಸಿದರು. "ತಾವು ವೇದ, ಶಾಸ್ತ್ರ, ಪುರಾಣಗಳಲ್ಲಿ ತುಂಬ ಪಂಡಿತರು ಅಂತ ನಮ್ಮ ರಾಮರಾಯರು ಹೇಳಿದರು. ನಮ್ಮ ಪ್ರಾಚೀನ ವೇದಶಾಸ್ತ್ರ ಪುರಾಣಗಳಲ್ಲಿ ಈಗ ನಾವು ಕೈಗೊಂಡಿರೋ ವಿಷಯದ ಬಗ್ಗೆ ಮಾಹಿತಿ ಇದೆ ಅಂತ ಅಲ್ಲಿನ ಒಬ್ಬರು ಒಂದು ಲೇಖನ ತೋರಿಸಿದರು. ಆ ಲೇಖನ ಓದಿದ ಮೇಲೆ ಈ ವಿಷಯ ಸಮಗ್ರವಾಗಿ ತಿಳ್ಕೋಬೇಕೂಂತ ಕುತೂಹಲವಾಯಿತು. ತನ್ನ ಗೈಡ್ ಮಾಸ್ಟರ್ ರಿಚರ್ಡ್ ಸ್ಯಾಂಸನ್ ಅವರು....ಈ ಬಗ್ಗೆ ಮುಖ್ಯ ವಿಷಯ ಚೆನ್ನಾಗಿ ತಿಳಿದೋರ ಬಳಿ ಚರ್ಚಿಸಿ ಬನ್ನಿ. ನಮ್ಮ ಸಂಶೋಧನ ಲೇಖನಕ್ಕೆ ಅನುಕೂಲವಾಗತ್ತೆ ಎಂದರು. ಹೀಗಾಗಿ ನಾನು ದೆಹಲಿಗೆ ಬಂದಾಗ ಒಳ್ಳೆ ಪಂಡಿತರನ್ನ ಹುಡುಕುತ್ತಿದ್ದೆ. ನನ್ನ ನಾದಿನಿ ಅಂದರೆ ರಾಮರಾಯರ ಮಗಳು ಶ್ರೀಲಕ್ಷ್ಮಿ ನಿಮ್ಮ ಬಗ್ಗೆ ಹೇಳಿದಳು. ಹೀಗಾಗಿ ಜ್ಞಾನಾರ್ಜನೆ ವಿಷಯಕ್ಕೆ ನಿಮ್ಮ

ಬಳಿ ಬಂದೆ" ಎಂದು ಹೇಳಿದರು ಆಚಾರ್ಯರು ಕುತೂಹಲದಿಂದ—

"ನೀವು ಪತ್ರಿಕೆಯಲ್ಲಿ ಈ ಬಗ್ಗೆ ಒಂದು ಲೇಖನ ಓದಿದೆ ಅಂದ್ರಲ್ಲ ಆ ಪತ್ರಿಕೆ ಯಾವುದು ? ಲೇಖನ ಯಾವುದು ಹೇಳ್ತೀರಾ ?" ಎಂದರು

ಶ್ರೀ ತಿರುಮಲೆ ತಿರುಪತಿಯಿಂದ ಹೊರಡೋ ಪತ್ರಿಕೆ, ಅದರ ಹೆಸರು ಸಪ್ತಗಿರಿ. ಆ ಸಪ್ತಗಿರಿ ಪತ್ರಿಕೆಯಲ್ಲಿ ಬಂದ ಲೇಖನದ ಹೆಸರು ಶಬ್ದ ಪ್ರಮಾಣ ಅಂತ. ಈ ವಿದ್ವತ್ಪೂರ್ಣ ಲೇಖನ ಬರೆದವರ ಹೆಸರು—ಸನ್ಮಾನ್ಯ ಶ್ರೀ ಡಿ. ಕೃಷ್ಣ ಅಯ್ಯಂಗಾರ್ ಎಂದು ಈ ಲೇಖನ ಓದಿದ ಮೇಲೆ ಸಮಗ್ರವಾಗಿ ನಿಮ್ಮಂತಹ ವಿದ್ವಾಂಸರಲ್ಲಿ ಅದರ ಬಗ್ಗೆ ಚರ್ಚಿಸಬೇಕೆನಿಸಿತು. ನನ್ನ ಗುರುಗಳು ಕೇಳಿದರು ಈ ಬಗ್ಗೆ ಶಾಸ್ತ್ರ, ಪುರಾಣ, ಹಾಗು ಭಾರತ ಸಂಸ್ಕೃತಿಯೂ ಪರಿಚಯ ಮಾಡಿಸೋ ಪತ್ರಿಕೆಗಳ ಬಗ್ಗೆ ತಿಳಿಸಿಕೊಂಡು ಬನ್ನಿ, ಅಂತ ಲೌಕಿಕ ಪತ್ರಿಕೆಗಳು ನೂರಾರಿವೆ ಆದರೆ ಇಂಥಾ ಧಾರ್ಮಿಕ ಪತ್ರಿಕೆಗಳು ಯಾವು ಯಾವುದಿದೆ ತಿಳಿಸ್ತೀರಾ ?" ಎಂದರು

"ಕನ್ನಡದಲ್ಲಿ ಸಪ್ತಗಿರಿ ಬರತ್ತೆ ಅದು ಬೇರೆ ಕೆಲವು ಭಾಷೇಲೂ ಬರತ್ತೆ. ಇದಲ್ಲದೆ ಸಿದ್ಧಗಂಗಾ, ಮಂಜುವಾಣಿ ಈ ಪತ್ರಿಕೆಗಳು ಹೀಗೆ ಧರ್ಮ ಸಂಸ್ಕೃತಿ, ವೇದಪುರಾಣಗಳ ಬಗ್ಗೆ ತಿಳಿಸಿಕೊಡತ್ತೆ. ಪರಿಮಳ, ತತ್ವವಾದ, ಈ ಕೆಲವು ಪತ್ರಿಕೆಗಳಲ್ಲದೆ ಸರ್ವಜ್ಞ ಸಂದೇಶಾ ಸುಬೋಧ ಚಂದ್ರೋದಯ ಅನ್ನೋ ಪತ್ರಿಕೆಗಳು ಬರುತ್ತಿದ್ದವು" ಎಂದು ಕೆಲವು ಪತ್ರಿಕೆಗಳ ಬಗ್ಗೆ ತಿಳಿಸಿದರು. ಅನಂತರ ಮುಖ್ಯ ವಿಷಯ ಮಾತುಕತೆ ಶುರುವಾಯಿತು

"ಆಕಾಶಕಾರ್ಯಗಳಲ್ಲಿ ಶಬ್ದ ತರಂಗಗಳನ್ನು ಅನ್ವೇಷಿಸೋ ದೃಷ್ಟಿ ಹಿಂದಿನ ಕಾಲದಿಂದಲೂ ನಮ್ಮ ಋಷಿಮುನಿಗಳಲ್ಲಿ ಅಭ್ಯಾಸವಿತ್ತಾ ? ಅದು ಹೇಗೆ ? ಅದರ ಬಗ್ಗೆ ಸುದೀರ್ಘ ವಿವರಣೆ ಕೊಡ್ತೀರಾ ?" ಎಂದರು.

"ನೋಡಿ ಆಕಾಶಕಾಯದಿಂದ ಋಷಿಗಳು ಶಬ್ದವನ್ನು ಗ್ರಹಿಸಿದರು.... ಸಂಗ್ರಹಿಸಿದರು ಅನ್ನೋಕೆ ಹಿನ್ನೆಲೆ ಹೀಗಿದೆ ಶ್ರೀ ವೇದಗಳು ಅನಾದಿ, ಅನಂತ ವಾದರೂ ಸೃಷ್ಟಿ ಕಾಲದಲ್ಲಿ ಶ್ರೀ ಚತುರ್ಮುಖನ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಹೊರಟು ಬಂದವು. ಇವು ಪ್ರಳಯ ಕಾಲದಲ್ಲಿ ಪರ ಮಾತ್ಮನಲ್ಲಿ ಲೀನವಾಗಿದ್ದವು. ಸೃಷ್ಟಿಯ ಆರಂಭದಲ್ಲಿ ಧ್ಯಾನಮಗ್ನನಾಗಿದ್ದ ಬ್ರಹ್ಮನಿಗೆ ನಾಲ್ಕು ವೇದಗಳು ಸ್ಫುರಿಸುತ್ತವೆ. ಹೀಗೆ ಬ್ರಹ್ಮನ ಮುಖದಿಂದ ಉಸಿರಿನ ರೂಪದಲ್ಲಿ ಬಂದ ವೇದಗಳು ಶಬ್ದಮಯವಾಗಿ ಆಕಾಶವನ್ನೆಲ್ಲಾ

ವ್ಯಾಪಿಸಿ ತುಂಬಿಕೊಂಡಿರುತ್ತವೆ ಈ ಶಬ್ದ ತರಂಗಗಳು ಅಗೋಚರ, ಆದರೂ ಶಕ್ತಿಯುತವಾದದ್ದು, ಹಾಗು ಶಾಶ್ವತವಾದದ್ದು ಮುಂಚೆ ಋಷಿಗಳು ತಪಶ್ಶಕ್ತಿ, ಯೋಗ ಮಹಿಮೆಯಿಂದ ಆ ಶಬ್ದ ತರಂಗಗಳನ್ನು ಗ್ರಹಿಸಿ ಅದನ್ನು ಲೋಕದಲ್ಲಿ ಪ್ರಚಾರ ಮಾಡಿದರು" ಎಂದರು

"ಆಕಾಶದಲ್ಲಿ ವ್ಯಾಪಕವಾಗಿದ್ದ ಆ ಶಬ್ದಗಳನ್ನು ಋಷಿಗಳು ಹೇಗೆ ಕಂಡು ಹಿಡಿದರು ?" ಎಂದು ಸ್ವಾಮಿನಾಥನ್ ಕೇಳಿದರು

ಆಚಾರ್ಯರು ವಿವರಿಸಿ

"ಇದು ತುಂಬ ಅವ್ಯಕ್ತವಾದ ಅನುಭೂತಿಯಾದ ವಿಷಯ ಇದಕ್ಕೆ ಮಾತಿನ ಮೂಲಕ ಉತ್ತರ ನೀಡುವುದು ಕಷ್ಟ ಆಧ್ಯಾತ್ಮಿಕ ರಹಸ್ಯ ಬಲ್ಲವರಿಗೆ ಇದನ್ನು ವಿವರಿಸಬಹುದು ಶಬ್ದಾರಾಧಕರಾದ ಋಷಿಗಳು ಕಿವಿಗಳನ್ನು ಮುಚ್ಚಿಕೊಂಡು ಏಕಾಗ್ರತೆಯಿಂದ ಧ್ಯಾನದಲ್ಲಿ ಮಗ್ನರಾದಾಗ ಅವರ ಕಿವಿಗಳಲ್ಲಿ ಒಂದು ಅವ್ಯಕ್ತವಾದ ನಾದಮಯ ಸ್ವರವು ಗೋಚರಿಸುವುದು. ಇದೇ ಓಂಕಾರ ಪ್ರಣವನಾದ ಈ ಪ್ರಣವನಾದದಿಂದ ಗಾಯಿತ್ರಿಯೂ, ಗಾಯಿತ್ರಿಯಿಂದ ವೇದಗಳು ಹುಟ್ಟಿದವು" ಎಂದರು

"ವೇದಗಳಿಗೆ ಶೃತಿ ಎಂಬ ಹೆಸರು ಬರಲು ಕಾರಣ ಏನು ?" ಸ್ವಾಮಿನಾಥನ್ ಕೇಳಿದರು

"ಕೇಳಿಸಲ್ಪಟ್ಟ ಶಬ್ದಗಳಾದ್ದರಿಂದ ಶೃತವಾದವುಗಳು ಆದ್ದರಿಂದ ಶೃತಿ ಎನ್ನುತ್ತಾರೆ. ಅನಾದಿ ಕಾಲದಿಂದ ಆಕಾಶದಲ್ಲಿ ನಾದಮಯವಾಗಿದ್ದ ಶಬ್ದಗಳು ಕೆಲವರಿಗೆ ಕೇಳಿಸಿದವೇಕೆ ? ಕೆಲವರಿಗೇಕೆ ಕೇಳಿಸಲಿಲ್ಲ ? ಇದು ನಿಮ್ಮ ಪ್ರಶ್ನೆಯಾಗುವುದು.

ಇದಕ್ಕೆ ವೈಜ್ಞಾನಿಕ ರೀತಿಯಲ್ಲೇ ಉತ್ತರ ಕೊಡಬಲ್ಲೆ. ಈಗ ಸಾವಿರಾರು ಜನ ದೂರದರ್ಶನದ ಮೂಲಕ ದೆಹಲಿಯಲ್ಲಿ, ದುಬೈನಲ್ಲಿ ನಡೆದ ಕಾರ್ಯಕ್ರಮವನ್ನು ತಮ್ಮ ಮನೆಯ ಕೋಣೆಯಲ್ಲಿ ಕೂತು ಕೇಳುತ್ತಾರೆ, ಕಾಣುತ್ತಾರೆ. ಆಕಾಶವಾಣಿ, ದೂರದರ್ಶನ. ಇದೆಲ್ಲ ಆಕಾಶದಲ್ಲಿ ಹರಿವ ಶಬ್ದ ತರಂಗ ಬೆಳಕಿನ ತರಂಗಗಳನ್ನು ನಾವು ಹಾಯಿಸಿಕೊಂಡು ಎಲ್ಲೋ ನಡೆದದ್ದನ್ನು ನಮ್ಮ ಮನೆಯ ಕೋಣೆಯಲ್ಲಿ ಕಾಣುತ್ತೇವೆ–ಕೇಳುತ್ತೇವೆ. ಆದರೆ ವೈಜ್ಞಾನಿಕ ಉಪಕರಣಗಳಲ್ಲಿ ತುಸು ತೊಂದರೆ ಆದಾಗ ಈ ಕೇಳುವಿಕೆ ಕಾಣುವಿಕೆಗೆ ತೊಂದರೆ ಆಗುತ್ತದೆ. ಉದಾಹರಣೆಗೆ ವಿದ್ಯುತ್ ನಿಲುಗಡೆಯಾದಾಗ

ಆಂಟೆನಾ ಸರಿದಾಗ ಟಿ ವಿ, ರೇಡಿಯೊ ಈ ಬಗೆಯ ಉಪಕರಣಗಳೊಳಗೆ ದೋಷವಿದ್ದಾಗ ನಾವು ಟಿ ವಿ ಹಾಗು ರೇಡಿಯೋ ಹೊಂದಿದ್ದರೂ ಕಾಣಲಾರೆವು. ಈ ವೈಜ್ಞಾನಿಕ ಉಪಕರಣಗಳಲ್ಲಿ ಈ ಮಿತಿ ಇದ್ದಂತೇ ಆಧ್ಯಾತ್ಮಿಕದಲ್ಲಿಯೂ ಯೋಗ ಶಕ್ತಿಯೇ ಹಿರಿದಾದುದು. ಯೋಗದ ಮೂಲಕ ಕಾಲ ದೇಶಗಳನ್ನು ಮೀರಿ ಏಕಾಗ್ರತೆಯಿಂದ ಧ್ಯಾನಸಕ್ತರಾಗುವ ಋಷಿಗಳಿಗೆ ಮಾತ್ರ ಈ ಅಗೋಚರ ಶಬ್ದಗಳು ಹೃದಯದಲ್ಲಿ ಗೋಚರಿಸಿದವು ಉಳಿದ ಸಾಮಾನ್ಯ ಮನುಷ್ಯರು ಅಥವ ಆ ಋಷಿಗಳ ಶಿಷ್ಯರು ಅವರ ಪರಿವಾರದವರೂ ಅಲ್ಲೇ ಸಂಚಸುತ್ತಿದ್ದರೂ ಅವರಿಗೆ ಯಾವುದು ಅರಿವಾಗುತ್ತಿರಲಿಲ್ಲ ವೈಜ್ಞಾನಿಕ ಉಪಕರಣಗಳಿಗೆ ವಿದ್ಯುತ್ ಶಕ್ತಿಯಿದ್ದಂತೆ ಆಧ್ಯಾತ್ಮಿಕ ವಿದ್ಯೆಗೆ ಯೋಗಶಕ್ತಿ, ಧ್ಯಾನ ಬಹಳ ಮುಖ್ಯವಾದುದು" ಎಂದರು

ಸ್ವಾಮಿನಾಥನ್ ಕುತೂಹಲದಿಂದ—

"ಸೃಷ್ಟಿಯ ಆದಿಕಾಲದಲ್ಲಿ ಬ್ರಹ್ಮನಿಗು ಸಹ ಈ ವೇದಗಳು ಯೋಗಶಕ್ತಿ ಆರಾಧನೆಯಿಂದಲೇ ದೊರತವೆ ?" ಎಂದರು

ಆಚಾರ್ಯರು ಉತ್ತರಿಸಿ—

"ಹೌದು ! ಸೃಷ್ಟಿಯ ಆರಂಭದಲ್ಲಿ ಬ್ರಹ್ಮನು ಬಹು ಧ್ಯಾನಸಕ್ತನಾದಾಗ ಕೊನೆಗೆ ಅವನ ಹೃದಯಾಂತರಾಳದಲ್ಲಿ ಪರಮಾತ್ಮನ ಉಸಿರಿಂದ ವೇದಗಳು ಮೊಳಗಿದವು. ಅನಂತರ ಬ್ರಹ್ಮನು ಅವನ್ನು ತನ್ನ ಯೋಗಶಕ್ತಿಯಿಂದ ಗ್ರಹಿಸಿ ತನ್ನ ನಾಲ್ಕು ಮುಖಗಳಿಂದ ಶಬ್ದರೂಪವಲ್ಲಿ ಹೊರಡಿಸಿದನು ಬ್ರಹ್ಮನ ಪೂರ್ವ ಮುಖದಿಂದ ಋಗ್ವೇದವೂ, ದಕ್ಷಿಣ ಮುಖದಿಂದ ಯಜರ್ ವೇದವೂ, ಪಶ್ಚಿಮ ಮುಖದಿಂದ ಸಾಮವೇದವೂ.. .ಉತ್ತರ ಮುಖದಿಂದ ಅಥರ್ವವೇದವೂ ಹೊರಟಿತು. ಆದರೆ ಇವು ಶಬ್ದ ತರಂಗಗಳಾಗಿ ಆಕಾಶ ದಲ್ಲಿಯೆ ಉಳಿದವು" ಎಂದರು ಆಚಾರ್ಯರು.

ಸ್ವಾಮಿನಾಥನ್ ಮಾತಾಡಿ—

"ನಾವು ಈ ಶಬ್ದ ತರಂಗಗಳ ಆಧಾರದ ಮೂಲಕ ಬೇರೆ ಬೇರೆ ಗ್ರಹಗಳ ದೃಶ್ಯಚಿತ್ರಣ ಸಮಗ್ರವಾಗಿ ಕಾಣುವಂತೆ ಒಂದು ವೈಜ್ಞಾನಿಕ ಉಪಕರಣ ತಯಾರಿಸಬೇಕೂಂತ ಇದ್ದೇವೆ. ಈ ಉಪಕರಣ ರೇಡಿಯೊ, ದೂರದರ್ಶನ್ ಮುಂತಾದ ಉಪಕರಣಗಳಿಗಿಂತ ಭಿನ್ನವಾದದ್ದು. ಗ್ರಹಗಳಲ್ಲಿರುವ ಶಬ್ದತರಂಗ ಗ್ರಹಿಸಿ, ನಮಗೆ ಪ್ರಸಾರ ಮಾಡುವುದರ ಜೊತೆ ಗ್ರಹಗಳ ಸಮಗ್ರ ದೃಶ್ಯ

ಚಿತ್ರಣ ಯಾವ ರಾಕೆಟ್ ಉಡಾವಣೆ ಇಲ್ಲದೇ ಭೂಮಿ ಮೇಲೆ ನಾವಿಟ್ಟ ಈ ಉಪಕರಣದಲ್ಲಿ ಮೂಡಿ ಬರಬೇಕು. ಆದರೆ ನಮ್ಮ ಈಗಿನ ಸಂಶೋಧನೆಯ ಮುಖ್ಯ ವಿಷಯ ಆಕಾಶದಲ್ಲಿರುವ ಕೆಲವು ಬಲಿಷ್ಟ ಶಬ್ದ ತರಂಗಗಳ ಮೂಲಕ ಇದನ್ನು ಸಾಧಿಸಬೇಕೆಂದುಕೊಂಡಿದ್ದೇವೆ. ಮೊದಲು ಇದರ ಬಗ್ಗೆ ಒಂದು ಸಿದ್ಧಾಂತ ಗ್ರಂಥ ಬರೆಯಬೇಕೆಂದಿದ್ದೇವೆ.

ಈಗ ನಾನು ನಿಮ್ಮನ್ನು ಕೇಳುವ ಪ್ರಶ್ನೆ ಶಬ್ದ ತರಂಗಗಳು ಬರಿ ಅವ್ಯಕ್ತ ತರಂಗಗಳೊ ? ಅಥವ ಮೂರ್ತರೂಪವಾದ ಒಂದು ವಸ್ತುವೂ ಆಗಬಲ್ಲದೊ ? ವೇದಗಳಲ್ಲಿ ಈ ಬಗ್ಗೇ ಏನು ಹೇಳಿದೆ ?" ಎಂದರು

ಆಚಾರ್ಯರು ಉತ್ತರಿಸಿ

"ಶಬ್ದ ಪ್ರಮಾಣದಲ್ಲಿ ವೇದದಲ್ಲಿ ಎರಡು ಭಾಗಗಳಿವೆ ಕರ್ಮವನ್ನು ಪ್ರತಿಪಾದಿಸುವ ಪೂರ್ವಭಾಗ ಬ್ರಹ್ಮನನ್ನು ಪ್ರತಿಪಾದಿಸುವ ಉತ್ತರಭಾಗ, ಬ್ರಹ್ಮ ವಸ್ತುವನ್ನು ಆರಾಧನೆ ಮಾಡುವ ಕರ್ಮವನ್ನೇ ಪ್ರತಿಪಾದಿಸುವುದು" ಎಂದರು.

ಸ್ವಾಮಿನಾಥ್ ಮಾತಾಡಿ—

"ಹ್ಹಾ ! ನಾನು ತಿಳಿದುಕೊಳ್ಳಬೇಕಾಗಿರುವ ವಿಷಯ ಇದೆ. ಶಬ್ದಗಳಿಂದ ವಸ್ತು ಉತ್ಪನ್ನವಾಗುವ ಬಗೆ. ಈ ಬಗೆಯನ್ನು ಶಾಸ್ತ್ರ ಸಹಿತ ವಿವರಿಸಿ.

ಅಲ್ಲಿಂದ ಮುಂದೆ ಆಚಾರ್ಯರು ಕೆಲವು ಮುಖ್ಯ ತಾಳೆಗರಿಗ್ರಂಥಗಳನ್ನು ತಂದು ಪರಮಾತ್ಮನಿಗೆ ಶರೀರವಾದ ಪ್ರಕೃತಿ, ಕಾಲ, ಆಕಾಶ, ಪ್ರಾಣಾ ಇತ್ಯಾದಿ ಅನೇಕ ವಸ್ತುಗಳು ಶಬ್ದಗಳಿಂದ ವಸ್ತುಗಳಾಗಿ ರೂಪಾಂತರವಾಗಿ ಪ್ರಪಂಚದಲ್ಲಿ ಪಂಚಭೂತಗಳ ಉತ್ಪತ್ತಿ, ಪಂಚಭೂತಗಳಿಂದ ಸಕಲ ವಸ್ತುಗಳ ಉತ್ಪತ್ತಿ, ಸೃಷ್ಟಿಯ ಉಗಮ ಓಂಕಾರದಿಂದಲೇ ಸಕಲವು ಎಂಬುವುದನ್ನು ಮೂರು ದಿನಗಳ ಕಾಲ ಹಂತಹಂತವಾಗಿ ವಿವರಿಸಿದರು.

ಡಿ.ಸಿ. ಯವರು ಮಾರನೆಯ ದಿನ ಊರಿಗೆ ಹೊರಟುಬಿಟ್ಟರು. ಆದರೆ ವೇದಶಾಸ್ತ್ರಗಳಲ್ಲಿ ಪ್ರಖಂಡ ಪಾಂಡಿತ್ಯವಿರುವ ಅವರ ಬಳಿ ತಾನು ತಿಳಿದ್ಕೊಳ್ಳುವ ಅಗತ್ಯದ ವಿಷಯಗಳಂದ ಸ್ವಾಮಿನಾಥನ್ ಮೂರು ದಿನ ಅಲ್ಲೇ ನಿಂತರು. ಬಗೆಬಗೆ ಪ್ರಾಚೀನ ಗ್ರಂಥಗಳಿಂದ ಆಚಾರ್ಯರು ವಿವರಿಸಿ, ವಿವರಿಸಿ ಹೇಳುವುದು ಸ್ವಾಮಿನಾಥ್ ನೋಟ್ ಬುಕ್ ತೆಗೆದು ಗುರುತು ಹಾಕಿಕೊಳ್ಳುವುದು.

ವೇದಗಳಂತೆಯೆ ವೇದಗಳಾದ ಶಿಕ್ಷಾ, ವ್ಯಾಕರಣ, ಛಂದಸ್ಸು, ವ್ಯಾಕರಣ, ನಿರುಕ್ತ, ಕಲ್ಪ ಮತ್ತು ಜ್ಯೋತಿಷ್ಯ ಇವು ಸಹ ಶಬ್ದಪ್ರಮಾಣ ಗಳು ಹಾಗೆಯೆ ಇತಿಹಾಸ ಪುರಾಣಗಳು ಶಬ್ದ ಪ್ರಮಾಣಗಳು.

ಹಾಗೆಯೆ ಋಷಿಗಳಿಂದ ಪ್ರಣೀತವಾದ ಧರ್ಮಶಾಸ್ತ್ರಗಳು ಜೊತೆಗೆ ಶಿಲ್ಪ, ಆಯುರ್ವೇದ ಗಾಂಧರ್ವ, ಭರತನಾಟ್ಯ ಈ ಶಾಸ್ತ್ರಗಳಲ್ಲಿರುವ ಮುಖ್ಯಾಂಶ ಗಳು ಸಹ ಶಬ್ದಪ್ರಮಾಣಗಳು ಹೀಗೆ ಅರವತ್ನಾಲ್ಕು ಕಲೆಗಳಲ್ಲಿರುವ ಯಾವ ಶಾಸ್ತ್ರಭಾಗಗಳು ಒಂದು ಒಳ್ಳೆ ತತ್ವ ಪ್ರತಿಪಾದಿಸುತ್ತವೆಯೋ ಒಂದು ಒಳ್ಳೆ ಹಿತವಚನ ಹೇಳುತ್ತವೋ ಒಳ್ಳೆ ಪುರುಷಾರ್ಥ ನೀಡಬಲ್ಲವೋ ಇವೆಲ್ಲ ಶಬ್ದ ಪ್ರಮಾಣಗಳು.

ವೇದ ವಾಙ್ಮಯದ ಮುಖ್ಯ ಭಾಗಗಳಂತಿರುವ ವೇದಗಳ ಸಾರವೇ ಆಗಿರುವ ಉಪನಿಷತ್‌ಗಳು ಆರಣ್ಯಕಗಳೊಡನೆ ಮಿಳಿತವಾಗಿ ವೇದಗಳ ಭಾಗಗಳಾಗಿವೆ ಇವು ಸಹ ಶಬ್ದ ಪ್ರಮಾಣಗಳೆ ಎಂದು ಘೋಷಿಸುತ್ತ ಆಚಾರ್ಯರು ಶಬ್ದಕ್ಕಿರುವ ಅಪಾರ ಮಹಾಶಕ್ತಿ ಇವುಗಳ ಬಗ್ಗೆ ಶಾಸ್ತ್ರೋಕ್ತ ವಾಗಿ ವಿವರಿಸಿದರು.

ಮೂರು ದಿನಗಳು ಬಗೆ ಬಗೆ ಗ್ರಂಥಗಳನ್ನು ತೆಗೆದು ಸಂಸ್ಕೃತದಲ್ಲಿ ಓದಿ ಕನ್ನಡದಲ್ಲಿ ಆಚಾರ್ಯರು ವಿವರಿಸುವುದು.. ಆತ ಇಂಗ್ಲೀಷಿನಲ್ಲಿ ತನ್ನ ಬುಕ್ಕಿನಲ್ಲಿ ಏನೇನೋ ಬರೆದುಕೊಳ್ಳುವುದು ಸೀತಮ್ಮನಿಗೆ ವ್ಯರ್ಥ ಪ್ರಲಾಪ ವೆನಿಸಿತು. ಆದರೂ ಆಕೆ ಹೊತ್ತು ಹೊತ್ತಿಗೆ ಅತಿಥಿಯ ಊಟೋಪಚಾರ ನೋಡಿಕೊಂಡರು

ನಾಲ್ಕನೆಯ ದಿನ ಸ್ಮಿಮಿನಾಥ್ ಆಚಾರ್ಯರಿಗೆ ಕೈ ಮುಗಿದು— "ನಿಮ್ಮಿಂದ ತುಂಬ ಉಪಕಾರವಾಯಿತು. ವೇದಶಾಸ್ತ್ರಗಳ ಸಿದ್ಧಾಂತಗಳು, ವೈಜ್ಞಾನಿಕ ಸಿದ್ಧಾಂತಗಳು ಒಂದಕ್ಕೊಂದು ಪೂರಕವಾಗಿವೆ ಎಂದು ತಿಳಿದು ನನಗೆ ಬಹಳ ಉಪಕಾರವಾಗಿದೆ ಮುಂದೆ ಅಮೇರಿಕಾಕ್ಕೆ ಹೋದ ಮೇಲೆ ನಾನು ನಿಮಗೆ ಪತ್ರ ಬರೆಯುತ್ತೇನೆ" ಎಂದರು.

ಆವರು ಹೊರಡುವ ದಿನ ಏನಾದರೂ ಕೊಡಬಹುದು ಎಂದು ಸೀತಮ್ಮ ನಿರೀಕ್ಷಿಸಿದರು. ಆದರೆ ಆತ ಒಂದು ದೀರ್ಘದಂಡ ನಮಸ್ಕಾರ ಹಾಕಿ ಹೊರಟಿದ್ದರು.

* * * *

ಅಮೇರಿಕಾಗೆ ಹೋದ ಮೇಲೆ ಕಾಗದಾ ಬರೆಯುತ್ತೇನೆ ಎಂದಿದ್ದ ಆತನ ಪತ್ರ ಮತ್ತೆ ಬರಲಿಲ್ಲ ದಿನಗಳುರುಳಿ ತಿಂಗಳು ಕಳೆಯಿತು. ತಿಂಗಳುಗಳು ಒಂದೊಂದಾಗಿ ಉರುಳುತ್ತಿದ್ದವು.

ತನ್ನ ಏಳನೇ ತಿಂಗಳ ಸೀಮಂತ ಅತ್ತೆಮನೆಯವರು ವೈಭವವಾಗಿ ನಡೆಸುತ್ತಾರೆಂದು ಈ ಸಮಾರಂಭಕ್ಕೆ ನೀನು ಬರಲೇಬೇಕೆಂದು ನಾಗು ಗೆಳತಿ ಶಾರದಳಿಗೆ ಪತ್ರ ಬರೆದಿದ್ದಳು. ಗೌರಮ್ಮನು ಬಂದು ಕಳಿಸಿಕೊಡಲು ಒತ್ತಾಯಿಸಿದರು ಸೀತಮ್ಮನವರಿಗೆ ಒಂದು ಚೂರು ಇಷ್ಟವಿರಲಿಲ್ಲ. ಮಗಳ ಸಮವಯಸ್ಸಿನ ಗೆಳತಿ ಮದುವೆಯಾಗಿ, ಅವಳ ಚೊಚ್ಚಿಲ ಬಸಿರ ಶ್ರೀಮಂತಕ್ಕೆ ಅವಳ ತಂದೆ, ತಾಯಿ, ತಮ್ಮ ಹೋಗುವುದು ಸರಿ. ವಿವಾಹವಿಲ್ಲದೇ ಅದೇ ವಯಸ್ಸಿನ ತಮ್ಮ ಮಗಳು ಏಕೆ ಹೋಗಬೇಕು ?

ಆದರೆ ಶಾರದಳಿಗೆ ತಾನು ಅವಿವಾಹಿತೆ ಎಂಬ ಚಿಂತೆ, ನೋವು ಎರಡೂ ಇರಲಿಲ್ಲ.

"ಆಂಟಿ... ಪುಳ್ಳಿ ಗಾಯುಂಡೆ ನಾನೇ ಮಾಡ್ತೀನಿ. ಚಕ್ಕುಲಿ ಬೇಕಾದರೆ ನೀವು ಮಾಡಿ, ನನ್ನ ಕೈಯಿನ ಅಮಟೆಕಾಯಿ ಉಪ್ಪಿನಕಾಯಿ. ಚಟ್ನಿಪುಡಿ, ಅವಳಿಗೆ ಇಷ್ಟವಂತೆ ಅವೆರಡು ನಾನೇ ತರ್ತೀನಿ. ಇನ್ನು ಏನೇನು ತರಬೇಕು ಹೇಳಿಬಿಡಿ" ಎಂದಳು

"ನಿನ್ನ ಆಲುಗಡ್ಡೆ ಉಪ್ಪೇರಿ ತುಂಬ ನೆನಸ್ತಾಳಮ್ಮ ಊಟಾ ಸೇರದೇ ಇದ್ದಾಗೆಲ್ಲ ಕರೆದುಕೊಂಡು ತಿನ್ತಿದ್ದಳಂತೆ. ಆಲುಗಡ್ಡೆ ಉಪ್ಪೇರಿ ಇದ್ದರೆ ತಗೊಂಬಾ ನಾಳೆ ನೀನೇ ಬಂದು ಪ್ಯಾಕು ಮಾಡ್ಬೇಕು" ಎಂದರು

"ಅರಳು ಸಂಡಿಗೆ, ಉಪ್ಪೇರಿ ಎರಡು ನಾನು ತರ್ತೀನಿ ಮೊನ್ನೆ ರೈತರು ಸಂಕ್ರಾಂತೀಲಿ ಅಪ್ಪಾಜಿಗೆ ಬತ್ತ, ಹಾಗು ಕುಂಬಳಕಾಯಿ ತಂದು ದಾನ ಕೊಟ್ರಲ್ಲ. ಧಂಡಿಯಾಗಿ ಅರಳು ಸಂಡಿಗೆ ಮಾಡಿದ್ದೀನಿ" ಅವಳು ಪ್ಯಾಕ್ ಮಾಡುವಾಗ ಗೌರಮ್ಮ ಬಂದು ನೋಡಿದರು

"ಮನೆಗಿಟ್ಕೊಳ್ಳೇ. ಸುಹಾಸಿನಿ . ಈ ಪಾಟೀ.. .ತಂದರೆ ಹೇಗೆ ?" ಎಂದರು

"ಇದು ನನ್ನ ಅರಳು ಸಂಡಿಗೆ ಆಂಟಿ, ಈರುಳ್ಳಿ ಹಾಕಿ ಮಾಡಿದ್ದು, ಅಮ್ಮನ ಕಡೆ ಬೂದುಗುಂಬಳಕಾಯಿ ಹಾಕಿ ಮಾಡಿದ ಸಂಡಿಗೆ ಮಡೀಲಿ ಇದೆ. ನಾಗೂಗೆ ಈರುಳ್ಳಿ ಹಾಕಿದ ಅರಳು ಸಂಡಿಗೆ ಇಷ್ಟ ಅದಕ್ಕೆ ಜಾಸ್ತಿ ತರ್ತಿದ್ದೀನಿ" ಎಂದಳು

"ಅಯ್ಯೋ ! ನಮ್ಮಮ್ಮ ನಿನ್ನ ಗುಣ ಥಾಕಿದಂಥಾದ್ದು ನಿಂಗೆ ಬಂಗಾರ ದಂಥಾ ವರ ಸಿಗಲ್ಲಮ್ಮ" ಎಂದರು.

ಸೀತಮ್ಮ ಮಾತ್ರ ಮಗಳೆದುರು ಸಿಡಿಸಿಡಿ ಎನ್ನುತ್ತಿದ್ದರು, ಗೆಳತಿ ಬಂದಾಗ ಕೋರಿಕೆಗೆ ಮಾತಾಡುತ್ತಿದ್ದರು. ಶಾರದ ತಾಯಿಯನ್ನು ಲೆಕ್ಕಿಸದೇ ಹಾಯಾಗಿ ಗೌರಮ್ಮ ಅವರ ಕುಟುಂಬದ ಜೊತೆ ಹೋಗಿ ಶ್ರೀಮಂತ ಮುಗಿಸಿ, ಒಂದು ವಾರದ ನಂತರ ಬಂದಳು.

"ಮಳೆ ಬಿಟ್ಟರೂ ಮರದ ಹನಿ ಬಿಡಲಿಲ್ಲ. ಅಂದಹಾಗೆ ಗೌರಮ್ಮನವರೇ ವಾಪಸ್ ಬಂದ ಮೇಲೆ ನಿನಗೇನೇ ಅಲ್ಲಿ ಕೆಲಸ ?"

ಸೀತಮ್ಮ ಮಗಳನ್ನು ಗದರಿಕೊಂಡರು "ವಯಸ್ಸಿನ ಹುಡುಗಿ ಹಾಗೆ ಯಾರದೋ ಮನೆಗೆ ಹೋಗಿ ಒಂದು ವಾರ ಇದ್ದು ಬರ್‍ತಾರಾ ?" ಎಂದರು.

ಶಾರದ ಬೇಸರದಿಂದ—"ಯಾರ್‍ಯಾರ ಮನೆಗೆ ಏಕಮ್ಮ ? ನಾಗು ನನ್ನ ಪ್ರಾಣಪ್ರಿಯ ಗೆಳತಿ. ಬಲವಂತ ಮಾಡಿದಳು ಇದ್ದೆ. ಅವರ ನೆಂಟರುಗಳ ಮನೇಲಿ ಎರಡು, ಮೂರು ಬೆಳದಿಂಗಳ ಊಟದ ಕಾರ್ಯಕ್ರಮ ಇತ್ತು. ದಿನಕ್ಕೊಂದು ಕಡೆ ದೇವಸ್ಥಾನ ಶಾಪಿಂಗ್ ಅಂತ ಓಡಾಡ್ತಿದ್ದೀವಿ" ಎಂದು ಹೇಳಿದಳು

ಸೀತಮ್ಮ ತನಿಖೆಯಾಗಿ "ಹೋಗ್ಲಿ ವಾರದುದ್ದ ಮೈಸೂರಿನಲ್ಲಿದ್ದೆಯಲ್ಲ ಅಣ್ಣಂದಿರ ಮನೆಗಾದರೂ ಹೋಗಿ ಬಂದೆಯೋ ಇಲ್ಲವೋ ?" ಎಂದರು.

ಶಾರದ ಕೋಪದಿಂದ "ಯಾವ ಅಣ್ಣಂದಿರಮ್ಮ ? ಯಾವ ಅಣ್ಣಂದಿರ ಮನೆಗೂ ಹೋಗಲಿಲ್ಲ" ಎಂದಳು.

"ಯಾರೋ ಹೊರಗಿನ ಹುಡುಗೀನ್ನ ಸ್ವಂತ ಅಕ್ಕ ತಂಗಿಯ ಹಾಗೆ ಹಚ್ಕೊಂಡಿದ್ದಿ. ಸ್ವಂತ ಅಣ್ಣಂದಿರ ಮೇಲ ವಾಂಛ್ಯೇನೆ ಇಲ್ಲ. ಒಂದು ವಾರ ಇದ್ದೋಳು ಅಣ್ಣನ ಮನೆಗೆ ಹೋಗಬೇಡ್ವಾ ?" ಎಂದಳು.

"ಅಮ್ಮ ಪ್ರೀತಿವಿಶ್ವಾಸಾ ಇದ್ದ ಕಡೆ ಸಂಕೋಚ ಇಲ್ಲದೇ ಇರಬಹುದು. ನಾಗೂಗೆ ನನ್ನ ಕಂಡ್ರೆ ಪಂಚಪ್ರಾಣ. ನನಗಾಗಿ ಒದ್ದಾಡ್ತಾಳೆ. ಹೋಗೋವಾಗ ಒಂದು ಮೈಸೂರು ಸಿಲ್ಕ್ ಸೀರೆ ತೆಗೆದುಕೊಟ್ಟಳು ಒಂದು ಲೋಟಾ ಕಾಫಿ ಕೊಡ್ಲಿಕ್ಕೆ ಜಾಣತನ ಮಾಡೋಳು ದೊಡ್ಡತ್ತಿಗೆ. ಅರ್ಧ ಲೋಟಾ ಜ್ಯೂಸ್ ತಂದಿಟ್ಟು ಗಂಟೆಗಟ್ಟಲೆ ತನ್ನ ಮನೆ ಬಣ್ಣ ಬಂಗಾರ, ಬೆಳ್ಳಿ ಸಾಮಾನು ಪ್ರದರ್ಶನ ಮಾಡಿ ಕಿವಿ ಕೊರೆಯೋಳು ಎರಡನೇ ಅತ್ತಿಗೆ, ಇವರಿಗೆ

ಹೆದರಿ ದಾಸರಾಗಿರೋ ಆ ಅಣ್ಣಂದಿರು. ಅಲ್ಲಿ ಹೋಗ್ಲಿಕ್ಕೆ ನನ್ನ ಮನಸು ಬರಲಿಲ್ಲಮ್ಮ" ಎಂದಳು. ಸೀತಮ್ಮನಿಗೂ ಮಗಳ ಮಾತು ನಿಜವೆನಿಸಿತು.

"ಆರೆಂಟು ತಿಂಗಳ ಹಿಂದೆ ನಾಗು ಮದುವೆ ಸಮಯದಲ್ಲಿ ಆ ಡಾಕ್ಟರ್ ವರನ ವಿಷಯ ಅವರುಗಳಿಗೆ ಕಾಗದ ಬರೆದೋರು. ಆಮೇಲೆ ಆ ಮದುವೆ ತಪ್ಪಿಹೋದ ಮೇಲೆ ಒಂದು ಕಾಗದ ಬರೆದು, ಬೇರೆ ವರ ಸಹ ನೋಡಲಿಲ್ಲ" ಐಂದರು.

"ಆ ಮದುವೆ ತಪ್ಪಿ ಹೋಯಿತು ಅಂತ ಹೇಗೆ ಹೇಳ್ತೀಯಮ್ಮ ?" ಶಾರದ ಪ್ರಶ್ನಿಸಿದಾಗ ಸೀತಮ್ಮನಿಗೆ ಆಶ್ಚರ್ಯವಾಯಿತು

"ಏನೇ ಹೀಗೆ ಕೇಳ್ತಿ ? ಅವರು ಬಿಳಿಯಾನೆಯ ಸಮಾಚಾರದೋರು· ನಮಗೆ ಅವರನ್ನ ತೂಗಿಸ್ಲಿಕ್ಕಾಗತ್ತಾ ?" ಎಂದರು. ಅಲ್ಲದೇ ಪುನಃ ಅವರು ಬಂದಿಲ್ಲ. ನಾವು ಹೋಗಿಲ್ಲ ಆರೆಂಟು ತಿಂಗಳಾಯ್ತು ಇದು ನಿಂತು ಹೋದ ಸಮಾಚಾರವಲ್ಲವೆ ?" ಎಂದರು

ಶಾರದಾ ನಕ್ಕು "ಮೊನ್ನೆ ಸಹ ನಾಗು ಶ್ರೀಮಂತಕ್ಕೆ ಬಂದಾಗ ಪ್ರಭಾಕರನ್ ದೊಡ್ಡಕ್ಕ ಡಾ॥ ಸುಮನ ನನ್ನ ಕರೆದು ಹೇಳಿದ್ರಮ್ಮ "ನನ್ನ ತಮ್ಮನಿಗೆ ಏನು ಮೋಡಿ ಮಾಡಿದ್ದೀಯಮ್ಮ ? ಸದ್ಯಕ್ಕೆ ಅಪ್ಪಾ–ಅಮ್ಮ ಬರೋವರಿಗೆ ಯಾವ ಹೆಣ್ಣು ನೋಡೋ ಪ್ರಕರಣಾ ಬೇಡಾ. ಅಪ್ಪಾ ಅಮ್ಮ ಫಾರಿನ್ನಿಂದ ಬಂದ ಮೇಲೆ ಅವರಿಗೊಂದು ಕಾಗದ ಬರೆದು ಅವರ ಮನೆ ಅಭಿಪ್ರಾಯ ತಿಳಿದು, ಆಮೇಲೆ ಬೇರೆ ಕಡೆ ವಿಚಾರಿಸೋಣಾ" ಎಂದರಂತೆ

"ನಾನು ಬಂದಿರೋ ವಿಷಯ ತಿಳಿದು ಎರಡು ದಿನ ಡಾ॥ ಪ್ರಭಾಕರನ್ ನಾಗೂನ್ನ ಮಾತಾಡಿಸೋ ನೆಪ ಮಾಡಿಕೊಂಡು ಬಂದಿದ್ದರು" ಎಂದು ನಿಲ್ಲಿಸಿದಳು. ಸೀತಮ್ಮ ಆತುರದಿಂದ—

"ಆಮೇಲೆ ಏನಾದರೂ ಮಾತಾಡಿಸಿದರೇನೇ ?" ಎಂದಳು "ನಾಗು ಅಂತು ನಾನು ಮಾಡಿದ ತಿಂಡಿ ಹೊಗಳಿ, ಹೊಗಳಿ, ಅವರಿಗೆ ಕೊಟ್ಟಳು, ಆಮೇಲೆ ನನ್ನ ಮಾತಾಡಿದರು

"ಏನು ನಿಮ್ಮ ತಂದೆ ತಾಯಿ ಪುನಃ ಬರಲಿಲ್ಲ. ಕಾಗದಾ ಬರಲಿಲ್ಲ ಏಕೆ ?" ಎಂದರು.

ನಾನು ನಕ್ಕು "ದುಡ್ಡು ಕಾಸು....ಸರಿ ಮಾಡ್ಕೋತಾ ಇದ್ದಾರೆ· ಎಲ್ಲಾ ಸರಿ ಹೋದರೆ ಭೆಟ್ಟಿ ಮಾಡ್ತಾರೆ. ನಿಮ್ಮ ಅಂತಸ್ತಿಗೆ ತೂಗೋ ಹಾಗೆ

ವಿವಾಹ ಮಾಡಿ ಕೊಡಬೇಕಲ್ಲ" ಅಂದೆ ಡಾ|| ಪ್ರಭಾಕರ್ ಚಿಂತೆಯಿಂದ.

"ನಮ್ಮ ತಾಯಿಗಿಂತ ನಮ್ಮ ತಂದೆಗೆ ತುಂಬಾ ಅಂತಸ್ತಿನ ಹುಚ್ಚು. ನಿಮ್ಮ ತಂದೆ ಸುಂಬ ಬಡವರೂಂತ ನಾಗು ಅತ್ತಿಗೆ ಹೇಳಿದರು. ನಾನು ತಂದೆ–ತಾಯಿನ್ನ ಪ್ರತಿಭಟಿಸಿ ನಿನ್ನಿ ರಿಜಿಸ್ಟರ್ಡ್ ಮದುವೆ ಮಾಡ್ಕೋತೀನಿ ಒಪ್ತೀಯಾ?" ಎಂದರು.

ಇಲ್ಲಿ ನಮ್ಮ ತಂದೆ ಕನ್ಯಾದಾನಕ್ಕೆ ಒಬ್ಬ ಮಗಳನ್ನ ಪಡೆದಿದ್ದೇನೆ ಅಂತೀರ್ತಾರೆ. ವೈದಿಕ ಬ್ರಾಹ್ಮಣರ ಮಗಳಾಗಿ ನಾನು ಈ ರೀತಿ ಸಹಕರಿಸಿ ಓಡಿ ಬಂದರೆ, ನಮ್ಮ ನಮ್ಮಲ್ಲಿ ದೊಡ್ಡ ಗಲಾಟೆ ಆಗತ್ತೆ ಬಹುಷಃ ಇದೆಲ್ಲಾ ಸಹಿಸಿ ನಮ್ಮ ತಂದೆ ಬದುಕಿರ್ತಾರೋ....ಇಲ್ಲವೋ? ಪ್ರಾಣಕ್ಕಿಂತ ಅವರಿಗೆ ಮಾನವೇ ಹೆಚ್ಚು.

"ಇನ್ನು ಮೂರು ತಿಂಗಳು ಸಮಯ ಇದೆಯಲ್ಲ. ಹಣ ಸರಿ ಮಾಡಿಕೊಂಡು ಅವರೇ ಬಂದು ನಿಮ್ಮ ತಂದೆ ತಾಯಿನ್ನ ಖಂಡಿತ ಕಾಣ್ತಾರೆ" ಅಂತ ಹೇಳಿದೆ ಎಂದಳು.

ಸೀತಮ್ಮ ಅಲವತ್ತುಗೊಳ್ಳುತ್ತಾ—"ನಿಜವಾಗಿ ನಿಮ್ಮಪ್ಪಾ ಐವತ್ತು, ಅರವತ್ತು ಸಾವಿರ ರೂಪಾಯಿ ಸರಿ ಮಾಡಿಕೊಂಡು ಬೀಗರನ್ನ ಕಾಣೋಕೆ ಹೋಗ್ತಾರೇನೆ? ಕನಸಿನಲ್ಲಿ ಸಹ ಅಷ್ಟು ದುಡ್ಡು, ನಮಗೆ ಸಿಗತ್ತಾ? ಏನೊ ಆ ಹುಡುಗಾ ನಿಜವಾಗಿ ಇಷ್ಟಪಟ್ಟರೆ ಹಾಯಾಗಿ ಮದುವೆ ಆಗಿಬಿಡು ನಾಲುದಿನ ಅವರ ತಂದೆತಾಯಿ ಹಾರಾಡಬಹುದು ನಾಲುದಿನ ನಿಮ್ಮಪ್ಪಾ ನೊಂದ್ಕೋಬಹುದು. ಈಗಿನ ಕಾಲದಲ್ಲಿ ಎಷ್ಟು ಜನ ಆ ರೀತಿ ವಿವಾಹವಾಗಲ್ಲ" ಎಂದರು.

ಶಾರದಾ ನಕ್ಕಳು "ಬಬ್ಬರಿಗೆ ಪಥ್ಯ ಆದದ್ದೂ ನಮಗೂ ಪಥ್ಯ ಆಗಲ್ಲಮ್ಮ. ನಾನು ಎಂ.ಬಿ.ಬಿ.ಎಸ್. ಓದಿದೋಳಾಗಿದ್ರೆ ಒಂದು ವೇಳೆ ರಿಜಿಸ್ಟರ್ಡ್ ಮದುವೆಯ ಫಲಾಫಲ ಅನುಭವಿಸ್ಲಿಕ್ಕೆ ಸಿದ್ಧಳಿರ್ತಿದ್ದೆನೇನೊ? ಆದರೆ ಒಬ್ಬ ಬಡ ಹುಡುಗಿ ಹಾಗು ಬಬ್ಬ ಅತಿ ಶ್ರೀಮಂತ ಹುಡುಗನ ಇಂಥಾ ಮದುವೆ ಎಷ್ಟು ದಿನ ತಡೆದು ಬರುತ್ತೆ? ಅವರು ನನ್ನ ರೂಪ ಮಾತ್ರ ಮೆಚ್ಚಿದ್ದಾರೆ ನನ್ನ ಬಗ್ಗೆ ಅವರ ಆಸಕ್ತಿ ಕಡಿಮೆಯಾದ ಹಾಗೆ ನಮ್ಮ ಸಂಸಾರದಲ್ಲಿ ನನಗಿರೋ ಭದ್ರತೇನು ಕಡಿಮೆ ಆಗಬಹುದು? ಎಲ್ಲರನ್ನು ಧಿಕ್ಕರಿಸಿ ಬಂದಾಗ ನನಗೆ ಯಾರ ನೆರವು?

"ಅಪ್ಪಾನೆ ನಿನ್ನ ಜೊತೆ ಕೂತು ಹಸೆಮಣೇ ಮೇಲೆ ನನ್ನ ಅವರ ತಂದೆ ತಾಯಿಯರ ಎದುರಿಗೆ ಧಾರೆ ಎರೆದು ಕೊಡಲಿ, ಆಗ ಅವರ ಮನೆ ಸೊಸೆಯಾಗಿ ಪ್ರಭಾಕರ್ ಹೆಂಡತಿಯಾಗಿ ಅವರ ಮನೆಗೆ ಹೋಗ್ತೀನಿ" ಎಂದಳು.

"ನಿಜವಾಗಿ ನಮಗೆ ಅಷ್ಟು ಪುಣ್ಯವಿದೆಯೇನೆ ಶಾರದಾ ? ಅವರ ಅಂತಸ್ತಿಗೆ ತೂಗೊ ಹಾಗೆ ಮದುವೆ ಮಾಡಿಕೊಡ್ಲಿಕ್ಕೆ ನಮಗೇನು ಇದೆ ? ಯಾರ ಸಹಾಯ ಇದೆ ?" ಎಂದರು.

"ಅಮ್ಮ....ಮನುಷ್ಯರ ಸಹಾಯ ಆಶಿಸಬೇಡಾ. ಬಾರೇ ಭಾಗ್ಯದ ಸಿರಿಯೆ....ಅಂತ ಎರಡು ಹೊತ್ತು ಬೇಡಿ ಹಾಡಿ ಪೂಜಿಸು. ಅಪ್ಪ ಅಂತು ಪ್ರತಿದಿನ ಶ್ರೀ ಲಕ್ಷ್ಮೀ ಜಪಾ ಮಾಡ್ತಿದ್ದಾರೆ ನಿನಗೆ ಗೊತ್ತಿಲ್ಲವಾ ? ನಂಬಿದರೇ ದೇವರನ್ನ ನಂಬಬೇಕಮ್ಮ , ಬರಿ ಕೊರಗಿದರೆ ಏನು ಪ್ರಯೋಜನ ? ಕೊರಗಿದರೇ.. ಮರುಗಿದರೆ, ಕಿಡಿಕಾರಿದರೇ ಏನು ಪ್ರಯೋಜನ ? ನಮ್ಮೆಲ್ಲಾ ಭಾವನೆಗಳನ ಭಕ್ತಿಯಾಗಿ ಮಾರ್ಪಡಿಸಿ ದೇವರನ್ನ ನಂಬಿಬಿಡಬೇಕಮ್ಮ, ಮನುಷ್ಯ ಅಸಹಾಯನಾದಾಗ ಸಿಡುಕು, ಅಸಹನೆ, ಅಥವಾ ಯಾರೋ ದೊಡ್ಡ ಮನುಷ್ಯರಲ್ಲಿ ಅಂಗಲಾಚುವಿಕೆ ದೈನ್ಯತೆ ಈ ಎಲ್ಲಾ ಬದಿಗೊತ್ತಿ.... ಎಲ್ಲಾ ಭಾವನೆಗಳನ್ನು ಭಕ್ತಿಯಾಗಿ ಮಾರ್ಪಡಿಸಿ ಮೊರೆ ಇಡಬೇಕು ... ಬಲವಾಗಿ ದೇವರಲ್ಲಿ ಮೊರೆ ಇಡಬೇಕಮ್ಮ ಆಗಲೆ ಭಗವಂತ ಕಾಪಾಡುವುದು ಗಜರಾಜನಿಗೆ ಯಾರು ಸಹಾಯಕರಿದ್ದರು ? ಮಡುವಿನಲ್ಲಿ ಮಕರಿಗೆ ಸಿಕ್ಕಿದಾಗ ಕಾಪಾಡಿದವರು ಯಾರು ? ದುಶ್ಶಾಸನ ಸೀರೆ ಸೆಳೆಯುವಾಗ ದ್ರೌಪತಿಯನ್ನು ಕಾಪಾಡಿದವರು ಯಾರು ? ದುವ, ವಿಭಿಷಣ, ಅಜಮಿಳ, ಅಂಬರೀಷ ಇವರೆಲ್ಲರನ್ನು ಕಾಪಾಡಿದವರು ಯಾರು ? ಭಗವಂತನೇ ನಮ್ಮನ್ನು ಕಾಪಾಡಬೇಕು" ಎಂದಳು

ಸೀತಮ್ಮ ಕಣ್ಣೊರೆಸಿಕೊಂಡು . "ಪುರಾಣದ ಆಚಾರ್ಯರ ಮಗಳಾಗಿ ಸಾರ್ಥಕವಾಯಿತು ಆದರೆ ನನಗೆ ಈ ನಡುವೆ ಈ ಪುರಾಣ, ಪುಣ್ಯಕಥೆ, ಎಲ್ಲದರಲ್ಲಿಯೂ ನಂಬಿಕೆ ಹೊರಟು ಹೋಗಿದೆಯಲ್ಲೇ....ದೇವರು ನಿಜವಾಗಿ ಇದ್ದಾನೇನೆ ಶಾರದಾ ? ನಂಬಿದೋರನ್ನ ಕಾಪಾಡ್ತಾನೇನೆ ?" ಎಂದರು. ಶಾರದ ನಕ್ಕಳು

"ಈ ಸಂದೇಹಗಳೆಲ್ಲಾ ನಿನಗೆ ಅಂಟಿದ್ರೆ ಇನ್ನು ಲೌಕಿಕಕ್ಕೆ ಅಂಟಿದ್ದಿ ಅಂತ

ಅರ್ಥ. ಇವೆಲ್ಲಾ ಸಂಶಯ ತೊರೆದು, ಪರಿಪೂರ್ಣವಾಗಿ ನಂಬವ್ಮ್ಮ, ಹೊಲ, ಮನೆ, ಐಶ್ವರ್ಯ ಇದ್ದೋರು ಇಂಥಾ ಪ್ರಶ್ನೆಗಳಲ್ಲಿ ತೊಳಲಾಡಿ ಭ್ರಾಂತಿಗೊಳ್ಳಲಿ. ಆದರೆ ಏನು ಇಲ್ಲದ ನಮ್ಮಂಥವರು ಪರಿಪೂರ್ಣ ಭಕ್ತಿಯಿಂದ ನಂಬಿ ಆರಾಧಿಸಬೇಕು. ದೇವರು ಮಿಂಚಿನ ಹಾಗಮ್ಮ, ಅರೆಬರೆ ಭಕ್ತೀಲಿ ಅವನನ್ನ ಸೆರೆ ಹಿಡಿಯಲಿಕ್ಕಾಗಲ್ಲ, ಪೂರ್ಣ ಭಕ್ತೀಲಿ ಅವನನ್ನ ನಂಬಬೇಕು" ಎಂದಳು.

"ಆಗ್ಲಿ ತಾಯಿ....ಚಿಕ್ಕ ಮಗುವಾದ ನಿನಗೆ ಇಷ್ಟು ಭಕ್ತಿ ತಾಳ್ಮೆ ಇರಬೇಕಾದರೇ....ಮುಪ್ಪಿಗೆ ಬಂದ ನಾನು ಇನ್ನಾದರೂ ಬುದ್ಧಿ ಕಲಿಯಬೇಡವೆ ? ಹೂಂ....ನಂಬ್ತೀನಿ ತಾಯಿ....ನಂಬ್ತೀನಿ" ಎಂದು ಒಳಗೆ ಹೋದರು. ಸಂಜೆ ಆಗುತ್ತಲು...."ಬಾರೇ ಭಾಗ್ಯ ಸಿರಿಯೆ...." ಎಂದು ಹಾಡುತ್ತಾ ಶ್ರೀ ಲಕ್ಷ್ಮಿ ದೇವಿಗೆ ದೀಪಾ ಹಚ್ಚತೊಡಗಿದರು.

ಒಂಬತ್ತು ತುಂಬಿದ ಮೇಲು ನಾಗುವನ್ನು ಹೆರಿಗೆಗೆ ಕಳಿಸಲಿಲ್ಲ. "ನೀವೇ ಬಂದುಬಿಡಿ. ಹೆರಿಗೆ ಆದಮೇಲೆ ಆಸ್ಪತ್ರೆಯಿಂದಲೇ ನಿಮ್ಮನೆಗೆ ಕರೆದುಕೊಂಡು ಹೋಗಿ ಇಲ್ಲಿ ಮೊದಲಿಂದ ತೋರಿಸುತ್ತಿರೋ ನರ್ಸಿಂಗ್ ಹೋಮಲ್ಲೆ ಹೆರಿಗೆಯಾಗಲಿ ಎಂದು ಅವರ ಅತ್ತೆ ತಿಳಿಸಿದರು.

ಇಲ್ಲಿ ಹಳ್ಳಿ, ಅಂಥಾ ಒಳ್ಳೆ ವೈದ್ಯಕೀಯ ಸೌಲಭ್ಯ ಇಲ್ಲ. ಹೀಗಾಗಿ ಗೌರಮ್ಮನೂ ಬೀಗಿತ್ತಿ ಮಾತಿಗೆ ಒಪ್ಪಿದರು ಡಾಕ್ಟರ್ ಇಪ್ಪತ್ತೆರಡನೇ ತಾರೀಕನ್ನು ಹೆರಿಗೆ ಡೇಟ್....ಎಂದು ಸೂಚಿಸಿದ್ದರು. ಆ ತಿಂಗಳ ಹದಿನೈದರಂದು ಶಾನುಭೋಗರು ಹೋಗಿ, ಗೌರಮ್ಮನ ಮೈಸೂರಲ್ಲಿ ಬಿಟ್ಟುಬಂದರು.

ಇಪ್ಪತ್ತನೇ ತಾರೀಕೇ ಸುಲಲಿತವಾಗಿ ಹೆರಿಗೆ ಆಯಿತು ಗಂಡು ಮಗುವಿನ ತಾಯಿ ನಾಗು, ಒಂದು ವಾರ ಆಸ್ಪತ್ರೆಯಲ್ಲಿದ್ದು ಟ್ಯಾಕ್ಸಿಯಲ್ಲಿ ತಂದೆ, ತಾಯಿ ಜೊತೆ ಹಳ್ಳಿಗೆ ಬಂದಳು. ಶಾರದಳ ಸಂಭ್ರಮವೇ ಸಂಭ್ರಮ ಗೌರಮ್ಮನಿಗೆ ಬಲಗೈ ಆಗಿ ಅವರ ಮನೆಯಲ್ಲೇ ನಿಂತಳು. ರಾತ್ರಿ ಒಂಬತ್ತರ ಮೇಲೆ ಮನೆಗೆ ಬರುತ್ತಿದ್ದಳು. ಮಗುವಿಗೆ ಎರಡು ತಿಂಗಳು ತುಂಬಿದ ಮೇಲೆ ನಾಮಕರಣಾ ಇಟ್ಟುಕೊಳ್ಳಬೇಕೆಂದು ತಮ್ಮ ಮಗಳ ಬಾಣಂತಿತನ ಮುಗಿಸಿ

ಬರಲು ಅನುಕೂಲವಾಗುವುದೆಂದು ಬೇಗಿತ್ತಿ ಕುಸುಮ ತಿಳಿಸಿದ್ದರು.

ನಾಗುವಿನ ನಾದಿನಿ ರಜನಿ ಆಗ ಒಂದು ತಿಂಗಳ ಬಾಣಂತಿ, ಮಗುವಿಗೆ ಎರಡು ತಿಂಗಳು ತುಂಬಿದ ಮೇಲೆ ವೈಭವವಾಗಿ ನಾಮಕರಣ ಕಾರ್ಯಕ್ರಮ ಇಟ್ಟುಕೊಳ್ಳಬೇಕೆಂದು ಗೌರಮ್ಮ ಸಿದ್ಧತೆ ನಡೆಸಿದ್ದರು.

ಮುಖ್ಯ ಓಡಾಟಾ ಶಾರದಳದೆ ಸೀತಮ್ಮ ಒಮ್ಮೊಮ್ಮೆ ವಿಚಲಿತ ರಾಗುತಿ ದ್ದರು

"ಬರಿ ನಾಗುವಿನ ವೈಭವದಲ್ಲಿ ಸಂಭ್ರಮ ಪಡೋದೇ ನಿನ್ನ ಬದುಕು ಆಯ್ತು. ನಿನ್ನದಾಗಿ. . ನಿನಗೆ. .ಏನು ಸಿಗಲೇ ಇಲ್ಲ" ಎಂದರು. ಶಾರದ ನಗುತ್ತಾ—

"ಅಮ್ಮ ನನಗೆ ಇನ್ನು ಇಪ್ಪತ್ತೈದು ವರುಷಾ . ಈಗಿನ ಕಾಲದಲ್ಲಿ ನಲವತ್ತು ವರುಷದ ಹುಡುಗಿಯರಿಗೂ ವಿವಾಹ ಆಗೊ ಹೋಗಿದೆ. ಮೊನ್ನೆ ಮೈಸೂರಲ್ಲಿ ನಾಗುವಿನ ನಾದಿನಿಯ ಗೆಳತಿ ಒಬ್ಬಳಿಗೆ ನಲವತ್ತನೆಯ ವರ್ಷಕ್ಕೆ ಮದುವೆ ಆಯಿತು" ಎಂದಳು.

"ಏನೋ ದೇವರು ನಿನಗೆ ಅದೊಂದು ಮಾಡಿಸದಿರಲಿ" ಎಂದು ಅವರು ಗೊಣಗುಟ್ಟುವುದರೊಳಗೇ ಆಚಾರ್ಯರೇ ಎಂದು ರಿಟೈರ್ಡ್ ಡಿ ಸಿ. ರಾಮ ರಾಯರ ಕೂಗು ಕೇಳಿಸಿತು

ಶಾರದಾ ಮನೆಗೆ ಬಂದಾಗಲೇ ಒಂಬತ್ತು ಗಂಟೆ ಈಗ ಒಂಬತ್ತೂವರೆ ರಾತ್ರಿ ಇಂಥಾ ರಾತ್ರಿಯಲ್ಲಿ ಏಕೆ ಬಂದರು ? ಎಂದು ಸೀತಮ್ಮನಿಗೆ ಅಚ್ಚರಿಯಾಯಿತು

ಆಚಾರ್ಯರು ಸ್ವಾಗತಿಸಿದ್ದು ಊಟದ ಬಗ್ಗೆ ವಿಚಾರಿಸುತ್ತಿದ್ದದ್ದು ಆಕೆಗೆ ಕೇಳಿಸಿತು,

"ಅಮ್ಮಾವರನ್ನು ಕರೀರಿ ಸ್ವಾಮಿ ತುಂಬಾ ಸಂತೋಷದ ಸಮಾ ಚಾರಾ ಇದೆ" ಎಂದು ಹೇಳಿದರು. "ಸೀತಾ" ಎಂದು ಕೂಗಿದರು. ಆಚಾರ್ಯರು ಸೀತಮ್ಮ ಶಾರದಾಳೊಡನೇ ಹೊರಗೆ ಬಂದರು. ರಾಮ ರಾಯರು "ಕೂತ್ಕೊಳ್ಳಿ ತಾಯಿ ಶ್ರೀ ಲಕ್ಷ್ಮೀದೇವಿ ನಿಮ್ಮನೆಗೆ ಒಲಿದು ಬಂದ ಸಮಾಚಾರ ಎಲ್ಲರಿಗೆ ಒಟ್ಟಿಗೆ ಈ ಸಮಾಚಾರ ಹೇಳ್ತೀನಿ" ಎಂದು ಒಂದು ವಿದೇಶಿ ಮುದ್ರೆಯ ಅಂಚೆಯ ಕವರು ತೆಗೆದರು.

"ಇದು ನೋಡಿ ಆಚಾರ್ಯರ ಹೆಸರಿಗೆ ಸ್ವಾಮಿನಾಥನ್ ಕಳಿಸಿರೋ

ಹತ್ತು ಸಾವಿರ ಡಾಲರಿನ ಚೆಕ್. ಈಗ ಕಾಗದ ಓದ್ತೀನಿ ಕೇಳಿ" ಎಂದು ನಿಧಾನವಾಗಿ ಕಾಗದ ಓದಿದರು

ಕ್ಷೇಮ ಶ್ರೀ, ಓದಿ—ಪೂಜ್ಯರಾದ ಶ್ರೀ ಹಯಗ್ರೀವಾಚಾರ್ಯರೆ ನಾನು ನಿಮ್ಮಲ್ಲಿ ಬಂದಾಗ ಆಕಾಶದಲ್ಲಿ ಸಂಚರಿಸುವ ಶಬ್ದತರಂಗಗಳ ಬಗ್ಗೆ, ಪ್ರಾಚೀನ ಶಾಸ್ತ್ರಗಳಲ್ಲಿರುವ ಮಾಹಿತಿ ಬಗ್ಗೆ ವಿವರ ಕೇಳಿದ್ದೆ. ತಾವು ಮೂರು ದಿನಗಳ ಕಾಲ ನೂರಾರು ಗ್ರಂಥಗಳು ತಾಳೆಗರಿ ತೆಗೆದು ಓದಿ ಅರ್ಥ ವಿವರಿಸಿ ವೇದ, ಶಾಸ್ತ್ರ, ಪುರಾಣಗಳಲ್ಲಿ ಶಬ್ಧ ಪ್ರಸಾರ, ಶಬ್ದ ಪ್ರಮಾಣದ ಬಗ್ಗೆ ಹೇಳಿರುವುದನ್ನು ವಿವರಿಸಿದಿರಿ. ಒಂದು ಚೂರು ಬೇಸರಿಸದೇ ತಾಳ್ಮೆಯಿಂದ ನನ್ನ ನೂರಾರು ಪ್ರಶ್ನೆಗಳಿಗೆ ಉತ್ತರ ಕೊಟ್ಟಿರಿ. ಈ ಆಧಾರದ ಮೇಲೆ ನಮ್ಮ ವೈಜ್ಞಾನಿಕ ಸಿದ್ಧಾಂತದ ಗ್ರಂಥ ಬರೆದು ಆ ಶಬ್ದ ತರಂಗಗಳನ್ನು ಸೆರೆ ಹಿಡಿದು ಅವುಗಳನ್ನು ನಮ್ಮ ನಿಯಂತ್ರಣದಲ್ಲಿಟ್ಟು ಮಾಡಬಹುದಾದ ಸಾಧ್ಯತೆಗಳ ಬಗ್ಗೆ ವಿಚಾರಿಸಿದ್ದೀವಿ. ಶಬ್ದತರಂಗಗಳು ಬಹು ಶಕ್ತಿಯುತ ವಾದವು. ಇದನ್ನು ನಮ್ಮ ಯಂತ್ರದ ಮೂಲಕ ಪ್ರಸಾರ ಮಾಡಿ, ಆ ತರಂಗಗಳು ಮೋಡದ ಮೇಲೆ ಹಾಯುವಂತೇ ಮಾಡಿ....ಇಷ್ಟಿಷ್ಟು ಪ್ರಮಾಣದ ತರಂಗಗಳು ಆಕಾಶದಲ್ಲಿ ಹಾಯ್ದಾಗ ಅದರ ಒತ್ತಡಕ್ಕೆ ಇಷ್ಟಿಷ್ಟು ಪ್ರಮಾಣದ ಮೋಡ ಚದುರಿಸಿ ಮೈಲುಗಟ್ಟಲೇ ಓಡಿಸಬಹುದು. ಹೀಗೆ ಹಾಯ್ದ ಮೋಡಗಳನ್ನು ನಮಗೆ ಬೇಕಾದ ಪ್ರದೇಶದಲ್ಲಿ ಮಳೆ ಸುರಿಸಬಹುದು. ನಾವು ಈ ಯಂತ್ರವನ್ನು ಯಶಸ್ವಿಯಾಗಿ ಕಂಡು ಹಿಡಿದರೇ ಪೃಥ್ವಿಯಲ್ಲಿ ಅತಿ ವೃಷ್ಟಿ, ಅನಾವೃಷ್ಟಿ ತಡೆಗಟ್ಟಬಹುದು. ಶಬ್ದ ತರಂಗಗಳ ಬಲವನ್ನು ಹಾಯಿಸುವುದರ ಮೂಲಕ ಮೋಡಗಳನ್ನು ನಮ್ಮ ನಿಯಂತ್ರಣದಲ್ಲಿಟ್ಟು ಚಂಡ ಮಾರುತಗಳನ್ನು ದಿಕ್ಕು ಬದಲಿಸುವುದು ಈ ಕೆಲವು ಉಪಕರಣ ಗಳನ್ನು ತಯಾರಿಸುವುದರಲ್ಲಿ ನಮ್ಮ ಸಂಶೋಧನೆಯನ್ನು ಮುಂದುವರಿಸು ತ್ತಿದ್ದೇವೆ

ಆಧ್ಯಾತ್ಮಿಕವಾಗಿ ನೀವು ನೀಡಿದ ವಿವರಗಳು ನಾವು ವೈಜ್ಞಾನಿಕ ಹಾದಿ ಯಲ್ಲಿ ಮುನ್ನಡೆಯಲು ಒಂದು ಸ್ಫೂರ್ತಿ, ಚೇತನ ನೀಡಿದೆ. ಆ ಸಲದ ನನ್ನ ಪ್ರಬಂಧ ಅಮೆರಿಕನ್ ವೈಜ್ಞಾನಿಕ ಸಂಸ್ಥೆಯಿಂದ ಸ್ವೀಕೃತವಾಗಿ ಐವತ್ತು ಸಾವಿರ ಡಾಲರ್ ಬಹುಮಾನ ಬಂದಿದೆ. ನಾವು ಮುಂದೆ ಉಪಕರಣಗಳನ್ನು ಕಂಡು ಹಿಡಿಯುತ್ತೇವೋ ಬಿಡುತ್ತೇವೊ ? ನಮ್ಮ ಪ್ರಯೋಗದ ಹಾದಿಯಲ್ಲಿ

ಮುನ್ನಡೆದ ನಮ್ಮ ಮುಂದಿನ ಪೀಳಿಗೆಯವರಾದರೂ ಈ ಉಪಕರಣ ಕಂಡು ಹಿಡಿಯಬಹುದು. ಎಂಟು ತಿಂಗಳ ಹಿಂದೆ ಬಂದು ತಮ್ಮಲ್ಲಿ ಚರ್ಚಿಸಿದ ನಂತರವೇ ನನ್ನ ವೈಜ್ಞಾನಿಕ ಸಂಶೋಧನೆಗೊಂದು ಸ್ಪಷ್ಟ ರೂಪು ಬಂದಿತು. ಆಕಾಶಕಾಯದಲ್ಲಿ ಸಂಚರಿಸುವ ಆ ಶಬ್ದ ತರಂಗಗಳನ್ನು ಅಲ್ಲಿಯೆ ಶಕ್ತಿಯಾಗಿ ಮಾರ್ಪಡಿಸಿ ಹೇಗೆ ಹೇಗೆ ಉಪಯೋಗಿಸಿಕೊಳ್ಳಬಹುದೆಂಬುದನ್ನು ಪ್ರತಿ ಪಾದಿಸಿ ನಾನು ಬರೆದ ಲೇಖನಕ್ಕೆ ಬಹುಮಾನ ಬಂದಿದೆ. ನಿಮಗೆ ಗೌರವ ಸಂಭಾವನೆ ಎಂದು ಹತ್ತು ಸಾವಿರ ಡಾಲರ್ ಕಳಿಸಿದ್ದೇನೆ ಗ್ರಂಥಋಣ ಎಂಬ ವಿಭಾಗದಲ್ಲಿ ನಿಮ್ಮೊಡನೆ ಚರ್ಚಿಸಿದ್ದನ್ನು ವಿವರಿಸಿ ನಿಮ್ಮ ಹೆಸರು ಹಾಕಿದ್ದೇನೆ ಈ ಸಂಭಾವನೆ ಸ್ವೀಕರಿಸಿ, ನನ್ನನ್ನು ಹರಿಸಿ ಚೆಕ್ಕನ್ನು ಕಾಗದ ವನ್ನು ಶ್ರೀ ರಾಮರಾಯರ ಹೆಸರಿಗೆ ಕಳಿಸಿದ್ದೇನೆ. ಇದನ್ನು ಭಾರತೀಯ ಹಣದ ರೂಪವಾಗಿ ಪಡೆಯುವವರಗೆ ಎಲ್ಲಾ ವಿಷಯಕ್ಕೂ ಅವರೇ ನಿಮಗೆ ಸಹಾಯವನ್ನು ಮಾಡುತ್ತಾರೆಂದು ನಂಬಿದ್ದೇನೆ ಅವರಿಗೂ ಈ ಬಗ್ಗೆ ಮುಖ್ಯಾಂಶ ತಿಳಿಸಿ ಪತ್ರ ಬರೆದಿದ್ದೇನೆ ಮನೆಯಲ್ಲಿ ಸೌ|| ಅಮ್ಮನವರಿಗೆ ನನ್ನ ನಮಸ್ಕಾರ ತಿಳಿಸಿ, ಅಲ್ಲಿದ್ದಾಗ ಹೊತ್ತು ಹೊತ್ತಿಗೆ ನನ್ನ ಊಟಾ ಉಪ ಚಾರ ನೋಡಿಕೊಂಡರು. ನಿಮ್ಮ ಪುತ್ರಿಯವರಿಗೆ ನನ್ನ ಶುಭ ಹಾರೈಕೆಗಳು.

ಇಂತಿ ನಮಸ್ಕಾರಗಳು

ಸ್ವಾಮಿನಾಥನ್.

ಎಂದು ಬರೆದಿತ್ತು ಕಾಗದ ಪೂರ್ತಿ ಓದಿದರು ರಾಮರಾಯರು. ಆಚಾರ್ಯರು ಕೊಂಚ ಸ್ತಬ್ಧರಾಗಿ ಕುಳಿತಿದ್ದರು ಸೀತಮ್ಮನೇ ಕೊಂಚ ದಿಗ್ಭ್ರಾಂತರಾಗಿ ಹತ್ತು ಸಾವಿರ ಡಾಲರ್ ಅಂದರೆ ಎಷ್ಟು ಆಗತ್ತೇ ...?" ಎಂದರು.

ರಾಮರಾಯರು ಲೆಕ್ಕ ಹಾಕುತ್ತಾ "ಡಾಲರ್ ಅಂದರೇ ಇಪ್ಪತ್ತೆಂಟು ರೂ ಗಳವರಗೆ ಇದೆ. ಎರಡು ಎರಡೂವರೆ ಲಕ್ಷದ ಮೇಲೆ ಧಾರಾಳವಾಗಿ ಬರತ್ತೆ ದೆಹಲಿಯಲ್ಲಿ ಇರೋ ನನ್ನ ಅಳಿಯನ ಫ್ರೆಂಡೇ ಫಾರಿನ್‌ಗ್ವೋಗೋದ ರಿಂದ ವಿದೇಶಿ ಡಾಲರ್ ನನಗೆ ಬೇಕೂಂತ ಅಂತ ಇದಾನಂತೆ. ವಿದೇಶಿ ವಿನಿ ಮಯ ಕಚೇರೀಲು ನಾನು ರೂಲ್ ರೆಗ್ಯುಲೇಷನ್ಸ್ ವಿಚಾರಿಸ್ತೇನೆ. ಇನ್ನು ಎರಡು ತಿಂಗಳಲ್ಲಿ ಹಣದ ನಿಮಗೆ ಕೈ ಸೇರುತ್ತೆ. ಟ್ಯಾಕ್ಸ್ ಗೀಕ್ಸ್ ಏನು ಕಟ್ಟಬೇಕೋ ಅದರ ಬಗ್ಗೆ ವಿಚಾರಿಸ್ತೀನಿ." ಎಂದರು.

"ಹಾಗೆ ಮಾಡಿ ಸಾಲಂಕೃತವಾಗಿ ಮಗಳನ್ನ ಕನ್ಯಾದಾನ ಮಾಡೋಷ್ಟು ಹಣಾ ಸಿಕ್ಕರೆ ಸಾಕು. ಗೌರ್ನಮೆಂಟ್ ರೂಲ್ಸ್, ರೆಗ್ಯುಲೇಷನ್ ಪ್ರಕಾರ ಏನು ಕಟ್ಟಬೇಕೊ....ಕಟ್ಟಿಯೆ ಉಳಿದದ್ದು ಕೊಡಿ" ಎಂದರು. ಸೀತಮ್ಮ ಎಚ್ಚೆತ್ತು—

"ನಮ್ಮ ಆನಂದದಲ್ಲಿ ನಿಮಗೆ ಕಾಫಿ ಕೊಡೋದು ಮರತೆ ಅನ್ನ ಕ್ಕಿಡಲಾ ? ಕಾಫಿ ಮಾಡಲಾ ?" ಎಂದರು.

"ನೋಡಿ ತಾಯಿ....ಹತ್ತು ಗಂಟೆ ಆಯಿತು. ಈಗ ಒಲೆ ಹಚ್ಕೋ ಕೊಂದರೆ ತಗೋಬೇಡಿ. ಮೊಸರವಲಕ್ಕಿ ಎರಡು, ಮೂರು ಬಗೆ ಉಪ್ಪಿನ ಕಾಯಿ ಕೊಡಿ. ಹೊಟ್ಟೆ ತುಂಬ ತಿಂದು ನೀರು ಕುಡಿದು ಮಲಗ್ತೀನಿ" ಎಂದರು.

ಸೀತಮ್ಮ ಅವಲಕ್ಕಿ ಕಲಿಸಿ, ಉಪ್ಪಿನಕಾಯಿ ಚಟ್ನಿಪುಡಿ, ಸಮೇತ ತಂದಿಟ್ಟರು. ಅವರ ಹೃದಯದಲ್ಲಿ ಅಪೂರ್ವ ಸಂತಸ ಉಕ್ಕಿತ್ತು.

"ಮಧ್ಯಾನ್ಹ ಈ ಪತ್ರ ಬಂತು. ನನ್ನ ಗೆಳೆಯ ರಂಗನಾಥ್ ಅವನಿಗೆ ಈ ವಿಷೇಶವಿಷಯ ಇದರ ಬಗ್ಗೆ ಎಲ್ಲಾ ಚೆನ್ನಾಗಿ ಗೊತ್ತು. ಅವನ ಹತ್ತಿರ ಹೋಗಿ ವಿಧಿ ನಿಯಮಗಳ ಪ್ರಕಾರ ಏನೇನು ಮಾಡಬೇಕು ? ಎಲ್ಲಾ ಮಾತಾಡಿ ಬಂದೆ. ಸಂಜೆ ಏಳು ಗಂಟೆಗೆ ಮೈಸೂರಿಂದ ಇಲ್ಲಿ ಬಂದೆ" ಎಂದು ಏನೇನೋ ಹೇಳುತ್ತಿದ್ದರು.

"ಟ್ಯಾಕ್ಸ್ ಗೀಕ್ಸ್ ಎಲ್ಲಾ ಕಟ್ಟಿದರೂ ಒಂದು ಒಂದೂವರೆ ಲಕ್ಷ ಅಂತು ಖಚಿತವಾಗಿ ಸಿಗತ್ತೆ ಅಂತ ರಂಗನಾಥ್ ಹೇಳಿದ" ಎಂದು ಅವರು ಹೇಳಿದಾಗ ಆಚಾರ್ಯರು "ಶ್ರೀ ಲಕ್ಷ್ಮಿ ಕೃಪೆ ಆಕೆ ಬಲಹಸ್ತದಿಂದ ಶುಭಪ್ರದ ವಾಗಿ ಎಷ್ಟು ಕೊಡ್ತಾಳೋ ಕೊಡಲಿ" ಎಂದರು. ರಾತ್ರಿ ಮಗಳೊಡನೆ ಮಲಗಿದಾಗ ಸೀತಮ್ಮನವರು "ಶಾರದಾ... ನಿಜಕ್ಕು, ಶ್ರೀ ಲಕ್ಷ್ಮಿದೇವಿ ಬಹು ಸತ್ಯ ಕಣೇ ಮಾಡಿದ ಸೇವೆಗೆ ಫಲ ಕೊಟ್ಟಳು" ಎಂದರು.

"ಎಲ್ಲಾ ದೇವರು ಸತ್ಯಾಮ್ಮ. ಲೌಕಿಕದಲ್ಲಿ ಮುಳುಗಿದ ನಮಗೆ ನಂಬಿ ಆರಾಧಿಸೋ ಶಕ್ತಿ ಇಲ್ಲ. ಕಾಮಕ್ರೋಧದಲ್ಲಿ ತೊಳಲಾಡ್ತೀವಿ" ಎಂದಳು.

"ಏನೋ ನಿಮ್ಮಪ್ಪನಷ್ಟು, ನಿನ್ನಷ್ಟು ಚಿತ್ತ ಮನಸು ನನಗಿಲ್ಲಮ್ಮ. ನಿಜಕ್ಕು ತಲೆ ಮೇಲಿಂದ ಒಂದು ದೊಡ್ಡ ಪರ್ವತದ ಭಾರವೇ ಹೇದು ಬಿದ್ದ ಹಾಗಾಗಿದೆ" ಎಂದರು.

ಶಾರದಾ ನಗುತ್ತಾ "ಅಂತು ನಾನು ನಿನ್ನ ತಲೆ ಮೇಲೆ ಪರ್ವತದ ಹಾಗೆ ಕುಳಿತಿದ್ದನೇನು ? ನನ್ನ ತೂಕ ಮೊನ್ನೆ ಮೈಸೂರು ಬಸ್ ಸ್ಟ್ಯಾಂಡಲ್ಲಿ ಮಾಡಿಸಿದಾಗ ಐವತ್ನಾಲಕ್ಕು ಕೇಜಿ ಮಾತ್ರ ಇದ್ದೆ" ಎಂದಳು.

ಸೀತಮ್ಮ ಹುಸಿಮುನಿಸಿನಿಂದ "ಐವತ್ನಾಕು ಕೇಜಿಯೋ ಅರವತ್ತು ಕೇಜಿಯೋ....ಸದ್ಯ ನೀನು ಈ ಮನೆಯಿಂದ ಹೊರಟರೇ ಸಾಕಾಗಿದೆ" ಎಂದರು.

ಶಾರದ ನಕ್ಕು "ಹೂಂ ಈಗ ಹಾಗೆನ್ನೋಳು ನೀನೆ. ನಾನೆ ನಾನು ಹೊರಡುವಾಗ ಹೇಗೆ ನಿನ್ನ ಬಿಟ್ಟಿರಲೀ ಶಾರದಾ ? ಅಂತ ಕಣ್ಣೀರು ಹಾಕ್ತ ಕಳಿಸಿಕೊಡೋಳು ನೀನೆ" ಎಂದಳು.

"ನಿದ್ದೆ ಮಾಡು. ಬೆಳಿಗ್ಗೆ ನಿನ್ನ ಗೆಳತಿ ಮನೆಗೆ ಬೇರೆ ಹೋಗ್ಬೇಕೇನೊ ?" ಎಂದರು.

"ಸದ್ಯ ? ನಾಳೆಯಿಂದಲಾದರೂ ನಾಗು ಮನೆಗೆ ಸಗ್ತ ಸಗ್ತ ಕಳಿಸಿ ಕೊಡು. ನಾನು ನಾಗೂ ಮನೆಗೆ ಹೋಗಿ ಬರ್‍ತೀನಿ ಅಂದರೆ ಮುಖಾ ಊದಿಸಿಕೊಳ್ತಿದ್ದೆ" ಎಂದಳು.

"ಏನು ಮಾಡಲಿ ಹೇಳು ? ನಿನ್ನ ಸರಿ ವಯಸ್ಸಿನ ಹುಡುಗಿ ಅವಳು ಮದುವೆ, ಮಗು, ಅಂತ ಎಲ್ಲಾ ವೈಭೋಗ ಅನುಭವಿಸ್ತಿರೋದು, ನೀನು ನೋಡಿದರೇ ದುಡಿಯಲಿಕ್ಕೆ ಹೋಗೋದು ನನಗೆ ಹೊಟ್ಟೇಲಿ ಸಂಕಟ ಆಗ್ತಿತ್ತು" ಎಂದರು.

"ಹೆಜ್ಜೆ ಹೆಜ್ಜೆಗೂ ನನಗೆ ಒಳ್ಳೇದಾಗಲೀಂತ ಹಾರೈಸೋ ನಾಗು, ಗೌರಮ್ಮ, ಇವರ ಮನೆಗೆ ನಾನು ಸಂತೋಷವಾಗಿ ಹೋಗ್ತೀನಿ ನಿಜ. ಆದರೆ ಅಷ್ಟೇ... ಸುಲಭವಾಗಿ ದುಡಿತನ ಉದ್ದೇಶದಿಂದಲೆ ನನ್ನ ಕರೆಸಿ ಕೊಳ್ಳೋರ ಹತ್ತಿರ ನಾನು ಹೋಗಲ್ಲ" ಎಂದಳು. ಸೀತಮ್ಮ ಸುಮ್ಮನಾದರು. ಅವರ ಚಿಂತೆ ಕಳೆದಿತ್ತು. ಹೃದಯ ಹಗೂರಾಗಿತ್ತು.

ಆಚಾರ್ಯರಿಗೆ ಅಮೆರಿಕಾದಿಂದ ದುಡ್ಡು ಬಂದಿದೆಯಂತೆ ಎಂಬ ಸಮಾಚಾರ ಎಲ್ಲೆಲ್ಲು ಹರಡಿತು. ಹಳ್ಳಿಗರು ಬಂದು ಮಾತಾಡಿಸಿ ಹೋಗುತ್ತಿದ್ದರು.

"ಮೈಸೂರಿನಲ್ಲಿ ದೊಡ್ಡ ಮನೆ ಕಟ್ಟಿಸ್ತೀರಾ ಸ್ವಾಮಿ? ನಮ್ಮ ಹಳ್ಳಿ ಬಿಟ್ಟು ಹೊರಟು ಹೋಗ್ತೀರಾ?" ಎಂದು ಕೆಲವರು ಪ್ರಶ್ನಿಸಲಾರಂಭಿಸಿದರು.

"ಈ ಹಳ್ಳಿ, ಈ ಮಣ್ಣಿನ ಮನೆ ನನಗೆ ಶಾಶ್ವತ. ಇದನ್ನು ಬಿಟ್ಟು ಎಲ್ಲಿಗೂ ಹೋಗಲ್ಲ. ತಂದೆ, ತಾತ ಮುತ್ತಾತ ಪೂರ್ವಿಕರಿದ್ದಾಗಿಂದ ಇರುವ ಮನೆ ಇದನ್ನ ಬಿಟ್ಟು ಈ ವಯಸ್ಸಿನಲ್ಲಿ ಎಲ್ಲಿಗೂ ಹೋಗಲ್ಲ" ಎಂದರು. ಹಳ್ಳಿಗರಿಗೆ ಸಮಾಧಾನವಾಯಿತು.

ಎಷ್ಟು ಹಣ ಬರುತ್ತದೆಂದು ಯಾರಿಗೂ ಇದರ ಬಗ್ಗೆ ಸ್ಪಷ್ಟವಾಗಿ ಗೊತ್ತಿರಲಿಲ್ಲ. ಮೈಸೂರಿಂದ ಪತ್ರಿಕಾ ಪ್ರತಿನಿಧಿಯೊಬ್ಬರು ಬಂದರು.

ಆಚಾರ್ಯರಿಂದ ವಿವರ ತಿಳಿದು ತಮ್ಮ ಪತ್ರಿಕೆಯಲ್ಲಿ ಆಚಾರ್ಯರ ಭಾವಚಿತ್ರ ಪ್ರಕಟಿಸಿ—

ಭಾರತ ಆಧ್ಯಾತ್ಮಿಕ ವಿದ್ಯೆಗೆ ವಿದೇಶದ ವಿಜ್ಞಾನದ ಜೋಡಿ ಎಂಬ ಸಮನ್ವಯದಲ್ಲಿ ಈ ರೀತಿ ಬರೆದಿದ್ದರು. ಈ ಭಾವಚಿತ್ರದಲ್ಲಿರುವ ಶ್ರೀ ವೇದ ವಿದ್ವಾನ್, ಶ್ರೀ ಹಯಗ್ರೀವಾಚಾರ್ಯರು ವೇದ, ವೇದಾಂತ ಪುರಾಣ, ಉಪನಿಷತ್ ಮುಂತಾದ ಭಾರತದ ಪ್ರಾಚೀನ ವಿದ್ವತ್ತಿನ ಮಹಾ ವಿದ್ವಾಂಸರು ಆಧ್ಯಾತ್ಮಿಕ ರಹಸ್ಯಗಳನ್ನು ಬಿಚ್ಚಿ ಹೇಳುವ ಅಪೂರ್ವ ಗ್ರಂಥ ರಾಶಿ, ಓಲೆಗರಿಗಳು ಇವರ ಮನೆಯಲ್ಲಿವೆ. ವೈದಿಕ ಬ್ರಾಹ್ಮಣರಾದ ಇವರಿಗೆ ಈ ಆಧ್ಯಾತ್ಮಿಕ ಗ್ರಂಥಗಳೇ ತಮ್ಮ ಪಾಲಿನ ಸಂಪತ್ತು ಎಂದು ಅದನ್ನು ಅಧ್ಯಯನ ಮಾಡುವುದೇ ತಮ್ಮ ದೇವತಾರಾಧನೆ ಎಂದು ತಿಳಿದಿದ್ದರು

ಈ ಆಚಾರ್ಯರ ಬಳಿ ಭಾರತದ ಪ್ರಸಿದ್ಧ ವಿಜ್ಞಾನಿಯೊಬ್ಬರು ಬಂದು ಅಮೇರಿಕಾ ವೈಜ್ಞಾನಿಕ ಸಂಸ್ಥೆಯೊಂದರಲ್ಲಿ ತಾವು ಶಬ್ದ ರೇಗಳ ಬಗ್ಗೆ ಭಾರತದ ಪ್ರಾಚೀನ ವೇದ ಪುರಾಣಗಳಲ್ಲಿ ಬರುವ ಮಾಹಿತಿ ಬಗ್ಗೆ ತಿಳಿಸಬೇಕೆಂದು ಕೇಳಿದ್ದರಂತೆ.

ಶಬ್ದಗಳ ಉತ್ಪತ್ತಿ, ಆಕಾಶ ಸೇರಿದ ಮೇಲೆ ಅವುಗಳ ಶಾಶ್ವತ ಇರುವಿಕೆ. ಅವುಗಳನ್ನು ಸಂಘಟಿಸಿದಾಗ ಬರುವ ಶಕ್ತಿಯ ಒತ್ತಡ ಇವುಗಳ ಬಗ್ಗೆ ಆಚಾರ್ಯರು ಮಹಾಮಹಾ ಗ್ರಂಥಗಳಲ್ಲಿ ಓದಿ ಹೇಳಿದಂತೆ.

ಈ ವಿಷಯಗಳು....ಅಸ್ಪಷ್ಟವಾಗಿದ್ದ ತಮ್ಮ ಸಂಶೋಧನೆ ಹಾದಿಯಲ್ಲಿನ ಪ್ರಯೋಗಕ್ಕೆ ಬಹಳ ಉಪಕಾರವಾಯಿತೆಂದು ತಮ್ಮ ವೈಜ್ಞಾನಿಕ ಪ್ರಬಂಧ ಮಂಡಿಸುವಾಗ ಈ ಮಾಹಿತಿ, ಪರೋಕ್ಷವಾಗಿ ಉಪಯೋಗಿಸಿಕೊಂಡಿರುವು

ದಾಗಿ ತಿಳಿಸಿ, ಖ್ಯಾತ ವಿಜ್ಞಾನಿ ಸ್ವಾಮಿನಾಥ್ ಆಚಾರ್ಯರಿಗೆ ಹತ್ತು ಸಾವಿರ ಡಾಲರ್‌ಗಳನ್ನು ಗುರು ಕಾಣಿಕೆಯಾಗಿ ಆಚಾರ್ಯರಿಗೆ ವಿದ್ವತ್ ಸಂಭಾವನೆ ನೀಡಿದ್ದಾರೆ ಇಲ್ಲಿ ಆಶ್ಚರ್ಯದ ವಿಷಯ ಎಂದರೆ ಭಾರತದ ಪ್ರಾಚೀನ ಆಧ್ಯಾತ್ಮಿಕ ಸಂಪತ್ತಾದ ವೇದಾ, ಪುರಾಣ, ಉಪನಿಶತ್‌ಗಳನ್ನು ಭಾರತೀಯರೇ ಕಡೆಗಣಿಸುತ್ತಿರುವಾಗ ವಿದೇಶಿ ವಿಜ್ಞಾನಿಯ ನೇತೃತ್ವದಲ್ಲಿರುವ.... ನಮ್ಮ ಭಾರತೀಯ ಖ್ಯಾತ ವಿಜ್ಞಾನಿಯೊಬ್ಬರು ಭಾರತದ ಆಧ್ಯಾತ್ಮಿಕ ಸಂಪತ್ತಿನಲ್ಲಿ ಅಪಾರ ವೈಜ್ಞಾನಿಕ ತತ್ವಗಳಿವೆ ಎಂದು ಒಪ್ಪಿ ಮುನ್ನಡೆಯುತ್ತಿರುವುದು

ಶಬ್ದ ತರಂಗಗಳು ಶಕ್ತಿಗಳಾಗಿ ರೂಪುಗೊಳ್ಳುವ ಒಂದೆರಡು ಉದಾಹರಣೆಗಳನ್ನು ರಾಮಾಯಣ, ಮಹಾಭಾರತಗಳಲ್ಲಿ ಬರುವ ಉದಾಹರಣೆಗಳಲ್ಲಿ ಹೇಳಿ....? ಎಂದು ಕೇಳಿದೆ.

ಏಕೆಂದರೆ ಆಚಾರ್ಯರೇನೋ ವೇದವಿದ್ಯಸಂಪನ್ನರು ಅವರ ವೇದಾ, ಉಪನಿಷತ್‌ಗಳ ಉದಾಹರಣೆ ವಿವರಿಸಿದರೂ ನಮ್ಮ ಓದುಗರಿಗೆ ಅದನ್ನು ತಲುಪಿಸಲು ಕಷ್ಟವಾಗುತ್ತದೆ. ರಾಮಾಯಣ ಹಾಗೂ ಮಹಾಭಾರತದ ಎಂದರೆ ನಮ್ಮ ಜನಕ್ಕೆ ಈಗ ಸ್ವಲ್ಪ ಪರಿಚಯವಿದೆ. ಅದು ಟಿ.ವಿ.ಯ ಮೂಲಕ" ಎಂದೆ.

ಆಚಾರ್ಯರು ನಕ್ಕು ದುರದರ್ಶನ ಹಾಗು ಆಕಾಶವಾಣಿ ಇದೆಲ್ಲ ಆಕಾಶದಲ್ಲಿ ಹರಿದು ಬರುವ ಧ್ವನಿ ತರಂಗಗಳೇ... ಬೆಳಕು, ಶಬ್ದ ಇದೆಲ್ಲಾ ಆಕಾಶದಲ್ಲಿ ಹರಿದು ಬರುವಾಗ ವೈಜ್ಞಾನಿಕವಾಗಿ ಸೆರೆ ಹಿಡಿದಿಟ್ಟಾಗ ಇದೆಲ್ಲ ಉಪಕರಣ ತಯಾರಾಯ್ತು. ಎಂದು ಶಾಸ್ತ್ರೋಕ್ತವಾಗಿ ಸಂಸ್ಕೃತ ಶ್ಲೋಕಗಳ ಮೂಲಕ ವಿವರಿಸಿದರು.

ಅವರ ಶ್ಲೋಕಗಳಲ್ಲಿ ಹೆಚ್ಚಿನ ಭಾಗ ನನಗಂತು ಅರ್ಥವಾಗಲಿಲ್ಲ. ಭಾರತ ಭಾಗವತದಲ್ಲಿ ಒರುವ ಕೆಲವು ಆಕಾಶವಾಣಿ ಬಗ್ಗೆ ವಿವರಿಸಿದರು. ಕಂಸ ತನ್ನ ತಂಗಿಯ ಮದುವೆಯಲ್ಲಿ ತಾನೇ ರಥ ನಡೆಸಿಕೊಂಡು ಮದುಮಕ್ಕಳನ್ನು ಕರೆತರುವಾಗ ಆಕಾಶದಿಂದ ವಾಣಿ ಕೇಳಿಸಿತು. ದೇವಕಿ ಎಂಟನೇ ಗರ್ಭದ ಶಿಶು ನಿನ್ನ ಕೊಲ್ಲತ್ತೆ ಎಂಬ ಒಂದು ವಾಣಿ ಕೇಳಿಸತ್ತೆ. ಈ ಸಮಯದಲ್ಲಿ ಪ್ರಚಂಡ ಬೆಳಕು ಕಾಣಿಸಿತು. ಆಕಾಶಕಾಯದಲ್ಲಿ ಶಬ್ದ ತರಂಗಗಳು ಭವಿಷ್ಯವಾಣಿಯಾದ ಕುರುಹು ಇದು.

ದುರ್ಯೋಧನನ ಸಭೆಯಲ್ಲಿ ದುಶ್ಯಾಸನ ಸೀರೆ ಸೆಳೆಯುವಾಗ ದ್ರೌಪದಿಗೆ ಯಾರು ಸಹಾಯ ಮಾಡಲಿಲ್ಲ. ಕಡೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನ ಧ್ಯಾನದಿಂದ ಅವಳಿಗೆ ಅಕ್ಷಯಾಂಬರ ಪ್ರಾಪ್ತವಾಗತ್ತೆ. ಆಗಲೂ ದುರ್ಯೋಧನ ಅಪಹಾಸ್ಯದಿಂದ ಚಟ್ಟದೆತ್ತರ ಬಿದ್ದ ಈ ಅಪೂರ್ವ ಪೀತಾಂಬರದ ರಾಶಿ....ನಮ್ಮ ಬೊಕ್ಕಸಕ್ಕೆ ಸೇರಿಸಿ" ಎಂದು ಸೇವಕರಿಗೆ ಆಜ್ಞೆ ಮಾಡುತ್ತಾನೆ.

ಆಗ ದ್ರೌಪತಿ ಕೋಪದಿಂದ ಆ ವಸ್ತ್ರ ರಾಶಿ ನೋಡುತ್ತಿದ್ದಂತೆಯೆ ಅವೆಲ್ಲ ಸುಟ್ಟು ಭಸ್ಮ ಆಗುತ್ತದೆ. ಒಮ್ಮೆ ಅವಳು ನಿಟ್ಟುಸಿರು ಬಿಡುತ್ತಿದ್ದಂತೆ ಆಕಾಶದಿಂದ ಕೆಂಡ ಮಳೆ ಸುರಿಯುತ್ತದೆ. ಭೀಕರ ಸಿಡಿಲಿನ ಶಬ್ದಗಳು ಮೊಳಗಿ ಆಕಾಶದಿಂದ ಧ್ವನಿ ಕೇಳಿಸಿ "ಪರಮ ಪತಿವ್ರತೆಗೆ ಅಪಚಾರ, ಅಲ್ಲಿದ್ದ ಎಲ್ಲಾ ರಾಜರು ನಾಶವಾಗುತ್ತಾರೆ. ದುರ್ಯೋಧನನೇ ಇದಕ್ಕೆ ಮುಖ್ಯ ಕಾರಣ ಕರ್ತನಾದ್ದರಿಂದ ಅವನು ಕುಲಸಮೇತ ನಾಶವಾಗುತ್ತಾನೆ" ಎಂಬ ವಾಣೀ ಕೇಳುತ್ತದೆ.

ಆಗ ಧೃತರಾಷ್ಟ್ರ ಹೆದರಿ ತಡವರಿಸುತ್ತ ದ್ರೌಪತಿ ಬಳಿ ಬಂದು ಶಾಂತಳಾಗುವಂತೆ ಪ್ರಾರ್ಥಿಸಿ ಬಗೆಬಗೆಯಾಗಿ ಕ್ಷಮಾಪಣೆ ಕೇಳುತ್ತಾನೆ.

ಪಾಂಡವರ ದಾಸ್ಯ ಪರಿಹರಿಸಿ, ಅವರ ಅಸ್ತ್ರ ಶಸ್ತ್ರಗಳು ಅವರಿಗೆ ಕೊಡಬೇಕೆಂಬ ದ್ರೌಪತಿಯ ಅಪೇಕ್ಷೆ ಸಲ್ಲಿಸಿ ಅದರೊಂದಿಗ ಅವರ ರಾಜ್ಯ ಸಹ ಅವರಿಗೆ ನೀಡಿದ್ದೇನೆ.

ನಿಮ್ಮ ರಾಜ್ಯದಲ್ಲಿ ನೀವು ಸುಖವಾಗಿರಿ ಎಂದು ಕಳಿಸಿಬಿಡುತ್ತಾನೆ. ರಾಮಾಯಣದಲ್ಲಿಯೂ ಸೀತೆ ಅಗ್ನಿಪರಿಕ್ಷೆ ಮಾಡಿದಾಗ "ಸೀತೆ ಪರಮ ಪತಿವ್ರತೆ ಎಂದು ಆಕಾಶವಾಣಿ ಆಗುತ್ತದೆ ಎಂದ. ಹಲವಾರು ಉದಾಹರಣೆ ಹೇಳಿ ಆಕಾಶಕಾಯಗಳಲ್ಲಿನ ಶಬ್ದ ತರಂಗಗಳ ಬಗ್ಗೆ ಶಬ್ದ, ಬೆಳಕು ಹಾಗು ಅವುಗಳ ಶಕ್ತಿ ರೂಪಗಳ ಬಗ್ಗೆ ವಿವರಿಸಿದರು. ಆಚಾರ್ಯರನ್ನು ಅಭಿನಂದಿಸಿ ಸಂದರ್ಶನ ಮುಕ್ತಾಯ ಮಾಡಿ ನಾವು ಹೊರಟುಬಂದೆವು ಎಂದು ಬರೆದಿತ್ತು.

ಪತ್ರಿಕಾ ಸಂದರ್ಶನ ಪ್ರಕಟವಾದ ಒಂದು ವಾರದ ನಂತರ ಗೋವಿಂದ ತನ್ನ ಪತ್ನಿ ಪ್ರಮಿಳೆಯೊಡನೆ ಬಂದಿಳಿದ. ವಿವಾಹವಾದ ನಾಲ್ಕು

ವರ್ಷಗಳ ನಂತರ ಅವನು ಅದೇ ಮೊದಲ ಬಾರಿ ಅಲ್ಲಿಗೆ ಬಂದುದ್ದು.

ಸೀತಮ್ಮ ಕೊಂಚ ಬಿಗುವಾಗಿಯೇ ಸ್ವಾಗತಿಸಿದರು. ಆಚಾರ್ಯರು ಎಂದಿನಂತೆ ಸರಳವಾಗಿದ್ದರು.

894 . 814 308
RAD N9

"ಏನಪ್ಪಾ....ಏನು ವಿಷಯ ? ಅಮೇರಿಕಾದಿಂದ ಏನೊ ಬಹುಮಾನ ಬಂದಿದೆಯಂತೆ" ಎಂದು ಗೋವಿಂದ "ಏನೊ ಒಂದು ಲಕ್ಷವೋ ಒಂದೂವರೆ ಲಕ್ಷವೋ ಕೈಗೆ ಬರಬಹುದು ಅದರ ಬಗ್ಗೆ ಏನೊ ರೂಲ್ಸ್, ರೆಗ್ಯುಲೇಷನ್ ಇದೆಯೋ....ಬೆಂಗಳೂರು ಆಫೀಸಲ್ಲಿ ಏನೊ ಕೆಲಸ ಆಗ್ಲಿಲ್ಲಂತೆ. ಬಾಂಬೆ ದೆಹಲಿಗೆ ಹೋಗಿ ಬರಬೇಕಂತೆ ನನ್ನ ಸಹಿ ಹಾಕಿಸಿಕೊಂಡಿದ್ದಾರೆ ಪಾಪ ಎಲ್ಲಾ ಆ ರಾಮರಾಯರ ಮಗ ಓಡಾಡ್ತಿದ್ದಾರೆ"

ಎಂದು ಆಚಾರ್ಯರು ಸರಳವಾಗಿ ನುಡಿದರು. ಗೋವಿಂದ ಕೋಪದಿಂದ ಬುದ್ಧಿ ಹೇಳುವಂತೆ.

"ನೀವು ಹೊರಗಿನ್ನೋರನ್ನೆಲ್ಲಾ ನಂಬಿ ಏಕೆ ಮೋಸ ಹೋಗ್ತೀರಪ್ಪಾ ? ನೇರವಾಗಿ ಆ ಡಾಲರ್ ಚೆಕ್ ಬರ್ತಾಲೆ ನನಗೆ ಬಂದು ತಿಳಿಸಬೇಕಾಗಿತ್ತು" ಎಂದ.

80695CR

ಶಾರದ ನಗುತ್ತ "ಹೊರಗನೋರಿಂದ ಮೋಸ ಹೋಗೊ ಬದಲು ನೇರವಾಗಿ ನಿನ್ನಿಂದಲೇ ಮೋಸಾ ಹೋಗ್ಬೇಕಾಗಿತ್ತಾ ?" ಎಂದಳು. ಪರಿಮಳ ಸಿಡುಕುತ್ತ—

"ಹುಚ್ಚು ಹುಚ್ಚಾಗಿ ಮಾತಾಡಬೇಡವೆ ಶಾರದಾ ? ಏನು ಒಡಹುಟ್ಟಿದ ಅಣ್ಣನ ಹತ್ತಿರ ಮಾತಾಡೋ ರೀತೀನಾ ಇದು ? ಓದು, ವಿದ್ಯಾ ಇಲ್ಲದಿದ್ದರೇ ಬೇಡಾ—ನಾಗರೀಕತೆಯಾಗಿ ಮಾತಾಡೋದಿಕ್ಕೂ ಬರಲ್ಲವಾ ನಿನಗೆ ?" ಎಂದಳು.

"ಅವಳನ್ನ ಅನ್ನಲು ಯಾವೋಳೆ ನೀನು ? ಓದು ವಿದ್ಯ ಇಲ್ಲ ಅನ್ನೋಳು....? ಅವಳ ಕಾಲ ಬೆರಳಿನ ತುದಿಯ ಯೋಗ್ಯತೆ ನಿನಗಿದೆಯ ? ಅವಳು ಮಾಡಿದಹಾಗೆ ಮನೆಯ ಕೆಲಸ ನಿಭಾಯಿಸ್ಲಿಕ್ಕೆನಿನಗೆ ಕನಸಿನಲ್ಲಾದರು ಸಾಧ್ಯವಾ ?" ಎಂದು ಉಗ್ರಕೋಪದಿಂದ ಸಿಡಿದು ಕೇಳಿದರು ಸೀತಮ್ಮ.

"ಇರ್ಲಿ ಬಿಡಮ್ಮ, ಅತ್ತಿಗೆಯ ಯೋಗ್ಯತೆ ನಮಗೆ ಗೊತ್ತಿದ್ದದ್ದೇ.... ನೀನು ಏಕೆ ಟೆನ್ಷನ್ ಮಾಡ್ಕೋತಿ ? ಮೊದಲೇ ನಿನಗೆ ಬ್ಲಡ್ ಪ್ರಷರ್ ಇದೆ" ಎಂದಳು ಶಾರದ. ಪರಿಮಳೆಯ ಮುಖ ಬಾಡಿತು. ಗೋವಿಂದ ತುಸು

ಸಂಧಾನದ ಸ್ವರದಲ್ಲಿ "ಇರ್ಲಿ ಬಿಡು, ನೀನು ಏಕೆ ಅಷ್ಟು ಕೋಪ ಮಾಡ್ಕೊಳ್ತಿ? ಅವಳು ಎಂ ಎ. ಓದಿದವಳು. ಸಹಜವಾಗಿ ಶಾರದನ ಚೆಲ್ಲು ಹಾಸ್ಯದ ಮಾತುಗಳು ಅವಳಿಗೆ ಬೇಜಾರೆನಿಸಿ ಹಾಗೆಂದಳು" ಎಂದು ಏನೋ ಹೇಳಲು ಹೋದ.

ಸೀತಮ್ಮ ಗಡುಸಾಗಿ— "ನಿನ್ನ ಹೆಂಡತಿ ಎಂ. ಎ. ಓದಿದ್ದಳು. ನಿನಗೆ ಹೆಚ್ಚು. ಆದರೆ ಶಾರದನ್ನ ಅನ್ನಲಿಕ್ಕೆ ನಿನಗಾಗಲಿ, ಅವಳಿಗಾಗಲಿ ಏನು ಅಧಿಕಾರವಿದೆ? ನಾಗೂನ್ನ ಅಣ್ಣಂದಿರು ತಂಗೀನ್ನ ಮೈಸೂರಲ್ಲಿಟ್ಕೊಂಡು ಬಿ.ಎ, ಬಿ.ಎಡ್ ಮಾಡಿಸಿದರು ಒಂದು ವಾರ ಕಾಯಿಲೆ, ಕಸಲೇ ಅಂತ ಮೈಸೂರಿಗೆ ಬಂದಾಗ ನಿಮ್ಮ ಯೋಗ್ಯತೆ ತೋರಿಸಿದ್ದೀರಿ" ಎಂದರು.

"ಇರ್ಲಿ ಬಿಡು. ಮಗ ಸೊಸೆ ಅಪರೂಪಕ್ಕೆ ಬಂದಿದ್ದಾರೆ. ಗೋವಿಂದ ನೀನು ಮಾಳಿಗೆಮೇಲಿನ ಕೋಣೆಲಿ ವಿಶ್ರಾಂತಿ ತಗೊ" ಎಂದರು ಆಚಾರ್ಯರು.

"ಬಾ... ಪರಿಮಳ ಕೊಂಚ ರೆಸ್ಟ್ ತೆಗೆದುಕೊಳ್ಳೋಣ" ಎಂದು ಹೆಂಡತಿಯ ಜೊತೆ ಮಹಡಿ ಹತ್ತಿ ಆ ಮಗ್ಗುಲಿನ ಕೋಣೆಗೆ ಬಂದ.

"ನಿನಗೆ ಬೇಜಾರಾಯ್ತೇನೊ....ಡಾರ್ಲಿಂಗ್, ಅಮ್ಮ ಯಾವಾಗಲು ಶಾಂತವಾಗಿರೋಳು... ಹೇಗೆ ಸಿಡಿದಾಡಿದಳು ಎಂದ ಗೋವಿಂದ. "ನಿನಗೆ ನಿನಗೆ ಬೇಜಾರಾದರೆ ಊರಿಗೆ ಹೊರಟು ಬಿಡೋಣಾ" ಎಂದು ಸೇರಿಸಿದ.

"ಇರ್ಲಿ ಬಿಡಿ. ಅಷ್ಟ್ಯಾಕೆ ನೀವು ಮನಸ್ಸಿಗೆ ಹಚ್ಚಿಕೊಳ್ತೀರಿ? ಕಾರ್ಯವಾಸಿ ಕತ್ತೆ ಕಾಲು ಕಟ್ಟಬೇಕು ಅಂತ ಗಾದೆ ಇದೆಯಲ್ಲ. ಒಂದು ಡಾಲರಿಗೆ ಈಗ ಮೂವತ್ತು ಮುವ್ವತ್ತೆರಡು ರೂಪಾಯಿ ಆಗತ್ತೆ. ಇವರುಗಳಿಗೆ ಏನು ಗೊತ್ತಾಗಲ್ಲ. ಜೊತೆ....ಗಿಫ್ಟ್ ಹಾಗು ಸಂಭಾವನೆ ಅಂತ ಬಂಟದ್ದಕ್ಕೆ ಇನ್-ಕಂ-ಟ್ಯಾಕ್ಸ್ ಆ ಪ್ರಮಾಣದಲ್ಲಿ ಬೀಳಲ್ಲ. ಗಿಫ್ಟ್ ಟ್ಯಾಕ್ಸ್ ಏನಾದರೂ ತಗೊಂಡರೂ ಎರಡು ಎರಡೂವರೆ ಲಕ್ಷ ಗ್ಯಾರಂಟಿ. ಒಂದು ಲಕ್ಷಾನಾದರೂ ನಮ್ಮ ಪಾಲು ಅಂತ ನಾವು ಇವರಿಂದ ಪಡೆಯಲೇ ಬೇಕು" ಎಂದು ತಾನು ಓದಿದ್ದ ಯಾವು ಯಾವುದೊ ಪತ್ರಿಕೆ ಆಧಾರದ ಮೇಲೆ ಅಮೇರಿಕನ್ ಡಾಲರಿಗೆ ಈಗಿರುವ ಮೌಲ್ಯ ಸಂಭಾವನೆ ಎಂದು ಬಂದಾಗ ಭಾರತ ಸರಕಾರ ಅದಕ್ಕೆ ತೆರಿಗೆ ವಿಷಯಗಳಲ್ಲಿ ತೋರಿಸಬಹುದಾದ ರಿಯಾಯಿತಿ ಈ ಬಗ್ಗೆ ಅಕರ್ಷಕವಾಗಿ ವಿವರಿಸುತ್ತಿದ್ದಳು. ಪುಂಗಿಯ ನಾದಕ್ಕೆ ಮರುಳಾದ ಹಾವಿನಂತೆ ತನ್ಮಯನಾಗಿ ಕೇಳುತ್ತಿದ್ದ ಗೋವಿಂದ.

* * * *

"ಊಟಾ ಅಂತು ಹೊತ್ತಾಗತ್ತೆ. ಅಣ್ಣಾ, ಅತ್ತಿಗೆ ಏನಾದರೂ ಒಗ್ಗರಣೆ ಅವಲಕ್ಕಿ ಏನಾದರೂ ಮಾಡ್ಬೇಕೇನಮ್ಮಾ?" ಎಂದಳು ಶಾರದ. ಇಪ್ಪತ್ತೈದು ವರ್ಷಗಳಾದರೂ ಹಸುಮಗುವಿನ ಮುಗ್ಧತೆ ಅವಳದು.

ಸೀತಮ್ಮ ಕೋಪದಿಂದ "ಏನು ಬೇಡ ಅಡಿಗೆ ಆದ ಮೇಲೆ ಬಡಿಸಿದ ರಾಯಿತು. ಅಷ್ಟರಲ್ಲಿ ಏನಾದರೂ ಬೇಕಾದರೆ ತಾನೇ ಬಂದು ಕೇಳಲಿ" ಎಂದರು ಶಾರದ ಎದ್ದು "ನಾನಂತು ನಾಗುವಿನ ಮನೆಗೆ ಹೋಗ್ತೀನಮ್ಮ" ಎಂದಳು.

"ಹೋಗಿ ಬಾ" ಎಂದರಾಕೆ ಸಮಾಧಾನದಿಂದ ಅಡಿಗೆ ಮಾಡುತ್ತ ಸೀತಮ್ಮ ಯೋಚಿಸಿದರು. ನಿಜಕ್ಕೂ ಶ್ರೀ ಲಕ್ಷ್ಮಿ ಕೃಪೆ ಮನುಷ್ಯನ ಬಾಳಿನಲ್ಲಿ ಎಷ್ಟು ದೊಡ್ಡದು. ಇದೇ ಸೊಸೆಗೆ ತಾವು ಎಷ್ಟು ಹೆದರಿ ನಡುಗಿದ್ದರು. ಒಂದೇ ವಾರದ ಅನುಭವ. ಹೇಗೆ ಕಾಡಿಸಿದ್ದಳು ಆ ಸೊಸೆ ಎಂಬ ಗಯ್ಯಾಳಿ. ಎರಡು ವರ್ಷದ ಹಿಂದಿನ ಆ ಪ್ರಸಂಗ ಆಗ ಸೀತಮ್ಮನವರಿಗೆ ವಿಪರೀತ ಕೆಮ್ಮು ಎರಡು, ಮೂರು ತಿಂಗಳಾದರು ತಗ್ಗಲಿಲ್ಲ ಇಡಿ ರಾತ್ರಿ ನಿದ್ರೆ ಯಿಲ್ಲದೆ ಕೆಮ್ಮಿ, ಕ್ಷೀಣವಾಗುತ್ತಿದ್ದ ಆಕೆಯನ್ನು ಕಂಡು ಶಾನುಭೋಗರ ಹೆಂಡತಿ ಗೌರಮ್ಮ.

"ಈ ಹಳ್ಳಿ ಆಸ್ಪತ್ರೆ ಔಷಧಕ್ಕೆ ಈಡಾಗೋದಲ್ಲ ಮೈಸೂರಿಗೆ ಬನ್ನಿ. ನನ್ನ ಮಗನ ಮನೆ ಹತ್ತಿರ ಒಳ್ಳೆ ನರ್ಸಿಂಗ್ ಹೋಮಿದೆ. ಹೇಗಿದ್ದರೂ ಅಲ್ಲಿ ನಿಮ್ಮ ಗೋವಿಂದನ ಮನೆ ಇದೆ. ನನಗೆ ಹೀಗಾದಾಗ ಅಲ್ಲಿನ ಡಾಕ್ಟರೇ ವಾಸಿ ಮಾಡಿದ್ದು...." ಎಂದರು.

ಕೈಲಿದ್ದ ಇನ್ನೂರು ರೂ.ಗಳ ಜೊತೆ, ಮಗಳನ್ನು ಕರೆದುಕೊಂಡು ಮೈಸೂರಿಗೆ ಬಂದಿದ್ದರು ಸೀತಮ್ಮ

ಗೌರಮ್ಮನೂ ತಮ್ಮ ಮಗನ ಮನೆಗೆ ಬಂದಿಳಿದರು. ಒಮ್ಮೆಲೆ ಬಂದಿಳಿದ ತಾಯಿ ತಂಗಿಯನ್ನು ನೋಡಿ—

"ಏನಮ್ಮ . ಹೀಗೆ ಹೇಳದೆ ಕೇಳದೆ ಬಂದಿಳಿದೆ ?" ಎಂದ ಸೀತಮ್ಮ ತಮ್ಮ ಬವಣೆ ವಿವರಿಸಿ—

"ಆ ಕೆಮ್ಮು ತಡೀಲಾರದೇ ಬಂದು ಬಿಟ್ಟೆನಪ್ಪಾ. ಇಲ್ಲಿ ಯಾವುದೋ ರಂಗನಾಥ್ ನರ್ಸಿಂಗ್ ಹೋಮ್ ಅಂತ ಇದೆಯಂತಲ್ಲ ಹಿಂದೆ ಗೌರಮ್ಮನೂ ಇಲ್ಲೀ ಬಂದು ತೋರಿಸಿ ಚೆನ್ನಾಗಿ ವಾಸಿ ಮಾಡಿಕೊಂಡರಂತೆ. ನಾನು ಆ

ಭಾದೆ ತಾಳಲಾರದೇ ಬಂದೆ. ನಿಮ್ಮನೆಗೆ ನಡೆದುಕೊಂಡು ಹೋಗೋಷ್ಟು ಹತ್ತಿರದ ಹಾದಿ ಅಂತೆ. ಅದಕ್ಕೆ ಇಲ್ಲೇ ಇಳಿದುಕೊಂಡೆ" ಎಂದರು.

ಪರಿಮಳ ಕೈ ಬಾಯಿ ತಿರುವುತ್ತ— "ಅಲ್ಲ ಅತ್ತೆ ಶಾನುಭೋಗರಿಗೆ ಹತ್ತೆಕ್ಕರೆ ಹೊಲಗದ್ದೆ ಇದೆ. ಬೆಳೆ ಮಾರಿದ ಹಣ ಪುಟ್ಟಗಂಟು ಇಟ್ಟು ಕೊಂಡು ಇಲ್ಲಿ ಬಂದು ಗೌರಮ್ಮ ಆಟಾ ಆಡ್ತಾರೆ. ಆ ನರ್ಸಿಂಗ್ ಹೋಮ್ ನಮಗೆ, ನಿಮಗೆ ಈಡಾಗತ್ತೇನು ಅತ್ತೆ ? ಬರಿ ಕನ್‌ಸಲ್ಟೇಷನ್‌ಗೇ ಇನ್ನೂರು ರೂ. ಗಳಾಗತ್ತೆ... ." ಎಂದು ನುಡಿದಳು

"ಏನೋ ದುಡ್ಡು ಕಾಸಿನ ಖರ್ಚು ನಿಮ್ಮ ಮೇಲೆ ಹಾಕಲಮ್ಮ, ಏನೋ ಮಗನ ಮನೆ ಅಂತ ಬಂದಿದ್ದೀನಿ ಒಂದು ವಾರ ಇರ್ಲಿಕ್ಕೆ ಅವಕಾಶ ಕೊಡ್ತಿ ತಾನೇ ?" ಎಂದರು

ಪರಿಮಳ ಬಿಗುವಾಗಿ—"ಒಂದು ವಾರ ಇರ್ಲಿ ನನಗೆ ನಮ್ಮಿಬ್ಬರ ಹೊಟ್ಟೆಗಿನ ಕೆಲಸ ತೂಗಿಸ್ಲಿಕ್ಕೆ ಸಾಕಾಗಿ ಹೋಗತ್ತೆ ಹೊರಗೆ ಕಾಲೇಜಿನ ಕೆಲಸ ತೂಗಿಸಿ, ಮನೆ ಕೆಲಸ ತೂಗಿಸೋದೊಂದ್ರೇ ತಲೆನೋವು. ಆದಕ್ಕೆ ನನ್ನ ತಂಗಿ, ತಮ್ಮಂದಿರು ಯಾರೂ ಬಂದರೂ ಎರಡು ದಿನದ ಮೇಲೆ ಇರಬೇಡ್ರಪ್ಪಾಂತ ಹೇಳಿಬಿಡ್ತೇನೆ ಆ ಕಡೆಯ ನೆಂಟರು ಈ ಕಡೆಯ ನೆಂಟರೂ ಯಾರನ್ನೂ ನಾವು ಹಚ್ಚಿಕೊಂಡಿಲ್ಲ ಇಬ್ಬರೂ ದುಡಿದು, ಈ ಬೆಲೆ ಏರಿಕೆಯ ಕಾಲದಲ್ಲಿ ಹೇಗೋ ಬದುಕ್ತಿದ್ದೀವಿ" ಎಂದಳು

ಸೀತಮ್ಮ ಅಪರಾಧಿಯಂತೆ ಸುಮ್ಮನೆ ಕುಳಿತರು. "ಒಂದಿಷ್ಟು ತರಕಾರಿ ಚಟ್ನಿಪುಡಿ, ಸಂಡಿಗೆ, ಉಪ್ಪಿನಕಾಯಿ, ಏನು ತಂದಿಲ್ಲವೇನಮ್ಮ ಗೌರಮ್ಮ ಮಗನ ಮನೆಗೆ ಬಂದರೆ ಏನೇನು ತಂದಿರ್ತಾರೆ....ಹಳ್ಳಿಯಿಂದ" ಎಂದ.

"ಏನೋ ನನ್ನ ನೋವು ಹಿಂಸೆಯ....ನನಗೆ ನಾಕಾರು ತಿಂಗಳಿಂದ ಸಾಕಾಗಿದೆಯಪ್ಪ. ಈ ಸಲ ಏನು ಮಾಡಿಲ್ಲ. ಅಲ್ಲದೆ ಗೌರಮ್ಮ ಅನುಕೂಲಸ್ತರು ನಮಗೆ ಅವರಿಗೆ ಎಲ್ಲಿಂದೆಲ್ಲಿಗೆ ? ನಮಗೆ ಅವರಿವರು ಕೊಟ್ಟದ್ದೇ ಆಸ್ತಿ" ಎಂದರು

"ಸಾಕು....ಸಾಕು ಬಾಯಿಬಿಟ್ಟರೆ ಬಣ್ಣಗೇಡು. ನಾಳಿದ್ದು ನಮ್ಮ ಮ್ಯಾರೇಜ್ ಅನಿವರ್ಸರಿಗೆ ನಮ್ಮ ತಾಯಿ ಅಣ್ಣ-ಅತ್ತಿಗೆಯರು ಬರ್ತಾರೆ ಏನೋ ಅಪರೂಪಕ್ಕೆ ಬಂದ ಬೀಗಿತ್ತಿ ಅಂತ ಮಾತಾಡಿಸ್ತಾರೆ. ಆದರೆ ನಿಮ್ಮ ಈ ಬಡತನದ ಪುರಾಣ ಹೇಳಿ ಕೊಳ್ಳಬೇಡಿ. ಕೊಂಚ ಭೂಷಣವಾಗಿ

ಮಾತಾಡಿ" ಎಂದಳು. "ಆ ಫಂಕ್ಷನ್ ನಡೆದಾಗ ಇವರಲ್ಲಿರೋದು ಬೇಡಾ. ಎರಡು ದಿನ ಅಣ್ಣನ ಮನೆಗೆ ಕಳಿಸಿ ಬಿಡೋಣಾ....ಅವನು ಮಗನೇ ತಾನೆ ? ಎರಡು ಮೂರು ದಿನ ಅಲ್ಲಿರಲಿ... ನಾಲ್ಕು ದಿನ ಇಲ್ಲಿರಲಿ. ಒಂದು ವಾರ ಹಳ್ಳಿ ಬಿಟ್ಟಿದ್ದರೆ ಹೆಚ್ಚು. ತಾನೇ ಓಡಿ ಹೋಗ್ತಾಳೆ" ಎಂದು ತಾಯಿಯ ಎದುರೆ ಹೇಳಿದಾಗ ಗೌರಮ್ಮನಿಗೆ ಉಗುಳು ನುಂಗುವ ಹಾಗಾಯಿತು.

ಶಾರದ ಅಲ್ಲೇ ಇದ್ದ ಸುಧಾ ಪತ್ರಿಕೆ ತಿರುವಿ ಹಾಕುತ್ತ ಕುಳಿತಳು ಪರಿಮಳ ಸಿಡುಕಿ—

"ಏನು ಮಹಾ ದೊಡ್ಡ ಬಿ ಎ, ಎಂ ಎ, ಓದಿದೋರ ಹಾಗೆ ಪತ್ರಿಕೆ ಓದ್ತಾ ಕುಳಿತೆ, ಎದ್ದು ಸ್ವಲ್ಪ ಅಡಿಗೆಯ ಮನೆಗೆ ಬಾ....ಒಂದಿಷ್ಟು ಸಹಾಯ ಮಾಡು" ಎಂದಳು.

ಸೊಸೆಯ ದೌಷ್ಟ್ಯ ಕಂಡು ಏನಾದರು ಬಂದೀತೋ ಎನಿಸಿತು. ಮಗಳು ಪೆಚ್ಚು ಮುಖ ಹಾಕಿಕೊಂಡು ಅತ್ತಿಗೆಯನ್ನು ಹಿಂಬಾಲಿಸಿದಳು.

ಅವಳಿಗೆ ಚಪಾತಿ ಮಾಡಲು ಹಚ್ಚಿ ಹೊರಗೆ ಬಂದ ಪರಿಮಳ....ಸ್ವಲ್ಪ ಒಳಗೆ ಬನ್ನಿ ಮಾತಾಡೋದಿದೇ ಎಂದು ಪತಿಯನ್ನು ಕೋಣೆಗೆ ಕರೆದೊಯ್ದಳು.

"ಅನಂತನಿಗೆ ಫೋನ್ ಮಾಡ್ತೀನಿ. " ಎಂದ ಮಗ ಏನೇನೋ ಹೇಳುತ್ತಿದ್ದಾಗ ಆಕೆ ಅಧೀರರಾಗಿದ್ದರು. ಕೋಣೆಯಿಂದ ಏನೇನು ಮಾತಾಡುವರೋ ಎಂದು ಕಿವಿಗೊಟ್ಟು ಕಾದರು

"ಇಲ್ನೋಡಿ....ಅನಂತನಿಗೇನು ಫೋನ್‌ಗೀನ್ ಮಾಡ್ಬೇಡಿ. ಒಂದು ವಾರ ಅವರಿಲ್ಲೇ ಇರಲಿ" ಎಂದು ಸೊಸೆ ನುಡಿಯುತ್ತಿದ್ದದ್ದು ಕೇಳಿಸಿತು.

ಅನಂತರ ಏನೇನೋ ಮೆಲುದನಿಯ ಮಾತು ಕಥೆಗಳು,

"ಸ್ವೀಟ್‌ಮಾರ್ಟ್ಸ್ ಅಂಗಡಿಗೆ ಆರ್ಡರ' ಕೊಡೋದೇನು ಬೇಡಾ ಶಾರದಾ ಬಂದಿದ್ದಾಳಲ್ಲ" ಎಂಬ ಮಾತು ಮಧ್ಯೆ ಕೇಳಿಸಿತು. ಎಲ್ಲಾ ಅವಳದೆ ಮಾತು. ಗೋವಿಂದ ಮಧ್ಯೆ ಮಧ್ಯೆ "ನಿನ್ನ ಐಡಿಯ ತುಂಬ ಚೆನ್ನಾಗಿವೆ. ಒಮ್ಮೊಲೆ ಮನೆಯಿಂದ ಕಳಿಸಿದರು ಆ ಗೌರಮ್ಮ ಹೋಗಿ ನಾಗರಾಜನೆದುರು ದೂರಿದರೇ ಸರಿಕರ ಎದುರಿಗೆ ನಮಗೂ ಇನ್‌ಸಲ್ಟ್ ಆಗತ್ತೆ" ಎನ್ನುತ್ತಿದ್ದ. "ಅದಕ್ಕೆ ನಾನು ಹೇಳಿದ್ದಂಗೇ....ಹಿಗ್ಗೀಗೆ ಮಾಡಿ. ನಿಮ್ಮಣ್ಣನ ಮನೆ ಹತ್ತಿರ ಭೆಟ್ಟಿ ಮಾಡಬೇಡಿ. ಮನೆ ಹತ್ತಿರ ಹೋದರೆ ಮೂರು ಕಾಳು

ಉಪ್ಪು ಕೂಡ ಹುಟ್ಟೋದಿಲ್ಲ. ನಿಮ್ಮ ಅತ್ತಿಗೇ ಮೂರು ಕಾಸು ಸಹ ಕೊಡೋದಿಕ್ಕೆ ಬಿಡೋದಿಲ್ಲ" ಎಂದಳು. ಸೀತಮ್ಮನಿಗೆ ಹೆಚ್ಚು ವಿಷಯಗಳು ಅರ್ಥವಾಗಲಿಲ್ಲ. ಒಟ್ಟಿನಲ್ಲಿ ಇಲ್ಲಿರಲಿಕ್ಕೆ ಒಪ್ಪಿದ್ದಾಳೆ. ಪಟ್ಟಣದ ಡಾಕ್ಟರಿಗೆ ತೋರಿಸಬೇಕೆಂಬ ಬಯಕೆಯಂತೂ ಈಡೇರುತ್ತಿದೆ ...ಸಾಕು ಎಂದು ಕೊಂಡರು.

ಆದರೆ ಪರಿಮಳ ಮಹಾ ಜಾಣೆ....ಮಹಾಜಿಪುಣೆ. ಈಗ ನಿಷ್ಠೂರ ವಾಗಿ ಅತ್ತೆ, ನಾದಿನಿಯನ್ನು ಓಡಿಸಿದರೇ ಅದು ಗೌರಮ್ಮನ ಮೂಲಕ ಅವರ ಮಗ ನಾಗರಾಜ, ಅವನ ಹೆಂಡತಿ ವತ್ಸಲ ಅವರಿಗೆ ಮುಟ್ಟುತ್ತವೆ. ತಮ್ಮ ಕಾಲೇಜಿನಲ್ಲೇ ಅವರು ಲೆಕ್ಚರರ್ ಆಗಿದ್ದಾರೆ. ಅತ್ತೇನ್ನ ಒಂದು ವಾರ ಕೂಡ ಇಟ್ಟುಕೊಳ್ಳಲಿಲ್ಲ ಎಂದು ಜನರ ಬಾಯಲ್ಲಿ ನಗೆಪಾಟಲಾಗುವುದು ಬೇಡಾ ಎನಿಸಿತು. ಸಂಜೆ ಗೌರಮ್ಮ ಬಂದಾಗ ಬಾಯ್ತುಂಬಾ ಮಾತಾಡಿ—

"ಪಾಪಾ ಅತ್ತೇನ್ನ ನರ್ಸಿಂಗ್ ಹೋಮಿಗೆ ಕರೆದುಕೊಂಡು ಹೋಗೋ ಣಾಂದ್ರೆ....ನಮ್ಮ ಸ್ಟೆಟೆಂದೇನೊ ತಕರಾರು ಅಂತ ಇವರು ಆ ಹೊರಗಿನ ಸುತ್ತಾಟದಲ್ಲೇ ಇದ್ದಾರ ಮನೆಗೆ ಯಾವಾಗ ಬರ್‍ತಾರೋ...ದೇವರಿಗೆ ಗೊತ್ತು. ನನಗೆ ಈಗ ಟ್ಯುಟೋರಿಯಲ್‌ಗೆ ರಜ ತಗೊಳ್ಳೋ ಹಾಗೆ ಇಲ್ಲ ಸ್ಟೂಡೆಂಟ್ಸ್‌ಗೆ ಎಕ್ಸಾಂ ಟೈಮ್... " ಎಂದು ರಾಗ ಹಾಡಿದಳು

"ಕರ್ಕೊಂಡು ಹೋಗೋದು ನಾನೇ ಕರ್ಕೊಂಡು ಹೋಗ್ತೀನಮ್ಮ ಒಂದಿಷ್ಟು ಹಣ ಕೊಟ್ಟು ಕಳಿಸು. ನರ್ಸಿಂಗ್ ಹೋಮ್ ಅಂದ ಮೇಲೆ ಖರ್ಚಿರತ್ತೆ" ಎಂದರು "ಸರಿ ಅದಂತೂ ಗೊತ್ತಿರೋದೇ...." ಎಂದು ಬಿಗು ವಾಗಿ ಹೇಳಿ ಅತ್ತೆಯನ್ನು ತನ್ನ ಕೋಣೆಗೆ ಕರೆದು—"ನೀವು ಅಲ್ಲಿಂದ ಬರ್‍ತಾ ದುಡ್ಡುಗಿಡ್ಡು ಏನು ತಂದಿಲ್ವಾ ಅತ್ತೆ ?" ಎಂದಳು

"ಚಾರ್ಜ್ ಬಿಟ್ಟು ಇನ್ನೂರು ರೂ ತಂದಿದ್ದೀನಮ್ಮ" ಎಂದರು ಕೋಪದಿಂದ ನೂರು ರೂ. ತೆಗೆದು ಅವರ ಕೈಗಿತ್ತು "ಇದನ್ನ ಇಟ್ಕೊಂಡಿರಿ" ಎಂದಳು.

ಗೌರಮ್ಮನ ಜೊತೆ ಅಕೆ ನಡೆದುಕೊಂಡೇ ಹೋದರು. ದಾರಿಯಲ್ಲಿ ಸೀತಮ್ಮ ನೊಂದುಕೊಂಡು—

"ನಾನು ಬಂದಿರೋದು ಅವರಿಗೆ ಒಂದು ಚೂರು ಇಷ್ಟವಿಲ್ಲ. ಅನಂತನ ಮನೆಗೆ ಹೋಗು ಅಂತ ಗೋವಿಂದ ಅಂದ. ಇವಳೇ ಸಿಡುಕಿಕೊಂಡು ಒಂದು ವಾರ ಇರಲಿ" ಅಂತ ಏನೇನೋ ಹೇಳಿದಳು.

ಎಂದು ಹೇಳಿಕೊಂಡು ಅತ್ತರು. ಗೌರಮ್ಮ ಬುದ್ಧಿ ಹೇಳಿ "ಮದುವೆ ಆದ ಮೇಲೆ ಗಂಡುಮಕ್ಕಳ ಹಣೆಬರಹಾನೆ ಅಷ್ಟು ನಮ್ಮ ನಾಗರಾಜ, ವತ್ಸಲ ಏನು ? ನಾನು ತಂದ ಸಾಮಾನಿನ ಮೇಲೆ ಕಣ್ಣು. ಅದು ಕರಗೋ ವರೆಗೆ ಅವರ ಕೃತಕ ಪ್ರೀತಿ, ನಾಗೂನ್ನ ಇವರ ಮನೇಲಿ ಓದಿಸೋದಕ್ಕೆ ಬಿಟ್ಟಾಗಲೂ ಹೊರಗಿನೋರಿಗೆ ಏನು ಕೊಡ್ತಿದ್ದೆವೋ ಅದಕ್ಕೆ ಎರಡರಷ್ಟು ಕೊಟ್ಟೆವಿ ನಮ್ಮ ಕೈ ಕಾಲು ಗಟ್ಟಿಯಾಗಿರಬೇಕು. ನಮ್ಮ ಕೈಯಲ್ಲಿ ನಮ್ಮ ದುಡ್ಡಿರಬೇಕು. ಹಾಗಿದ್ರೇ ಇವರುಗಳ ಕೃತಕ ಪ್ರೀತಿ" ಎಂದು ನಿಟ್ಟುಸಿರುಬಿಟ್ಟರು

ನರ್ಸಿಂಗ್ ಹೋಮಲ್ಲಿ ಪರೀಕ್ಷೆ ಮಾಡಿ, ಕೆಲವು ಔಷಧಿ ಬರೆದು ಕೊಟ್ಟರು. ನಾಳೇ ಬಂದು ಎಕ್ಸರೇ ಹಾಗು ಬ್ಲಡ್ ಟೆಸ್ಟ್ ಮಾಡಿಕೊಳ್ಳ ಬೇಕೆಂದು ಹೇಳಿದರು

ಬರ್ತಾ ದಾರಿಯಲ್ಲಿ ಮಗನ ಮನೆಗೆ ಕರೆದುಕೊಂಡು ಬಂದರು.

ವತ್ಸಲ ನಗುತ್ತ ಸ್ವಾಗತಿಸಿ "ಬನ್ನಿ ಏನು ಹೇಳಿದರು ? ಡಾಕ್ಟರ್ ?" ಎಂದು ವಿಚಾರಿಸಿಕೊಂಡಳು.

"ಹಾಲು ತಗೊಳ್ಳಿ, ನೀವು ಕಾಫಿ ಗೀಫಿ ಕುಡೀತಿರೊ ಇಲ್ಲವೋ ?" ಎಂದು ಲೋಟದ ತುಂಬ ಹಾಲು ನೀಡಿದಳು ಎರಡು ಗಂಟೆಗೆ ವೈಸೂರಿಗೆ ಬಂದಾಗಿನಿಂದ ಆ ಸೊಸೆ ಎಂಬ ಪ್ರಾಣಿ ಅವರಿಗೆ ಒಂದು ಹನಿ ನೀರು ಸಹ ಕೊಟ್ಟಿರಲಿಲ್ಲ. ಆಕೆಗೆ ಗಂಟಲು ಒಣಗಿತ್ತು. ಹೆಚ್ಚು ಉಪಚಾರ ಹೇಳಿಸಿ ಕೊಳ್ಳದ ಹಾಲು ಗಟಗಟ ಕುಡಿದರು. ಒಂದಿಷ್ಟು ಮೊಸರವಲಕ್ಕಿ ತಿಂದು ಹೋಗಿ ಎಂದರು "ಬೇಡಿ ಗೌರಮ್ಮ. ಮೊಸರವಲಕ್ಕಿ ತಿಂದರೆ ಕೆಮ್ಮು ಜಾಸ್ತಿ ಆಗತ್ತೆ" ಎಂದರು

"ಅದು ನಿಜವೇ... ? ನಾಳೆ ಇಲ್ಲೇ ಊಟ ಮಾಡಿ. ಬಿಸಿಬಿಸಿ ಸಾರು ಅನ್ನ ಮಾಡಿರ್‍ತೀನಿ" ಬೆಳಿಗ್ಗೆ ಎಂಟುಗಂಟೆಗೆ ನರ್ಸಿಂಗ್ ಹೋಮ್‌ಗೆ ಹೋಗೋಣ. ಅಲ್ಲಿಂದ ಬರ್ತಾ ಇಲ್ಲಿ ಊಟಾ ಮಾಡಿಯೇ ಮನೆಗೆ ಹೋಗಿ" ಎಂದಳು.

ಕುಂಕುಮ ಬಾಳೆ ಹಣ್ಣಿನ ಎಲೆ ಅಡಿಕೆ ನೀಡಿ—"ಬನ್ನಿ....ನಿಮ್ಮ ನೆಯವರಿಗೆ ನಾನು ಬಿಟ್ಟು ಬರ್ತೀನಿ. ನಿಮಗೆ ಈ ಊರು ಹೊಸದು ನಾನಾದರೂ ನಮ್ಮ ನಾಗೂ....ಓದ್ತಾ ಇದ್ದಾಗ ಒಂದಲ್ಲ ನಾಲ್ಕು ಸಲ ಇಲ್ಲಿಗೆ ಬಂದಿದೆ" ಎಂದು ಗೌರಮ್ಮನೇ ಅವರನ್ನು ಗೋವಿಂದನ ಮನೆಯವರಿಗೆ ಕರೆದುಕೊಂಡು ಬಂದರು,

ದಾರಿಯಲ್ಲಿ ಸೀತಮ್ಮ ಸಂಕೋಚದಿಂದ "ನೋಡಿ ಮಗನ ಮನೆ ಅಂತ ನಿಮಗೆ ಎಷ್ಟು ಸದರ ಇದೆ ಹಾಲು ಕೊಟ್ಟಳು ನಿಮ್ಮ ಸೊಸೆ, ನಾಳೆ ಊಟಕ್ಕೆ ಬಾ ಅಂತ ಬಾಯ್ತುಂಬಾ ಸೊಸೆಯ ಎದುರಿಗೆ ಕರೆದಿರಿ. ನನಗಾಗಿ ನೀವು ನರ್ಸಿಂಗ್ ಹೋಂಗೆ ಸುತ್ತಾಡ್ತಿದ್ದೀರಿ. ಆದರೆ ನಿಮಗೆ ಆ ಮನೇಲಿ ಒಂದು ಹನಿ ನೀರು ಕೊಡೋ ಸೌಲಭ್ಯ ನನಗೆ ಇಲ್ಲ" ಎಂದರು.

"ಇರ್ಲಿ ಬಿಡಿ. ಒಂದೆಂಟು ದಿನ ಆರೋಗ್ಯಕ್ಕಾಗಿ ಆ ತಾಟಕೀನ್ನ ಸಹಿಸಿಕೊಂಡುಬಿಡಿ. ಆಮೇಲೆ ನಿಮ್ಮನೇಲಿ ನನಗೆ ಹೋಳಿಗೆ ಪಾಯಿಸದ ಅಡಿಗೆ ಮಾಡಿ ಊಟಕ್ಕೆ ಹಾಕುವಿರಂತೆ. ಹಳ್ಳೀಲಿ ನಿಮ್ಮ ಮನೆ, ನಿಮ್ಮ ಕೈ—ನಿಮ್ಮ ಬಾಯಿ ..." ಎಂದು ಸಮಾಧಾನ ಹೇಳಿದಳು.

ಮನೆಗೆ ಬರುವ ಹೊತ್ತಿಗೆ ಗೋವಿಂದನೂ ಬಂದಿದ್ದ. ಗೌರಮ್ಮ ನರ್ಸಿಂಗ್ ಹೋಮ್ ವಿಷಯವೆಲ್ಲ ವಿವರಿಸಿ ಇವತ್ತು ..ಪರೀಕ್ಷೆ, ಹಾಗು ಔಷಧಕ್ಕೆ ಇನ್ನೂರೈವತ್ತು ರೂ ಗಳಾಯಿತು. ನಾಳೆ ಒಂದು ಇನ್ನೂರು ರೂ ಗಳು ಕೊಟ್ಟು ಕಳಿಸಿರಪ್ಪಾ....ಎಕ್ಸರೆ, ಬ್ಲಡ್‌ಟೆಸ್ಟ್ ಇತ್ಯಾದಿ ಪರೀಕ್ಷೆಗಳಿರತ್ತೆ" ಎಂದು ಹೇಳಿದರು.

ಪರಿಮಳ ಗಡುಸಾಗಿ "ಆಗಲಿ, ನಾಳೆವರಿಗೆ ನಮಗೆ ವಿರಾಮವಿದೆಯಲ್ಲ. ಮಡೀಲಿ ಬಿಸಿಬಿಸಿ ಅಡುಗೆ ಮಾಡಿದ್ದೀನಿ, ನೀವು ಊಟಾ ಮಾಡಿ ಅತ್ತೆ" ಎಂದು ಆಜ್ಞಾಪಿಸಿದಳು ಗೌರಮ್ಮ ಎದ್ದು "ಬರ್ತೀನಿ—ನಾಳೆ ಎಂಟು ಗಂಟೆಗೆ ನಾನು ಬರ್ತೀನಿ" ಎಂದು ಎದ್ದು ಹೋದರು ಸೀತಮ್ಮ ಹೆದರುತ್ತ,

"ಕುಂಕುಮ ಕೊಡಮ್ಮ ಹಿರಿಮುತ್ತೈದೆ" ಎಂದರು. ಪರಿಮಳ ಒಳಗೆ ಹೋಗಿ ಕುಂಕುಮ ತಂದಿತ್ತಳು

ಗೌರಮ್ಮ ಹೊರಟ ಮೇಲೆ ಬಾಗಿಲು ಹಾಕಿ "ಸ್ವಲ್ಪ ಹೊತ್ತು ಬಾಯಿ ಮುಚ್ಚಿಕೊಂಡು ಇರಲಿಕ್ಕಾಗಲ್ವಾ ಅತ್ತೆ, ಹಳ್ಳಿ ಹುಡುಗಿಗೆ ಹೇಳಿಕೊಡೋ ಹಾಗೆ ಕುಂಕುಮ ಕೊಡು .. ಇದೆಲ್ಲಾ ಹೇಳಬೇಡಿ. ನಮ್ಮ ನೆಗೆ ಬಂದೋರಿಗೆ

ಹೇಗೆ ನೋಡ್ಕೋಬೇಕೂಂತ ನನಗೆ ಗೊತ್ತಿದೆ. ನಾಲ್ಕು ವರ್ಷ ಆಯ್ತು ನಾನು ಸಂಸಾರ ಹೂಡಿ, ನೀವೇ ಎದುರಿಗೆ ಇದ್ದು ಎಲ್ಲ ಹೇಳಿಕೊಡ್ತಾ ಇದ್ದಿ ರೇನು ?" ಎಂದಳು

"ನಾನೇನು ಆಡಬಾರದ್ದು ಆಡಿದೆನಮ್ಮ. ಆಕೆ ಹಿರಿಮುತ್ತೈದೆ ಕುಂಕುಮ ಕೊಡು ಅಂದೆ" ಎಂದರು.

"ಆಕೆ ಹಿರಿಮುತ್ತೈದೆ, ಅರಶಿನ ಕುಂಕುಮ ಕೊಡಬೇಕು, ಎಲ್ಲಾ ನನಗೆ ಗೊತ್ತಿರತ್ತೆ ನನಗೆ ಹಾಗೆ ನಾಳೆಯಿಂದ ಕಾರಣ ಇಲ್ಲದೆ ಆರ್ಡರ್ ಮಾಡಬೇಡಿ" ಎಂದಳು ತಾಯಿಯ ಕಣ್ಣಲ್ಲಿ ನೀರೂರಿದರೂ ಗೋವಿಂದ ಜೋರು ಮಾಡಿ "ನೋಡಮ್ಮ ಅವಳು ಶಾರದಾ ಹಾಗೆ ಹಳ್ಳಿ ಹುಡುಗಿ ಅಲ್ಲ ನೀನು ಹೇಳಿ ಹೇಳಿ ಕೆಲಸಾ ಮಾಡಿಸಬೇಡಾ ಅವಳು ಎಂ. ಎ ಓದಿದ್ದಾಳೆ, ಕಾಲೇಜಲ್ಲಿ ನೂರಾರು ಹುಡುಗರಿಗೆ ಪಾಠ ಹೇಳ್ತಾಳೆ" ಎಂದ.

"ನೋಡಿ, ಕಾಲು ತೊಳೆದುಕೊಂಡು ಸೀರೆ ಬದಲಾಯಿಸಿ ಅಡಿಗೆಯ ಮನೆಗೆ ಹೋಗಿ. ಮಡೀಲಿ ಅಡಿಗೆ ಮಾಡಿಟ್ಟಿದ್ದೀನಿ ಒಲೆ ಮೇಲಿವೆ, ನೀವೆ ಬಡಿಸಿಕೊಂಡು ಊಟಾ ಮಾಡಿ. ಶಾರದನ್ನೂ ನಿಮ್ಮ ಜೊತೆಗೆ ಊಟಕ್ಕೆ ಕೂಡಿಸಿಕೊಳ್ಳಿ, ನನಗೆ ತೀರ ಸ್ವಲ್ಪ ಒಬ್ಬರಿಗೇ ಆಗೋಷ್ಟು ಅಡಿಗೆ ಮಾಡ್ಲಿಕ್ಕೆ ಬರಲ್ಲ ನೀವು . ಶಾರದ ಇಬ್ಬರೂ ಊಟಾ ಮಾಡಿಕೊಳ್ಳಿ" ಎಂದಳು.

ಗೋವಿಂದ ಕೊಂಚ ಅಚ್ಚರಿಯಿಂದ "ಅಮ್ಮನಿಗೆ ಮಡೀಲಿ ನೀನು ಅಡಿಗೆ ಮಾಡಿದೆಯಾ ?" ಎಂದ "ಹೌದಪ್ಪ....ಆ ಸಿಲ್ಕ್‌ಸೀರೆ ಉಟ್ಟು ಕೊಂಡು ಅಡಿಗೆ ಮಾಡಿದೆ ನಾಳೆಗೂ ಆ ಸೀರೇನೆ ತಿರುಗಾ ಒಗೆದು ಮಡಿ ಮೇಲೆ ಹಾಕ್ಕೊಂಡಿದ್ದೀನಿ ನಮ್ಮ ಕಡೆ ಅಡಿಗೆ ಶಾರದ ಮಾಡಿದ್ದಾಳೆ ಬನ್ನಿ ಡೈನಿಂಗ್ ಟೇಬಲ್ ಮೇಲೆ ನಮ್ಮ ಅಡಿಗೆ ಇದೆ" ಎಂದು ಗಂಡನನ್ನು ಕರೆದುಕೊಂಡು ಹೋದಳು

ಅಡಿಗೆಯ ಮನೆಯ ಬಳಿ ಒಂದು ಸ್ಟೌವ್, ಆ ಸ್ಟೌವಿನ ಬಳಿ ಎರಡು ಅಲ್ಯುಮಿನಿಯಂ ಬಟ್ಟಲು ಎರಡು ಸ್ಟೀಲ್ ತಟ್ಟೆಗಳು ಬಿಸಿಬಿಸಿ ನೀರು ಸಾರು... ಅನ್ನ... ಎರಡು ಟೊಮೇಟೊ ಹಿಂಡಿ ಒಂದಿಷ್ಟು ಉಪ್ಪು ಕಾರ ಹಾಕಿ ಸಾರು ಮಾಡಿದ್ದಳು ಒಗ್ಗರಣೆ ಇಲ್ಲ, ಬೇಳೆ ಇಲ್ಲ. ಉಪ್ಪು ಕಾರ ಸಹ ಧಂಡಿಯಾಗಿ ಹಾಕಿರಲಿಲ್ಲ ತಾಯಿ ಮಗಳು ಅದನ್ನೇ ಉಂಡರು.

ಒಳಕೋಣೆಯಲ್ಲಿ ಟಿ ವಿ ಎದುರಿಗೆ ಡೈನಿಂಗ್ ಟೇಬಲ್ ಹಾಕಿಕೊಂಡು

ದ್ದರು. ಟಿ.ವಿ. ನೋಡಿಕೊಂಡು ಗಂಡ ಹೆಂಡತಿ ಊಟ ಮಾಡಿದರು.

ಇತ್ತ ಅಡಿಗೆ ಮನೆ ಸಾಕಷ್ಟು ದೂರವಿದ್ದುದರಿಂದ ಸೀತಮ್ಮ ಪಿಸು ಮಾತಿನಲ್ಲಿ ಶಾರದಳನ್ನು ಕೇಳಿದರು "ಬಂದಾಗಿಂದ ಅಡಿಗೆ ಮನೆ ಸೇರಿದ್ದಿ. ಏನೇನು ಮಾಡಿದ್ದಿ ?" ಎಂದರು. ಶಾರದ ಉತ್ತರಿಸಿ—

"ಪೂರಿ ಮಾಡೊಂದಳು. ನಾಳೆಗೆ ಚಪಾತಿ ಮಾಡಿ ಫ್ರಿಜಲ್ಲಿ ಇಡಿಸಿ ದಳು ಇವತ್ತಿಗೆ ಆಲೂಗಡ್ಡೆ ಪಲ್ಯ, ಕೊಬ್ಬರಿ ಚಟ್ನಿ ಮಾಡಿಸಿದಳು. ಕ್ಯಾರೆಟ್‌ದು ಕೊಸಂಬ್ರಿ ಮಾಡಿಸಿದಳು. ನಾಳೆ ಏನೋ ಮೈಸೂರು ಪಾಕು ಮಾಡೊಂತ ಅಂದಿದ್ದಾಳೆ" ಎಂದಳು.

"ಪಾಪಿ....ಮಹಾ ಜಿಪುಣಿ, ಸಾರಿಗೆ ಉಪ್ಪು ಸಹ ಸರಿಯಾಗಿ ಹಾಕಿಲ್ಲ. ಒಂದು ಉಪ್ಪು ಕೇಳಲಿಕ್ಕೆ ಸಹ ಭಯ. ಹಾಗೆ ಹದದಲ್ಲಿಟ್ಟಿದ್ದಾಳೆ" ಎಂದು ಬೈದರು "ಇಲ್ಲಿ ಡಾಕ್ಟರ್ ಏನಂದರಮ್ಮ? ಪರೀಕ್ಷೆ ಹೇಗೆ ಮಾಡಿದರು ?" ಎಂದು ಶಾರದ ತಾಯಿಯನ್ನು ನರ್ಸಿಂಗ್ ಹೋಮಿನ ಬಗ್ಗೆ ವಿಚಾರಿಸಿದಳು.

"ಏನೋ ಪರೀಕ್ಷೆ ಅಂತು ಚೆನ್ನಾಗಿ ಮಾಡಿದರಮ್ಮ. ಔಷಧಿಗಳು ಕೊಟ್ಟಿದ್ದಾರೆ. ಇವತ್ತೇ ಇನ್ನೂರೈವತ್ತು ಆಯಿತು. ನಾಳೆ ನಿಜವಾಗಿ ದುಡ್ಡು ಕೊಡ್ತಾಳಾ ?" ಎಂದರು.

ಬೆಳಗ್ಗೆ ಎಂಟು ಗಂಟೆಗೆ ಸ್ನಾನ ಮಾಡಿ ಕಾಫಿ ಕೊಟ್ಟಳು. "ಬನ್ನಿ.... ದುಡ್ಡು ಕೊಡ್ತೀನಿ" ಎಂದು ಕೋಣೆಗೆ ಕರೆದೊಯ್ದು ಇನ್ನೂರು ರೂ. ಕೊಟ್ಟಳು.

"ನೋಡಿ ನಿನ್ನೆ ನೂರು ರೂ. ಕೊಟ್ಟೆ. ಈ ದಿನ ಇನ್ನೂರು, ನಾವಂತು ದುಡ್ಡಿನ ಗಿಡ ಹಾಕಿಲ್ಲ ಎಂಟಾನೆಂಟು ದಿನ ಇಟ್ಕೊಂಡು ಊಟಾ ಹಾಕೋದು ಅಲ್ಲದೆ....ಈ ಥರ ಹಣ ತೆರೋಕ್ಕೆ ಆಗಲ್ಲ. ಲೋಕದ ಎದುರಿಗೆ ನಮ್ಮನ್ನ ಕೆಟ್ಟೋರು ಮಾಡ್ಬೇಡಿ. ಏನೇನು ಪರೀಕ್ಷೆಯೋ ಇವತ್ತೊಂದು ದಿನ ಮಾಡಿಸಿ ಕೊಂಡು ಬನ್ನಿ. ತಿರುಗ ಆ ಗೌರಮ್ಮ ಏನಾದರೂ ಕರೆದರೆ ನನಗೆ ಈ ನರ್ಸಿಂಗ್ ಹೋಮಿನ ಸಹವಾಸ ಸಾಕಾಗಿದೆಮ್ಮ. ಈ ಮುಪ್ಪಿನಲ್ಲಿ ಈ ಕೆಮ್ಮು ಗೂರಲು ಇದ್ದದ್ದೆ. ಎಂಟು ದಿನ ಇರೋ ಔಷಧ ತೆಗೆದುಕೊಂಡು ಊರಿಗೆ ಹೋಗ್ತೀನಿ' ಅನ್ನಿ ಅಳೆ ಕುಣಿಸಿದಂಗೆಲ್ಲ ನೀವು ಕುಣಿಯಬೇಡಿ" ಎಂದು ನಿಷ್ಠೂರವಾಗಿ ಹೇಳಿದಳು.

ಅವಳ ಕಣ್ಣಲ್ಲಿ ತುಂಬಿದ ರೋಷದ ಹೊಗೆಯನ್ನು ನೋಡಿದ ಮೇಲೆ

ಸೀತಮ್ಮನವರಿಗೆ ಏಕಾದರೂ ಈ ಮನೆಗೆ ಬಂದೆನಪ್ಪಾ... ?" ಎನಿಸಿತು.

ಆ ದಿನವೂ ಗೌರಮ್ಮ ಬಂದು ಕರೆದೊಯ್ದರು. ನರ್ಸಿಂಗ್ ಹೋಮಿಗೆ ಹೋಗಿ ಎಕ್ಸರೆ, ಬ್ಲಡ್ ಟೆಸ್ಟ್ ಎಲ್ಲಾ ಮಾಡಿಸಿಕೊಂಡರು. ನಾಲ್ಕು ದಿನದ ನಂತರ ಬರಲು ತಿಳಿಸಿದರು. ಇಬ್ಬರು ಗೌರಮ್ಮನ ಮಗನ ಮನೆಗೆ ಬಂದರು. ಆ ದಿನವೂ ಮುನ್ನೂರು ರೂ ಖರ್ಚಾಗಿತ್ತು. ಮಗ–ಸೊಸೆ ಕಾಲೇಜಿಗೆ ಹೋಗಿದ್ದರು· ಇಡಿ ಮನೆಗೆ ಗೌರಮ್ಮ-ಸೀತಮ್ಮ ಇಬ್ಬರೆ ಸೀತಮ್ಮ ದುಃಖ ತಡಿಯದೇ ಬಿಕ್ಕಿಬಿಕ್ಕಿ ಅತ್ತರು

"ಒಂದೇ ದಿನಕ್ಕೆ ಏಕಾದರೂ ಬಂದೆನೋ ಅನಿಸಿದೆ ಗೌರಮ್ಮ, ನಿನ್ನೆ ರಾತ್ರಿ ಉಪ್ಪು ಕಾರ ಸಹ ಹಾಕದೆ ನೀರಿಗೆ ಎರಡು ಟಮೋಟೊ ಹಾಕಿ, ನೀರು ಸಾರನ್ನ ಹಾಗೆ ಮಾಡಿದಳು ಶಾರದನ ಕೈಯಲ್ಲಿ ಬಗೆಬಗೆಯಾಗಿ ಅಡಿಗೆ ಮಾಡಿಸಿ, ಗಂಡಾ ಹೆಂಡತಿ ತಾವಿಬ್ಬರೇ ತಿಂದರು ಪ್ರಪಂಚದಲ್ಲಿ ಇಷ್ಟು ಸ್ವಾರ್ಥಿಗಳು ಇರ್‍ತಾರೇನ್ರಿ ? ಈ ದಿನ ಇನ್ನೂರು ರೂ. ಗಳು ಕೊಡುವಾಗ ಏನಂದಳು ಗೊತ್ತಾ ?" ಎಂದು ಬಿಕ್ಕಿಬಿಕ್ಕಿ ಅಳುತ್ತಾ ಎಲ್ಲ ಹೇಳಿದಳು. ಗೌರಮ್ಮ ನೆಟಿಕೆ ಮುರಿದು—

"ನೀವೇನು ಚಿಂತೆ ಮಾಡಬೇಡಿ. ಒಂದೈನೂರು ರೂ. ಗಳು ನಾನು ತಂದಿದ್ದೀನಿ. ಅವಳು ತೀರ ಕೆಟ್ಟತನ ತೋರಿಸಿದ್ರೆ ನೀವು ಇಲ್ಲಿ ಬನ್ನಿ ಒಂದು ಹದಿನೈದುದಿನ ಇಲ್ಲಿ ಇಟ್ಕೊಂಡು ನಿಮಗೆ ಔಷಧಿ ಚಿಕಿತ್ಸೆ ನಾನು ಮಾಡಿಸ್ತೀನಿ" ಎಂದರು

ನಾಲ್ಕು ಗಂಟೆಗೆ ಬಂದಳು ವತ್ಸಲ. ಗೌರಮ್ಮ, ಸೀತಮ್ಮ ಕಾಫಿ ಕುಡಿಯುತ್ತಿದ್ದರು.

"ನಿಮ್ಮ ಸೊಸೆ ಇವತ್ತು ಮಧ್ಯಾಹ್ನ ದಿಗ್ವಿಜಯಕ್ಕೆ ಹೊರಟಿದ್ದಳು ಕಣ್ರಿ" ಎಂದು ನಕ್ಕಳು.

ಸೀತಮ್ಮ ಅರ್ಥವಾಗದೆ "ಏನಮ್ಮ ವಿಷಯ ?" ಎಂದರು. ವತ್ಸಲ ವಿವರಿಸುತ್ತ—

"ನೀವು ಬಂದುದಕ್ಕೆ ಸಿಕ್ಕಾಪಟ್ಟೆ ಖರ್ಚು ವೆಚ್ಚ ಆಗ್ತಿದೆಯಂತೆ ಅದಕ್ಕೆ ಗಂಡ ಹೆಂಡತಿ ನಿಮ್ಮ ದೊಡ್ಡ ಮಗ ಕೆಲಸ ಮಾಡೋ ಸ್ಕೂಲ್ ಹತ್ತಿರಹೋಗಿ ಗಂಟೆಗಟ್ಟಲೆ ಆತನ ಹತ್ತಿರ ರಂಪ ಕೊರೆದರು.

· "ನರ್ಸಿಂಗ್ ಹೋಮ್ ಹತ್ತಿರವಿದೆ ಅನ್ನೋ ಕಾರಣಕ್ಕೆ ನಮ್ಮನೇಲಿ

ಇಟ್ಕೋಳೋದು ಅಲ್ಲದೆ ಔಷಧ ಪಥ್ಯದ ಖರ್ಚು ನಾವ್ಯೊಬ್ಬರೆ ಹೇಗೆ ಕೊಡ ಬೇಕು ಅಂತ ವಾದ. ಕಡೆಗೆ ನಿಮ್ಮ ದೊಡ್ಡ ಮಗ ಅಲ್ಲೇ ಶಾಲೆಯ ಫಂಡಲ್ಲಿ ಸಾಲ ಮಾಡಿ ಐನೂರು ರೂ. ಕೊಟ್ಟರಂತೆ" ಎಂದಳು.

"ಏನೋ ಅವಳ ಹಣೆ ಬರಹ ! ಮಹಾ ಜಿಪುಣಿ ಇದ್ದಾಳೆ, ಬಂದಿ ದ್ದಾಯ್ತು, ಅನುಭವಿಸಿ ಬಿಡೋಣಾ" ಎಂದಳು.

ಆ ದಿನ ಸಂಜೆಯೂ, ಗೌರಮ್ಮ-ಸೀತಮ್ಮ ಇಬ್ಬರೇ ಅಲ್ಲಿಗೆ ಬಂದರು. ಪರಿಮಳ ಸ್ವಾಗತಿಸಿ "ಬನ್ನಿ ಮಡಿ ಉಟ್ಕೊಂಡು ಇನ್ನೇನು ಆತೆಗೆ ಮಾಡ ಬೇಕೊಂತಿದ್ದೆ...." ಎಂದು ಸ್ವಾಗತಿಸಿದಳು.

ಸ್ವಲ್ಪ ಹೊತ್ತು ಇದ್ದ ಗೌರಮ್ಮ ಹೊರಟರು

"ಅತ್ತೆ ನೀವು ಆ ಕಡೆ ಉಗ್ರಾಣದ ರೂಂ ಹಾಗಿರೋ ನಮ್ಮ ಆ ಸ್ಟೋರ್ ರೂಂ ನಲ್ಲಿ ಮಲಗಿ ಬಿಡಿ. ನಾನು ಎಬ್ಬಿಸಿದಾಗ ಬಂದು ಊಟ ಮಾಡಿ" ಎಂದು ಸಿಡುಕಿದಳು

"ಸ್ವಲ್ಪ ಬಚ್ಚಲ ಮನೆಗೆ ಹೋಗ್ಬೇಕಮ್ಮ" ಎಂದು ಸಂಕೋಚದಿಂದ ಕೇಳಿದರು.

"ಹೋಗಿ, ಪ್ರೈಮರಿ ಸ್ಕೂಲ್ ಮಕ್ಕಳ ಹಾಗೆ ಒಂದಕ್ಕೆ, ಎರಡಕ್ಕೆ ಸಹ ಕೇಳಬೇಕಾ ? ನಿಮಗೆ ಅವಸರ ಆದಾಗ ಉಗ್ರಾಣದಿಂದ ಎದ್ದು ಬಂದು ಬಾತ್ ರೂಂ ಲೆಟ್ರಿನ್ ಗೆ ಹೋಗಿ ಬನ್ನಿ. ಸಾಧ್ಯವಾದಷ್ಟು ಆ ರೂಂನಲ್ಲಿ ಮಲಗಿರಿ. ಔಷಧ ತಗೊಂಡಮೇಲೆ ವಿಶ್ರಾಂತಿಯೂ ತಗೋಬೇಕು ಒಂದು ವಾರ ಆ ಹಳ್ಳಿಯ ಮನೆ ಕೆಲಸ ಮರೆತು, ಹಾಯಾಗಿ ಮಾಡಿದ್ದು ಉಂಡು ತೆಪ್ಪಗಿರಿ. ಕೆಮ್ಮು ತಾನೇ ಓಡಿ ಹೋಗತ್ತೇ" ಎಂದು ತಾಕೀತು ಮಾಡಿದಳು.

ಒಂದು ರೀತಿ ಗೃಹಬಂಧನದಂತಹ ಚಿತ್ರಹಿಂಸೆ ಅನುಭವಿಸಿದರು ಆಕೆ. ಆ ನಾಲ್ಕು ದಿನ ಮಡಿ ಅಡಿಗೆ ಬೇಳೆ ಇಲ್ಲದ ಆ ಟಮೋಟೋ ಸಾರು ಹಾಗು ಅನ್ನ. ಆ ಸಪ್ಪೆ ಸಾರು ಅತಿ ಮೌನವೇ ಅವರ ಪಾಲಿಗೆ ಔಷಧಿಯಾಯಿತೋ ... ನರ್ಸಿಂಗ್ ಹೋಮಿನ ಔಷಧಗಳೇ ಕೆಲಸ ಮಾಡಿದವೋ... ನಾಲ್ಕು ದಿನ ದಲ್ಲ ಕೆಮ್ಮು ಗಮನಾರ್ಹವಾಗಿ ಸುಧಾರಿಸಿತು

ನಿಜಕ್ಕೂ ಆ ನಾಲ್ಕು ದಿನಗಳ ಅನುಭವ ಅವರಿಗೆ ಸಲ್ಪತ್ತು ಕಾದಂಬರಿ ಬರೆಯುವಷ್ಟು ಅನುಭವ ಕೊಟ್ಟಿತ್ತು. ಆದರೆ ಆಕೆ ಲೇಖಕಿಯಲ್ಲ

ಮದುವೆಯ ವಾರ್ಷಿಕೋತ್ಸವ ಫಂಕ್ಷನ್ ಎಂದು ತಟರು ಮನೆ

ಯಿಂದ ತನ್ನ ತಂದೆ–ತಾಯಿ ಅಣ್ಣಾ ಅತ್ತಿಗೆ ಇದ್ದೂರಿನ ಒಬ್ಬ ತಂಗಿ, ತಂಗಿಯ ಗಂಡ ಇವರನ್ನೆಲ್ಲಾ ಕರೆಸಿಕೊಂಡಿದ್ದಳು. ಕಾಲೇಜಿನ ಪ್ರಿನ್ಸಿಪಾಲ್ ಹಾಗು ಅವರ ಕುಟುಂಬ ಈ ಮಂದಿಗೆಲ್ಲ ರಾತ್ರಿ ಊಟ, ಸುಮಾರು ನಲವತ್ತು ಜನ ಆತ್ಮೀಯರಿಗೆ ಸಂಜೆ ಸಿಹಿಕಾರ ಪಾರ್ಟಿ ಪಾರ್ಟಿಗೆ ಮೈಸೂರು ಪಾಕ್ ಕಾರ ಸೇವೆ ಶಾರದಳೇ ಮಾಡಿದ್ದು.

ತಿಂಡಿ ತಂದಿಡುವುದರಿಂದ ಹಿಡಿದು ಆಮೇಲೆ ಎಂಜಲ ತಟ್ಟೆ, ಲೋಟ ತೊಳೆಯುವವರೆಗೆ ಎಲ್ಲಾ ಕೆಲಸ ಶಾರದಳದೆ. ರಾತ್ರಿಯ ಊಟಕ್ಕೆ ಹದಿನೈದು ಜನಕ್ಕೆ ಶಾರದಳೇ ಸಿಂಜೆಹುಳಿ ಚಿತ್ರಾನ್ನ ಶಾವಿಗೆ ಪಾಯಸ, ಅಂಬೋಡೆ ಅನ್ನ ತಿಳಿಸಾರು, ಹುರುಳಿಕಾಯಿ ಪಲ್ಯ, ಕ್ಯಾರೆಟ್ ಕೋಸಂಬ್ರಿ ಮಾಡಿ ಬೆಳಿಗ್ಗೆ ಮಾಡಿಟ್ಟ ಜಾಮೂನ್ ಹಾಕಿದಳು.

ನಡುಮನೆಯಲ್ಲಿ ಮೇಜು ಕುರ್ಚಿ ಸಿದ್ಧಪಡಿಸುವ ಕೆಲಸ ಗೋವಿಂದನದು ಆ ದಿನ ಅತ್ತೆಗೆ ಒಂದು ಪುಟ್ಟ ಕಪ್ಪಿನಲ್ಲಿ ಒಂದು ಜಾಮೂನು ತಂದಿಟ್ಟು—

"ಅತ್ತೆ ಸಿಹಿ ತಿಂದು ಮಗ ಸೊಸೆ ಸುಖವಾಗಿರಲೀಂತ ಬಾಯ್ತುಂಬ ಹರಿಸಿ, ಆಮೇಲೆ ಹೊಸ ಸೀರೆ ಉಟ್ಟು ಬಂದು ನಮಸ್ಕಾರ ಮಾಡ್ತೀನಿ" ಎಂದಳು.

ಆಕೆಗೆ ಬಾಯಿ ಕಟ್ಟಿದ ಹಾಗಾಗಿತ್ತು ಆ ಒಂದು ಜಾಮೂನು ಚಪ್ಪರಿಸಿ ತಿಂದರು ಆಮೇಲೆ ಒಂದು ನಮಸ್ಕಾರವೂ ಮಾಡಿದಳು. "ಇವತ್ತು ನಮ್ಮತ್ತೆ ನನಗೋಸ್ಕರ ಮಡಿ ಮಾಡಿದರು ಪತ್ನಲ ನಿಮ್ಮತ್ತೆ ಹಾಗೆ ನಮ್ಮತ್ತೇನು ಮಡಿ ಉಟ್ಕೊಳ್ಳೊದೆ ಒಂದು ಹನಿ ನೀರು ಹಾಕಲ್ಲ ನೋಡಿ. ಈ ನಡುವೆ ನನಗೆ ದಿನಕ್ಕೆ ಎರಡೆರಡು ಸಲ ಸ್ನಾನ. ಬೆಳಿಗ್ಗೆ ಸಂಜೆ ಅವರಿಗೆ ಮಡೀಲಿ ಅಡಿಗೆ ಆಗ್ಬೇಕಲ್ಲ. ಇವತ್ತು ಮಾತ್ರ ನಮ್ಮ ಆ್ಯನಿವರ್ಸರಿ ಅಂತ ಜಾಮೂನು ತಿನಿಸಿಬಿಟ್ಟೆ. ಬೇಡಮ್ಮ ನಾನು ತಿನ್ನಲ್ಲ ಅಂತ ಅವರು. ಇಲ್ಲ ಅತ್ತೆ ಜಾಮೂನಿಗೆ ಏನು ದೋಷವಿಲ್ಲ. ಹಾಲು, ಸಕ್ಕರೆ, ತುಪ್ಪ ಅಷ್ಟೆ ಅಂತ ತಿನ್ನಿಸಿಬಿಟ್ಟೆ. ಸಿಹಿ ತಿಂದ ಬಾಯಲ್ಲ ಹರಸಬೇಕೋ ಬೇಡವೋ ? ನಾವು ಮಗಸೊಸೆ ನಮಸ್ಕಾರ ಮಾಡಿದಾಗ."

ಎಂದು ತಾನು ಮಾಡುವ ಅತ್ತೆಯ ಸೇವೆಯ ಬಗ್ಗೆ ಗಂಟೆಗಟ್ಟಲೆ ಕೊಚ್ಚಿದಳು "ಅಮ್ಮ ನಿನ್ನ ಈರುಳ್ಳಿ ಬಣ್ಣದ ರೇಶ್ಮೆ ಸೀರೆ ನಮ್ಮತ್ತೆಗೆ ಉಡ್ಲಿಕ್ಕೆ

ಕೊಡು" ಎಂದು ಆಜ್ಞಾಪಿಸಿದಳು. ಅವರ ತಾಯಿ ತಮ್ಮ ರೇಶ್ಮೆ ಸೀರೆಗೆ ಆಕೆಗೆ ಕೊಟ್ಟರು.

"ನೋಡಿ ಈ ರೇಶ್ಮೆ ಸೀರೆ ಉಟ್ಟು, ಸಂಜೆ ಒಂದು ಘಳಿಗೆ ಒಂದು ಟೇಬಲ್ ಮುಂದೆ ಕೂತ್ಕೊಳ್ಳಿ. ನನ್ನ ಫ್ರೆಂಡ್ಸ್‌ಗೆ ಪರಿಚಯ ಮಾಡಿಸ್ತೀನಿ" ಎಂದಳು.

"ಅಲ್ಲೆಲ್ಲ ನಾನು ಏಕೆ ಬರಲಮ್ಮ. ನಾನೇನು ಓದಿದೋಳು ಅಲ್ಲ, ಬರೆದೋಳು ಅಲ್ಲ" ಎಂದರು ಧನ್ಯವಾಗಿ.

ಅವಳು ಕೋಪದಿಂದ ಘುಡುಘುಡಿಸುತ್ತಾ—"ಬಾಯ್ಮುಚ್ಚಿಕೊಂಡು ಹೇಳಿದಷ್ಟು ಕೇಳಿ, ಓದುವಿದ್ಯೆ ಏಕೆ ಬೇಕು ? ಚೆನ್ನಾಗಿ ಒಂದು ಸೀರೆ ಉಟ್ಟು ಬಂದು ಕುರ್ಚಿ ಮೇಲೆ ಕೂಡಲಿಕ್ಕೆ ಓದುವಿದ್ಯಾ ಬೇಕಾ ? ಒಂದು ಮನುಷ್ಯಾಕೃತಿ ಇದೆ, ಸಾಕು. ಅಲ್ಲಿ ಬಂದು ಏನು ಮಾತಾಡಬೇಡಿ, ಎದುರಿಗೆ ಹಣ್ಣಿನ ತಟ್ಟೆ ಇದೆ. ಹಣ್ಣು ತಿಂತಾ ಕೂತ್ಕೊಳ್ಳಿ. ಆಗಾಗ ಮುಗುಳ್ನಗುತ್ತ ಹೌದು ಇಲ್ಲ....ಇಷ್ಟಂದ್ರೆ ಸಾಕು" ಎಂದು ಗರ್ಜಿಸಿ ಹೇಳಿದಳು.

ಸೀತಮ್ಮ ಒಳ್ಳೆ ಸೀರೆಯುಟ್ಟು, ಮೈತುಂಬ ಸೆರಗು ಹೊದ್ದು ಕುರ್ಚಿಯ ಮುಂದೆ ಕೂತಿದ್ದರು. ಅವರ ಎದುರಿನ ಒಂದು ಪುಟ್ಟ ಸ್ಟೀಲ್ ಪ್ಲೇಟಿನಲ್ಲಿ ಸಿಪ್ಪೆ ತೆಗೆದು ಹೆಚ್ಚಿದ ಸೇಬಿನ ಹಣ್ಣಿನ ಹೋಳಿತ್ತು. ಹುಣಸೆ ಬೀಜದ ಸೈಜಿನ ಆ ಪುಟ್ಟ ಪುಟ್ಟ ಹೋಳನ್ನು ಪಾರ್ಟಿ ಮುಗಿಯುವವರಿಗೆ ನಿಧಾನವಾಗಿ ತಿನ್ನುತ್ತಿರಬೇಕು ಎಂದು ಹೇಳಿದಳು. ಸಿನಿಮಾ ನಿರ್ದೇಶಕನ ಕೈಕೆಳಗೆ ಸಿಕ್ಕ ಹೊಸ ಅನನುಭವಿ ನಟಿಯಂತೇ ಸೀತಮ್ಮ ಅವಳು ಹೇಳಿದ್ದನ್ನು ಅಭಿನಯಿಸಲು ಸಿದ್ಧರಾದರು. ಹೆದರಿಕೆಯೇ ಜಾಸ್ತಿ.

ಟೇಬಲ್ ಮುಂದೆ ಕೂತ ಅತ್ತೆಗೆ "ಅತ್ತೆ ನಿಮಗೆ ನಮಸ್ಕಾರ ಮಾಡಿ ಹರಿಕೆ ಪಡೆಯೋದ್ರಿಂದ ಈ ಸಲದ ಆ್ಯನಿವರ್ಸರಿ ಪ್ರಾರಂಭಿಸ್ತೀವಿ. ಸಿಹಿ ತಿಂದ ಬಾಯಲ್ಲಿ ಗಟ್ಟಿಯಾಗಿ ಹರಿಸಿಬಿಡಿ" ಎಂದು ಗಂಡನೊಡನೆ ಬಂದು ನಮಸ್ಕರಿಸಿದಳು.

"ನೂರ್ಕಾಲ ಗಂಡನ ಜೊತೆ ಸುಖವಾಗಿ ಬಾಳಮ್ಮ. ಮುದ್ದಾದ ಗಂಡು ಮಗನ ತಾಯಿಯಾಗು" ಎಂದು ಹರಿಸಿದರು

"ಈಗಿನ್ನು ಮದುವೆಯಾಗಿ ಎರಡು ವರ್ಷ, ಐದು ವರ್ಷ ಮಕ್ಕಳು ಬೇಡಾಂತ ನಿಮ್ಮ ಸೊಸೆ ಫ್ಯಾಮಿಲಿ ಪ್ಲಾನಿಂಗ್ ಮಾಡ್ತಿದಾಳೆ" ಎಂದರು ವತ್ಸಲ.

ಸೀತಮ್ಮನಿಗೆ ಈ ಬಗ್ಗೆ ಏನು ಉತ್ತರ ಕೊಡಲು ಹೆದರಿಕೆ. ಸುಮ್ಮನೆ ಮುಗುಳ್ನಕ್ಕರು.

ಇನ್ನೊಬ್ಬ ಗೆಳತಿ ಅದಕ್ಕೆ ಉತ್ತರಿಸಿ—"ಐದು ವರ್ಷ ಅಂತ ಏನಿಲ್ಲ. ಮೊದಲು ಗೃಹ ಪ್ರವೇಶೋತ್ಸವಾ ಮಾಡಿ ನಮಗೆ ಸಿಹಿ ಹಾಕಿಸಿ, ಆಮೇಲೆ ಪುತ್ರೋತ್ಸವದ ಸಿಹಿ ಹಾಕಿಸ್ತೀನಿ ಅಂತ ಅವರ ಪ್ರತಿಜ್ಞೆ" ಎಂದರು.

"ಅತ್ತೇ. ನೀವು ಚೀಫ್‌ಗೆಸ್ಟ್ ಮೊದಲು ನೀವು ಹಣ್ಣು ತಿನ್ನಿ. ಆಮೇಲೆ ಗೆಸ್ಟ್ ಎಲ್ಲಾ ಟಿಫನ್ ಪ್ರಾರಂಭ ಮಾಡ್ತಾರೆ" ಎಂದಳು.

ಸೀತಮ್ಮ ಕೀಲುಗೊಂಬೆಯಂತೆ ಒಂದೆರಡು ಹಣ್ಣಿನ ಹೋಳು ತೆಗೆದು ಬಾಯಲಿಟ್ಟುಕೊಂಡರು ಹಲ್ಲಿಗೆ ಸಹ ಸಿಕ್ಕಲಾರದ ಪುಟ್ಟ ಪುಟ್ಟ ಹೋಳು ಗಳು. ಆಕೆ ನಿಧಾನವಾಗಿ ಮೆಲುಕು ಹಾಕಿದರು ಪ್ರಾಣಿಯಂತೆ.

"ಏಕೆ ನಿಮ್ಮತ್ತೆ... ಮೈಸೂರ್‌ಪಾಕ್, ಚೌಚೌ ತೆಗೆದು ಕೊಳ್ಳಲ್ವಾ ?" ಯಾರೋ ಒಬ್ಬ ಗೆಳತಿ ಕೇಳಿದ್ದ....ಸಾಕಾಯಿತು. ಹಾವಭಾವ ಪೂರ್ಣವಾಗಿ ವರ್ಣಿಸತೊಡಗಿದಳು.

"ಅಯ್ಯೊ ! ನಮತ್ತೆ ಮಹಾಮಡಿ, ದಿನ ಎರಡು ಹೊತ್ತು ಮಡಿ ಉಟ್ಟುಕೊಂಡು ನಾನು ಅಡಿಗೆ ಮಾಡೋದು. ಇವತ್ತು ಸಿಹಿ ತಿಂದ ಬಾಯಲ್ಲಿ ಹರಸಲಿ ಅಂತ ಒಂದು ಜಾಮೂನು ತಿನ್ನಿಸಬೇಕಾದರೆ ಗಂಟೆಗಟ್ಟಲೆ ಬಲವಂತ ಮಾಡಿದೆ ಮೊದಲೇ ಪಥ್ಯ. ಮಡಿ ಬೇರೆ, ಈಗ ನಮ್ಮ ಜೊತೆ ಕಂಪನಿಗೆ ಹಾಲು ಹಣ್ಣು ತಗೋತಾರೆ. ಬಾದಾಮಿ ಹಾಲು, ಹಾಗು ಹಣ್ಣು" ಎಂದು ವರ್ಣಿಸಿದಳು. ಗಂಟೆಗಟ್ಟಲೆ ಅವಳ ವರ್ಣನೆ ಕೇಳಿ ಸೀತಮ್ಮನಿಗೆ ತಾವು ಸಾಕ್ಷಾತ್ ದೇವತೆ ಏನೋ ಅನಿಸಿತು.

"ನಿಜಕ್ಕು ಹಿರಿಯರನ್ನು ಚೆನ್ನಾಗಿ ನೋಡ್ಕೋಬೇಕು. ಜೀವನದಲ್ಲಿ ಅದಕ್ಕಿನ್ನ ದೊಡ್ಡ ದೇವರ ಸೇವೆ ಇಲ್ಲ ನೀವು ನಿಜವಾಗಿ ಸಂಪನ್ನರು...." ಎಂದು ಪ್ರಿನ್ಸಿಪಾಲ್ ಹೊಗಳಿದರು.

ಪಾರ್ಟಿ ಆಗುತ್ತಲೆ ಒಂದು ತಂಡ ಜನ ಶುಭಾಶಯ ಹಾರೈಸಿ ಹೊರಟು ಬಿಟ್ಟರು. ಪ್ರಿನ್ಸಿಪಾಲ್ ಹಾಗು ಅವರು ಕುಟುಂಬದವರು, ಮತ್ತು ಪರಿ ಮಳೆಯ ತವರು ಮನೆಯವರು ಉಳಿದರು.

"ಅತ್ತೇ....ನಿಮಗೆ ಆಯಾಸ ಆಗಿದೆ. ಇಷ್ಟು ಹೊತ್ತು ಕೂತಿದ್ದದ್ದೇ ಹೆಚ್ಚು. ಏಳಿ ಹೋಗಿ ಮಲಗಿಬಿಡಿ. ಹೇಗಿದ್ದರೂ ನಿಮಗೆ ಪಥ್ಯದೂಟಾ....

ಆಮೇಲೆ ಎಬ್ಬಿಸ್ತೀನಿ. ಚೆನ್ನಾಗಿ ರೆಸ್ಟ್ ತಗೊಳ್ಳಿ" ಎಂದಳು.

ಅರ್ಧ ಸೇಬು ಹೆಚ್ಚಿ ತಟ್ಟೆಯಲ್ಲಿ ಆಕರ್ಷಕವಾಗಿ ಹರಡಿದ್ದರಲ್ಲಿ ಅರ್ಧ ಮಾತ್ರ ತಿಂದಿದ್ದರು ಸೀತಮ್ಮ. "ಗಬಗಬ ತಿಂದು ತಟ್ಟೆ ಖಾಲಿ ಮಾಡ್ಬೇಡಿ" ಎಂದು ಮೊದಲೇ ಆಜ್ಞೆ ಮಾಡಿದ್ದಳು. ಅರ್ಧ ಲೋಟಾ ಹಾಲು, ಅರ್ಧ ಲೋಟಾ ನೀರು ಬೆರಸಿ, ವಿವೀಟಾ ಎರಡು ಸ್ಪೂನ್ ಹಾಕಿದ್ದಳು. ಸಕ್ಕರೆ ಸಹ ಹಾಕಿರಲಿಲ್ಲ. ಏನೋ ಒಂದು ತರಹ ಕಹಿ ಚಾಯಿ ಇತ್ತು ಹಾಗೆ ಕುಡಿದಿದ್ದರು.

ಬೆಳಗ್ಗೆ ಒಂದು ನೀರು ಸಾರನ್ನದ ಊಟ ಹತ್ತು ಗಂಟೆಗೆ. ರಾತ್ರಿ ಎಂಟು ಗಂಟೆಯ ಹೊತ್ತಿಗೆ ಸೀತಮ್ಮನಿಗೆ ಭಯಂಕರ ಹಸಿವು. ಆದರೆ ಆಕೆಯ ಹಸಿವು ಯಾರು ಕೇಳಬೇಕು.

ಒಂಭತ್ತೂವರೆಯ ವರಿಗೆ ಪಾರ್ಟಿಯ ಔತಣದ ಮೋಜು, ಎಲೆಗೋಮೆ ಮಾಡಿ ಶಾರದಳಿಗೆ ಬಿಡುವು ಸಿಕ್ಕಮೇಲೆ "ನೀವು ತಾಯಿ ಮಗಳು ಊಟ ಮಾಡಿಬಿಡಿ. ಬೆಳಿಗ್ಗೆ ಬೇಗ ಏಳ್ಬೇಕು" ಎಂದು ಅಪ್ಪಣೆ ಮಾಡಿದಳು.

ಪುಣ್ಯಕ್ಕೆ ಸೀತಮ್ಮನಿಗೇನು ತೊಂದರೆ ಇಲ್ಲ ಎಂದು ನರ್ಸಿಂಗ್ ಹೋಂನ ಫಲಿತಾಂಶ ಬಂತು. ವಾರಕ್ಕೊಂದು ಪೆನಿಸಿಲನ್ ತಗೋಬೇಕು. ಇದರ ಜೊತೆ ಕೆಲವು ಔಷಧ ಪಥ್ಯ ಎಂದು ಬರೆದು ಕೊಟ್ಟರು ಆ ಚೀಟಿ ದಾರಿ ಯಲ್ಲಿ ಬರುತ್ತ ಹರಿದು ಎಸೆದರು. "ಹೋಗ್ಲಿ ಅನಂತನ ಮನೆಗಾದರೂ ಹೋಗ್ತೀರೇನು ?" ಎಂದರು ಗೌರಮ್ಮ.

"ಈ ಪರಾಧೀನ....ಪ್ರಾಣ ಸಂಕಟಾ ಸಾಕಾಗಿದೆ. ಒಂದು ಬಚ್ಚಲ ಮನೆಗೆ ಎದ್ದು ಬಂದರೂ ಆಗ್ಲೇ ಹೋಗಿದ್ದರಲ್ಲ ತಿರುಗ ಏಕೆ ಬಂದಿರಿ ? ನೀವು ಕಡಿಮೆ ಕುಡೀರಿ. ಹೀಗೆಲ್ಲಾ ಉಪದೇಶ ಮಾಡ್ತಾಳೆ. ಸಾಕಾಗಿದೆ ಕಣ್ರಿ. ಈ ಗಂಡು ಮಕ್ಕಳು ಸೊಸೆಯರ ಹಂಬಲ ನೀಗಿತು. ನನ್ನ ಹಳ್ಳಿ ನನ್ನ ಪಾಲಿನ ಸ್ವರ್ಗ" ಎಂದರು.

"ಶನಿವಾರ ಹೊರಟು ಬಿಡೋಣ" ಎಂದರು.

"ಹಾಗಾದರೆ ನಾಳಿನ ಊಟಕ್ಕೆ ನಮ್ಮನೆಗೆ ಬಂದ್ಬಿಡಿ" ಎಂದರು

ಗೌರಮ್ಮ ಮನೆಗೆ ಬರುವ ಹೊತ್ತಿಗೆ ಹಸಿದ ರಾಕ್ಷಸಿ ಹಾಗೆ ಕಾದಿದ್ದಳು ಪರಿಮಳ.

"ಡಾಕ್ಟರ್ ಏನು ಕೊಟ್ಟರು ರಿಪೋರ್ಟ್ ?" ಎಂದಳು ಸೀತಮ್ಮ ಬೇಸರದಿಂದ—

"ಎಲ್ಲಾ ಹರಿದೆಸೆದವ್ಮ್ಮ, ನನಗೆ ಸಾಕಾಗಿದೆ, ನಾಳಿದ್ದು ಊರಿಗೆ ಹೋಗ್ತೀನಿ" ಎಂದಳು

"ಇಲ್ಲೇನು ನಿಮಗೆ ಮುಳ್ಳು ಒತ್ತುತ್ತಾ ಇರೋದು ? ಒಂದು ವಾರ ಇರಿ. ನೋಡೋಣ ಏನೇನಾಗತ್ತೇ" ಎಂದಳು. "ಇಲ್ಲವ್ಮ್ಮ ನಾನಿರಲ್ಲ. ನನಗಿನ್ನು ಔಷಧ ಪಥ್ಯದ ಮೋಹಾ ಹೋಗಿದೆ ಹೋಗ್ತೀನಿ" ಎಂದರು.

"ಹಾಗಿದ್ದರೆ ಶಾರದನ್ನ ಸೋಮವಾರದದರೆಗೆ ಬಿಟ್ಟರಿ. ಸೋಮವಾರ ಕಳಿಸಲ್ಲ" "ಇಲ್ಲ ಅತ್ತಿಗೆ ನಾನು ಅಮ್ಮನ ಜೊತೆ ಹೋಗ್ತೀನಿ. ನನಗಿಲ್ಲ.... ಸರಿ ಹೋಗಲ್ಲ" ಎಂದಳು. "ಶುದ್ಧ ಹಳ್ಳಿಗುಗ್ಗು ನೀನು. ಅಮ್ಮನ ಸೆರಗು ಹಿಡಿದುಕೊಂಡು ಓಡಾಡು" ಎಂದು ಬಗೆಬಗೆಯಾಗಿ ಬೈದಳು.

ಶುಕ್ರವಾರ ಬೆಳಗ್ಗೆ ಗೌರಮ್ಮನ ಮಗನ ಮನೆಯಲ್ಲಿ ಔತಣ. ಗೌರಮ್ಮ ತಾವೇ ಬಂದು ಕರೆದೊಯ್ದರು. ಶಾರದಳನ್ನು ಕರೆದುಕೊಂಡು ಹೋದರು. ಬೆಳಗ್ಗೆ ಒಂಭತ್ತರವರೆಗೆ ದುಡಿದಿದ್ದಳು ಶಾರದ.

"ನಮ್ಮತ್ತೆ ನೀವು ಗೆಳತಿ, ಶಾರದಾ ಏಕೆ ?" ಪರಿಮಳ ಶಾರದಳನ್ನು ಕಳಿಸಲು ಪ್ರತಿಭಟಿಸಿದಳು.

"ಶಾರದಾನ್ನ ಕನ್ಯಾಮುತ್ತೈದೆ ಅಂತ ನನ್ನ ಸೊಸೆ ಉಡಿ ತುಂಬ್ತಾಳಂತೆ ಹೋಳಿಗೆ ಪಾಯಸದ ಅಡಿಗೆ ಮಾಡಿದ್ದಾಳೆ. ಕರ್ಕೊಂಡು ಹೋಗ್ತೀನಿ" ಎಂದರು.

ಪರಿಮಳಾ ಸಿಡುಕುತ್ತ—"ಶಾರದಂಗೆ ಇಲ್ಲಿ ನಾನು ಅಡಿಗೆ ಮಾಡಲು ಬಿಟ್ಟಿದ್ದೀನಿ ಶಾರದಾನ್ನ ಕರ್ಕೊಂಡು ಹೋಗಬೇಡಿ" ಎಂದಳು.

ಸೀತಮ್ಮಂಗೆ ಉಕ್ಕಿ ಬಂದ ಕೋಪ ತಡೆಹಿಡಿಯಲಾಗಲಿಲ್ಲ.

"ಸಾಕಮ್ಮ ಊರಿಗೆ ಹೋಗೋಕೆ ಮುಂಚೆ ಜಗಳವಾಡಿ ನಿನ್ನ ಉರಿ ಮಾತಿಗೆ ಸಿಗೋದ್ಯಾಕೇಂತ ಇದ್ದೆ. ಆದರೆ ನನ್ನ ಸಹನೆ ಕೆಣಕ್ತಾ ಇದ್ದೀ ನೀನು ಶಾರದನ್ನ ಮೇಲೆ ನಿನ್ನದೇನು ಅಧಿಕಾರಾ ? ಒಂದು ವಾರದಿಂದ ದುಡಿದು, ದುಡಿದು ಹಣ್ಣಾಗಿ ಹೋಗಿದ್ದಾಳೆ. ಜೀಳೆ ಮುಖ ಕಾಣದ ಆ

ನೀರು ಸಾರನ್ನ ನನ್ನ ಜೊತೇಲಿ ಅವಳಿಗು ಪಥ್ಯ ಮಾಡಿಸಿದ್ದಿ. ಮಗು ಹೊರಗಿ ಹೋಗಿದ್ದಾಳೆ" ಎಂದು ನುಡಿಯುತ್ತಿದ್ದಂತೆಯೇ ಪರಿಮಳ ಅಬ್ಬರಿಸಿ ಜಗಳಾ ಆಡಿದಳು.

"ಸರಿ....ನಾನು ಬರಲ್ಲ ಬಿಡಮ್ಮ. ನೀವಿಬ್ಬರು ಹೋಗಿಬನ್ನಿ—" ಶಾರದಾ ತಾನೇ ಸೋತಳು.

"ಅಷ್ಟು ಮೊದಲೆ ಹೇಳ್ಲಿಕ್ಕೆ ಏನಾಗಿತ್ತು ? ದೊಡ್ಡ ಗದ್ದಲ ಎಬ್ಬಿಸಿ ಜಗಳದ ಅಂದಾ ಚೆಂದಾ ನೋಡಿ ಆನಂದಿಸಿ ಆಮೇಲೆ ಗಿಳಿ ಹಾಗೆ ಬಾಯಿ ಬಿಡ್ತಿಯ್ಯಾ ?" ಎಂದಳು. ಆ ದಿನ ಮಗಳನ್ನು ಬಿಟ್ಟು ಬಂದ ಸೀತಮ್ಮ ನಿಗೆ ಹೋಳಿಗೆ ಪಾಯಿಸದೂಟ ಸೇರಲಿಲ್ಲ.

ಒಂದು ವಾರ ಅಲ್ಲಿದ್ದುದ್ದಕ್ಕೆ ಅವಳು ಮಾಡಿದ ಹಗರಣ, ಅವಳು ತೋರಿದ ಕಟ್ಟಿತನಕ್ಕೆ ನೆನಸಿದಾಗಲೆಲ್ಲಾ ಅವರ ಮೈ ಉರಿಯುತ್ತಿತ್ತು. ಲೌಡಿ ಏನಾದರು ನಾಲ್ಕು ದಿನ ನಮ್ಮನೆಗೆ ಬರಲಿ....ಅವಳು ಮಾಡಿದ ಆ ಕಟ್ಟಿತನ ಎಲ್ಲಾ ಮುಖದ ಮೇಲೆ ಎಸಿತೀನಿ ಎಂದು ಆಗಾಗ ಮಗಳ ಮುಂದೆ ಅಲವತ್ತು ಗೊಳ್ಳುತ್ತಿದ್ದರು.

ಆದರೆ ಶಾರದಾ ನಕ್ಕು—"ಅವಳ್ಯಾಕೆ ಬರ್ತಾಳಮ್ಮ, ಮೈಸೂರಲ್ಲಿ ಜುಂ ಅಂತ ಗಂಡನ ಜೊತೆಗೆ ಇದ್ದಾಳೆ. ಈ ಹಳ್ಳಿಯ ದಿಕ್ಕಿಗೆ ತಲೆ ಇಟ್ಟು ಸಹ ಮಲಗಲ್ಲ" ಎನ್ನುತ್ತಿದ್ದಳು.

ಆದರೆ ಕಡೆಗೂ ತನ್ನ ಪಂಥ ಮುರಿದು ಅವಳು ಬಂದಿದ್ದಾಳೆ. ಲೌಡಿಗೆ ಸ್ವಲ್ಪ ಬಿಸಿ ಮುಟ್ಟಿಸಬೇಕು ಎಂದುಕೊಂಡಳು. ಹನ್ನೆರಡು ಗಂಟೆ ಹೊತ್ತಿಗೆ ಗೋವಿಂದ ಮೇಲೆ ರೂಮಿನಿಂದ ಕೆಳಗಿಳಿದು ಬಂದ.

"ಅಪ್ಪನ ಪೂಜೆ, ಪುನಸ್ಕಾರ ಮುಗಿದು, ಊಟಕ್ಕೆ ಇನ್ನು ಎಷ್ಟು ಹೊತ್ತಾಗತ್ತಮ್ಮ....?" ಎಂದ.

"ನಮ್ಮನೆ ಊಟಾ ಅಂದರೆ ಒಂದು ಗಂಟೆ ಅಪ್ಪಾ ಮನೆಮಗನಾದ ನಿನಗೆ ಗೊತ್ತಿರಬೇಕು" ಎಂದರು.

"ನಮಗೆ ಹತ್ತು ಗಂಟೆಗೆ ಊಟಾ ಮಾಡಿ ಅಭ್ಯಾಸ, ಒಂದಿಷ್ಟು ಅವ

ಲಕ್ಕಿ ಮೊಸರು, ಚಟ್ನಿಪುಡಿ ಏನಾದರೂ ಇದ್ದರೆ ಕೊಡು" ಎಂದ.

"ಇಲ್ಲಪ್ಪಾ....ನಮ್ಮ ರಾತ್ರಿ ಗುರುವಾರದ ಫಲಹಾರ ಅದಕ್ಕೇಂತ ಮಾಡಿಟ್ಟುಕೊಂಡಿದ್ದೀನಿ. ಅದನ್ನ ಊರಿಗೆಲ್ಲ ಹಂಚಲಿಕ್ಕಾಗಲ್ಲ. ಇಲ್ಲೇ ಅರ್ಧ ಮೈಲಿ ದೂರದಲ್ಲಿ ಒಂದು ಫಲಹಾರ ಮಂದಿರವಿದೆ, ಹೋಗಿ ಬನ್ನಿ" ಎಂದರು

ಗೋವಿಂದ ಕಾಲು ಸುಟ್ಟ ಬೆಕ್ಕಿನಂತೆ ಹೊರಳಿ ಹೋದ. ಕೊಂಚ ಹೊತ್ತಿಗೆ ಹೆಂಡತಿ ಹೊರಗೆ ನಡೆದರು. ಶಾರದಾ ಬಂದು "ಒಂದಿಷ್ಟು ಅವ ಲಕ್ಕಿ ಕೊಡಬೇಕಾಗಿತ್ತಮ್ಮ. ಎಂದಿನವೋ ಕಾಮಕ್ರೋಧಾ ಇಟ್ಕೊಂಡು ಏಕೆ ಸಾಧಿಸ್ತೀಯಮ್ಮ ?" ಎಂದಂತಾಯಿತು.

ಆದರೆ ಆಕೆ ರೋಷದಿಂದ ಹೆತ್ತ ತಾಯಿ ಮೇಲೆ ಪ್ರೀತಿ ಇಲ್ಲದ ಹೆಂಡತಿ ದಾಸನಾದ ಇವನಿಗೆ ಬುದ್ಧಿ ಕಲಿಸ್ತೀನಿ ಎಂದುಕೊಂಡರು.

ಮತ್ತೆ ಮಹಡಿ ಸೇರಿದ ದಂಪತಿಗಳು ಸುಸ್ತಾಗಿ ಮಲಗಿದ್ದರು. ಎರಡು ಗಂಟೆಗೆ ಊಟಕ್ಕೆ ಕರೆಬಂದಾಗ ಆತುರದಿಂದ ಕೆಳಗಿಳಿದು ಬಂದರು.

ಉಗ್ರಾಣದ ಮುಂದಿನ ಮನೆಯಲ್ಲಿ ಎರಡು ಬಟ್ಟಲು ಹಾಗು ಎರಡು ತಟ್ಟೆ ಜೋಡಿಸಿಟ್ಟಿದ್ದರು.

"ನೀವು ಗಂಡಾ ಹೆಂಡ್ತಿ ಬಡಿಸಿಕೊಂಡು ಊಟಾ ಮಾಡ್ರಿ. ನನಗೆ ಆ ಆ ಕಡೆ ನೈವೇದ್ಯ ಕೊಟ್ಟೋರ ಮನೆಯವರು....ಇನ್ನು ಕೆಲವರು ಬರೋರಿದ್ದಾರೆ ಅವರಿಗೆ ಊಟಕ್ಕೆ ಬಡಿಸಬೇಕು" ಎಂದರು ಸೀತಮ್ಮ.

"ನಿಂದು, ಅಪ್ಪಂದು ಊಟಾ ಆಯ್ತಾಮ್ಮ ?" ಎಂದ. ಕೊಂಚ ಸಮಾಧಾನವಾಗಿ ಮಾತಾಡಿ, ಜಗಳಾ ತೆಗೀಲೇ ಬೇಡಿ ಎಂದು ಪರಿಮಳ ಬುದ್ಧಿ ಹೇಳಿದ್ದಳು

"ಆಯ್ತಪ್ಪಾ, ಶ್ರೀ ಹಯಗ್ರೀವ ದೇವರಿಗೆ ಹೋಳಿಗೆ ಪಾಯಿಸದಡಿಗೆ ನೈವೇದ್ಯ ಕೊಟ್ಟಿದ್ದರು ರಾಮಣ್ಣನ ಮನೆಯವರು ಸುಬ್ಬಣ್ಣನೂ ಅಡಿಗೆಯ ಸಹಾಯಕ್ಕೆ ಬಂದಿದ್ದ. ಅವರು ರಾಮಣ್ಣಾ ದಂಪತಿಗಳು ಬಲವಂತ ಮಾಡಿದರು. ಸುಬ್ಬಣ್ಣಾ ಬಡಿಸಲಿ, ನೀವು ಹಿರಿಯ ದಂಪತಿಗಳು ನಮ್ಮ ಜೊತೆ ಊಟಕ್ಕೆ ಕೂಡಿ. ಬ್ರಾಹ್ಮಣ ಮುತ್ತೈದೆ ಊಟಾ ಮಾಡಿದ ಪುಣ್ಯಾ ಬರತ್ತೆ ಅಂದರು. ಹೀಗಾಗಿ ನಾನು ನಿಮ್ಮಪ್ಪಾ ಊಟಾ ಮಾಡಿಬಿಟ್ಟೆವಿ. ಈಗ ಅವರ್ಕ್ಕಿನೆ ಸ್ಕೂಲ್ ಹುಡುಗರು ಎರಡೂವರೆಗೆ ಬರ್ತಾರೆ.

ಅವರಿಗೆ ನಾನು ಬಡಿಸ್ತೀನಿ. ಒಂದು ಘಳಿಗೆ ಅಡ್ಜಾಗ್ತೀನಿ" ಎಂದನು

ಅಷ್ಟರಲ್ಲಿ "ಮಾಮಿ....ಬಡಿಸ್ತೀರಾ ?" ಎಂದು ಎರಡು ಹುಡುಗರು ಬಂದವು ಸೀತಮ್ಮ ದೊಡ್ಡ ಬಾಳೆಲೆ ಹಾಕಿ ಆ ಹದಿನಾರು ಹದಿನೆಂಟು ವರ್ಷದ ಹುಡುಗರಿಗೆ ಬಡಿಸತೊಡಗಿದರು

ಸ್ಟೀಲ್ ತಟ್ಟೆಯಲ್ಲಿ ಅನ್ನ, ಟಮೋಟೊ ಸಾರು ಬಡಿಸಿಕೊಂಡು ಊಟಾ ಮಾಡುತ್ತಿದ್ದ ಗೋವಿಂದ—

"ಬಾಳೆ ಎಲೆ ಇತ್ತೇನಮ್ಮ. ಇವಳಿಗೆ ಬಾಳೆ ಎಲೆ ಊಟಾ ಅಂದರೆ ಬಹಳ ಇಷ್ಟ. ಮೊದಲೇ ಏಕೆ ಹೇಳಲಿಲ್ಲ ?" ಎಂದ.

ಸೀತಮ್ಮ ಮಗನಿಗೆ ಉತ್ತರ ಕೊಡಲಿಲ್ಲ.

"ಬನ್ನಿ....ಕಾಲು ತೊಳೆದು ಬಂದಿರಾ ಕೂತ್ಕೊಳ್ಳಿ. ನಿನ್ನ ಹೆಸರು ಗಣೇಶ ಅಲ್ಲವಾ ? ನಿನ್ನ ಹೆಸರು ಏನು ಮರಿ ?" ಎಂದು ಇನ್ನೊಬ್ಬನನ್ನು ಕೇಳಿದರು.

"ಗೌರಿಶಂಕರ...." ಎಂದ ಆ ಹುಡುಗ.

"ಹೂಂ ಅಣ್ಣಾ ತಮ್ಮ ನಿಧಾನವಾಗಿ ಊಟಾ ಮಾಡಿ" ಎಂದು ಪಲ್ಯ, ಚಟ್ನಿ, ಕೋಸಂಬರಿ, ರಾಯತ ಎಲ್ಲಾ ಬಡಿಸಿ ...ಅಂಬೊಡೆ ಹೋಳಿಗೆ ಪಾಯಿಸಾ, ಚಿತ್ರಾನ್ನ ಬಡಿಸಿದರು. "ನಿಧಾನವಾಗಿ ಊಟಾ ಮಾಡಿ ರಾಯಿತಾನ್ನ ಕಲಿಸಿ ಕೊಳ್ಳಿ. ಹುರುಳಿಕಾಯಿ ಪಲ್ಯ ಇದೆ. ಕೊಬ್ಬರಿ ಚಟ್ನಿ ಇದೆ. ಸುಬ್ಬಣ್ಣಾ ಮಾಡಿದ ತಿಳಿಸಾರು ಇದೆ" ಎಂದು, ಬಂದವರೆದುರಿಗೆ ಜಗಳಾ ಆಡಿದರೆ ತನ್ನ ಬೆಲೆ ಇಳಿಯುವುದು ಎಂದು ಗೋವಿಂದ ಸುಮ್ಮನಾದ. ನೀರು ಸಾರನ್ನ....ಹಾಗು ನೀರು ಮಜ್ಜಿಗೆ ಅನ್ನ ಊಟಾ ಮಾಡಿ ಗಂಡಾ ಹೆಂಡತಿ ಎದ್ದರು.

ಬಂದ ಹುಡುಗರು ಹೊರಟ ಮೇಲೆ ಗೋವಿಂದ ಹಜಾರದಲ್ಲಿ ತಂದೆಯ ಬಳಿ ಹೋಗಿ "ಅಮ್ಮ ಏಕೆ ಹೀಗೆ ಮಾಡ್ತಾಳಪ್ಪಾ ? ಮನೇಲಿ ಬಗೆ ಬಗೆ ಅಡಿಗೆ ಇದ್ದರೂ ನಮಗೆ ಹೀಗೆ ನೀರು ಸಾರನ್ನದ ಊಟಾ ಮಾಡಿಸಬೇಕಾ ?" ಎಂದ.

ಆಚಾರ್ಯರು ಕೊಂಚ ಅಚ್ಚರಿಯಿಂದ "ಸೀತಾ...." ಎಂದು ಕರೆದರು ಸೀತಮ್ಮ ಎಲ್ಲಾ ಕೇಳಿಸಿಕೊಂಡು ಧಾವಿಸಿ ಬಂದರು. ಆಚಾರ್ಯರು ಶಾಂತ ವಾಗಿ "ಈತ ಏನೋ ಹೇಳ್ತಾನೇ ನೋಡು" ಎಂದರು.

ಈತ ಎಂಬ ಶಬ್ಧವೇ ಗೋವಿಂದನಿಗೆ ಅಪಮಾನವುಂಟು ಮಾಡಿತ್ತು. ಅವನು ಧ್ವನಿ ಏರಿಸಿ—

"ಏನಪ್ಪಾ ನೀವು ಬಹಳ ಅಪರಿಚಿತರ ಹಾಗೆ ಮಾತಾಡ್ತೀರಿ ? ಮನೆ ಮಗ ಅನ್ನೋದು ನಿಮ್ಮಿಬ್ಬರಿಗೆ ಪ್ರಜ್ಞೆ ಇದೆಯೋ ಇಲ್ಲವೊ ?" ಎಂದ

ಸೀತಮ್ಮ ಅವರಿಗಿಂತ ಗಟ್ಟಿ ಧ್ವನಿಯಲ್ಲಿ—

"ನಿನ್ನಂಥಾ ಅಯೋಗ್ಯ ಮಕ್ಕಳಿಗೆ ತಂದೆ ತಾಯಿ ಜ್ಞಾಪಕಾ ಯಾವಾಗ ಬರತ್ತೆ ಹೇಳು ? ದುಡ್ಡು ಕಾಸು ಹಂಚಿಕೊಳ್ಳುವಾಗ ಮಾತ್ರ. ದುಡ್ಡು ಕೇಳ ಲಿಕ್ಕೆ ಯಾವ ಮುಖ ಇಟು ಕೊಂಡು ಬಂದೆ. ಒಂದು ವಾರ ನಿನ್ನ ಮನೆಗೆ ಕಾರ್ಯ ಕಾರಣ ಅಂತ ಬಂದಾಗ ನಿನ್ನ ಹೆಂಡತಿ ಯಾವ ರೀತಿ ಆಟಾ ಆಡಿ ದ್ದಳು, ಉಪ್ಪು ಕಾರ ಸಹ ಸರಿಯಾಗಿ ಹಾಕದೇ ಅಂಥಾ ನೀರು ಸಾರು, ಅನ್ನ ಇಡ್ತಿದ್ದಳು ಈಗ ನಿಮಗೂ ಒಂದು ವಾರ ಅದೇ ಅಡಿಗೆ ಒಂದು ವಾರ ಅದ ಮೇಲೆ ಅದೂ ನಿಮಗೆ ಸಿಕ್ಕಲ್ಲ ಹೋಟಲಿಗೆ ಹೋಗಿ ಅಲ್ಲಿನ ಹಾಳು ಮೂಳು ಊಟಾ ಮಾಡಬೇಕು" ಎಂದು ಆಜ್ಞೆ ಮಾಡುವಂತೆ ಹೇಳಿದರು

ಪರಿಮಳ ನಯವಾಗಿ ಬೆಣ್ಣೆಯಲ್ಲಿ ಕೂದಲೆಳೆ ತೆಗೆದಂತೆ "ಏಕೆ ಸುಮ್ಮನೆ ಇಲ್ಲದ್ದು ಯೋಚಿಸಿ, ಆಯಾಸ ಮಾಡ್ಕೋತೀರಿ ಅತ್ತೆ ? ನಿಮಗೆ ಆವಾಗ ಪಥ್ಯದಡಿಗೆ ಅಂತ ಹಾಗೆ ಮಾಡಿದೆ. ಅಲ್ಲದೆ ಇಲ್ಲಿ ನಿಮಗೆ ಸಿಕ್ಕಹಾಗೆ ನಮಗೆ ತರಕಾರಿ, ಎಣ್ಣೆ ಬೆಣ್ಣೇ ಸಿಗಲ್ಲ. ಒಂದಕ್ಕೆ ಎರಡು ಪಟ್ಟು ಬೆಲೆ ತೆತ್ತು ಕೊಂಡ್ಕೋಬೇಕು ತಿಂಗಳ್ಲಲ್ಲಿ ಎಂಟು ದಿನ ನಾವೇ ಟೊಮೆಟೊ ಸಾರು ಅನ್ನ ತಿಂತಿದ್ದೀವಿ" ಎಂದು ಏನೋ ನ್ಯಾಯ ಹೇಳಲು ತೊಡಗಿದಳು. ಸೀತಮ್ಮ ಕಣ್ಣು ಕೆಕ್ಕರಿಸಿ, ಅವಳನ್ನು ನೋಡಿ—

"ಸಾಕು ಬಾಯಿ ಮುಚ್ಚೆ ಜಿಪುಣ ಲೌಡಿ. ನಿನ್ನ ಯೋಗ್ಯತೆಗೆ ಬೆಂಕಿ ಹಾಕಿದರು. ನನಗೆ ಪಥ್ಯ ಇತ್ತು ನಿಜ, ಶಾರದಂಗೆ ಪಥ್ಯ ಇತ್ತೇನೆ ? ತಾಯಿ ಮಗಳು ಇಬ್ಬರು ಊಟಾ ಮಾಡಲಿಕ್ಕೆ ಯಾವ ಪಾತ್ರೇಲಿ ಅನ್ನ ಇಡ್ತಿದ್ದಿ ? ಈಗ ನಿಮಗೂ ಒಂದು ವಾರ ಅದನ್ನೇ ಇಟ್ಟು ಋಣಾ ತೀರಿಸ್ತೀನಿ ಹೊರಟು ಬಿಡಿ" ಎಂದರು.

ಪರಿಮಳ ಮುಖ ಕಪ್ಪು ಮಾಡಿಕೊಳ್ಳದೆ ನಗಲೆತ್ನಿಸಿ—

"ನೋಡಿ ಅತ್ತೆ... ಅನಂತ ಎಂದಿಗೂ ನಿಮಗೆ ಆಗಲ್ಲ ಅವನ ಹೆಂಡತಿಗೆ ನಿಮ್ಮ ತಲೆ ಕಂಡ್ರಾಗಲ್ಲ ಇವತ್ತಲ್ಲ ನಾಳೆ ನಿಮಗೆ ನಾವೇ ಆಗಬೇಕು ನೀವು

ಮುದುಕರಾದಿರಿ. ಎಷ್ಟು ದಿನ ಹೀಗೆ ಪರರನ್ನು ಆಶ್ರಯಿಸಿ ಬದುಕ್ತೀರಿ ? ಶಾರದನಿಗೆ ನಾನೊಂದು ಹಳ್ಳಿವರ ನೋಡಿದ್ದೀನಿ. ನಮ್ಮ ಚಿಕ್ಕಮ್ಮನ ಮಗನೇ ವರ. ಹತ್ತೆಪ್ಪತ್ತು ಸಾವಿರದಲ್ಲಿ ಮದುವೆ ಮುಗಿಯುತ್ತೆ. ಆಮೇಲೆ ನೀವು ಗಂಡಾ ಹೆಂಡ್ತಿ ಮೈಸೂರಿಗೆ ಬಂದ್ಬಿಡಿ. ನಾವು ಕಟ್ತಾ ಇರೊ ಮನೆಗೆ ಗಂಡಾ ಹೆಂಡ್ತಿ ಮೂರು ಲಕ್ಷದವರೆಗೆ ಲೋನ್ ತಗೊಂಡರೂ ಸಾಲತ್ತಾ ಇಲ್ಲ ಒಂದೂವರೆ ಲಕ್ಷ ನಿಮ್ಮ ಕಡೇದು ಹಾಕಿ, ಜೀವಮಾನ ಪೂರ್ತಿ ನಿಮ್ಮನ್ನ ನಾನು ಕೂಡಿಸಿ ಸೇವೆ ಮಾಡ್ತೀನಿ" ಎಂದಳು. ಗೋವಿಂದಾ ಮಾತಾಡಿ—

"ಅನಂತನಿಗೆ ಈ ಹಳ್ಳಿ ಕಡೆ ಬಾರದ್ದಾಗೆ ಅತ್ತಿಗೆ ಕಟ್ಟು ಹಾಕಿಬಿಟ್ಟಿದ್ದಾಳಮ್ಮ. ಅನಂತನ್ನ ಮೊನ್ನೆ ಸಹ ನಾವು ಹೋಗಿ ನೋಡಿದಿವಿ, ಬರಲ್ಲ ಅಂದ. ಈಗ ಮಾಡಿದರೆ ನಿಮಗೆ ನಾವೇ ಮಾಡಬೇಕು. ಅಪ್ಪನಿಗೂ ಎಪ್ಪತ್ತು ವರ್ಷ ಆಯ್ತು....ಇನ್ನು ಎಷ್ಟು ದಿನ ಒಂಟಿಯಾಗಿ ಹಳ್ಳೀಲಿರ್ತೀರಿ ?" ಎಂದ. ಅನಂತರ ತಂದೆಯ ಕಡೆ ತಿರುಗಿ—

"ನೀವೇನು ಹೇಳ್ತೀರಪ್ಪಾ ?" ಎಂದ. ಆಚಾರ್ಯರು ಶಾಂತರಾಗಿ— "ಹೇಗಿದ್ದರೂ ಬಂದಿದ್ದೀರಿ ಎಂಟು ದಿನ ಇರಿ. ಇನ್ನು ಮೂರು ನಾಲ್ಕು ದಿನದಲ್ಲಿ ರಾಮರಾಯರು ದುಡ್ಡನ್ನೇ ತಂದುಕೊಡ್ತಾರೆ. ದುಡ್ಡು ಕೈಗೆ ಬಂದ ಮೇಲೆ ನಿಮಗೆ ಎಷ್ಟು ಕೊಡಬಹುದೂಂತ ನಿಶ್ಚಯಿಸ್ತೀನಿ" ಎಂದರು. ಪರಿಮಳ ಎದ್ದು "ಹಾಗೇ ಆಗಲಿ ದುಡ್ಡು ಕೈಗೆ ಬರಲಿ ಆಮೇಲೆ ಉಳಿದ ವಿಚಾರ ನೋಡಿ ಹಳೆಯ ವಿರಸ ಮರೆತರೆ ನಿಮಗೂ ಒಳ್ಳೇದು ಮುಂದೆ ಅಳಿಯ ಮಗಳು ಎಂದಿಗೂ ನಮ್ಮೋರಾಗಲ್ಲ. ಶ್ರೀಮಂತರು ಅನ್ನೋ ಒಂದೇ ಕಾರಣಕ್ಕೆ ಲಕ್ಷಾಂತರ ಸುರಿದು, ಆ ಪ್ರಭಾಕರನ ಮನೆಗೆ ಕೊಡಬೇಡಿ. ಅವರ ಮನೇಲಿ ಎಲ್ಲರೂ ಕುಡೀತಾರೆ. ಶಾರದಾನಂತ ಹಳ್ಳಿ ಹುಡುಗಿ ಆ ಮನೆ ಸೇರಿದರೆ ಕಕ್ಕಾಬಿಕ್ಕಿ ಆಗಿ ಕಣ್ಣು ಕಣ್ಣು ಬಿಡ್ತಾಳೆ. ನಾವು ಆ ಜನಗಳ ಬಗ್ಗೆ ಸರಿಯಾಗಿ ವಿಚಾರಿಸಿದ್ದೀವಿ. ಹಳ್ಳಿ ಹುಡುಗಿಗೆ ಹಳ್ಳಿ ವಾತಾವರಣ ಸರಿ ನಮ್ಮ ಚಿಕ್ಕಪ್ಪನ ಮಗ ಹತ್ತಾರು ಎಕರೆ ಹೊಲ ಗದ್ದೆ ಇದೆ. ಅವನು ಎಸ್ಸೆಲ್ಸಿ ಓದಿದ್ದಾನೆ. ತಿಂದ್ಕೊಂಡು ಉಂಡ್ಕೊಂಡು ಸುಖವಾಗಿರ್ತಾಳೆ. ನಾವೇ ಮೈಸೂರಿನಲ್ಲಿ ಒಂದಿನ ಮದುವೆ ಆಯತೂನಿಸ್ತೀವಿ. ನಿಮ್ಮ ದೊಡ್ಡ ಮಗ ಅನಂತನ್ನಂತು ನೀವು ಆಶೆ ಇಟ್ಕೊಳ್ಳಲೇಬೇಡಿ. ನಿನ್ನೆ ಸಹ ನಾವು ಕರಿಯಲಿಕ್ಕೆ ಹೋದಾಗ ಏನಂದಳು ಗೊತ್ತಾ ? ಆ ಅತ್ತೆ ಮಾವ, ಆ ಹಳ್ಳಿ ಎಲ್ಲಾ

ನಾವು ಮರೆತಿದ್ದೀವಿ. ನಮಗೆ ಆ ದುಡ್ಡು ಬೇಡಾ....ಅವರನ್ನ ಸಾಕೋ ಜವಾಬ್ದಾರಿ ಸಹ ಬೇಡಾಂದಳು. ಅತ್ತೆಯ ಮೇಲೆ ನೂರು ಬಗೆ ಚಾಡಿ ಹೇಳಿದಳು ಆದರೆ ನನಗೆ ಅಂಥ ದ್ವೇಷಾ ವಿರಸ ಇಲ್ಲ. ಏನೋ ಒಂದು ವಿಷ ಘಳಿಗೆ ಬರುತ್ತೆ ಹೋಗತ್ತೆ. ನಿಮಗೆ ನಾವಲ್ಲದೇ ಯಾರು ಮಾಡಬೇಕು ಹೇಳಿ?" ಎಂದಳು.

"ನಿಜಾಮ್ಮ ನಿನ್ನ ಮಾತು. ದುಡ್ಡು ಬರಲಿ. ನಿಮಗೆ ಕೇಳಿ ಎಲ್ಲಾ ನಿರ್ಧರಿಸ್ತೀನಿ. ಈ ವಾರದಲ್ಲಿ ರಾಮರಾಯರು ಬರಲಿದ್ದಾರೆ. ಹೇಗಿದ್ದರೂ ಬಂದಿದ್ದೀರಿ ಒಂದು ವಾರ ಇದ್ದು ಹೋಗಿ" ಎಂದರು.

ಸೀತಮ್ಮ ಕ್ರೋಧದಿಂದ "ಅವರಿಗೂ ಆ ದುಡ್ಡಿಗೂ ಸಂಬಂಧ ಏನು ? ನನ್ನ ಮೈಸೂರಲ್ಲಿ ಒಂದು ವಾರದಲ್ಲಿ ಎಷ್ಟು ಗೋಳು ಹೊಯ್ಕೊಂಡಿದ್ದಾರೆ ಗೊತ್ತಾ ?" ಎಂದರು.

ಆಚಾರ್ಯರು ರೇಗಿ—"ಸೀತಾ....ಜೀವಮಾನ ಪೂರ್ತಿ ನನ್ನ ಅನುಸರಿಸಿದ್ದಿ ನೀನು ? ಈಗ ನನ್ನ ಮಾತಿಗೆ ವಿರೋಧಿಸ್ತಿಯೇನು ? ಏನೋ ತಂದೆ ತಾಯಿ ಹಿರಿಯರು ಕಾಪಾಡ್ತೀವಿ....ಅಂತ ಮಕ್ಕಳು ಬಂದಾಗ ನೀನು ಹಾಗೆಲ್ಲಾ ಹಳೇ ದ್ವೇಷ ತೋರಿಸಬಾರದು. ದುಡ್ಡು ಮುಖ್ಯವೋ ? ಹೊಟ್ಟೇಲಿ ಹುಟ್ಟಿದ ಮಕ್ಕಳು ಮುಖ್ಯವೋ....?" ಎಂದರು.

ಸೀತಮ್ಮ ಅಳುತ್ತ "ನಂದೇನು ನಡೆಯಲ್ಲ ಈ ಮನೇಲಿ, ಎಲ್ಲಾ ನಿಮ್ಮದೆ ಕಾರುಬಾರು" ಎಂದು ಅಳುತ್ತ ಒಳಗೆ ಹೋದರು.

ಪರಿಮಳ ಸಂತಸದಿಂದ "ನೀವು ವಿವೇಕಿಗಳು ಮಾವ. ಹಿರಿಯರಿಗೆ ಯಾವಾಗಲು ದುಡ್ಡಿನ ವ್ಯಾಮೋಹವಿರಬಾರದು. ಈ ವಯಸ್ಸಿನಲ್ಲಿ ಮಕ್ಕಳ ಪ್ರೀತಿ ಸಂಪಾದಿಸಬೇಕು ಅದು ನಿಮಗೆ ಗೊತ್ತಿದೆ" ಎಂದಳು.

"ಸೀತಾ ಹಳೆ ಕಾಲದೋಳು ಒಂದುವಾರ ಅವಳು ಏನು ಹಾಕ್ತಾಳೋ ತಿಂದ್ಕೊಂಡು ಇದ್ದು ಬಿಡಿ. ದುಡ್ಡಿನ ವಿಷಯ ನಾನು ಸೆಟ್ಲ್ ಮಾಡ್ತೀನೀ ಈಗ ವಿಶ್ರಾಂತಿ ತಗೋ ಹೋಗಿ" ಎಂದರು. ಗಂಡಹೆಂಡತಿ ಹಸನ್ಮುಖದಿಂದ ಮಾಳಿಗೆ ಏರಿ ತಮ್ಮ ಕೋಣೆ ಹೊಕ್ಕರು.

"ಈ ವಾರದಲ್ಲಿ ರಾಮರಾಯರು ಕ್ಯಾಶ್ ಸಮೇತ ಬರ್ತಾರೆ. ಅವರ ಮಗನ್ನ ಡಿಟೈಲಾಗಿ ವಿಚಾರಿಸ್ತೀನಿ. ಶಾರದನ್ನ ಮದುವೆಗೆ ಒಂದಿಷ್ಟತ್ತು

ಸಾವಿರ ಖರ್ಚು ಮಾಡಿದರೆ ಎರಡು ಲಕ್ಷದವರೆಗೆ ನಮಗುಳಿಯುತ್ತೆ. ಸೊಗಸಾದ ಬಂಗ್ಲೆ ಎಬ್ಬಿಸಬಹುದು" ಎಂದಳು.

"ನಿಜವಾಗಲೂ ಅನಂತನಿಗೆ ಏನೂ ಕೊಡದೆ ಎಲ್ಲಾ ಅಪ್ಪ ನಮಗೆ ಕೊಡ್ತಾರಾ ?" ಎಂದ ಗೋವಿಂದ.

"ನಿಮ್ಮ ಅನಂತ ಈ ಕಡೆ ತಲೆ ಹಾಕದ್ಹಂಗೆ ಹೆದರಿಸಿ ಬಂದಿದ್ದೀನಿ. ನಾನೊಂದ್ರೆ ಏನೊಂತ ತಿಳಿದಿದ್ದೀರಿ ? ಚಾಣಕ್ಯನ ಅಪರಾವತಾರ ? ನಿಮ್ಮ ತಂದೇನ ಒಂದು ವಾರದಲ್ಲಿ ಹದ ಮಾಡ್ತೀನಿ" ಮುಪ್ಪಿನಲ್ಲಿ ದುಡ್ಡಿಗಿಂತ ಗಂಡು ಮಕ್ಕಳ ರಕ್ಷಣೆ ಮುಖ್ಯ ಅಂತ ಅವರಿಗೆ ದಿನವೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹೇಳಿ ಬ್ರೈನ್‌ವಾಷ್ ಮಾಡ್ತೀನಿ. ನಿಮ್ಮ ತಾಯಿದೇನು ಅವರ ಮುಂದೆ ಹಠ ನಡೆಯಲ್ಲ" ಎಂದು ಏನೇನೋ ಹೇಳುತ್ತಿದ್ದಳು.

ಆದರೆ ಅದೇ ಸಮಯದಲ್ಲಿ ಆಚಾರ್ಯರು ಒಳಕೋಣೆಯಲ್ಲಿ ಮಲಗಿದ್ದ ಹೆಂಡತಿಯೆದುರು ಕೂತು ಮೆಲುದನಿಯಲ್ಲಿ ಏನೇನೋ ಸಮಾಧಾನ ಪಡಿಸುತ್ತಿದ್ದರು.

ಸೀತಮ್ಮ ಎದ್ದು ನಿಂತು "ನಿಜವಾ....ನನ್ನ ಮಾತಿಗೆ ಬೆಲೆ ಕೊಡ್ತೀರಾ?" ಎಂದರು.

"ಹೌದು ! ಸೀತಾ.. .ನಾಚಿಕೆ ಬಿಟ್ಟ ಅತಿ ದುಷ್ಟರ ಜೊತೆಗೆ ಜಗಳದಿಂದ ಪ್ರಯೋಜನವಿಲ್ಲ ಭೇದೋಪಾಯವೇ ಇಂಥೋರಿಗೆ ಮದ್ದು. ನಾನು ಶಾನ್ಭೋಗರ ಜೊತೆ ನಿನ್ನೇನೆ ಮಾತಾಡಿದ್ದೀನಿ. ನಾಳೆ ಮೈಸೂರಿಗೆ ಹೋಗಿ ಬರ್ತೀನಿ. ಎಲ್ಲ ಗುಟ್ಟಾಗಿ ಇರಲಿ" ಎಂದು ತಾವು ಮುಂದೆ ಮಾಡಬೇಕಾದ ಕೆಲಸದ ಬಗ್ಗೆ ಹೇಳಿದರು.

ಸೀತಮ್ಮನಿಗೆ ಅತೀವ ಸಂತಸವಾಯ್ತು. "ಸದ್ಯ ! ಅಷ್ಟು ಮಾಡಿ ಅನಂತನ ಮನೆಗೆ ಹೋಗಿಬನ್ನಿ" ಎಂದು ಪತಿಗೆ ಕೆಲವು ವಿಷಯ ತಿಳಿಸಿದರು.

ಆಚಾರ್ಯರು ಸಮಾಧಾನ ಹೇಳಿ—"ನಿನ್ನ ಹೊಟ್ಟೆ ಸಂಕಟ ಗೊತ್ತಿದೆ ನಂಗೆ. ಆದರೆ ಎಲ್ಲಾ ಉಪಾಯವಾಗಿ ಮಾಡಬೇಕು. ಅವರ ತಪ್ಪು ಅವರಿಗೆ ಎತ್ತಿ ತೋರಿಸಬೇಕು" ಎಂದರು.

ಸೀತಮ್ಮ ಸಂತುಷ್ಟರಾಗಿ "ಆಗಲೀಂಪ್ರೆ...." ಎಂದರು.

* * * *

ಮುಂದೆ ಒಂದು ವಾರ ಪರಿಮಳ–ಗೋವಿಂದ ಹಳ್ಳಿಯಲ್ಲಿ ಇದ್ದರು. ಸ್ವಲ್ಪ ಸ್ವಾಭಿಮಾನಿಗಳಾದರೆ ಹೊರಟು ಬಿಡಬೇಕು ಅಂಥ ಸನ್ನಿವೇಶ. ಬೆಳಗ್ಗೆ ಅಂಗಳದ ಬಾವಿಯಲ್ಲಿ ಗೋವಿಂದ ನೀರು ಸೇದಿ ಹಾಕಿದರೆ ಎಂಟೂವರೆಗೆ ಹಾಸಿಗೆಯಿಂದ ಎದ್ದು ಬಂದು ಆ ತಣ್ಣೀರಿನಲ್ಲೇ ಸ್ನಾನ ಪಾನ ತೀರಿಸಿ ತಮ್ಮ ಬಟ್ಟೆಬರೆ ಒಗೆದುಕೊಳ್ಳಬೇಕು. ಒಂದು ಮೈಲುದ್ದ ನಡೆದು ಹೋಗಿ ಕಾಫಿ, ಇಡ್ಲಿ ಹೋಟೆಲಲ್ಲಿ ತಿಂದು ಬರುವರು.

ಆ ಬಸ್ ಸ್ಟಾಂಡ್ ಹೋಟೆಲ್ ಅಂಥಾ ಹೇಳಿಕೊಳ್ಳುವ ಹಾಗೂ ಇರಲಿಲ್ಲ. ದಿನ ಎರಡು ಹೊತ್ತು ತಿಳಿಸಾರನ್ನ ಸೀತಮ್ಮ ಇಡುತ್ತಿದ್ದರು.

ಮೊದಲು ನಾಲ್ಕು ದಿನ ಆಚಾರ್ಯರು ಕಣ್ಣಿಗೆ ಬೀಳಲಿಲ್ಲ. ಅಪ್ಪ ಎಲ್ಲಮ್ಮ....?" ಎಂದ.

ಸೀತಮ್ಮ ಬಿಗುವಾಗಿ "ಮನೇಲಿ ಕೂತರೆ ಹೊಟ್ಟೆ ಪಾಡು ನಡೀಬೇಕಲ್ಲಪ್ಪ ನಂಜನಗೂಡಿನ ಚಿಕ್ಕಣ್ಣೋರ ಮನೇಲಿ ಮಗೂಗೆ ನಾಮಕರಣ, ಹವನ, ಹೋಮ, ಶಾಂತಿ ಅಂತ ಇಟ್ಟುಕೊಂಡಿದ್ದಾರೆ. ಎರಡು ಮೂರು ದಿನ ಆಗತ್ತೆ ಬರೋದು" ಎಂದರು.

ಶಾರದ ಅಂತು ಕಣ್ಣಿಗೆ ಬೀಳುತ್ತಿರಲಿಲ್ಲ. ಕೆಲಸ–ಬೊಗಸೆ ಮುಗಿಸಿ, ಸೀತಮ್ಮ ಉಗ್ರಾಣದಲ್ಲಿ ಮಲಗಿ ಬಿಡುತ್ತಿದ್ದರು ನಾಲ್ಕುದಿನ ಕಳೆಯುವಷ್ಟರಲ್ಲಿ....ಅವನಿಗೆ ಸಾಕು ಸಾಕಾಯಿತು.

"ಈ ತಿಳಿಸಾರನ್ನ... ತಣ್ಣೀರು ಸ್ನಾನ ಮಾಡ್ತಾ ಇನ್ನು ಎಷ್ಟು ದಿನ ಇಲ್ಲಿರೋದು.. ಅಪ್ಪ ಬೇರೆ ಊರಲ್ಲೇ ಇಲ್ಲ. ಅಮ್ಮ ನೋಡಿದರೆ ಹೀಗೆ ಬಿಗುವಾಗಿರ್ತಾಳೆ" ಎಂದ ಗೋವಿಂದ. ಪರಿಮಳ ನಕ್ಕು—

"ಧನಲಕ್ಷ್ಮಿ ಸುಮ್ಮನೆ ಸಿಗಲ್ಲಪ್ಪ, ಸ್ವಲ್ಪ ಕಷ್ಟ ಪಡಬೇಕು. ಹೇಗಿದ್ದರೂ ಲೀವ್ ಹಾಕಿದ್ದೀವಲ್ಲ. ಅಲ್ಲಿ ಧಾವಂತದ ಜೀವನ. ಇಲ್ಲಿ ಹಗಲು ರಾತ್ರಿ ಮಲಗಿರಬಹುದು. ಬೆಳಗ್ಗೆ ಒಂಬತ್ತಕ್ಕೆ ಏಳೋದು. ಕಾಫಿಗೆ ಅಡ್ಡಾಡಿ ಬಂದು ಮಲಗೋದು ಊಟ ತಿಂಡಿ ಆದ ಮೇಲೆ ಮಲಗೋದು. ಒಂದು ವಾರ ಬೆಡ್‌ರೆಸ್ಟ್ ಅನುಭವಿಸ್ತೀನಿ. ನಿಮ್ಮ ತಾಯಿ ಬಿಗುವಿಗೆ ಹೆದರಬೇಡಿ. ನಿಮ್ಮ ತಂದೆ ನನ್ನ ಮಾತಿನ ಶೈಲಿಗೆ ಮರುಳಾಗಿದ್ದಾರೆ. ಅವರಿಂದ ದುಡ್ಡು ಗಿಟ್ಟಿಸಿ. ನಮ್ಮನೆ ವಾಸಕ್ಕೆ ಬಂದ ಮೇಲೆ ನಿಮ್ಮ ತಾಯೀನ ಹದ ಮಾಡ್ತೀನಿ" ಎಂದಳು.

ಈ ಮಧ್ಯೆ ಆ ದಿನ ಡಿ.ಸಿ.ಯವರ ಪತ್ರವೂ ಬಂತು. ಹಣದ ಸಮೇತ ಭಾನುವಾರ ಹಾಜರಾಗುವೆ, ಎಂದು.

ಆ ಪತ್ರ ಓದಿ, ಗೋವಿಂದ–ಪರಿಮಳ ಆನಂದಭರಿತರಾದರು. "ನೋಡಿದ್ರಾ ಇನ್ನು ಮೂರೇ ದಿನ....ಭಾಗ್ಯಲಕ್ಷ್ಮಿ ಓಡಿ ಬರ್‍ತಾಳೆ. ಈ ಮುದುಕರನ್ನ ಬೆದರಿಸ್ತೀನಿ. ಮರಳು ಮಾಡ್ತೀನಿ. ತುಪ್ಪಾ ಅಳೆಯೋರ ಕೈ ಜಿಡ್ಡಾಗದಿರೋಲ್ಲ" ಎಂದು ನಕ್ಕಳು. ಆದರೆ ಆ ಕಾಗದ ಆಚಾರ್ಯರ ತಂತ್ರವೆಂದಾಗಲಿ ವೇದ ಪಾರಂಗತರಾದ ಆಚಾರ್ಯರು ಎಂ.ಎ. ಓದಿದ ತನಗಿಂತ ಬುದ್ಧಿವಂತರೆಂದಾಗಲಿ ಅವಳಿಗೆ ಅರಿವಿರಲಿಲ್ಲ. ಸೋಮವಾರ ಮರೆಯಾಗಿದ್ದ ಆಚಾರ್ಯರು ಶುಕ್ರವಾರ ಸಂಜೆಗೆ ಕಾಣಿಸಿಕೊಂಡರು.

ಪತ್ನಿಗೆ ಎಲ್ಲಾ ವಿವರಿಸಿದರು. ಸೀತಮ್ಮನ ಸಂತೋಷಕ್ಕೆ ಪಾರವೇ ಇಲ್ಲ. "ಎಲ್ಲಾ ನನ್ನ ಮನಸ್ಸಿನ ಹಾಗೆ ನಡೆದಿದೆ. ಮೊದಲು ನಾನು ಶಾನುಭೋಗರ ಮನೆಗೆ ಹೋಗಿ ಅನಂತನ್ನ ನೋಡಿ ಬರ್‍ತೀನಿ" ಎಂದು ಓಡಿದರು.

ಗೋವಿಂದನಿಗೆ ಸಂಜೆ ತಂದೆ ಕಣ್ಣಿಗೆ ಕಂಡರು. ಮಹಡಿಯಿಂದಿಳಿದು ಬಂದ ಗೋವಿಂದ-ಪರಿಮಳ ಅವರಿಗೆ ನಮಸ್ಕರಿಸಿ "ಯಾವಾಗ ಬಂದಿರಿ ಅಪ್ಪ ? ಅಪರೂಪಕ್ಕೆ ನಾವು ಬಂದಾಗಲೇ ನಾಲ್ಕೈದು ದಿನ ಎಲ್ಲೋ ಹೊರಟು ಬಿಟ್ಟಿದ್ದೀರಿ" ಎಂದ.

"ಹೀಗೆ ವೈದಿಕ ಬ್ರಾಹ್ಮಣ ಅಂದ ಮೇಲೆ ಪೌರೋಹಿತ್ಯಕ್ಕೆ ಕರೆದೋರ ಮನೆಗೆ ಹೋಗಬೇಕಲ್ಲ" ಎಂದು ಚುಟುಕಾಗಿ ನುಡಿದರು ಆಚಾರ್ಯರು.

"ಡಿ. ಸಿ. ಯವರು ಭಾನುವಾರ ಬರ್‍ತಾರಂತೆ. ಚೆಕ್ ಬಿಡುಗಡೆ ಆಗಿ ಹಣ ಆಗಿದೆಯಂತೆ. ಬಹುಷಾಃ ನಮ್ಮ ಮೈಸೂರು ಸ್ಟೇಟ್ ಬ್ಯಾಂಕಿನ ಚೆಕ್ ತರಬಹುದು. ಹಣಕಾಸಿನ ವಿಷಯವೆಲ್ಲಾ ನಾವಿಬ್ಬರು ವಿಚಾರಿಸ್ಕೋತೀವಿ ಅವರು ಡಾಲರ್ಸ್ ಚೆಕ್ ಯಾವ ವಿದೇಶಿ ವಿನಿಮಯ ಕೇಂದ್ರದಲ್ಲಿ ಮುರಿಸಿ ಕೊಟ್ಟರು ಅಥವ ಒಳಗಿಂದೊಳಗೆ ಖಾಸಗಿಯವರಿಗೆ ಮಾರಿ ತಾವೇನಾದರೂ ಲಾಭ ಮಾಡಿಕೊಂಡಿದ್ದಾರಾ ? ಎಲ್ಲಾ ಉಪಾಯವಾಗಿ ನಾನು ಪರೀಕ್ಷೆ ಮಾಡ್ತೀನಿ ಏಕೆಂದರೆ ನಿಮಗೆ ಚೆಕ್ ಬಂದು ಮೂರು ತಿಂಗಳಾಯಿತು. ಆದರೆ ಹಣ ತರಿಸಿಕೊಡಲು ಇಷ್ಟೇಕೆ ತಡಮಾಡಿದರು ? ಪರಿಶೀಲಿಸ್ತೀನಿ" ಎಂದು ಪರಿಮಳ ಪ್ರೌಢಳಂತೇ ಫಾರಿನ್ ಚೆಕ್‌ಗಳು ಬಂದಾಗ

ಅನುಸರಿಸಬೇಕಾದ ನೀತಿ ನಿಯಮಗಳ ಬಗ್ಗೆ ಆಚಾರ್ಯರ ಎದುರು ಉಪನ್ಯಾಸ ನೀಡಿದಳು. ಆಚಾರ್ಯರು ಮೌನವಾಗಿ ಅವಳ ಶುಕವಾಣಿ ಆಲಿಸಿದರು

ಗೋವಿಂದ ಹಾಗು ಪರಿಮಳ ಕಾತುರದಿಂದ ಕಾಯುತ್ತಿದ್ದದ್ದು ಭಾನುವಾರ ಧನಲಕ್ಷ್ಮಿ ಆಗಮನವಾಗುವ ಪ್ರಕರಣವನ್ನು. ಆದರೆ ಶನಿವಾರ ಸಂಜೆಯೆ ಅವರೊಂದು ವಿಸ್ಮಯ ಪ್ರಕರಣ ಎದ್ದುರಿಸಬೇಕಾಯಿತು.

ಶನಿವಾರ ಐದು ಗಂಟೆಗೆ ಮಹಡಿಯಿಂದ ಇಳಿದು ಬರುವ ಹೊತ್ತಿಗೆ, ವತ್ಸಲ, ನಾಗರಾಜ, ಅವನ ಕಡೆಯ ತಮ್ಮ ಸತೀಶ ಬಂದಿದ್ದರು. ನಾಗರಾಜ ನಗುತ್ತ—

"ಮನೆಗೆ ಬಾರಯ್ಯ—ಒಂದು ಫಂಕ್ಷನ್ನಿದೆ ಸಿಹಿಯ ಊಟ ಮಾಡಿ ಹೋಗು" ಎಂದ. ಒಂದು ವಾರದಿಂದ ನಾಲಿಗೆ ಕಟ್ಟಿದ ಹಾಗಾಗಿತ್ತು ದಂಪತಿಗಳಿಗೆ.

"ನೀನು ಯಾವಾಗ ಮೈಸೂರಿಂದ ಬಂದಿ ? ಏನು ಫಂಕ್ಷನ್ ?" ಎಂದ ಗೋವಿಂದ.

"ನಮ್ಮ ಪ್ರಿನ್ಸಿಪಾಲ್ ಸಹ ಬಂದಿದ್ದಾರೆ. ಶನಿವಾರ ಕಾಲೇಜು ಮುಗಿಸಿ ಬಂದೆ. ಈ ದಿನ ಒಂದು ಸೀಕ್ರೆಟ್ ಫಂಕ್ಷನ್ ಇದೆ. ಏನೂಂತ ದಾರಿಯುದ್ದಕ್ಕೂ ಊಹಿಸಿ" ಎಂದ. ಸತೀಶ ತಾನೇ ಮನೆಯ ಬೀಗ ಹಾಕುತ್ತೇನೆಂದ. ನಾಗರಾಜ ವತ್ಸಲರೊಡನೇ ಗೋವಿಂದ, ಪರಿಮಳ ಹೊರಟರು.

"ನಿಮ್ಮ ತಂದೆಯ ಅರವತ್ತನೆಯ ವರ್ಷದ ಶಾಂತಿ, ನಿಮ್ಮ ಅಣ್ಣನ ಮಗನ ಮುಂಜಿ...ನಿನ್ನ ತಮ್ಮನ ಮಗನ ಚೌಲ" ಎಂದು ಏನೇನೋ ಹೇಳುತ್ತ ಬಂದ ಗೋವಿಂದ ಅಲ್ಲ ಅಲ್ಲ ಎನ್ನುತ್ತಿದ್ದ ನಾಗರಾಜ. ಇಡೀ ಹಳ್ಳಿಗೆ ಶಾನುಭೋಗರ ಮನೆಯೆ ದೊಡ್ಡದು. ಹೊರಗೆ....ಗೋಪಿಬಣ್ಣ ಬಳಿಸಿ.... ಒಳಕ್ಕೆ ನೆಲಕ್ಕೆ ಕೆಂಪು ಸಿಮೆಂಟ್ ಹಾಕಿದ ಮನೆ.

ಈ ದಿನ ಮನೆಯ ಮುಂದೆ ಹಸಿರು ಚಪ್ಪರಾ ನಾಗಸ್ವರ ಎಲ್ಲಾ ಕಂಡು ಬೆರಗಾದ ಗೋವಿಂದ. "ಈಗ್ಲಾದರೂ ಹೇಳಯ್ಯ ?" ಎಂದ· "ಒಳಗೆ ಬಾ . ನಿನಗೆ ಗೊತ್ತಾಗುತ್ತೆ" ಎಂದ ನಾಗರಾಜ.

ವಿಶಾಲ ಹಜಾರದಲ್ಲಿ ರೇಷ್ಮೆ ಸೀರೆ, ಹಾಗು ಸೂಟುಬೂಟಿನಿಂದ ಅಲಂ-ಕೃತರಾದ ಶ್ರೀಮಂತರಾದ ಗಂಡಸರು ಹೆಂಗಸರು ಒಂದು ಭಾಗದ ಕುರ್ಚಿ ತುಂಬಿದ್ದರು. ಈ ಕಡೆ ಹಾಸಿದ ಜಮಖಾನದ ಮೇಲೆ ಹಳ್ಳಿಯ ಮುಖ್ಯಸ್ತರಾದ ಜನ ಕುಳಿತಿದ್ಧರು.

"ಇಗೊ ! ನಮ್ಮ ಪ್ರಿನ್ಸಿಪಾಲ್ ಇಲ್ಲಿದ್ದಾರೆ. ನೀವು ಕೂತ್ಕೊಳ್ಳಿ" ಎಂದ. ಪ್ರಿನ್ಸಿಪಾಲ್, ಅವರ ಪತ್ನಿಗೆ ನಮಸ್ಕಾರ ಹೇಳಿ ಗೋವಿಂದ, ಪರಿಮಳ ಕೂತರು. ಕಣ್ಣೆದುರಿಗೆ ನಡೆಯುತ್ತಿರುವ ಸಮಾರಂಭ ಯಾವುದೆಂದು ಅರಗಿಸಿ ಕೊಳ್ಳಲು ಗೋವಿಂದನಿಗೆ ಹತ್ತು ನಿಮಿಷ ಬೇಕಾಯಿತು. ಬಂದಿರುವ ಆ ಶ್ರೀಮಂತ ಬೀಗರು ಡಾ|| ಪ್ರಭಾಕರನ ಕಡೆಯವರೆಂಬುದು ನಿಧಾನವಾಗಿ ಅರಿವಾಯಿತು. ಮುಂಭಾಗದ ಹಸೆಯ ಮಣೆಯ ಮೇಲೆ ಶಾರದಾ....ತನ್ನ ತಂದೆತಾಯಿ ಆ ಕಡೆ ಹಸೆಯಲ್ಲಿ, ಎದುರಿಗೆ ಡಾ|| ಪ್ರಭಾಕರ ಅವನ ತಂದೆ ತಾಯಿ....ಆಗಾಗ ಆರತಿ, ಎತ್ತುತ್ತ ಉಡುಗೊರೆ ನೀಡುತ್ತ ಗೌರಮ್ಮನ ಜೊತೆ ಓಡಾಡುತ್ತಿರುವವಳು ತನ್ನ ಅತ್ತಿಗೆ ಜಯಲಕ್ಷ್ಮಿ, ಬೀಗರನ್ನು ಉಪಚರಿಸುತ್ತ ಎಲ್ಲಾ ಉಸ್ತುವಾರಿ ನೋಡಿಕೊಳ್ಳುತ್ತ ನಗೆಮೊಗದಿಂದ ಓಡಾಡುತ್ತಿರುವವನು ತನ್ನ ಅಣ್ಣ ಅನಂತ. ತಂಗಿ ಶಾರದಳ ನಿಶ್ಚಯ ಸಮಾರಂಭ ನಡೆಯುತ್ತಿದೆ. ತಾನು ಕೇವಲ ಒಬ್ಬ ಪ್ರೇಕ್ಷಕ ಅಷ್ಟೆ.

ಮಂತ್ರೋಕ್ತವಾದ ನಿಶ್ಚಯ ಕಾರ್ಯಕ್ರಮ ಆಯಿತು. ಅನಂತರ ಬೀಗರಿಗೆ ಚಿರೋಟಿ, ಹಾಲುಕೀರಿನ ಊಟ. "ಊರಿಗೆ ಹೋಗುವ ಬೀಗರ ಕಡೆಯವರು ಮೊದಲು ಊಟ ಮಾಡಿ ಬಿಡಲಿ. ಆಮೇಲೆ ನಾವು ಹೆಣ್ಣಿನವರು" ಎಂದರು ಗೌರಮ್ಮ. ಕುರ್ಚಿಯ ಮೇಲೆ ಕೂತವರಿಗೆ ರಸ್ನಾ ವಿತರಣೆ ಆಯಿತು. ಮಂತ್ರ ಬಂಧಿತರಾದ ಮಹಾ ಸರ್ಪಗಳಂತೆ ಕುರ್ಚಿಗಂಟಿ ಕೂತಿದ್ದರು, ಗೋವಿಂದ, ಪರಿಮಳ. ಬೀಗರೆಲ್ಲಾ ಉಂಡು ಹೊರಡುವ ಸಮಯ . ಅನಂತ ಹಾಗು ನಾಗರಾಜನ ಅಣ್ಣಂದಿರು ತಾಂಬೂಲ ನೀಡಿ ಬೀಳ್ಕೊಟ್ಟರು. ಗೌರಮ್ಮ ನಿಗೂ....ಅವರುಗಳ ಬೀಗರ ಕಡೆಯವರು. ನಾಗುವಿನ ಮಗುವಿನ ನಾಮಕರಣ ಜಗ್ಗೆ ನಡೆದಿತ್ತು. ಆ ಉಡುಗೊರೆಗಳ ವಿತರಣೆಯೂ ನಡೆದಿತ್ತು.

ನಂತರ ಡಿ. ಸಿ. ರಾಮರಾಯರು ಅವರ ಪತ್ನಿಯವರು ಅವರ ಇಬ್ಬರು ಗಂಡು ಮಕ್ಕಳು. ಪ್ರಿನ್ಸಿಪಾಲ್ ಅವರ ಪತ್ನಿ....ಶಾನುಭೋಗರು, ಗೌರಮ್ಮ ನಾಗು, ನಾಗುವಿನ ಪತಿ, ಶಾನುಭೋಗರ ನಾಲ್ಕು ಗಂಡು ಮಕ್ಕಳು ಅವರ

ಪತ್ನಿಯರು ಮಕ್ಕಳು ಕೂತರು. ನಾಗರಾಜ, ವತ್ಸಲರ ಪಕ್ಕ ಪರಿಮಳಾ ಗೋವಿಂದರೂ ಕೂತರು.

ಕೋಸಂಬ್ರಿ, ಪಲ್ಯಗಳು, ಅಂಬೋಡೆ, ಚಿರೋಟಿ, ಚಿತ್ರಾನ್ನ, ಪಾಯಿಸ ಗಳಿಂದ ಎಲೆ ತುಂಬಿತ್ತು.

ಇನ್ನೇನು ಊಟ ಪ್ರಾರಂಭವಾಗಬೇಕು. ಅದರೆ ಅಷ್ಟರಲ್ಲಿ ಅಂಜೂರ ಬಣ್ಣದ ರೇಶ್ಮೆಸೀರೆ ಉಟ್ಟ ಸೀತಮ್ಮ ಎರಡು ಪುಟ್ಟ, ಪುಟ್ಟ ಕಪ್ಪಿನಲ್ಲಿ ಹಾಲು ಕೀರು ತಂದು ಪರಿಮಳ ಹಾಗು ಗೋವಿಂದರ ಎಲೆಯ ಮುಂದಿರಿಸಿದರು.

ಗೋವಿಂದ, ಪರಿಮಳ , ನೀವಿಬ್ಬರು ಬಾಯಿ ಸಿಹಿ ಮಾಡಿಕೊಳ್ಳಿ. ಈ ಲೋಟದಲ್ಲಿರುವ ಪಾಯಿಸ ಕುಡಿದು ಬಾಯಿ ಸಿಹಿ ಮಾಡಿಕೊಂಡು.... ಶಾರದನಿಗೆ ಹರಿಸಿಬಿಟ್ಟು, ಮನೆಗೆ ಹೋಗಿ ನಾನು ಮಾಡಿಟ್ಟ ತಿಳಿಸಾರು, ಅನ್ನ ಊಟ ಮಾಡಿ" ಎಂದರು.

"ಊಟಕ್ಕೆ ಕೂತ ಎಲೆ ಬಿಟ್ಟು ಎಬ್ಬಿಸಬೇಡಾ ಸೀತಾ.. ಎಲೆ ಮುಂದೆ ಕೂತಿದ್ದಾರೆ ಚಿರೋಟಿ, ಹಾಲು ಕೀರಿನ ಊಟ ಮಾಡಿ ಊರಿಗೆ ಹೋಗಲಿ" ಎಂದು ಆಚಾರ್ಯರು ನುಡಿದರು.

"ಊಟಾ ಮಾಡ್ಲಿಕ್ಕೆ ಮುಖ ಇದ್ದರೆ ಮಾಡಲಿ, ಆದರೆ ನನ್ನ ಮನ ಸ್ಯಾಕೆ ಹೀಗೆ ಕಲ್ಲಾಗಿದೆ. ನಾನು ಕಥೆ ಹೇಳ್ತಾಗೆ ಹೇಳ್ತೀನಿ, ಕೇಳಿಸಿಕೊಳ್ಳಿ. ಅವರ ಕಾಲೇಜಿನ ಪ್ರಿನ್ಸಿಪಾಲರು ಬಂದಿದ್ದಾರೆ ಅವರೂ ಕೇಳಿಸಿಕೊಳ್ಳಲಿ" ಎಂದು ಸೀತಮ್ಮ ಕಥೆ ಪ್ರಾರಂಭಿಸಿದರು.

"ಬಹು ಬಡತನದಿಂದ ಪೌರೋಹಿತ್ಯದಿಂದ ನಡೀತ ಇದ್ದ ಸಂಸಾರ ನಮ್ಮದು. ದೇವರು ಹೊಟ್ಟೆ ತುಂಬ ಅನ್ನ ಒಂದು ಕಾಲ ಕಾಲಕ್ಕೆ ಕೊಡ್ತಿದ್ದ. ಮೂರು ಮಕ್ಕಳನ್ನು ಹೇಗೊ ಬೆಳೆಸಿದಿವಿ. ಎಸ್ಸೆಲ್ಸಿಯವರಿಗೆ ಓದಿಸಿದೆವು.

ಅನಂತ ಮೈಸೂರು ಸೇರಿ ಹೇಗೋ ಕಷ್ಟಪಟ್ಟು, ವಾರನ್ನ ಮಾಡಿ ಕೊಂಡು, ಅವರಿವರಿಗೆ ಪಾಠ ಹೇಳ್ತಾ ಹಣ ಸಂಪಾದಿಸ್ಥಿ ಬಿ.ಎ., ಬಿ. ಎಡ್. ಮುಗಿಸಿಕೊಂಡ. ಹೈಸ್ಕೂಲ್ ಮಾಸ್ತರಾದ. ತಾಯಿಗೆ, ತಂಗಿಗೆ ಅಂತ ನೂರಿನ್ನೂರು ಕಳಿಸ್ತಿದ್ದ. ಆ ದಿನಗಳಲ್ಲಿ ನಮ್ಮ ಗೋವಿಂದ ಕಾಲೇಜು ಸೇರಿದ್ದ. 'ಅಮ್ಮಾ....ಅಣ್ಣಾ ನಿನಗೆ ಕಳಿಸಿದ ದುಡ್ಡು ನನಗೆ ಕಳಿಸು. ನನಗೆ ತೊಂದರೆ ಇದೇ' ಅಂತ ಗೋಗರಿತ, ಮರಳು ಮಾಡ್ತ ಇದ್ದ. ನ್ಯಾಯವಾಗಿ ದೊಡ್ಡ ಮಗ ಕಳಿಸಿದ ಹಣದಲ್ಲಿ, ಇರೋ ಒಬ್ಬ ಮಗಳಿಗೆ ಒಂದಿಷ್ಟು ಬಣ್ಣಾ

ಬಂಗಾರ ಮಾಡಬೇಕೂಂತ ಆಸೆ ಇತ್ತು ನನಗೆ. ಆದರೆ "ಮುಂದೆ ನಾನು ಬೇಕಾದ್ದು ಮಾಡಿಸ್ತೀನಿ ಅಮ್ಮ. ಅಣ್ಣನ ಹಾಗೆ ಕಂಜೂಸ್ ನೂರಿನ್ನೂರಲ್ಲ. ಸಾವಿರಾರು ರೂಪಾಯಿ ಸಂಪಾದಿಸಿ ಕೊಡ್ತೀನಿ" ಅಂತ ಗೋವಿಂದ ಹೇಳಿದ.

ಕೆಲಸಕ್ಕೆ ಸೇರಿದ ಎರಡು ವರ್ಷದ ನಂತರ ಅನಂತನ ಮದುವೆ ಆಯಿತು. ಮದುವೆ ಆದಮೇಲು ಅನಂತ ತನ್ನ ಧೈರ್ಯ ಬಿಡಲಿಲ್ಲ. ನಾಲ್ಕು ವರ್ಷ ತನ್ನ ಕೈಲಾದಷ್ಟು ಐವತ್ತು, ನೂರು ಹೀಗೆ ಕಳಿಸ್ತಾ ಇದ್ದ. ನಾಲ್ಕು ವರ್ಷದಲ್ಲಿ ಎರಡು ಮಕ್ಕಳ ತಂದೆಯೂ ಆದ. ಸಂಸಾರನಾ ತೂಗಿಸ್ತಾ ನಮಗೂ ಚೂರು ಪಾರು ಕಳಿಸ್ತಿದ್ದರಿಂದ ಅನಂತನ ಸ್ಥಿತಿ ಸಾಧಾರಣ ವಾಗಿತ್ತು.

ಈ ವೇಳೆಗೆ ಗೋವಿಂದ ಎಂ ಎ. ಮುಗಿಸಿ ಲೆಕ್ಚರರ್ ಆದ. ನಮ್ಮ ಅಪ್ಪಣೆ ಸಹ ಕೇಳದೇ ಮೊದಲೇ ತಾನು ಪ್ರೀತಿಸಿದ ಅನುಕೂಲಸ್ಥರ ಮನೆಯ ಹುಡುಗಿಯನ್ನ ವಿವಾಹವಾದ.

ಆ ಮದುವೆಯಲ್ಲಿ ನಮ್ಮದು ಗೌರವ ಅತಿಥಿಗಳ ಪಾತ್ರ. ಬೊಂಬೆಯ್ಹಾಗೆ ಕೂತಿದ್ದು....ಹಸೆಯ ಮೇಲೆ ಕೂತು ಎದ್ದು ಬಂದೆವು. ಆರು ವರ್ಷ ಅನಂತ ಕಳಿಸಿದ್ದ ದುಡ್ಡೆಲ್ಲಾ ಗೋವಿಂದನಿಗೆ ಸುರಿದಿದ್ದೆ.

ನಿಜವಾಗಿ ಮಗಳ ವ್ಯಾಮೋಹದಿಂದ ಇಟ್ಟುಕೊಂಡಿದ್ದರೆ ಒಂದು ಪೋಸ್ಟಾಫೀಸಿಗೆ ಕಟ್ಟಿದ್ದರೆ ಇಪ್ಪತ್ತು ಸಾವಿರದವರಿಗೆ ಬೆಳಸಬಹುದಿತ್ತು. ಹೆಣ್ಣು ಮಗಳು ಎಂದಿದ್ರು ಪರರ ಮನೆಗೆ ಹೋಗೋ ಹುಡುಗಿ ಗಂಡು ಮಕ್ಕಳೇ ನಮ್ಮವರು ಅಂತ ಭ್ರಮೆಯಿಂದ ಅಂಥಾ ಬಡತನದಲ್ಲಿ ಗೋವಿಂದ ನಿಗೆ ಇದ್ದ ಬದ್ದದ್ದು ಸುರಿದಿದ್ದೆ.

ಆದರೆ ವಿವಾಹವಾದ ಮೇಲೆ ಮಾವನಿಂದ ಸಾಕಷ್ಟು ಬಳುವಳಿ ಸ್ವೀಕರಿಸಿದ್ದ. ಗೋವಿಂದನಿಗೆ ಐಶ್ವರ್ಯದ ಹುಚ್ಚು ಹಿಡಿದಿತ್ತು. ಗಂಡ ಹೆಂಡತಿ ಇಬ್ಬರೂ ದುಡೀತಿದ್ದರೂ....ತಾಯಿಯಾದ ನನಗೆ ಮೂರು ಕಾಸು ಕಳಿಸ್ತಿರಲಿಲ್ಲ. ಒಂದು ಕಾಗದ ಸಹ ಬರೀತಾ ಇರಲಿಲ್ಲ ಅನಂತನ ಮನೆಗೆ ಹೋಗಿ ಆಗಾಗ ಜಂಭ ಕೊಚ್ಚಿಕೊಳ್ಳೋದು.

"ನೀವೇನು ಮದುವೆ ಆದ ಆರು ವರ್ಷದಿಂದ ಈ ಒಂಟಿ ಕೋಣೆ ಮನೇಲಿದ್ದೀರಿ. ಮುನ್ನೂರು ರೂ. ಬಾಡಿಗೆ ಮನೆ. ಬಂದೋರಿಗೆ ಒಂದು ಕುರ್ಚಿ ಸಹ ಗತಿಯಿಲ್ಲ. ಚಾಪೆ ಮೇಲೆ ಕೂಡಿಸ್ತೀರಿ.

ನಮ್ಮನೇಲಿ ನೋಡಿ, ಮೊದಲನೆ ವರ್ಷವೇ ಸೋಫಾ, ಕುರ್ಚಿ, ಫ್ರಿಜ್, ಟಿ ವಿ, ವೀಡಿಯೋ ಹತ್ತು ಸಾವಿರ ರೂ.ಗಳ ಬೆಳ್ಳಿಸಾಮಾನು ಮಾಡಿ ಕೊಂಡಿವಿ. ಈ ವರ್ಷ ಐವತ್ತು ಸಾವಿರ ರೂ. ಕೊಟ್ಟು ಸೈಟ್ ತಗೊಂ–ಡಿವಿ. ಅದು ನಮ್ಮ ಪ್ಲಾನ್" ಎಂದು ಏನೇನೋ ಜಂಬಾ ಕೊಚ್ಚಿಕೊಳ್ಳು-ತ್ತಿದ್ದರು. ವಾರಗಿತ್ತಿಯರು ಅಂದ್ಮೇಲೆ ಸಹಜವಾಗಿ ಹೊಟ್ಟೇಲಿ ಕಲಕಲ ಆಗತ್ತೆ, ಅನಂತನ ಹೆಂಡ್ತೀನು ಬದಲಾದಳು ಅನಂತನಿಂದಲೂ ದುಡ್ಡು ಬರೋದು ನಿಂತಿತು ತಮ್ಮ.. ತಮ್ಮ ಮನೆ ವೈಭವದಲ್ಲಿ ನಿರತರಾಗಿದ್ದ ಇವರಿಗೆ ತಂಗಿಯ ಮದುವೆ ಹೊಣೆ ಬೇಡವಾಯಿತು. ಅರವತ್ತು ವರ್ಷ ಮುದುಕರಾದ ನಮ್ಮ ಯಜಮಾನರು ಇಬ್ಬರು ವಯಸ್ಸಿನ ಗಂಡು ಮಕ್ಕಳಿದ್ದು....ಇಪ್ಪತ್ತೈದು ವರ್ಷವಾದರೂ ಮಗಳಿಗೆ ಮದುವೆ ಮಾಡ ಲಾರದೇ ಸೋತರು. ಶಾರದಂಗೆ ಒಳ್ಳೇ ವರ ತಾನಾಗಿ ದೈವಿಕವಾಗಿ ಗೊತ್ತಾಯಿತು.

ಗಂಡು ಮಕ್ಕಳು ಆಗಾಗ ತಂಗಿಯನ್ನ ಕರೆಸಿ ಅಲ್ಲಲ್ಲಿ ಒಂದು ಗಂಡು ತೋರಿಸಿ ಒಂದು ಪ್ರಯತ್ನ ಸಹಾ ಮಾಡಲಿಲ್ಲ. ಈಗ ಎರಡು ವರ್ಷದ ಹಿಂದೆ ಒಮ್ಮೆ ನಾನು ಬಹಳ ಕೆಮ್ಮು ಕಾಡಿಸ್ತಿದ್ದರಿಂದ ಗೌರಮ್ಮನವರ ಬಲ ವಂತಕ್ಕೆ ಗೋವಿಂದನ ಮನೆಗೆ ಹೋದೆ.

ನಾನು ಹೆತ್ತ ಮಗ. ಮಗನ ಮನೇಲಿ ಎರಡು ತಿಂಗಳು ಇರಲಿಕ್ಕೆ ಅಧಿಕಾರವಿದೆ ಅಂತ ಭ್ರಮಿಸಿದೆ. ನನ್ನ ಕಾಯಿಲೆ ವಾಸಿ ಮಾಡಿಕೊಳ್ಳೋದರ ಜೊತೆಗೆ ಶಾರದನಿಗೆ ಒಂದೆರಡು ಗಂಡು ತೋರಿಸಿ ಪ್ರಯತ್ನ ಮಾಡಪ್ಪಾ ಅಂತ ಹೇಳುವವಳಿದ್ದೆ.

ಆದರೆ ಮಗನ ಮನೇಲಿ ಎರಡು ಹೊತ್ತು ಅನ್ನ ತಿನ್ನೋದೇ ಅಪರಾಧ ವಾಯ್ತು. ಬಂದ ದಿನವೇ ಜಗಳ ಆಡಿ ಒಂದು ವಾರ ಮಾತ್ರ ಇದ್ದು ಹೊರಟು ಬಿಡಬೇಕು ಅಂತ ಶರತ್ತು ಹಾಕಿದಳು ಪರಿಮಳ."

ಆಚಾರ್ಯರು ನಿಧಾನವಾಗಿ ಊಟಾ ಮಾಡಿ ಎಂದು ಎಲೆಯ ಮುಂದೆ ಸುತ್ತಾಡುತ್ತ ಮೆಲುದನಿಯಲ್ಲಿ ಉಪಚಾರ ಮಾಡುತ್ತಿದ್ದರು. ಅಡಿಗೆಯವರು ಬಡಿಸುತ್ತ ಇದ್ದ ರುಚಿಕರ ಪದಾರ್ಥ ಎಲ್ಲರು ತಿನ್ನುತ್ತಿದ್ದರು.

ಜೊತೆಗೆ ಎದುರು ಕುರ್ಚಿಯ ಮೇಲೆ ಕುಳಿತು ಸೀತಮ್ಮ ಹೇಳುವ ಕಥೆಯನ್ನು ಆಲಿಸುತ್ತಿದ್ದರು. ಗೋವಿಂದ, ಪರಿಮಳ ಎಲೆಯ

ಮುಂದೆ ತಲೆ ತಗ್ಗಿಸಿ ಅಪಮಾನದಿಂದ ಕುಳಿತಿದ್ದರು

ಒಂದು ವಾರ ಅವರ ಮನೆಯಲ್ಲಿ ತನಗೆ ಸೊಸೆ ಅಡಿಗೆ ಮಾಡಿ ಬಡಿಸಿದ ವೈಖರಿ ಬಣ್ಣಿಸಿದರು.

"ಮಗ ಸೊಸೆ ಮದುವೆ ವಾರ್ಷಿಕೋತ್ಸವ ಇತ್ತು. ನಮ್ಮ ಶಾರದನ ಕೈಲೆ ಬಗೆಬಗೆ ಅಡುಗೆ ಮಾಡಿಸಿದ್ದರು. ಆದರೆ ನಮ್ಮ ತಾಯಿ ಮಗಳಿಗೆ ಬಡಿಸಿದ್ದು ಬರಿ ನೀರು ಸಾರು ಅನ್ನ. ಎಂಟು ದಿನ ನಾವಿದ್ದುದ್ದಕ್ಕೆ ಅನಂತ ನಲ್ಲಿಗೆ ಹೋಗಿ ಐನೂರು ರೂ. ಕಿತ್ತುಕೊಂಡಿದ್ದಾಳೆ. ಅದರಲ್ಲಿ ನನಗೆ ಅವಳು ಖರ್ಚು ಮಾಡಿದ್ದು ಮುನ್ನೂರು. ಕಾಯಿಲೇ ಬಿದ್ದ ತಾಯಿ ಹೆಸರಲ್ಲಿ ಇನ್ನೊಬ್ಬ ಮಗನಿಂದ ಬಲವಂತವಾಗಿ ದುಡ್ಡು ಕಿತ್ತು .. ಅದರಲ್ಲಿ ಇನ್ನೂರು ರೂಪಾಯಿ ಉಳಿಸಿಕೊಂಡು ಈ ಮಗ ಸೊಸೆ....ಈಗ ನಮಗೆ ದುಡ್ಡು ಬಂತೂಂತ ಪಾಲು ಕೇಳಲಿಕ್ಕೆ ಬಂದಿದ್ದಾರೆ. ಇಂಥಾ ಭಂಡರಿಗೆ ಏನು ಕೊಡಬೇಕು ? ಏನು ಮಾಡಬೇಕು ? ನೀವೇ ಹೇಳಿ" ಎಂದರು.

ಪ್ರಿನ್ಸಿಪಾಲರು ಗೋವಿಂದನ ಕಡೇ ತಿರುಗಿ—"ನಿಮ್ಮ ವರ್ತನೆ ತುಂಬ ವಿಷಾದನೀಯ ಮಿ|| ಗೋವಿಂದ" ಎಂದರು. ಗೋವಿಂದ, ಪರಿಮಳ ತಗ್ಗಿಸಿದ ತಲೆ ಎತ್ತಲಿಲ್ಲ.

ಆಚಾರ್ಯರು ಗಂಭೀರವಾಗಿ "ಗಂಡು ಮಕ್ಕಳಿಗೆ ಕೊಡಲು ಇದು ಪಿತ್ರಾರ್ಜಿತ ಆಸ್ತಿಯಲ್ಲ. ಮೂವತ್ತು ವರ್ಷ ನನ್ನೊಂದಿಗೆ ಬಡತನ ಅನುಭವಿಸಿದ ಧರ್ಮಪತ್ನಿಗಾಗಿ ನಾನು ಶ್ರೀ ಲಕ್ಷ್ಮಿ ವ್ರತ ಆಚರಿಸಿದೆ. ಬಾರೆ ಭಾಗ್ಯದ ಸಿರಿಯೇ ಅಂತ ಆಕೆ ಮೊರೆ ಇಟ್ಟಳು. ಹೇಗೊ ಅನಿರೀಕ್ಷಿತವಾಗಿ ಹಣಾ ಬಂತು. ನನ್ನ ವೈದಿಕ ವಿದ್ಯಾಸಂಪತ್ತು ನಾನೆಂದು ಮಾರಲು ಹೊರಡಲಿಲ್ಲ. ಜ್ಞಾನಾರ್ಜನೆಗೆ ಬಂದವರೆಂದು ತಿಳಿಸಿ ಹೇಳಿದೆ. ಅನಿರೀಕ್ಷಿತವಾಗಿ ಬಂದ ಸಂಪತ್ತು....ಸೀತಾ....ಹೇಗೆ ವಿತರಣೆ ಮಾಡುತ್ತಾಳೋ ಅವಳದು" ಎಂದರು. ಡಿ.ಸಿ.ಯವರ ಧರ್ಮಪತ್ನಿ "ಹೇಗೆ ವಿತರಣೆ ಮಾಡುತ್ತೀರಿ ಸೀತಮ್ಮ ?" ಎಂದು ನಗುತ್ತ ಕೇಳಿದರು.

ಸೀತಮ್ಮ ಗಂಭೀರವಾಗಿ—"ಎಲ್ಲಾ ಮನೆಯವರೇ ಇದ್ದೀರಿ, ನಿಜಾ ಹೇಳ್ತೀನೆ. ಶಾರದಳಿಗೆ ಹನ್ನೆರಡು ತೊಲ ಚಿನ್ನಾ ಹಾಕಿ ಸುವರ್ಣಾಲಂಕಾರ ಭೂಷಿತಳಾದ ಮಗಳನ್ನ ಕನ್ಯಾದಾನ ಮಾಡಿಕೊಡ್ತೀವಿ. ನಾಗು ಮದುವೆ ನಡೆದ ಮಟ್ಟಿಗೆ ಅಂದರೆ ಅರವತ್ತು-ಎಪ್ಪತ್ತು ಸಾವಿರ ಖರ್ಚು ಬರಬಹುದು.

ಅನಂತನಿಗೆ ಒಂದು ಟೀವಿ ಒಂದು ಫ್ರಿಜ್ ಹಾಗು ಒಂದು ಅಲ್ಮೇರ ತೆಗೆದುಕೊಡ್ತೀನಿ. ಗ್ಯಾಸ್, ಮಿಕ್ಸರ್ ಹೇಗೋ ಅವನೇ ಮಾಡಿಕೊಂಡಿದ್ದಾನೆ ಅನಂತನ ಮಗಳಿಗೆ ಈಗ ನಾಲ್ಕು ವರ್ಷ. ಆ ಮಗು ಹೆಸರಲ್ಲಿ ಹತ್ತು ಸಾವಿರಕ್ಕೆ ಒಂದು ಡಬ್ಲ್ಯು.ಎಸ್.ಸಿ ತಗೋತೀನಿ ಆರಾರು ವರ್ಷಕ್ಕೆ ಡಬ್ಬಲ್ ಆಗತ್ತೆ. ಆ ಮಗು ಹದಿನೆಂಟು ವರ್ಷ ಆಗೋ ಹೊತ್ತಿಗೆ ನಲವತ್ತು ಸಾವಿರದವರೆಗೆ ಬೆಳದಿರತ್ತೆ. ಅವಳ ಮದುವೆ ಖರ್ಚಿಗೆ ಆಗತ್ತೆ. ಏಕೆಂದರೆ ಅನಂತ ಹಗಲು ರಾತ್ರಿ ದುಡಿದರೂ ಅವನೊಬ್ಬನ ಸಂಪಾದನೇಲಿ ಏನು ಉಳಿತಾಯ ಮಾಡಿಲ್ಲ ಒಂದ್ಯೆವತ್ತು ಸಾವಿರ ನನ್ನ ಹೆಸರಲ್ಲಿ ಮಂಥ್ಲಿ ಸ್ಕೀಮಲ್ಲಿ ಹಾಕಿಕೊಳ್ತೀನಿ ತಿಂಗಳಿಗೆ ಐನೂರು ರೂ. ಬರಬಹುದು. ಆಗಾಗ ತವರಿಗೆ ಬಂದ ಮಗಳಿಗೆ ಉಪಚಾರ ಮಾಡ್ಲಿಕ್ಕೆ ಹಾಗು ವರ್ಷಕ್ಕೆ ಒಮ್ಮೆ ಗೌರಮ್ಮನ ಹಾಗೆ ಕೈ ತುಂಬ ಎರಡು ಸಾವಿರ....ಮೂರು ಸಾವಿರ ರೂ. ತಗೊಂಡು ಮಗನ ಮನೆಗೆ ಹೋಗಿ ಇದ್ದು ಬರ್ತೀನಿ. ನಮಗೂ ಮಗ ಸೊಸೆ ಮೊಮ್ಮಕ್ಕಳೂಂತ ವಾಂಛೆ ಇರತ್ತೆ. ಅನಂತನಲ್ಲಿ ಸ್ವಲ್ಪ ಧರ್ಮ ಗುಣವಿದೆ, ಲೋಕಭೀತಿ ಇದೆ. ತಂದೆಗೆ ದುಡ್ಡು ಬಂತೂಂತ ತಿಳಿದರೂ ಕೇಳಲಿಕ್ಕೆ ಬರಲಿಲ್ಲ. ತಂಗಿ ಮದುವೆ ಹೊಣೆ ಹೊತ್ತಿಲ್ಲ. ತಂದೆ ತಾಯಿಗೆ ತಾವೇನು ಮಾಡಿಲ್ಲ. ಭಂಡರ ಹಾಗೆ ದುಡ್ಡು ಕೇಳಲಿಕ್ಕೆ ಹೋಗಬಾರದು ಅನ್ನೋಷ್ಟು ಪಾಪಪ್ರಜ್ಞೆ ಇದೆ. ಅನಂತನ ಹೆಂಡತಿಯೂ ಅಂಥಾ ಕೆಟ್ಟವಳಲ್ಲ. ಬಡತನದ ಘರ್ಷಣೆ ಹಾಗೂ ಇದ್ದೂರಲ್ಲೇ ಇರೋ ವಾರಗಿತ್ತಿ, ಮೈದುನನ ಏಳಿಗೆಗೆ ಸ್ತ್ರೀ ಸಹಜವಾಗಿ ಅವಳ ಮನಸ್ಸು ಕ್ಷೋಭೆಗೊಂಡಿದ್ದು.... ಅತ್ತೆ ಮಾವಂದಿರಿಗೆ ದುಡ್ಡು ಕಳಿಸೋದು ನಿಲ್ಲಿಸಿದಳು. ಇದು ಕ್ಷಮಿಸೋ ಮಟ್ಟಿನ ಅಪರಾಧ. ಮುಂದೂ ಕೈ ತುಂಬ ದುಡ್ಡು ತಗೊಂಡು ಹೋದರೆ... ನಗ್ತ ಸೇವೆ ಮಾಡೋ ಅಷ್ಟು ಒಳ್ಳೇತನ ಅವಳಲ್ಲಿದೆ. ನನಗೂ ಹಳ್ಳಿ ವಾಸ ಬೇಜಾರಾಗಿರತ್ತೆ. ಆಗಾಗ ಮಗನ ಮನೆಗೆ ಹೋಗ್ತೀನಿ. ಆದರೆ ಅನಂತನ ಮನೆಗೆ ಮಾತ್ರ ಮುಂದು, ನಮ್ಮ ನಂತರ ಇಪ್ಪತ್ತೈದು ಸಾವಿರ ಅನಂತನಿಗೆ....ಇಪ್ಪತ್ತೈದು ಸಾವಿರ ಶಾರದಳಿಗೆ ಸೇರಬೇಕು" ಎಂದರು.

ಪರಿಮಳೆಯ ಬಣ್ಣ ಬಯಲಾದುದಕ್ಕೆ ವತ್ಸಲೆಗೆ ಬಹು ಸಂತೋಷವಾಗಿತ್ತು. ಇಲ್ಲದ ಒಳ್ಳೆತನವನ್ನು ಕೊಚ್ಚಿಕೊಳ್ಳುವ ಅವಳ ಬಗ್ಗೆ ಬೇಸರ

ವಾಗಿತ್ತವಳಿಗೆ. ತಮ್ಮ ಪ್ರಿನ್ಸಿಪಾಲರ ಎದುರಿಗೆ ಅವಳ ಒಳಗುಟ್ಟು ಹೀಗೆ ಬಯಲಾದುದು ಅವಳಿಗೆ ಆನಂದವಾಗಿತ್ತು.

"ನಿಮ್ಮ ಚಿಕ್ಕ ಮಗ ಸೊಸೆಗೆ ಏನು ಕೊಡ್ತೀರಿ ಆಂಟಿ ?" ಎಂದಳು. ಸೀತಮ್ಮ ನಗುತ್ತ—

"ಅರ್ಧ ಕಪ್ಪು ಹಾಲು ನೀರು ಕೊಟ್ಟು, ಬಾಯಿ ಸಿಹಿ ಮಾಡ್ತೀನಿ. ಹಿಂದೊಮ್ಮೆ ಅವಳು ನನಗೆ ಒಂದು ಜಾಮೂನು ತಿನ್ನಿಸಿ ಬಾಯಿ ಸಿಹಿ ಮಾಡಿದ್ದಳು. ಆದರೆ ಇಂಥಾ ಸ್ವಾರ್ಥಿಗಳಿಗೆ ಒಂದು ಬುದ್ಧಿವಾದ. ಐಶ್ವರ್ಯಾಕಾಂಕ್ಷೆ ಎಲ್ಲರಿಗೂ ಇರುತ್ತೆ. ಆದರೆ ಹೆತ್ತ ತಂದೆ ತಾಯಿಗಳಿಗೆ ಒಂದು ತುತ್ತು ಅನ್ನ ಹಾಕದೇ ಗೋಳಾಡಿಸಿ, ಮುಪ್ಪಿನ ತಂದೆ ತಾಯಿಗಳ ಹೊಣೆ ಹೊರದೇ ಇಪ್ಪತ್ತೈದು ಮೀರಿದ ತಂಗಿಯರಿಗೆ ಒಂದು ಮದುವೆ ಸಹ ಮಾಡದೇ....ಬರಿ ಹೆಂಡತಿ ದಾಸನಾಗಿ ಫ್ರಿಜ್ ತಗೊಂಡೇ....ಟಿ.ವಿ. ತಗೊಂಡೆ. ವೀಡಿಯೋ ತಗೋಂಡೇ, ಸ್ವಂತ ಮನೆ ಕಟ್ಟಿಸಿದೆ ಅಂತ ಜಂಭಾ ಹೊಡೆದರೇ ಆ ಐಶ್ವರ್ಯ ಧರ್ಮೋಕ್ತವಾದುದಲ್ಲ. ಬಾರೆ ಭಾಗ್ಯದ ಸಿರಿಯೆ ಅಂತ ಶ್ರೀ ಲಕ್ಷ್ಮೀನ್ನ ಆರಾಧಿಸಬೇಕು. ಆದರೆ ಆ ಐಶ್ವರ್ಯ ಕೊಂಚವಾದರೂ....ಧರ್ಮೋಕ್ತವಾಗಿರಬೇಕು" ಎಂದು ತಮ್ಮ ಮಾತು ಮುಗಿಸಿದರು. ನಿಜಾ....ನಿಜಾ....ಎಂದರು ಅಲ್ಲಿದ್ದವರೆಲ್ಲಾ.

ಇಷ್ಟು ಅಪಮಾನ ಅನುಭವಿಸಿ, ಮೈಸೂರಿಗೆ ಬಂದ ಗೋವಿಂದ ಎಂಟು ದಿನ ಕಾಯಿಲೆ ಮಲಗಿಬಿಟ್ಟ. ಪರಿಮಳೆಗು ತುಂಬಾ ಮುಖಭಂಗವಾಗಿತ್ತು. ಗೋವಿಂದ ಊರಿಗೆ ಬಂದು ಹೆಂಡತಿಯ ಜನ್ಮಾ ಜಾಲಾಡಿದ್ದ. "ನಿನ್ನದು ಅತಿ ಬುದ್ಧಿವಂತಿಕೆ, ಡಾಲರ್‌ನಲ್ಲಿ ಭಾಗ ಗಿಟ್ಟಿಸ್ತೀನಿ, ಅವರು ಹಳ್ಳಿಯವರು. ಅವರನ್ನ....ಮರಳು ಮಾಡೋದೇನು ಕಷ್ಟವಲ್ಲ, ಅಂತ ಬೊಗಳಿದ್ದೆ. ನಮ್ಮಮ್ಮ ಚೇತರಿಸಿಕೊಳ್ಳಲಾಗದ ಪೆಟ್ಟು ಕೊಟ್ಟಿದ್ದಾಳೆ. ನಮ್ಮ ಸಹೋದ್ಯೋಗಿಗಳಾದ ವತ್ಸಲ ನಾಗರಾಜ್ ಎದುರಿಗೆ ಪ್ರಿನ್ಸಿಪಾಲ್ ಎದುರಿಗೆ ನಮ್ಮ ಮರ್ಯಾದೆ ಮೂರು ಕಾಸಿಗೆ....ಮಾರಾಟವಾಯ್ತು. ಆತ್ಮಹತ್ಯೆ ಮಾಡಿಕೊಳ್ಳೋಷ್ಟು ಅಪಮಾನ ಆಗಿದೆ" ಎಂದು ಹಾರಾಡಿದ.

ಮಾವನಿಗೆ ದುಡ್ಡು ಬಂದಿದೆ, ಎಂಬ ಪತ್ರಿಕಾ ಸಂದರ್ಶನ ಓದಿದಾಗಿಂದ ಪರಿಮಳೆಯೇ ಗಂಡನನ್ನು ಪೀಡಿಸಿ, ಒಂದು ವಾರ ರಜಾ ಹಾಕಿ ಹಳ್ಳಿಗೆ ಹೊರಡಿಸಿದ್ದಳು. ಮೊದಲು ಗೋವಿಂದನಿಗೆ ಹಳ್ಳಿಗೆ ಹೋಗುವುದಕ್ಕೆ ಇಷ್ಟ ಇರಲಿಲ್ಲ. ಆದರೆ ಪರಿಮಳ ಗಂಡನ ಕಿವಿ ತುಂಬಿ—"ಅಲ್ಪಸ್ವಲ್ಪ ದುಡ್ಡಾದಲ್ಲಾಂದ್ರೆ, ಸುಮಾರು ಮೂರು ಲಕ್ಷದವರಿಗೆ ಬರತ್ತೆ. ಏಕೆ ಬಿಡಬೇಕು ? ನಾವು ಹೋಗಿ ನಮ್ಮ ಪಾಲು ಕೇಳೋಣಾ...." ಎಂದು ವಾದಿಸಿದಳು

"ಅಮ್ಮನಿಗೆ ನಮ್ಮ ಮೇಲೆ ತುಂಬಾ ಕೋಪ ಇದೆ ಪರಿಮಳ. ಎರಡು ವರ್ಷದ ಹಿಂದೆ ಬಂದಾಗ ಒಂದು ವಾರದಲ್ಲಿ ಅವಳ ಮನಸು ಹೇಗೆ ನೋಯಿಸಿದ್ದೀವಿ ? ಅನಂತ ಮದುವೆ ಆದ ನಾಲ್ಕೈದು ವರ್ಷ ಪ್ರತಿ ತಿಂಗಳು ಇನ್ನೂರು ರೂ ಕಳಿಸ್ತಿದ್ದ. ಅಮ್ಮ ಆ ಹಣಾ ನನಗಾಗಿ ಖರ್ಚು ಮಾಡೋಳು. ಆದರೇ ನಾನು ವಿವಾಹವಾದಾಗಿಂದ ಅಮ್ಮಂಗೆ ಮೂರು ಕಾಸು ಕಳಿಸಿಲ್ಲ. ಮೊನ್ನೆ ಎಂಟು ತಿಂಗಳ ಹಿಂದೆ ಎಲ್ಲಾ ಜ್ಞಾಪಿಸಿ ಕಾಗದಾ ಬರೆದಿದಳು. ಶಾರದನ ಮದುವೆಗೆ ನಾನೇನು ಕಳಿಸಿಲ್ಲ. ಗೊತ್ತಾದ ಮದುವೆ ನಿಂತು ಹೋದಾಗ ನಮ್ಮನ್ನ ಎಷ್ಟು ಬೈಕೊಂಡಿದ್ದಾಳೊ ? ಈಗ ಹೋಗಿ ಹಣಾ ಕೇಳಿದರೇ ನಿಜವಾಗಿ ಕೊಡ್ತಾರಾ ?" ಎಂದ.

ಆದರೆ ಪರಿಮಳ ಹಠದಿಂದ—"ನೋಡ್ರಿ, ಹೋದರೆ ಒಂದು ಕಲ್ಲು, ಬಿದ್ದರೊಂದು ಹಣ್ಣು. ಮೊನ್ನೆ ನಿಮ್ಮಣ್ಣ ಅನಂತ ಬಂದಿದ್ರು. ಅಪ್ಪಂಗೆ ಹಣಾ ಬಂದಿದೆ ಅಂದೆ. ಹಳ್ಳಿಗೆ ಹೋಗ್ತೀರಾ ? ಅಂದೆ. "ಯಾವ ಮುಖಾ....ಇಟ್ಕೊಂಡು ಹೋಗಲಿ ? ಅಂದರು. "ಆಗ ಶಾರದ ಮದುವೆಗೆ ಅಮ್ಮ ಹಣಾ ಸರಿ ಮಾಡೂಂತ ಬರೆದಿದ್ದಳು. ಆಗೆಲ್ಲಾ ಮೂರು ಕಾಸು ಕೊಟ್ಟಿಲ್ಲಾ....ಈಗ ಹೋದರೆ ಏನು ಚೆನ್ನಾಗಿರತ್ತೆ. ಮದುವೆ ನಿಭಾವಣೆ ಒಪ್ಪಿಸಿ ಅವರಾಗಿ ಕಾಗದಾ ಬರೆದರೇ ಸಂತೋಷವಾಗಿ ಮದುವೆ ಭಾರ ಹೊರ್ತೀನಿ, ಓಡಾಟಕ್ಕಂತು ಅಪ್ಪಾ ಮುದುಕರು" ಎಂದರು.

ನಾನು ಹೆದರಿಸಿ—"ಭಾವ, ನಮ್ಮ ಮೇಲೆ, ನಿಮ್ಮ ಮೇಲೆ ನಿಮ್ಮಮ್ಮಂಗೆ ಭಾಳ ಕೋಪಾ ಇದೆ ಗೌರಮ್ಮನ ಸೊಸೆ ವತ್ಸಲ ನನ್ನ ಸಹೋದ್ಯೋಗಿ. ಅವಳಿಗೆ ಹಳ್ಳೀಲಿ ನಡೆದ ವಿಷಯ ಗೊತ್ತು. ಮೊನ್ನೆ ತಾನೇ ನಾದಿನಿ ನಾಗೂನ್ನ ನಾಮಕರಣಕ್ಕೆ ಹೋಗಿ ಬಂದಳಂತೆ.

ಆಗ ನಿಮ್ಮಮ್ಮನ್ನ ಭೇಟಿ ಮಾಡಿ—"ಏನ್ರೀ ಸೀತಮ್ಮ....? ಮದುವೆ ಮಾಡ್ತೀರಾ ? ಗಂಡು ಮಕ್ಕಳನ್ನ ಕರಿಸ್ತೀರಾ ?" ಎಂದು ಕೇಳಿದಳಂತೆ.

"ಗಂಡು ಮಕ್ಕಳು ಈಗ ಬಂದ್ರೆ ಮುಖದ ನೀರಿಳಿಸಿ ಕಳಿಸ್ತೀನಿ ಗೌರಮ್ಮ, ಶಾನುಭೋಗರೆ ನಮ್ಗೆ ಆಪ್ತರು. ಅವರೇ ಮುಂದೆ ನಿಂತು ಎಲ್ಲಾ ಮಾಡ್ತಾರೆ. ಗಂಡು ಮಕ್ಕಳಿಗೆ ಒಂದು ಲಗ್ನಪತ್ರಿಕೆ ಸಹ ಹಾಕಲ್ಲ ಅಂದರಂತೆ. ಅಷ್ಟು ವಯಸ್ಸಾದ ಅವರಿಗೆ ಅಷ್ಟು ಹಟವಿದ್ದ ಮೇಲೆ ನಾವು ಏಕೆ ಹೋಗಬೇಕು ಭಾವಾ ?" ಅಂದೆ.

"ನಿಜಾಮ್ಮ, ಕಾಗದಾ ಬರದೆ ನಾನಂತು ಹೋಗಲ್ಲ ಅಂದರು. ಈಗ ನಾವು ಹೋಗಿ ಕಾರ್ಯ ಸಾಧಿಸಿ ಬರೋಣಾ...." ಎಂದು ಗಂಡನಿಗೆ ಏನೇನೋ ಉಪದೇಶ ಮಾಡಿದಳು. ಅವನು ಒಪ್ಪಿಗ್ದ. ಆದರೆ ಇಲ್ಲಿ ಬಂದಾಗ ಘೋರ ಅಪಮಾನವಾಗಿತ್ತು.

ಕಾಲೇಜಿಗೆ ಹೋಗಲಿಕ್ಕೆ ನನಗೆ ಮುಖವಿಲ್ಲ...." ಎಂದು ತೊಳಲುತ್ತಿದ್ದ "ಅಯ್ಯೋ ! ನಮ್ಗೆ ತಂಟೆಗೆ ಆ ವತ್ಸಲ ನಾಗರಾಜ ಯಾರಾದರೂ ಬರಲಿ, ಅವರಿಗು ಝಾಡಿಸ್ತೀನಿ. ಅವರ ನಲವತ್ತು ವರ್ಷದ ತಂಗಿ ವಿವಾಹ ಇಲ್ಲದೇ ಬಿದ್ದಿದ್ದಾಳೆ ತಂದೆ ಆಸ್ತೀಲಿ ಪಾಲು ಕೊಟ್ಟಿಲ್ಲ ಅಂತ ಅಣ್ಣನ ಮೇಲೆ ದಾವಾ ಹೂಡಿದ್ದಾಳಂತೆ ನಮ್ಮನ್ನ ಅನ್ನಲಿಕ್ಕೆ ಅವರು ಯಾರು ಸಾಚಾ ಇಲ್ರಿ" ಎಂದಳು

ಅಂತು ಒಂದು ವಾರದ ನಂತರ ಕಾಲೇಜಿಗೆ ಹೋಗತೊಡಗಿದ. ಯಾರ್‍ಯ ಅವನನ್ನೇನು ಪ್ರಶ್ನಿಸುತ್ತಿಗಲಿಲ್ಲ. ಶಾರದಳ ಮದುವೆ ಮೈಸೂರಲ್ಲೇ ವೈಭವ ವಾಗಿ ನಡೆಯಿತು ಅನಂತನದೇ ಓಡಾಟಾ....ನಾಗರಾಜ, ವತ್ಸಲರು ಹೋಗಿ ದ್ದರು. ಒಂದು ವಾರದ ನಂತರ ಮದುವೆ ತಿಂಡಿ ಹಿಡಿದು—ಭಾರಿ ಕಾಂಚಿವರ ಸೀರೆ ಉಟ್ಟು ಬಂದಳು ಜಯಲಕ್ಷ್ಮಿ, ಬೀಗರ ಮನೇಲಿ ಮನೆಯ ಹಿರಿಸೊಸೆ ಅಂತ ನನಗೆ ನಾಲ್ಕು ಸಾವಿರ ರೂಗಳ ಸೀರೆ ಕೊಟ್ಟರು. ಅತ್ತೆಗೆ ಐದು ಸಾವಿರ ರೂ ಗಳ ಸೀರೆ ಕೊಟ್ಟರು. ಶಾರದಂಗೆ ವಜ್ರದ ವಾಲೆ, ವಜ್ರದ ನೆಕ್ಲೇಸ್ ಹಾಕಿದ್ದಾರೆ." ಎಂದು ಮದುವೆಯ ವೈಭವ ಬಣ್ಣಿಸತೊಡಗಿದಳು. ಹರಿಮಳಾಗೆ ಆ ತಿಂಡಿಯೂ ಬೇಕಾಗಿರಲಿಲ್ಲ ಆ ಮದುವೆ ವೈಭವ ಕೇಳಿಸಿ ಕೊಳ್ಳುವ ಸಹನೆಯೂ ಇರಲಿಲ್ಲ. "ಅತ್ತೆ ಈಗ ಎರಡು ತಿಂಗಳು ನಮ್ಮ

ನೇಲೇ....ಇರ್ತಾರೆ. ಮೊನ್ನೆ ಫ್ರಿಜ್ ಕೊಡಿಸಿದರು. ಕಲರ್ ಟಿ ವಿ, ಗೆ ಸಹ ಆರ್ಡರ್ ಕೊಟ್ಟಿದ್ದೀವಿ" ಎಂದಳು

"ನಮಗೆ ಯಾವ ಅತ್ತೀ ಕತ್ತೀ ಸುದ್ದೀನು ಹೇಳಬೇಡಿ ಅಕ್ಕ. ನನಗೆ ತಲೆ ನೋಯ್ತಿದೆ. ನಿಮಗೆ ಅವರಿಗೆ ಹಿತ ಇದೆ. ಇಟ್ಕೊಳ್ಳಿ, ಅವರಿಂದ ಬೇಕಾದ್ದು ಪಡೆಯಿರಿ." ಎಂದಳು

ಜಯಲಕ್ಷ್ಮಿ ಎದ್ದು "ಬರ್‍ತೀನಮ್ಮ, ಶಾರದಾಳ ಗಂಡ ಹನ್ನೆರಡು ಲಕ್ಷ ರೂ. ಗಳಿಗೆ ಬಂಗ್ಲೆ ತಗೊಂಡಿದ್ದಾನೆ. ಅದರದು ಗೃಹ ಪ್ರವೇಶೋತ್ಸವ ಇದೆ. ಅಂದ ಹಾಗೆ ನಿಮ್ಮ ಹೊಸ ಮನೆ ವಿಷಯ ಏನಾಯ್ತು ? ಲೋನ್‌ಗೆ ಪರದಾಡ್ತಿದೀರಾ ? ಎಂದು ನೀವು ಮನೆ ಕಟ್ಟಿಸೋದು ?" ಎಂದಳು

"ಬರಿ ಶಾರದಾನ ಮನೆ ವೈಭವ ಹೇಳಿ ಏಕೆ ಒದ್ದಾಡ್ತೀರಿ ? ನೀವು ಮನೆ ಕಟ್ಟಿಸಿದರೆ ಅದನ್ನ ವರ್ಣಿಸಿ." ಎಂದಳು

"ಅಯ್ಯೋ ! ವರ್ಣಿಸಿದರೇ ಹನ್ನೆರಡು ಲಕ್ಷ ರೂ.ಗಳ ಅಂಥಾ ಬಂಗ್ಲೆ ವರ್ಣಿಸಬೇಕು. ನಮ್ಮದೂ....ನಿಮ್ಮದೂ ಮುಪ್ಪತ್ತು ನಲವತ್ತರ ಸೈಟಲ್ಲಿ ಕಟ್ಟೊ ಮನೆ ಏನು ವರ್ಣಿಸಬೇಕು ? ಇವರು ಲೋನ್‌ಗೆ ಅಪ್ಲೈ ಮಾಡಿದ್ದಾರೆ. ಅತ್ತೀನೆ ನಮ್ಮನೆಯ ಹತ್ತಿರ ಮುವ್ವತ್ತು ನಲವತ್ತರ ಒಂದು ಸೈಟ್ ತೆಕ್ಕೊಡ್ತ ಇದ್ದಾರೆ" ಎಂದಳು

ಮೊದಲು ಜಯಲಕ್ಷ್ಮಿ ಅನಂತ ಇದ್ದದ್ದು ಮುನ್ನೂರು ರೂ ಬಾಡಿಗೆಯ ಒಂದು ಸಾಧಾರಣ ಮನೆ. ಒಂದು ಹಾಲು ಅಡಿಗೆಯ ಮನೆ ಬಚ್ಚಲ ಮನೆ, ಓಣಿಯಾಚೆ ಶೌಚಗೃಹ, ಆದರೇ ಸಾವಿರ ರೂ ಗಳ ಬಾಡಿಗೆಯ ಮನೆಯಲ್ಲಿದ್ದ ಪರಿಮಳ ಅವರ ಮನೆಗೆ ಹೋದಾಗೆಲ್ಲಾ ಕೊರೆಯುತ್ತಿದ್ದಳು. "ಅಕ್ಕಾ....ಇಂಥಾ ಮನೇಲಿ ಹೇಗಿರ್‍ತೀರಿ ನೀವು ? ನನಗಂತು ನಾವಿಬ್ಬರು ಇರ್‍ಲಿಕ್ಕೆ ಎರಡು ಬೆಡ್ ರೂಮಿನ ಮನೆ ಬೇಕು. ಹಾಲು, ಸಿಟ್‌ಔಟ್ ಇರಬೇಕು ಅಡಿಗೆ ಮನೆ, ಬಚ್ಚಲ ಮನೆ ಎಲ್ಲಾ ಮಾರ್ಡನ್ ಇರಬೇಕು. ಎರಡು ಮಕ್ಕಳ ಜೊತೆ ಇಂಥಾ ಪುಟ್ಟ ಮನೇಲಿ ಹೇಗಿರ್‍ತೀರೋ ನೀವು ?" ಎಂದೆಲ್ಲಾ ಹೀಯಾಳಿಸುತ್ತಿದ್ದಳು.

ಆಗೆಲ್ಲಾ....ಜಯಲಕ್ಷ್ಮಿ ಸಣ್ಣ ಮುಖ ಮಾಡಿಕೊಂಡು "ಗೋವಿಂದ ಅದೃಷ್ಟವಂತನಮ್ಮ, ನಿನ್ನಂಥಾ ಧನಲಕ್ಷ್ಮಿ ಸಿಕ್ಕಿದ್ದಿ. ನಾನು ಇವರು ಸಂಪಾದಿಸಿದ್ದು ತಿಂಥಾ ಕೂತಿದ್ದೀನಿ. ಇವರ ಸಂಬಳದಲ್ಲಿ ನಾವು ಮುನ್ನೂರು

ರೂ ಗಳಿಗಿಂತ ಜಾಸ್ತಿ ಬಾಡಿಗೆಗೆ ಕೊಡ್ಲಿಕ್ಕಾಗಲ್ಲ" ಎಂದು ಹೇಳಿದ್ದಳು ಅದೇ ಜಯಲಕ್ಷ್ಮಿ ಈಗ ತಮಗೆ ಸರಿ ಸಮಾನಳಾಗಿ ನಿಂತು ಮುವ್ವತ್ತು, ನಲವತ್ತರ ಸೈಟ್ ಕೊಂಡು ತಮ್ಮ ಊರಿಗೆ ಮನೆ ಕಟ್ಟಿಸ್ತಿದ್ದಾರೆ. ಅನಂತ ಜಯಲಕ್ಷ್ಮಿಯರಿಗಿಂತ ತಾವು ಹೆಚ್ಚುಗಾರಿಕೆ ಇದ್ದೇವೆಂದು ಪಡುತ್ತಿದ್ದ ಸಂತಸಕ್ಕೆ ಕಲ್ಲು ಬಿತ್ತೆ ? ಆ ಹಳ್ಳಿಮುಕ್ಕ ಶಾರದ ಈಗ ಅತ್ಯಂತ ಶ್ರೀಮಂತ ಡಾಕ್ಟರನ ಹೆಂಡತಿ ಅವಳ ಐಶ್ವರ್ಯ ವರ್ಣಿಸುತ್ತ ಇವಳು ತನ್ನ ಹೊಟ್ಟೆ ಉರಿಸುತ್ತಾಳೆಂಸೆ ? M,A, ಮಾಡಿದ ತಾನೇ ಇವರಿಬ್ಬರ ಎದುರು ಧಡ್ಡಿ ಯಾದೆ, ಎಂದುಕೊಂಡಳು.

ಜಯಲಕ್ಷ್ಮಿಗೇ ಎಂದಿನಂತೇ ಒಂದು ಜ್ಯೂಸ್ ಕೊಟ್ಟು ತನ್ನ ಮನೆ ವೈಭವ ವರ್ಣಿಸಿ ಹೊಸದಾಗಿ ಕೊಂಡ ಬೆಳ್ಳಿ ಸಾಮಾನು ಇಲ್ಲ ಚಿನ್ನದ ಒಡವೆ ತೋರಿಸಿ ಕಳಿಸಿದ್ದರೆ ಪರಿಮಳೆಗೆ ಸಮಾಧಾನವಾಗುತ್ತಿತ್ತು ಆದರೆ ಈ ದಿನ ಆ ರೀತಿ ಏನು ಮಾಡಲು ಅವಕಾಶವಿಲ್ಲ ಆದರೂ ಎದ್ದು— "ಮೊನ್ನೇ ಬೆಳ್ಳಿ ತಟ್ಟೆ ತಗೊಂಡೆ ನೋಡು ನಾಲ್ಕು ಸಾವಿರ" ಎಂದು ಒಂದು ತಟ್ಟೆ ತೋರಿಸಿದಳು

ಜಯಲಕ್ಷ್ಮಿ ಎಂದಿನಂತೇ ಮುಖ ಕಂದಿಸದೇ "ಶಾರದನ ಮದುವೆ ಬೆಳ್ಳಿ ಸಾಮಾನು ನಾವೇ ಹೋಗಿ....ತಂದದ್ದು ಕಣೇ....ಇಂಥಾ ನಾಲ್ಕು ಬೆಳ್ಳಿ ತಟ್ಟೆ ಹದಿನಾರು ಸಾವಿರ ಆಯ್ತು. ನಾಲ್ಕು ಸಾವಿರ ಚೊಂಬು ಇನ್ನು ಹತ್ತು ಸಾವಿರದಲ್ಲಿ ಅರಶಿನ ಕುಂಕುಮದ ಬಟ್ಟಲು .. ಬೆಳ್ಳಿ ನೀಲಾಂಜನಗಳು ಪಂಚೋತ್ರೆ ಉದ್ಧರಣೆ ಅರಕಪ್ಪಾಲ ಆರತಿ ತಟ್ಟೆ ತಗೊಂಡವಿ. ಒಟ್ಟು ಮುವ್ವತ್ತು ಸಾವಿರ ಬೆಳ್ಳಿ ಪಾತ್ರೆ ನಾವು ತವರಿನ ಕಡೆಯಿಂದ ಅವಳಿಗೆ ಕೊಟ್ಟೆವಿ ನೋಡು ಐವತ್ತು ಸಾವಿರದಲ್ಲಿ ಹತ್ತು ತೊಲ ಚಿನ್ನ....ಸಾಲಂಕೃತ ಕನ್ಯಾದಾನ" ಎಂದು ವರ್ಣಿಸಿದಳು.

ಪರಿಮಳ ವ್ಯಂಗ್ಯವಾಗಿ—"ಅಂತು ಚಿನ್ನ ಬೆಳ್ಳಿ ಅಂಗಡಿಗೆ ಹೋಗಿ ಲಕ್ಷಾಂತರ ರೂ ವ್ಯಾಪಾರ ಮಾಡೋ ಕೆಪಾಸಿಟಿ ಇದೆಯಲ್ಲ....ಅದಕ್ಕೆ ಸಂತಸ ಪಡಬೇಕು. ಇಲ್ಲಿ ನಮ್ಮನೆ ಚಿನ್ನಾ ಬೆಳ್ಳಿ, ಆಗಾಗ ನೋಡಿದಾಗ ಅನಂತ ಭಾವ ಏನಂತಾ ಇದ್ದರು ಗೊತ್ತ ? ಸರಫ್ ಅಂಗಡಿ ಯಾವ ದಿಕ್ಕಿನಲ್ಲಿ ಇದೇಂತ ನಮಗೆ ಗೊತ್ತಿಲ್ಲಮ್ಮ. ಅಲ್ಲಿ ಹೋದರೆ ಸೇರು ಪಾವಿನ ಲೆಕ್ಕಾ.... ಲೀಟರ್ ಲೆಕ್ಕಾ ಕೇಳಬೇಕೊ ಅಂತಿದ್ದರು." ಎಂದಳು.

ಜಯಲಕ್ಷ್ಮಿ ನಕ್ಕು—"ಚಿನ್ನ, ಬೆಳ್ಳಿ, ವ್ಯವಹಾರಕ್ಕೆ ಬಂಧಿದೋ ೀಳು ನಿನ್ನ ತಂಗಿ ಲಲಿತ. ಇಂಜನಿಯರ್ ಹೆಂಡ್ತಿ ಆದರೂ ಒಂದು ಚೂರು ಜಂಭಾ ಇಲ್ಲ. ಶಾರದಂಗೆ ನಮ್ಮ ಕಡೇ ಸೀರೆ ಆರಿಸಿದ್ದು ಅವಳೆ. ಇಡಿ ನುದುವೆ ಮನೇಲಿ ನಮ್ಮ ಕಡೇ ಅವಳೇ ಬಲಗೈ: ಅತ್ತೇಗಂತು ಅವಳನ್ನ ನೋಡಿ ತುಂಬಾ ಸಂತೋಷ ಆಯ್ತು." ಎಂದಳು.

ಪರಿಮಳೆಯ ಮುಖ ಈಗ ನಿಜವಾಗಿ ಕಪ್ಪಿಟ್ಟು ಹೋಯಿತು· ಪರಿಮಳೆಯ ತಂದೆ ಕಾಲೇಜು ಪ್ರಿನ್ಸಿಪಾಲಾಗಿ ನಿವೃತ್ತರಾಗಿದ್ದರು. ಹಿರಿಯ ಮಗಳು ಪರಿಮಳ ತಾಯಿಯಾಗಿ ಅತಿ ಮುದ್ದು. ಅವಳ ಅಣ್ಣ B.E ಓದಿ, ಇಂಜನಿಯರ್ ಆಗಿದ್ದ ಪರಿಮಳೆಯ ತಂಗಿ ಲಲಿತ ತುಂಬಾ ಚೆಲುವೆ. ಅಣ್ಣನ ಸಹಪಾಠಿ ಹರ್ಷ ಆಗಾಗ ಅಣ್ಣನನ್ನು ಹುಡುಕಿಕೊಂಡು ಬರುತ್ತಿದ್ದವನು ಲಲಿತೆಗೆ ಮರುಳಾಗಿದ್ದ ಲಲಿತೆಯೊಡನೆ ಅವನು ತಿರುಗಾಡುವುದು ಎಲ್ಲರಿಗಿಂತ ಮೊದಲು ಗಮನಿಸಿದವಳು ಪರಿಮಳ

ಆದರೆ ತಂಗಿಯ ಮೇಲೆ ಚಾಡಿ ಹೇಳುತ್ತ ಕೂಡಲಿಲ್ಲ. ತನ್ನ ಅಸೂಯೆ ಒಳಗೆ ನುಂಗಿಕೊಂಡು, ತಾನು ಒಬ್ಬ ಪ್ರೇಮಿಯನ್ನು ಆರಿಸಿಕೊಂಡು ತಿರುಗಾಡ ತೊಡಗಿದಳು. ಆಗ ಅವಳು ಆರಿಸಿಕೊಂಡದ್ದು ಗೋವಿಂದನನ್ನು ಗೋವಿಂದ ಅವಳ ಗೆಳತಿ ನಳಿನಿಯ ಮನೆ ಮೇಲೆ ಕೋಣೆ ಮಾಡಿಕೊಂಡು ತಾನೇ ಸ್ವಂತ ಅಡಿಗೆ ಮಾಡಿಕೊಂಡು, ತಾಯಿ ಕಳಿಸುವ ನೂರಿನ್ನೂರು ರೂಗಳಲ್ಲಿ ಹಾಗು ಹೀಗು ವ್ಯಾಸಂಗದೊಡನೆ ಕೆಲವು ಮನೆ ಪಾಠಗಳು ಹೇಳಿಕೊಂಡು ಪೂರೈಸುತ್ತಿದ್ದ. ಗೋವಿಂದ ನೋಡಲು ಆ ಇಂಜನಿಯರಿಗಿಂತ ಸುಂದರ ಯುವಕ. ಜೊತೆಗೆ M A, ನಲ್ಲಿ ಫಸ್ಟ್‌ಕ್ಲಾಸ್ ಬರುವ ಸಂಭವ ಇತ್ತು.

ತಂಗಿಯ ಪ್ರೇಮ ಪ್ರಕರಣ ಸ್ಫೋಟವಾಗುವ ಮುನ್ನ ತನ್ನ ಪ್ರೇಮ ಪ್ರಕರಣ ಸ್ಫೋಟಾ ಮಾಡಿದಳು. ತಂದೆ ತಾಯಿ ತರಾತುರಿಯಲ್ಲಿ ವಿವಾಹ ಮಾಡಿದರು. ಪ್ರಿನ್ಸಿಪಾಲ್ ಆಗಿ....ರಿಟೈರ್ಡ್ ಆಗಿದ್ದ ಶ್ರೀಪಾದರಾಯರಿಗೆ ಆ ಕಾಲೇಜಿನಲ್ಲಿ ಸ್ವಲ್ಪ ಪ್ರಭಾವವೂ ಇತ್ತು. ಹೀಗಾಗಿ ಫಸ್ಟ್‌ಕ್ಲಾಸ್ ಬಂದಿದ್ದ ಅಳಿಯನಿಗೆ ಆ ವರ್ಷ, ಅದರ ಮುಂದಿನ ವರ್ಷ ಮಗಳಿಗೆ ಕೆಲಸ ಕೊಡಿಸಿದರು. ತಂದೇ ಮನೆಯಿಂದ ಅವಳಿಗೆ ಒಂದು ಮುವ್ವತ್ತು ಇಂಟು ನಲವ

ತ್ತರ ಸ್ಕೈಟ್ ಬಳುವಳಿಯಾಗಿ ಬಂದಿತ್ತು. ಅಲ್ಲಿ ಒಂದು ಮನೆ ಕಟ್ಟಿಸ ಬೇಕೆಂದು ಅವಳ ಶತ ಪ್ರಯತ್ನ. ಗಂಡಾ ಹೆಂಡತಿ ಇಬ್ಬರು ಕಾಲೇಜ್ ಡ್ಯೂಟಿ ಮುಗಿದ ಮೇಲೆ ಒಂದು ಟ್ಯುಟೋರಿಯಲ್ಸ್‌ನಗೆ ಹೋಗಿ ಟ್ಯೂಷನ್ ಹೇಳುತ್ತಿದ್ದರು. ಇವಳ ಮದುವೆ ಆದ ಮೂರು ತಿಂಗಳ ಮೇಲೆ ಆ ಇಂಜನಿಯರ್ ಜೊತೆ ತಂಗಿ ಮದುವೆ ಆಗಿತ್ತು. ತಾಯಿ ಗುಟ್ಟಾಗಿ–

"ಆ ಹುಡುಗಂಗೆ ಮೊದಲಿಂದ ಅವಳ ಮೇಲೆ ಇಷ್ಟವಿತ್ತು. ಆದರೆ ನಿನ್ನ ಮದುವೆ ಆಗೋವರಂಗೆ ಈ ವಿಷಯ ಬಯಲು ಮಾಡಬೇಡಾಂತ ರಾಜಣ್ಣಾ ಹೇಳಿದ್ದ. ರಾಜೂಗೂ ಆ ಹುಡುಗನ ಚಿಕ್ಕಪ್ಪನ ಮಗಳನ್ನೇ ತನ್ತಿದ್ದೀವಿ. ಆ ಹುಡುಗೀನು B A, ಅನುಕೂಲಸ್ಥರು. ಮಗಳಿಗೆ ಇಪ್ಪತ್ತು ತೊಲ ಚಿನ್ನ ಹಾಕ್ತಿದ್ದಾರೆ. ಅವನಿಗೆ ಕಾರು ಕೊಡ್ತಿದ್ದಾರೆ." ಎಂದರು ತಂಗಿಯ ವಿವಾಹದ ಬಗ್ಗೆ ಎಂದೋ ಊಹಿಸಿದ್ದಳು. ಅವಳು ವಿವಾಹವಾಗಿ ಹೋದ ಮೇಲೆ ತಾನು ಅವಿವಾಹಿತೆಯಾಗಿ ಕೂಡಬಾರದೆಂದು, ಆರಂಭದಲ್ಲೇ ಆ ಪ್ರೇಮ ಗುರುತಿಸಿ ತಾನು ವಿವಾಹಿತೆಯಾಗಿ ಬಂದಿದ್ದಳು.

ಆದರೆ ತಾನು ವಿವಾಹವಾದ ಗೋವಿಂದನಿಗೆ ಮನೆತನದ ಶ್ರೀಮಂತಿಕೆ ಏನಿಲ್ಲ. ಹಳ್ಳೀಲಿ ಪೌರೋಹಿತ್ಯ ಮಾಡುವ .. ವೈದಿಕ ಬ್ರಾಹ್ಮಣ ಅವರ ತಂದೆ. ಅವರ ತಂದೆ ದೊಡ್ಡ ಜಮೀನ್‌ದಾರರು ಹಳ್ಳೀಲಿ ನೂರಾರು ಎಕ್ರೆ ಜಮೀನಿದೆ." ಎಂದು ತಾಯಿ ತಂದೆ ತಂಗಿ ಎದುರು ಹೇಳಿದ್ದಳು.

ಆದರೆ ತಂಗಿ ವಿವಾಹಿತೆಯಾದ ಮೇಲೆ ಅವಳ ಶ್ರೀಮಂತಿಕೆ ಎದುರು ತಾನು ತುಂಬಾ ಕಮ್ಮಿ ಇರುವೆ ಎನಿಸಿತು.

ಹರ್ಷನ ಮನೆಯವರು ತುಂಬಾ ಶ್ರೀಮಂತರು. ದೊಡ್ಡ ಬಂಗ್ಲೆ, ಕಾರು, ಅತ್ತೆ ಮಾವ, ಭಾವ, ಒಬ್ಬ ನಾದಿನಿ, ಮೈದುನ, ಅವಳಿಗೆ ಏನು ಕಡಿಮೆ ಇಲ್ಲ. ನಂಗೆ ಜಾಯಿಂಟ್ ಫ್ಯಾಮಿಲಿ ಅಂದರೇ ಬೇಜಾರಮ್ಮ." ಎನ್ನುತ್ತಿದ್ದಳು ತಂಗಿಯೆದುರಿಗೆ.

ಲಲಿತ ಮುಗುಳ್‌ನಗುತ್ತ—"ಅತ್ತೆ ಮಾವನ ಹಿಂಸೆ, ಮನೆ ಕೆಲಸದ ತೊಳಲಾಟ ಇದ್ದರೆ ಜಾಯಿಂಟ್ ಫ್ಯಾಮಿಲಿ ಹಿಂಸೆ, ಮನೇಲಿ ಅಡಿಗೇವಳಿದ್ದಾಳೆ ಹೊತ್ತು ಹೊತ್ತಿಗೆ ಹೋಗಿ ಡೈನಿಂಗ್ ಟೇಬಲ್ ಮುಂದೆ ಕೂತು ಊಟಾ ಮಾಡೋದು, ಅಲಂಕರಿಸಿಕೊಂಡು ನಮ್ಮ ನಮ್ಮ ರೂಮಲ್ಲಿ ಪ್ರತ್ಯೇಕವಾಗಿ ಟಿ.ವಿ, ನೋಡೋದು. ಮನೇಲಿ ಉಳಿದ ಕೆಲಸ ಮಾಡ್ಲಿಕ್ಕೆ

ನೂರು ಜನ ಕೆಲಸಗಾರರು ಇದ್ದಾರೆ. ಉದ್ಯೋಗಸ್ಥೆಯಾಗಿ ಹೊರಗೂ ಹೋಗಿ ಬಂದು, ಮನೇಲಿ ಅಡಿಗೆ ಮಾಡಿ ಒದ್ದಾಡೋ ಸ್ವತಂತ್ರ ಗೃಹಿಣಿಗಿಂತ ನಾನು ಸಾವಿರ ಪಾಲು ಸುಖವಾಗಿದ್ದೇನೆ." ಎನ್ನುತ್ತಿದ್ದಳು. ಆಗಾಗ ತವರಿಗೆ ಬಂದಾಗಲು, ಒಡವೆ, ಸೀರೆ ಎಲ್ಲಾ ಅವಳದು ಜೋರಾಗಿರುತ್ತಿತ್ತು.

ಅತ್ತಿಗೆಯೂ ಶ್ರೀಮಂತೆ, ಹೀಗಾಗಿ ತವರು ಮನೆ ಗುಂಪಲ್ಲಿ ಕೊಂಚ ಕಡಿಮೆ ಎಂದೇ ಗುರುತಿಸಲ್ಪಟ್ಟ ಅವಳು–ಜಯಲಕ್ಷ್ಮಿ ಎದುರು ಕೊಂಚ ಹೆಚ್ಚುಗಾರಿಕೆ ಪ್ರದರ್ಶಿಸುತ್ತಿದ್ದಳು. ವಿವಾಹ ಸಮಯದಲ್ಲಿ ಒಂದು ಸೈಟ್, ಹತ್ತು ತೊಲ ಚಿನ್ನ... ಐವತ್ತು ಸಾವಿರ ನಗದು ನೀಡಿದ್ದರು ತಂದೆ ಸಾವಿರ ರೂ.ಗಳ ಬಾಡಿಗೆ ಮನೆ ಹಿಡಿದಿದ್ದಳು. ಟಿ.ವಿ, ಫ್ರಿಜ್, ಜೋಡಿ ಮಂಚ, ಡೈನಿಂಗ್ ಟೇಬಲ್ ಇತ್ಯಾದಿ ಎಲ್ಲಾ ಆಧುನಿಕ ಸಾಮಾನುಗಳು ಕೊಂಡ ಅವಳು ಜಯಲಕ್ಷ್ಮಿ ಎದುರಿಗೆ ಶ್ರೀಮಂತೇ ಎಂಬಂತೇ ಬೀಗುತ್ತಿದ್ದಳು. ಏನಾದರೂ ಮಾಡಿ ಸ್ವಂತ ಮನೆ ಕಟ್ಟಿಸಬೇಕು. ಅದುವರಿಗೆ ಮಕ್ಕಳು ಬೇಡಾ....ಎಂದವಳ ಮನೀಷೆ.

ಗೋವಿಂದನಿಗೆ ಹೆಂಡತಿ ಎಂದರೇ ದೇವಕಿ ಇದ್ದಂತೆ. ಅಷ್ಟು ಸುಂದರ ಹುಡುಗಿ ಒಲಿದು ತನ್ನ ವಿವಾಹವಾಗಿದ್ದೆ ಹೆಚ್ಚು, ಎಂದವನ ಭಾವನೆ. ಸಂಸಾರದಲ್ಲಿ ಅವಳು ಹಾಕಿದ ಗೆರೆ ದಾಟುತ್ತಿರಲಿಲ್ಲ ಅವನು ಐದು ವರ್ಷದಿಂದ ಹೀಗೆ ನಡೆದು ಬಂದಿತ್ತು. ಸ್ವಂತ ಮನೆ ಕಟ್ಟಲು ದುಡ್ಡಿಗೆ ಪ್ರಯತ್ನಿಸುತ್ತಿದ್ದರು

ತಮ್ಮ ವಿವಾಹವಾದ ಎರಡನೆಯ ವರ್ಷದ ಹೊತ್ತಿಗೆ ಅತ್ತೆ ಕೆಮ್ಮು ಎಂಬ ನೆಪ ಮಾಡಿ, ಒಂದು ವಾರ ಇರಲು ಬಂದಿದ್ದರು. ಆಗ ಅವರಿಗೆ ಒಂದು ವಾರ ತಾನು ನೋಡಿಕೊಂಡ ಪರಿ ಹೇಗೆ? ಮಡಿ ಅಡುಗೆ ನೆಪ ಮಾಡಿ ಟಮೋಟೊ ಸಾರನ್ನ ಮಾಡ್ತಿದ್ದೆ. ಆ್ಯನಿವರ್ಸರಿ ದಿನ ತಂದೆ ತಾಯಿ, ಅಣ್ಣಾ ಅತ್ತಿಗೆ, ತಂಗಿ ಲಲಿತ ಅವಳ ಗಂಡಾ ಬಂದಿದ್ದರು.

ತಂಗಿ ಲಲಿತಳ ಆ್ಯನಿವರ್ಸರಿಗೆ ಹೋದಾಗೆಲ್ಲಾ ಅವಳ ಮನಸು ಚುಚ್ಚುತ್ತ ಇದ್ದದ್ದು ಒಂದು ವಿಷಯ, ಲಲಿತ ತನ್ನ ಅತ್ತೆಯನ್ನು ತುಂಬಾ ಪ್ರೀತಿಸುತ್ತಿದ್ದಳು. ಮೊದಲು ಅತ್ತೆಗೆ ಸಿಹಿ ತಿನ್ನಿಸಿ, ನಮಸ್ಕಾರ ಮಾಡಿ ಕಾರ್ಯಕ್ರಮ....ಪ್ರಾರಂಭಾ ಮಾಡುತ್ತಿದ್ದಳು, ತಾನು ತನ್ನ ಅತ್ತೆಗೆ ಅತ್ಯಂತ ವಿಧೇಯಳು ಎಂಬಂತೇ ನಾಟಕವಾಡಿ ಆ ದಿನ ತವರಿನವರ ಎದುರು,

ವತ್ಸಲಳ ಎದುರು ಹಾಗೆಲ್ಲಾ ನಟಿಸಿದ್ದಳು. ಆದರೆ ಮುಂದೆ ಎರಡು ವರ್ಷದ ನಂತರ ಮಾವನಿಗೆ ಆಕಸ್ಮಿಕವಾಗಿ ಹಣಾ ಬಂದಾಗ ಹಣಾ ಪಡೆಯಲು ಹೋಗಿ ಮುಖಭಂಗ ಮಾಡಿಸಿಕೊಂಡು ಬಂದಾಗಿತ್ತು. ವತ್ಸಲಳ ಎದುರು, ಜಯಲಕ್ಷ್ಮಿ ಎದುರು ಮಾತ್ರ ಅಪಮಾನವಾಗಿದೆ ಎಂದು ಕೊಂಡಿದ್ದಳು. ಆದರೆ ತಂಗಿ ಲಲಿತ ಹೇಗೆ ಈ ಗುಂಪಿಗೆ ಸೇರಿದಳು ?

ಅವಳ ಪ್ರಶ್ನೆಗೆ ಉತ್ತರವೆಂಬಂತೆ ಜಯಲಕ್ಷ್ಮಿ ಹೇಳಿದಳು

"ನಿನ್ನ ತಂಗಿ ಲಲಿತನ್ನ ನಾದಿನೀನ್ನ ಶಾರದನ್ನ ಗಂಡನ ಅಕ್ಕ ಇದ್ದಾರಲ್ಲ ಡಾ. ವನಜಮ್ಮ ಅವರ ಮೈದುನಂಗೆ ಕೊಡ್ತಿದ್ದಾರೆ. ಹೀಗಾಗಿ ಈಗ ಶಾರದ ನಿಮ್ಮ ತಂಗಿ ಅತ್ತೆ ಮನೆಗೆ....ಗಂಡಿನ ಬೀಗರ ಗುಂಪಿನ ಪ್ರಮುಖ ಳಾಗ್ತಿದ್ದಾಳೆ" ಎಂದಳು.

ಇದಂತು ಪರಿಮಳೆಗೆ ಅತ್ಯಂತ ಅಪ್ರಿಯವಾದ ಸಮಾಚಾರ. ಶಾರದ ಯಾವುದೋ ಶ್ರೀಮಂತನ್ನ ವಿವಾಹವಾಗಿ ಎಲ್ಲಾದರು ಹಾಳಾಗಲಿ ಎಂದರೇ ತನ್ನ ತಂಗಿ ಮನೆಯ ಕಡೇವರಿಗೂ, ಅವಳು ಸಂಬಂಧಿಕಳಾಗುತ್ತಿರುವಳೆ ? ತವರು ಮನೆಯ ಕಡೆ, ಅತ್ತೆಯ ಮನೆಯ ಕಡೇ....ಎರಡೂ ಕಡೇ ತನ್ನ ಪ್ರಭಾವ ಇಳಿಯುತ್ತಿದೆ ಎನಿಸಿ ಅವಳಿಗೆ ಮತ್ತಷ್ಟು ಕಿರಿಕಿರಿ ಆಯಿತು.

ಇದಾದ ಒಂದು ತಿಂಗಳಲ್ಲಿ ಲಲಿತ ಅಕ್ಕನ ಮನೆಗೆ ಲಗ್ನಪತ್ರಿಕೆ ಕೊಡಲು ಬಂದಳು. "ಅಕ್ಕ ನಮ್ಮ ನಾದಿನಿಗೆ ಈ ತಿಂಗಳ ಹದಿನೈದನೇ ತಾರೀಖು ಮದುವೆ. ಎರಡು ದಿನ ಮೊದಲೇ ಖಂಡಿತ ಬರಬೇಕು" ಎಂದಳು. ಪರಿಮಳ ತಂಗಿಗೆ ಆದರಿಸಿ

"ಬಾ....ಅಮ್ಮನ ಮನೆಗೆ ಹೋಗಿದ್ಯ ?" ಎಂದಳು.

"ಅತ್ತಿಗೆ ಈಗೆಂಟು ದಿನದಿಂದ ನಮ್ಮನೇಲೆ ಇದ್ದಾರೆ. ಲಗ್ನಪತ್ರಿಕೆಗೆ ಬಂದಿದ್ದರು. ಅದಾದ ಮೇಲೆ ಮರುದಿನ ಅಮ್ಮ ಆ ಮನೆಗೆ ಹೋಗಿದ್ದಳು. ಅತ್ತಿಗೆ ತಾಯಿ, ತಂಗಿ ಇಲ್ಲಿ ನಮ್ಮನೇಲೆ ಇದ್ದಾರೆ. ಅವರ ತಂಗಿಗೂ ಹೆಣ್ಣು ಹುಡುಕ್ತಿದ್ದಾರೆ. ಹೀಗಾಗಿ ಇಲ್ಲಿ ನನ್ನ ನಾದಿನಿ ಮದುವೆ ಆಗೋವರಿಗೆ ಇಲ್ಲೇ ಇರ್ತಾರೆ." ಎಂದಳು.

ಲಲಿತಳ ಮಾವ ಅವಳಿಗೆ ದೊಡ್ಡಪ್ಪನೆ. ಲಲಿತಳ ಗಂಡ ಹರ್ಷನಿಗೆ ತಮ್ಮ ಅತ್ತಿಗೆ ಚಂದ್ರಕಲ ಎಂದರೆ ತಂಗಿಯಲ್ಲಿದ್ದಷ್ಟೇ ಪ್ರೇಮ. ಹೀಗಾಗಿ ಅತ್ತಿಗೆ ತವರಿಗೆ ಹೋದಂತೇ ಆ ಮನೆಗೆ ಹೋಗಿ ಎಂಟು ದಿನ ಹದಿನೈದು ದಿನ ಇರುತ್ತಿದ್ದರು.

ತನ್ನ ಅತ್ತಿಗೆ, ತನಗಿಂತ ಲಲಿತಳಿಗೆ ತೀರ ಆಪ್ತಳಾಗಿ ಇದ್ದಳು. ತನ್ನ ಬಳಿ ತೀರ ಔಪಚಾರಿಕವಾಗಿದ್ದಳು. ಇದು ಲಲಿತಳಿಗೆ ಹೆಮ್ಮೆಯ ವಿಷಯ ವಾದರೇ ಪರಿಮಳೆಗೆ ತುಸು ಮನ ನೋಯಿಸುತ್ತಿದ್ದ ವಿಷಯ.

ಆ ದಿನ ಗಂಡ ಟ್ಯುಟೋರಿಯಲ್‌ನಿಂದ ಬಂದಾಗ ಹೇಳಿದಳು. "ನನ್ನ ತಂಗಿ ಲಲಿತ ಅವಳ ನಾದಿನಿಯ ಮದುವೆಗೆ ಕರೀಲಿಕ್ಕೆ ಬಂದಿದ್ದಳು." ಎಂದಳು.

"ಸರಿ ಹೋಗೋಣೇಳು ನನ್ನ ತಂಗಿ ಮದುವೆ ಈ ಊರಲ್ಲೇ ಇದರೂ ಹೋಗೋ ಹಾಗಿರಲಿಲ್ಲ. ಅಪರಾಧಿಗಳ ಹಾಗೆ ದೂರವಿದ್ದಿವಿ. ನಿಮ್ಮ ತವರು ಮನೆ ಕಡೆಯ ಆ....ಸಮಾರಂಭಗಳಿಗಂತು ನಮಗ್ಯಾರು ಬಹಿಷ್ಕಾರ ಹಾಕಿಲ್ಲ." ಎಂದ.

ಪರಿಮಳ ಅಳುಕುತ್ತ—"ಆದರೆ ಗಂಡಿನೋರ ಕಡೆ ಗುಂಪಿನಲ್ಲಿ ಶಾರದ ಇರ್ತಾಳೆ. ಶಾರದನ ಅತ್ತಿಗೆಯ ಗಂಡನ ತಮ್ಮಂಗೆ—ಲಲಿತನ ನಾದಿನೀನ್ನ ಕೊಡ್ತಾ ಇರೋದು." ಎಂದಳು.

"ಗಂಡಿನೋರ ಕಡೆ ಯಾರಿದ್ರೆ ನಮಗೇನು ? ನಮ್ಮನ್ನ ಕರಿದಿರೋಳು ನಿಮ್ಮ ತಂಗಿ ಲಲಿತ. ಅವಳ ನಾದಿನಿ ಮದುವೆ ಅಂದ ಮೇಲೆ ಹೋಗಿ ಬರೋಣಾ...." ಎಂದ.

ಮನೇಲಿ ಬಗೆ ಬಗೆ ಸೀರೆಗಳವೆ. ಒಡವೆಗಳವೆ. ಅಲಂಕರಿಸಿಕೊಂಡು ಬಂಧುಗಳ ಗುಂಪಲ್ಲಿ ತಿರುಗಾಡಬೇಕೆಂದು ಪರಿಮಳೆಗೂ ಉತ್ಕಟ ಆಸೆಯೆ. ಅದರಂತೆ ಎರಡು ದಿನ ರಜಾ ಹಾಕಿ, ಗಂಡಾ ಹೆಂಡತಿ ಮದುವೆಗೆ ಬಂದರು. ಎಲ್ಲಕ್ಕು ಲಲಿತ, ಚಂದ್ರಿಕರ ಜೋಡಿ, ಅವರಿಬ್ಬರ ಅಲಂಕಾರ ಒಡವೆ ವಸ್ತ್ರ ಪರಿಮಳೆಯುದಿಕ್ಕಿಂತ ಜೋರಾಗಿತ್ತು. ಅವರಿಬ್ಬರ ಗಂಡಂದಿರು ಇಂಜನಿಯರ್‌ಗಳು. ಅವಳ ಗಂಡ ಇವಳಿಗೆ ಸ್ವಂತ ಅಣ್ಣಾ....ಇವಳ ಗಂಡ ಆವಳಿಗೆ ದೊಡ್ಡಪ್ಪನ ಮಗ ಅಣ್ಣನ ವರಸೆ. ಹೀಗಾಗಿ ಇಬ್ಬರು ಒಗ್ಗಟ್ಟು ಜೋರು. ಗಂಡಿನವರ ಕಡೆ ಶಾರದ ನಾಗು ಇವರಿವರ ಜೋಡಿ—ಇಬ್ಬರು ಅಣ್ಣ ತಮ್ಮಂ

ದಿರ ಸೊಸೆಯರು. ಮದುಮಗ ಇಬ್ಬರಿಗೂ ವೈದ್ಯುನನ ವರಸೆ, ಅವರಿಬ್ಬರ ಒಡವೆ, ವಸ್ತ್ರ ನೋಡಿದಾಗ ಹೊಟ್ಟೆಯಲ್ಲಿ ಕಲಕಲ ಎಂದಿತು.

ಒಂದು ಕಾಲದಲ್ಲಿ ಹಳ್ಳಿ ಗೌರಮ್ಮನಂತೇ ನೂಲಿನ ಸೀರೆಯುಟ್ಟು ಬಂದು ತನ್ನ ಮನೆಯಲ್ಲಿ ಅಡಿಗೆ ಮಾಡಿದ್ದು ಇವಳೇನೆ ? ಇಂದು ಹೊತ್ತಿಗೊಂದು ಬಾರಿ ಅಂಚಿನ ರೇಶ್ಮೆ ಸೀರೆ ಉಡುತ್ತ ಬಗೆ ಬಗೆ ಒಡವೆ ಹಾಕಿಕೊಂಡು ಗಂಡಿನ ಕಡೆ ಬೀಗರ ಗುಂಪಲ್ಲಿ ಪ್ರಮುಖಳಾಗಿ ಉಪಚಾರ ಪಡೆಯುತ್ತಿರುವ ಅವಳ ಮೇಲೆ ಅಸೂಯೆ ಎನಿಸಿತು. ತಾನು ಹೆಣ್ಣಿನ ಗುಂಪಲ್ಲಿದ್ದೇನೆ. ಲಲಿತ, ಚಂದ್ರಕಲರ ಹಾಗೆ ಮದುಮಗಳ ಸನಿಹದವರಲ್ಲ. ಅವರಿಬ್ಬರ ಓಡಾಟವೇ ಓಡಾಟಾ. ಹೆಣ್ಣಿನ ಕಡೆಯವರಾಗಿ ಬಂದವರಲ್ಲಿ ಆಗಾಗ ತಾಯಿಯ ಜೊತೆ, ಆಗಾಗ ಗಂಡನ ಜೊತೆ ಕಾಲಾ ಕಳೆದಿದ್ದಳು.

ಬೀಗರನ್ನೆದುರು ಗೊಳ್ಳಲು ಹೋಗುವಾಗ ಅವರೆಲ್ಲರ ಕೈಯಲ್ಲಿ ಒಂದೊಂದು ಬೆಳ್ಳಿ ತಟ್ಟೆ. ಲಲಿತಳೇ ಆಧ್ಯತೆಯಿಂದ–

"ಚಂದ್ರಾ ನೀನು ಅರಶಿನ ಕುಂಕುಮದ ತಟ್ಟೆ ಹಿಡ್ಕೊ. ಸುಭದ್ರಾ ನೀನು ಈ ಅಕ್ಕಿ ತಟ್ಟೆ ಹಿಡ್ಕೊ. ಬೀಗರಿಗೆ ಎದುರಕ್ಕಿ ಹಾಕಬೇಕು. ವಸುಧಾ ನೀನು ಕೊಬರಿ ಬಟ್ಟಲು ಅರಶಿನ ಪಟ್ನ ಇರೋ ತಟ್ಟೆ ತಗೊ. ಜಯಾ ನೀನು ಕಲಶ ಕನ್ನಡಿ ತಟ್ಟೆ ತಗೊ. ರಾಜಮ್ಮ ನೀವು ಆರತಿ ತಟ್ಟೆ ತಗೊಳ್ಳಿ," ಎಂದು ಸಡಗರಿಸುತ್ತಿದ್ದಳು. ತಾಯಿಾ ಜಯಮ್ಮ ಮಗಳಿಗೆ–"ಲಲಿತ–ಪರಿಮಳಾಗು ಏನಾದರೂ ಒಂದು ತಟ್ಟೆ ಕೊಡೆ. ಅವಳು ಒರಿಗೈಯಲ್ಲಿ ಹೊರಗಿನೋಳ ಹಾಗೆ ಏಕೆ ಬರಬೇಕು ?" ಎಂದಳು.

"ಇಲ್ಲಮ್ಮ ನನ್ನ ವಾರಿಗಿತ್ತಿ, ನಾದಿನೀರುಗಳೇ ಕೆಲವರು ಒರಿಗೈಯಲ್ಲಿ ಬರ್‍ತಿದ್ದಾರೆ. ಅಕ್ಕಾ ನಮ್ಮ ಹೆಣ್ಣಿನೋರ ಕಡೆ ಅತಿಥಿ. ನಾವು ಮನೇವರ ಗುಂಪು ತಟ್ಟೆಗಳು ತಗೋತೀವೆ" ಎಂದು ನುಡಿದಳು ಬೀಗರ ಕಡೇ ಬುಕ್ಕಿ ಹಿಟ್ಟಿನ ಪರಿಚಯದ ಸಮಯದಲ್ಲಿ ಒಂದು ಹದಿನೈದು ಜೋಡಿ ದಂಪತಿಗಳನ್ನ ಕೂಗಿ ಕೂಗಿ ಕರೆದಳು. ಆ ಪೈಕಿ ತಂದೆ ತಾಯಿಾ, ಅಣ್ಣಾ ಅತ್ತಿಗೆಯನ್ನು ಕರೆದಿದ್ದಳು. ಉಳಿದಂತೆಲ್ಲಾ ತನ್ನ ಅತ್ತೆ ಮನೆ ಕಡೆ ಬಳಗ.

ಬೀಗರಿಗೆ ಪರಿಮಳನ್ನ ಪರಿಚಯ ಮಾಡಿಸಬೇಕಿತ್ತು. "M.A. ಓದಿ, ಕಾಲೇಜು ಲೆಕ್ಚರರ್ ಆಗಿದ್ದಾಳೆ. ತೀರ ಲಾಡು ಊಟಕ್ಕೆ ಬಂದೋಳೆ ?" ಎಂದು ತಾಯಿ ಲಲಿತಳಿಗೆ ನುಡಿದರು.

"ಅಯ್ಯೋ ! ನಮ್ಮತ್ತೆ ಮನೆ ಕಡೆದೇ ಇನ್ನು ಏಳೆಂಟು ಜೋಡಿಗಳ ಪರಿಚಯ ಮಾಡಿ ಕೊಡಬೇಕಿತ್ತು. ಪುರೋಹಿತರು ವರಪೂಜೆಗೆ ಟೈಮ್ ಆಯಿತೂಂದರು. ಹೀಗಾಗಿ ಸ್ಟಾಪ್ ಮಾಡಿದೆ ಇನ್ನು M.A., M.S C, ಬೀಗರ ಕಡೇ ಲೆಕ್ಕವೇ ಇಲ್ಲವೇ ಬೀಗರ ಕಡೆ ಗುಂಪಲ್ಲಿ ಬಂದಿದೋರಲ್ಲಿ ಹನ್ನೆರಡು ಜನ ಲೇಡಿ ಡಾಕ್ಟರ್ಸ್....ಆರು ಜನ B.E ಓದಿದೋರು. ಇನ್ನು ಗಂಡಸರಲ್ಲಂತು ತೀರ ಭಾರಿ" ಎಂದು ಹೇಳಿದಳು.

"ಅಮ್ಮ ನೀನು ಅವಳಿದುರು ಹೆಚ್ಚುಗಾರಿಕೆ ಮಾಡಲೇ ಬೇಡಾ....ನನ್ನ ಪಾಡಿಗೆ ನಾನು ಹೇಗೆ ಬೇಕೋ ಹಾಗೇ .. ಇರ್ತೀನಿ" ಎಂದಳು, ಪರಿಮಳ.

"ಹಾಗಲ್ಲ ಕಣೇ ಆ ಕರಿ ಕಾಡೆಮ್ಮೆ ಹಾಗಿರೊ ತನ್ನ ದೂರದ ನಾದಿನಿ ಯಾವೋಳೋ....ಅವಳ ಗಂಡನಿಗೆ ಸ್ವಂತ ತಂಗಿ ಸಹ ಅಲ್ಲ ಚಿಕ್ಕಪ್ಪನ ಮಗಳು. ಅಕೇನೆ ಸುಭದ್ರ-ಸುಭದ್ರ ಅಂತ ಕೂಗಿ ಬೀಗರ ಮುಂದೆ ಹೆಚ್ಚು ಗಾರಿಕೆ ಮಾಡ್ತಾಳೆ. ವಜ್ರದ ವಾಲೆ ಹಾಕ್ಕೋರು ಮಾತ್ರ ಮನುಷ್ಯರು ಅವಳ ಕಣ್ಣಿಗೆ. ನೀನು ಬಡವಳಿರಬಹುದು. ಆದರೆ ಓದಿನಲ್ಲಿ, ರೂಪದಲ್ಲಿ.... ಏನು ಕಡಿಮೆ ಇದ್ದಿ ?" ಎಂದಳು.

ತಾಯಿ ತನ್ನನ್ನು ಸಂತೈಸುವ ಬರದಲ್ಲಿ ಒಡಹಳು ಎಂದದ್ದು ಪರಿಮಳೆಗೆ ಇರಸು ಮುರಸಾಯಿತು. ಹೌದು ! ಈ ಅತಿ ಶ್ರೀಮಂತರ ಗುಂಪಲ್ಲಿ ತಾನು ಬಡವಳೇ ಎನಿಸಿತು

ಲಲಿತೆಯ ವಾರಿಗಿತ್ತಿ ಮಾತಾಡಿಸುವಾಗ—"ಏನ್ರಿ ನಿಮ್ಮ ಸ್ವಂತ ಮನೆ ಏಳಲೇ ಇಲ್ಲ. ನಮಗೆ ಗೃಹಪ್ರವೇಶದೂಟಾ ಸಿಕ್ಕಲೇ ಇಲ್ಲ" ಎಂದಳು.

ಲಲಿತಳ ಅತ್ತೆ ಮಾತಾಡಿ—"ಪಾಪಾ ಗಂಡಾ ಹೆಂಡತಿ ಇಬ್ಬರು ದುಡೀತಿದ್ದಾರೆ. ಲೋನ್‌ಗಳು ಸಿಗಬೇಕು, ನಿನಗೇನು....? ನನ್ನ ಮಗ ಲಕ್ಷಾಂತರ ರೂ ಸಂಪಾದಿಸಿ ತಂದು ಹಾಕ್ತಾನೆ. ಕುಡಿದ ನೀರು ಅಲುಗಾಡದ ಹಾಗೆ ಕೂತಲ್ಲೇ ಎಣಿಸಿಕೋತ ನಾಲ್ಕು ಬಂಗಲೆ ಕಟ್ಟಿಸಿದೆ" ಎಂದರು. ಅವಳ ಗಂಡ B.E, ಓದಿ ಸ್ವಂತ ಕಂಟ್ರಾಕ್ಟ್ ಮಾಡುತ್ತಿದ್ದ. ಲಲಿತಳ ಗಂಡನ ಸ್ವಂತ ಅಣ್ಣ ಅವನು. ತಂದೆಯ ವ್ಯವಹಾರ ಮುಂದುವರಿಸಿದ ಅವನು ಶ್ರೀಮಂತಿಕೆಯಲ್ಲಿ ಜೋರಾಗಿದ್ದ. ಅವನ ಹೆಂಡತಿ ಲಲಿತಳಂತೆ ರೂಪವತಿಯೂ ಅಲ್ಲ. B.A, ಓದಿದವಳು ಅಲ್ಲ. ಹಣಾ ಖರ್ಚು ಮಾಡುತ್ತಿದ್ದವನು ದೊಡ್ಡಣ್ಣ. ಆದರೇ. ಓಡಾಟ ನಿರ್ವಹಣೇ ಲಲಿತಳದೇ. ಅವನು

ಮುಖ್ಯ ವಿಷಯ ಕೇಳಲು "ಲಲಿತಮ್ಮ... ಲಲಿತಮ್ಮ ಎಂದು ಬರುತ್ತಿದ್ದ.

"ಭಾವಹತ್ತು ಸಾವಿರ ರೂಗಳದ್ದು ಐದು ಕಟ್ಟು ಇದೆ. ಅವರಿಗೆ ತಟ್ಟೇಲಿಟ್ಟು ಮಾವನ ಕೈಲಿ ಕೊಡಿಸಿಬಿಡಿ." ಎಂದು ಮದುಮಗನ ಬಳುವಳಿಯಿಂದ ಹಿಡಿದು, ಎಲ್ಲದರ ಬಗ್ಗೆ ತಾನೇ ನಿರ್ವಹಿಸುತ್ತಿದ್ದಳು. ಅವರೆಲ್ಲಾ ಶಾರದೆಗೆ ಮಾಡುವ ಉಪಚಾರ ಪರಿಮಳೆಗೆ ರೇಗಿಸುತ್ತಿತ್ತು. ಧಾರೆ ಆದ ಸಮಯದಲ್ಲಿ ಗಂಡಿನವರಿಗೆ ಕುಳಿತಲ್ಲೇ ಬಾದಾಮಿ ಹಾಲು ಸರಬರಾಜು ಮಾಡಿದಳು ಹೆಣ್ಣಿನ ಕಡೆ ಕೆಲವು ಮುಖ್ಯಸ್ಥರಿಗೆ ಮಾತ್ರ ಸಿಕ್ಕಿತು. ಪರಿಮಳೆಗೆ ಬಂದು ಯಾರು ಕೇಳಲಿಲ್ಲ. ಆದರೆ ಗಂಡಿನ ಕಡೆಯ ಗುಂಪಿನ ಬಳಿ ಪದೆ ಪದೆ ಹೋಗಿ–ನಿಮ್ಮ ಕಡೇ ಎಲ್ಲರದೂ ಆಯ್ತಾ....?" ಎಂದು ಗ್ಲಾಸುಗಳು ತುಂಬಿದ ತಟ್ಟೆ ಹಿಡಿದು ಕೇಳಿದ್ದು ಕೇಳಿದ್ದೇ....ಆ ಹೊತ್ತಿಗೆ ಅನಂತ ಅವನ ಹೆಂಡತಿ ಮದುಮಕ್ಕಳಿಗೆ ಏನೋ ಓದಿಸಲು ಬಂದರು.

ಶಾರದ ಓಡಿ ಹೋಗಿ "ಅತ್ತಿಗೇ....ನೀವು ಅಣ್ಣಾ ಯಾವಾಗ ಬಂದಿರಿ? ಎಲ್ಲಿ ಕೂತಿದ್ದಿರಿ?" ಎಂದಳು.

ಜಯಲಕ್ಷ್ಮಿ ಉತ್ತರಿಸಿ ಧಾರೆ ಆಗುವಾಗ ಬಂದ್ವಿ. ಸಾವಿರಾರು ಜನದ ಗುಂಪು ಹಿಂದೆ ಕೂತಿದ್ವಿ." ಎಂದಳು. "ಇಲ್ಲಿ ಕುರ್ಚಿ ಮೇಲೆ ಕೂತುಕೊಳ್ಳಿ. ಲಲಿತಕ್ಕಾ ಇವರಿಗ ಬಾದಾಮಿ ಹಾಲು ಕೊಡಿ" ಎಂದು ಹೇಳುತ್ತಿದ್ದಂತೆಯೇ ಲಲಿತ ತನ್ನ ನಾದಿನಿಯನ್ನು ಕೂಗಿ—

"ವಸುಂಧರ ಬಾದಾಮಿ ಹಾಲು ತಗೊಂಬಾ" ಎಂದು ಅವರಿಗೆಲ್ಲಾ ಬಾದಾಮಿ ಹಾಲು ತರಿಸಿಕೊಟ್ಟಳು. ಊಟಕ್ಕು ಅವರೆಲ್ಲಾ....ಶಾರದಳ ಪಂಕ್ತಿಯಲ್ಲಿ ಕೂತು ಬೆಳಗಿನೂಟ ಮುಗಿಸಿ ಹೋದರು. ಹೋಗುವಾಗ ಪರಿಮಳ, ಅವರ ತಾಯಿ ಕಾಣಿಸಿದರು. ಪರಿಮಳಾ ತಾಯಿ ಹಲವಾರು ಸಂದರ್ಭದಲ್ಲಿ ಪರಿಮಳೆಯ ಮನೆಯಲ್ಲಿ ಜಯಲಕ್ಷ್ಮಿಯನ್ನು ಕಂಡಿದ್ದರು.

"ಚೆನ್ನಾಗಿದ್ದೀರಾ ? ಗುರುತು ಸಿಕ್ಕಿತೊ ಇಲ್ಲವೋ ?" ಎಂದರು.

ಜಯಲಕ್ಷ್ಮಿ ನಗುತ್ತ—"ಓ ನೀವು ಜಯಮ್ಮನವರು. ನಿಮ್ಮ ತಂಗಿ ಪರಿಮಳಾ....?" "ಮದುವೆ ಹುಡುಗಿ ನಿಮ್ಮ ಬೀಗಿತ್ತಿ ಮಗಳಲ್ವಾ ? ನಿಮ್ಮ ಮಗಳು ಲಲಿತಳದೇ ಓಡಾಟಾ...." ಎಂದಳು.

"ಹೌದಮ್ಮ ನೀವೇನು ? ನೆಕ್ಲೆಸ್....ಎರಡೆಳೆಯ ಅವಲಕ್ಕಿ ಸರ, ಮೆಣಸಿನ ಬಳೆಗಳು ಎಲ್ಲಾ ಮಾಡಿಸಿಕೊಂಡ್ರಿ ?" ಎಂದರು.

ಜಯಲಕ್ಷ್ಮಿ ನಗುತ್ತ—"ಆಯ್ಯೋ ! ಹೇಳೋದೇನ್ರಿ ? ಪೇಪರಿನಲ್ಲಿ ಬಂದಿರಲಿಲ್ವಾ ? ನಮ್ಮ ಮಾವನವರು ಅಮೇರಿಕಾ ವಿಜ್ಞಾನಿಗೆ ಸಹಾಯ ಮಾಡಿದ್ದರು. ಅಲ್ಲಿಂದ ಡಾಲರ್ಸ್ ಬಂದಿತ್ತು. ವಿದ್ವತ್ ಸಂಭಾವನೆ ಆದ್ದರಿಂದ ಗಿಫ್ಟ್ ಟ್ಯಾಕ್ಸ್, ತೆರಿಗೇ....ಏನಿಲ್ಲ. ಹೀಗಾಗಿ ಅವರು ನಿರೀಕ್ಷಿಸಿದ್ದಕ್ಕಿಂತ ಜಾಸ್ತಿ ಹಣಾ ಬಂತು. ಹತ್ತು ತೊಲ ಬಂಗಾರ ಹಾಕಿದರು. ಜೊತೆಗೆ ಮನೆ ಸಹ ಕಟ್ಟಿಸ್ತಿದ್ದೀವಿ. ಸರಸ್ವತಿಪುರಂನಲ್ಲಿ. ಮೊನ್ನೆ ಗುದ್ದಲಿ ಪೂಜೆ, ಭೂಮಿಯ ಪೂಜೆ ಸಹ ಆಯ್ತು. ಉಗಾದಿ ಹೊತ್ತಿಗೆ ಮನೆ ಆಗುತ್ತೆ. ಪರಿಮಳ ಜೊತೆ ನಿಮ್ಮನೇಗೆ ಬಂದು ಕರೀತೀನಿ. ಖಂಡಿತ ಬರಬೇಕು." ಎಂದಳು. "ಅಯ್ಯೋ, ಬರ್ತೀನಮ್ಮ. ನೀನು ಬೇರೆ, ನಮಗೆ ಪರಿಮಳಾ ಬೇರೇನೇನು ?" ಎಂದರು.

ಅವಳು ಅತ್ತ ಹೋದೊಡನೇ—ಅತ್ತೆ ಮಾವನಿಂದ ತುಂಬಾ ದೂರಾಗಿ ಸೆಟಗೊಂಡಿದ್ದೆ. ಆ ಹಳ್ಳಿಯ ಮುದಿಗೊಡ್ಡುಗಳಿಗೆ ಯಾರು ಓಲೈಸ್ತಾರೇ.... ಅಂತಿದ್ದೆ. ಇವಳು ನೋಡು...ಚೆನ್ನಾಗಿ ಪೂಸಿ ಹೊಡೆದು, ಲಕ್ಷಾಂತರ ಗಳಿಸಿದ್ದಾಳೆ. ನೀವು ಗಂಡಾ ಹೆಂಡ್ತಿ ಹಗಲು ರಾತ್ರಿ ದುಡೀತಿದ್ದೀರಿ. ನಾವು ಸೈಟ್ ಕೊಟ್ಟರೂ, ಒಂದು ಮನೆ ಎಬ್ಬಿಸಲಿಕ್ಕೆ ಆಗಲಿಲ್ಲ. ಒಂದಿಷ್ಟು ಒಳ್ಳೆತನ ನಟಿಸಿ, ನೀನು ಅವರನ್ನ ಓಲೈಸಿ ಪೂಸಿ ಮಾಡಿ ಒಂದಿಷ್ಟು ಹಣಾ ಹೊಡೀ ಬೇಕಾಗಿತ್ತು." ಎಂದರು.

ತಾನು ಆ ಕಣಕ್ಕೆ ಪ್ರಯತ್ನಿಸಿ ಮುಖಭಂಗ ಮಾಡಿಸಿಕೊಂಡು, ದೊಡ್ಡ ಅಪಮಾನ ಮಾಡಿಸಿಕೊಂಡು ಬಂದುದ್ದನ್ನು ಪರಿಮಳ ಯಾರ ಮುಂದು, ತನ್ನ ತವರಿನ ಕಡೇ ಹೇಳದೆ ಬಚ್ಚಿಟ್ಟಿದ್ದಳು. ಈ ದಿನ ಜಯಲಕ್ಷ್ಮಿ ಉಟ್ಟ ಸೀರೆ.. ಅವಳ ಒಡವೆಗಳು....ಅವಳ ಹೊಟ್ಟೆಯಲ್ಲಿ ಕಲರವ ಎಬ್ಬಿಸಿದವು. ಅಸಲು ವಿಷಯ ಆ ಒಡವೆ ಸೀರೆಗಳೆಲ್ಲಾ ಜಯಲಕ್ಷ್ಮಿಯದಲ್ಲ, ಶಾರದಳದು. ಶಾರದ ಮದುವೆಗೆ ಕರಿಯಲಿಕ್ಕೆ ಬಂದಾಗಲೇ ತನ್ನ ಒಂದು ಸೂಟ್‌ಕೇಸ್ ನೀಡಿ "ಅತ್ತಿಗೆ ಗ್ರ್ಯಾಂಡಾಗಿ, ಅಲಂಕರಿಸಿಕೊಂಡು ಮದುವೆಗೆ ಬನ್ನಿ. ಇದರಲ್ಲಿ ನನ್ನ ಸೀರೆ ಒಡವೆಗಳಿವೆ. ಅಲ್ಲಿ ಮದುವೆ ಮನೇಲಿ ನಮ್ಮತ್ತೆ ಮನೆ ಒಡವೆಗಳು ಹಾಕ್ಕೋತೀನೆ. ಇದು ಅಮ್ಮನ ಮನೆ ಒಡವೆಗಳು. ನೀವು ಹಾಕ್ಕೊಂಬನ್ನಿ" ಎಂದಿದ್ದಳು. ಮದುವೆ

ಮುಗಿದ ಮಾರನೆಯ ದಿನ ಬೀಗರೌತಣಕ್ಕು ಇರದೇ ಪರಿಮಳ ಗಂಡನ ಜೊತೆ ಬಂದುಬಿಟ್ಟಳು.

"ಪಾಪಾ ನಿನ್ನ ತಂಗಿ ಅಷ್ಟು ಹೇಳಿದಳು. ಬೀಗರೌತಣಾ ಮುಗಿಸಿ ಕೊಂಡು ಅವರ ಕಡೇ ಉಡುಗರೇನು ತೆಗೆದುಕೊಂಡು ಹೋಗೂಂತ· ನಿಂದೇನು ವಿಚಿತ್ರ ಹಠ. ಈಗ ಬಂದು ಹೋಟಲೂಟಾ ಮಾಡೋಕ್ಕಿಂತ ಹಾಯಾಗಿ ಜಿಲೇಬಿ, ಚಕ್ಕುಲಿ ಬಿಸಿಬೇಳೆ ಭಾತಿನ ಊಟಾ ಮುಗಿಸಿ ಬರಬಹು ದಾಗಿತ್ತು." ಹೋಟಲಲ್ಲಿ ಊಟಕ್ಕೆ ಕೂತಾಗ ಗೋವಿಂದ ನುಡಿದ.

"ವೈದಿಕ ಬ್ರಾಹ್ಮಣರ ಮಗನಾಗಿರೋ ನಿಮಗೆ ಕಾಲೇಜು ಲೆಕ್ಚರರ್ ಆದರೂ ಔತಣದೂಟದ ಚಪಲ ಹೋಗಿಲ್ಲ" ಎಂದಳು.

ಗೋವಿಂದ ನಗುತ್ತ—"ಅದಕ್ಕೆ ನಿನ್ನಂತಹ ಪಾರ್ಟ್ ಟೈಮ್ ಗೃಹಿಣೀನು ಕಾರಣಾ. ಅನ್ನ, ಸಾರು, ಚಟ್ನಿ, ಚಪಾತಿ ಬಿಟ್ರೇ ಬೇರೆ ಅಡಿಗೆ ಏನು ಮಾಡ್ತಿ ? ನನಗೆ ಹಪ ಹಪಾ ಅಂದ್ಹಾಗೆ....ಅಂತಿರತ್ತೆ" ಎಂದ.

"ಹೌದು ! ನಿಮ್ಮ ನಾಲಿಗೆ ರುಚಿಗೆ ಬಿದ್ದು ನಾನು ಕಾಲೇಜಿಗೆ, ಹಾಗು ಟ್ಯುಟೋರಿಯಲ್ಸ್‌ಗೆ ರಾಜಿನಾಮೆ ಕೊಟ್ಟೆ ಅನ್ಕೊಳ್ಳಿ. ನೆಂಟರಿಷ್ಟರಲ್ಲಿ ನಗೆ ಪಾಟಲಾಗಬೇಕತ್ತೆ. ಸೈಟ್ ಕೊಟ್ಟರೂ ಅಳಿಯಂದಿರು ಮನೆ ಕಟ್ಟಿಸ ಲಿಲ್ಲಾಂತ ಅಮ್ಮ ಅಂದಳು. ನಿಮ್ಮ ಲೋನ್, ನಾವು ಕೂಡಿ ಹಾಕಿದ್ದು ಎಲ್ಲಾ ಸೇರಿದರೂ, ಇಂಜನಿಯರ್ ಹೇಳಿದ ಅಂದಾಜಿಗೆ ಒಂದು ಲಕ್ಷ ರೂ. ಕಡಿಮೆ ಬರತ್ತೆ. ಏನು ಮಾಡೋದು ?" ಎಂದಳು

"ಇನ್ನು ಮೂರು ವರ್ಷ ಕೂಡಿ ಹಾಕೋಣಾ....ಒಂದು ಮಾತು ಪರಿ ಮಳ. ಮನೆ ಇನ್ನೈದು ವರ್ಷ ತಡವಾಗಲಿ. ನಾವು ಒಂದು ಮಗೂಗೆ ತಂದೆ ತಾಯಂದಿರಾಗಬೇಕು ನಿಮ್ಮಣ್ಣಾ ನಿನ್ನ ತಂಗಿ ಗಂಡಾ....ಎಲ್ಲಾ ನಮ್ಮ ನಂತರ ವಿವಾಹವಾದೋರು. ಮುದ್ದಾದ ಒಂದೊಂದು ಮಕ್ಕಳ ತಂದೇರಾಗಿದ್ದಾರೆ. ಮದುವೆ ಆಗಿ ಐದನೆಯ ವರ್ಷದ ಆ್ಯನಿವರ್ಸರಿ ಆಚ ರಿಸೋವಾಗಲು ನಾವು ಈ ಪ್ರಶ್ನೆ ಹಾಗೆ ಬಾಕಿ ಉಳಿಸಿಕೊಂಡಿದ್ದೀವಿ" ಎಂದ.

ಆ ದಿನ ಮನೆಗೆ ಬಂದು ಪರಿಮಳಾ ಬಿಕ್ಕಿ ಬಿಕ್ಕಿ ಅತ್ತಳು. "ನನ್ನ ಕನಸುಗಳು ಯಾವುದೂ ನೆರವೇರಲಿಲ್ಲಾಂದ್ರೆ. ಸ್ವಂತ ಮನೆ ಆಗೋವರೆಗೆ ಮಗು ಸಹ ಬೇಡಾಂತ ವ್ರತಾ ಮಾಡಿದೀನಿ. ನೋಡಿ ನಿಮ್ಮ ತಂದೆ ತಾಯಿ ನಮ್ಮ ಮೇಲಿನ ಛಲಕ್ಕೆ ಅನಂತ ಹಾಗು ಜಯಲಕ್ಷ್ಮಿಯರನ್ನ ಮೇಲೇರಿಸ್ತಿ

ದ್ದಾರೆ. ಅವರಿಗೆ ಮನೆ ಕಟ್ಟಿಸಿ ಕೊಡ್ತಿದ್ದಾರೆ. ಅಕ್ಕನಿಗೆ ಹತ್ತು ತೊಲದ ಚಿನ್ನದ ಒಡವೆಗಳು ಮಾಡಿಸಿದ್ದಾರೆ. ತವರು ಮನೆ ಕಡೆ ನನ್ನ ತಂಗಿ ಲಲಿತ, ನನ್ನ ಅತ್ತಿಗೆ ಚಂದ್ರಕಲ ಜೋರಾಗಿದ್ದಾರೆ. ಅದಕ್ಕೆ ನಾನು ವ್ಯಥೆ ಪಡಲ್ಲ. ಅವರಿಬ್ಬರು ಇಂಜನಿಯರ್ ಹೆಂಡ್ತೀರು. ಆದರೆ ಜಯಲಕ್ಷ್ಮಿ ಅಕ್ಕ ಪಡಿ ಪಾಟಲು ಪಡ್ತಿದ್ದೋಳು ಇವತ್ತು ನಮ್ಮ ಹಾಗೆ ಮನೆ ಕಟ್ಟಿಸಿ, ನಮ್ಮ ಹಾಗೆ ಟಿ.ವಿ, ಫ್ರಿಜ್ ಬಂಗಾರದ ಒಡವೆ ತಗೊಂಡ ಮೇಲೆ ಬೇರೆ ಏನುಳೀತು ?" ಎಂದಳು

ಗೋವಿಂದ ನಗುತ್ತ—"ಅದಕ್ಕೆ ನೀನು ಸಂಕಟ ಪಡ್ತಾ ಕೂತರೆ, ದುರ್ಯೋಧನ ಸಕಲ ವೈಭವಗಳ ಮಧ್ಯೆ ಪಾಂಡವರು ವನವಾಸದಲ್ಲಿ ಅಕ್ಷಯ ಪಾತ್ರೆ ಗಳಿಸಿ ಮೃಷ್ಟಾನ್ನ ಭೋಜನ ಮಾಡಿದ್ರಲ್ಲಾಂತ ಸಂಕಟ ಪಡ್ತಿದ್ದ ಹಾಗಾಗತ್ತೆ. ನಮಗೇನು ಕಡಿಮೆ ಇದೆ ಪರಿಮಳ ? ಇಬ್ಬರೂ ಸಂಪಾದಿಸ್ತೀವಿ. ತಿಂಗಳಿಗೆ ಎರಡೂವರೆ ಸಾವಿರದವರಿಗೆ ಉಳಿತಾಯ ಮಾಡ್ತಿದ್ದೀನಿ. ನಾಲ್ಕು ವರ್ಷದ ಉಳಿತಾಯವಿದೆ. ಲೋನ್ ಸಹ ಸಿಗೋ ಹಾಗಿದೆ. ಸೈಟ್ ಇದೆ. ಈ ವರ್ಷ ಅಲ್ಲದಿದ್ದರೆ ಮುಂದಿನ ವರ್ಷವಾದರೂ ಕಟ್ಟಿಸ್ತೀವಿ." ಎಂದ.

ಪರಿಮಳ ಅಳುತ್ತ—"ನನಗೆ ನಾಲ್ಕು ವರ್ಷಗಳ ಕಾಲಾ ಕಾಯೋ ತಾಳ್ಮೆ ಇಲ್ಲಾರಿ" ಎಂದಳು.

"ಏನು ಮಾಡಬೇಕು ಹೇಳು ? ನೀನು ಹೇಳಿದ ಹಾಗೆ ಕೇಳ್ತೀನಿ" ಎಂದ ಗೋವಿಂದ.

ಪರಿಮಳ ಬೇಸರದಿಂದ—"ಹೇಳಲು ಏನು ಉಳಿದಿದೆ ? ನಿಮ್ಮ ತಂದೆ ತಾಯಿಯಾ ಸೇಡು ತೀರಿಸಿಕೊಳ್ಳೋ ಅಂಥಾ ಅಪರಾಧಾ ನಾವೇನು ಮಾಡಿದ್ದಿವಿರಿ ? ನಿಮ್ಮ ಅಣ್ಣಾ ಅತ್ತಿಗೆ ಏನು ಮಹಾ ಸಾಚಾ ಇದ್ದರು ? ನಿಮ್ಮ ಅತ್ತಿಗೆ ಇಲ್ಲಿ ಬಂದಾಗ ನಿಮ್ಮ ತಾಯಾ ಮೇಲೆ ನೂರಾರು ಚಾಡಿ ಹೇಳ್ತೀರಲಿಲ್ಲವಾ ? ಎಂಟು ತಿಂಗಳ ಹಿಂದೆ ಶಾರದನ ಮದುವೆ ಗೊತ್ತಾದಾಗ ನಿಮ್ಮತ್ತಿಗೆ ಇಲ್ಲಿಗೆ ಬಂದು ಹಾರಾಡೀಲಿಲ್ಲವಾ ? ಮದುವೆಗೆ ಹಣ ಕಳಿಸಬೇಕಂತೆ. ಎಲ್ಲಿಂದ ತರೋದು ? ಇವರ ಹಳ್ಳಿ ಮನೇಲಿ ಪಾಲು ಬೇಡ. ನಮಗೆ ಆ ಜನಗಳ ಸಂಬಂಧವೂ ಬೇಡ. ಆ ಹಳ್ಳಿ ಮುಕ್ಕ ಶಾರದಂಗೆ ಡಾಕ್ಟರ್ ವರನಂತೆ. ಅದಕ್ಕೆ ನಾವು ದುಡ್ಡು ಸರಿ ಮಾಡಿ ಕಳಿಸಬೇಕಂತೆ.

ಕನಸಿನಲ್ಲಿಯೂ ಸಾಧ್ಯವಿಲ್ಲ" ಎಂದು ಹಾರಾಡಿದ್ದಳು. ಅವರು ಮೂರು ಕಾಸು ಕಳಿಸಲಿಲ್ಲ. ನಾವು ಅದನ್ನೇ ಪತ್ರದಲ್ಲಿ ಬರೆದಿದ್ದೆವು. ಆದರೆ ಈಗ ನಾವು ಮಾತ್ರ ಹೇಗೆ ಕಟ್ಟೋರಾದಿವಿ. ಅವಳು ಶಾರದ ಬಂದರೇ ಶಾರದಾ ಬಾದಾಮಿ ಹಾಲು ತರಿಸಿ ಕುಡಿಸಿದಳು. ತವಮ್ಮ ಬೀಗರ ಗುಂಪಲ್ಲಿ ಮೊದಲ ಪಂಕ್ತೀಲಿ ಊಟಕ್ಕೆ ಕೂಡಿಸಿಕೊಂಡಳು. ಈ ಸಲ ಲಲಿತನ ಮೇಲು ಕೋಪಾ ಬಂದಿದೆ. ಇನ್ಮೇಲೆ ಅವರ ಮನೆ ಸಮಾರಂಭಗಳಿಗೆ ಹೋಗಬಾರದೂಂತಿದ್ದೀನಿ."

"ನೋಡು ಪರಿಮಳ, ಲಲಿತನ್ನ ದೂರ ಮಾಡ್ಕೊ. ಅತ್ತಿಗೆ ನಿನ್ನ ಅತ್ತಿಗೇನ್ನ ದೂರ ಮಾಡ್ಕೊ. ನನ್ನ ಅತ್ತಿಗೆ, ಶಾರದ ಇಬ್ಬರು ಒಂದಾದರೂಂತ ಅವರನ್ನ ದೂರಾ ಮಾಡ್ಕೊ. ಹೀಗೆ ಎಲ್ಲರನ್ನ ದೂರಾ ಮಾಡ್ತಾ ಕೂತರೇ ಜೀವನದಲ್ಲಿ ನಮ್ಮವರು ಯಾರು ? ಮದುವೆ ಆದ ನಾಲ್ಕು ವರ್ಷ ಹಳ್ಳಿ ಕಡೆ ತಿರುಗಿ ನೋಡಲಿಲ್ಲ. ತಂದೆ ತಾಯಿಗೆ ಮೂರು ಕಾಸು ಕಳಿಸಲಿಲ್ಲ. ಆದರೆ ನಮ್ಮ ಅನಂತ ನನ್ನಷ್ಟು ಅಯೋಗ್ಯ ಅಲ್ಲ. ವಿವಾಹಕ್ಕೆ ಮುಂಚೆ ತಿಂಗಳಿಗೆ ಮುನ್ನೂರು ರೂ. ಕಳಿಸ್ತಿದ್ದ. ವಿವಾಹ ಆದ ಎರಡುವರುಷ ಇನ್ನೂರು ರೂ. ಕಳಿಸ್ತಿದ್ದ. ಎರಡು ಮಕ್ಕಳ ತಂದೆ ಆದ ಮೇಲು ನೂರು ರೂ. ಕಳಿಸ್ತಿದ್ದ. ನಮ್ಮ ಮದುವೆ ಆದ ಮೇಲೆ ನೀನು ನನ್ನ ಬಂಧನ ಮಾಡಿದಿ.

ಜಯಲಕ್ಷ್ಮಿ ಅತ್ತಿಗೆಗೆ ತಲೆ ತುಂಬ್ತಿದ್ದಿ. ಈ ನಾಲ್ಕು ವರ್ಷದಿಂದ ಅವನು ಹಣಾ ಕಳಿಸೋದು ನಿಲ್ಲಿಸಿದ. ಮೆಣಸಿನ ಪುಡಿ ಸಹಾ ಒರಳಲ್ಲಿ ಕುಟ್ತೀರಾಂತ ಹಂಗಿಸ್ತಿದ್ದೆ. ಕಡೆಗೆ ಒಂದು ಮಿಕ್ಸರ್ ಕೊಂಡ. ಒಂದು ಗ್ಯಾಸ್ ಸಹ ತಗೊಂಡ. ನಾಲ್ಕು ವರ್ಷ ತಂದೆ ತಾಯಿಗೆ ಕಳಿಸೋ ನಾಲ್ಕು ಸಾವಿರ ಉಳಿತಾಯ ಮಾಡಿ ಅವನು ಕೊಂಡ ಸಾಮಾನುಗಳಿವು.

ಆದರೆ ನಮಗೆ ಅಂಥಾ ಬಡತನವಿರಲಿಲ್ಲ. ದೇವರು ಬೇಕಾದ್ದು ಕೊಟ್ಟಿದ್ದ. ನಿಮ್ಮಪ್ಪ ಮದುವೇಲಿ ಕೊಟ್ಟ ಐವತ್ತು ಸಾವಿರದಲ್ಲಿ ಮನೆಗೆ ಬೇಕಾದ ಫ್ರಿಜ್, ಟಿ.ವಿ. ಡೈನಿಂಗ್ ಟೇಬಲ್, ಸೋಫಾ ಸೆಟ್ ಎಲ್ಲಾ ಕೊಂಡಿದ್ದೀವಿ. ಮನೆ ಮಾರ್ಡನ್ನಾಗಿ ಇಟ್ಟಿದ್ದಿವಿ. ಸಾವಿರ ರೂ. ಬಾಡಿಗೆ, ಸಾವಿರ ರೂ. ಮನೆ ಖರ್ಚು ಆಗಿ ಎರಡು ಸಾವಿರದ ಐನೂರು ರೂ ಉಳಿತಾ ಇತ್ತು. ತಿಂಗಳಿಗೆ ಐನೂರು ರೂ.ಗಳು ಅಮ್ಮನಿಗೆ ಕಳಿಸಬೇಕೂಂತ ಮನಸು

ಹಂಬಲಿಸ್ತಿತ್ತು. ಏಕೆಂದರೆ ತಾನು M.A, ಓದೋವರೆಗೆ ಅವ್ವ್ರ....
ಅನಂತಣ್ಣಾ ಕಳಿಸಿದ ಎಲ್ಲಾ ದುಡ್ಡು ನನಗೆ ಖರ್ಚು ಮಾಡಿದ್ದಳು. M.A,
ಓದಿ ಕೆಲಸಕ್ಕೆ ಸೇರಿ, ನಾಲ್ಕು ವರ್ಷ ಸಂಪಾದಿಸಿ, ಅಮ್ಮನಿಗೆ ಕೊಟ್ಟ
ಮೇಲೆ ನನ್ನ ಮದುವೆ ಆಗಿದ್ರೆ ಚೆನ್ನಾಗಿರೋದು. ಆದರೆ ನಿನ್ನ ತಂಗಿ
ಮದುವೆ ಮುಂಚೆ ಆಗಿ, ನಿನ್ನ ಸ್ವಾಭಿಮಾನ ಎಲ್ಲಿ ಮುಕ್ಕಾಗತ್ತೋ ಅಂತ
ನೀನು ನಾನು ಕಡೆಯ ವರ್ಷದ ವಿದ್ಯಾರ್ಥಿ ಆಗಿರೋವಾಗಲೇ ಪ್ರೇಮಿಸಿ
ಬಂದೆ." ಎಂದ.

ಪರಿಮಳ ಅಪಮಾನದಿಂದ ಅಬ್ಬರಿಸುತ್ತ—"ಸಾಕು ಸುಮ್ನಿರಿ,
ಇದೊಂದು ಹಸಿ ಸುಳ್ಳು. ಯಾರು ನಿಮಗೆ ಹೇಳಿದ್ದು. ನಾನು ನಳಿನಿ ಮನೆಗೆ
ಜಾಸ್ತಿ ಬರ್‍ತಾ ಇದ್ದೆ. ಪ್ರೇಮ ಕುರುಡು, ಅಂದೇ ಆ ಪ್ರೇಮದ ಬಲೆಗೆ
ಬಿದ್ದೆ. ನೀವು ಫಸ್ಟ್‌ಕ್ಲಾಸ್ ಬಂದು, ನಮ್ಮಪ್ಪ ಕೆಲಸಾ ಕೊಡಿಸೋ
ಹೊತ್ತಿಗೆ ಸರಿ ಹೋಯ್ತು. ಇಲ್ಲದಿದ್ದರೆ ಪಾಡಾಗ್ತಿತ್ತು." ಎಂದಳು.

"ಈ ಹಳೆಕಥೆ ಹಳೇ ರಾಗ ಹಲವು ಸಲ ಹಾಡಿದ್ದಿ. ನಾನು ನಂಬಿದ್ದೆ,
ಆದರೆ ಮೊನ್ನೆ ಮದುವೆಗೆ ನಿನ್ನ ಗೆಳತಿ ನಳಿನಿ ಬಂದಿದ್ದಳಲ್ಲ. ಆಗ ಈ ವಿಷಯ
ಹೇಳಿದಳು. ಲಲಿತ ಅಲ್ಲಿ ಬಂದೋರನ್ನ ಉಪಚರಿಸುತ್ತಿದ್ದಳು. ನೀನು
ಎಲ್ಲೋ ಒಂದು ಕಡೆ ಒಂಟಿಯಾಗಿ ಕೂತಿದ್ದೆ. ಆಗ ನಳಿನಾ ಹೇಳಿದಳು.

"ಅವಳಿಗೆ ನಾಲ್ಕು ಜನಕ್ಕೆ ನಡುವೆ ಹೆಚ್ಚುಗಾರಿಕೆಯಾಗಿ ಇರ
ಬೇಕೂಂತ್ಲೆ ಆಸೆ. ಆದರೆ ಅವಕಾಶಗಳು ಸಿಕ್ಕಿದ್ದೆಲ್ಲಾ ಅವಳ ತಂಗಿಗೆ.
B.A, ಆದಾಗಿಂದ ಇಂಜನಿಯರ್, ಡಾಕ್ಟರ್, ವರಗಳು ಅವಳ್ಗಾಗಿ ಕರಿಸ್ತಿ
ದ್ದರು. ಆದರೆ ವರಗಳು ಸೆಟಲ್ ಆಗ್ತಾ ಇರಲಿಲ್ಲ. ಲಲಿತಗಿಂತ ರೂಪವತಿ.
ಲಲಿತಗಿಂತ ಬುದ್ಧಿವಂತೆ. M.A, ಆದರೂ ವರ ಒದಗಿ ಬರಲಿಲ್ಲ. ಅವಳನ್ನ
ಒಪ್ತಿದ್ದರು. ಆದರೆ ಕೇಳ್ತಿದ್ದ ವರದಕ್ಷಿಣೆ ಜಾಸ್ತಿ. ಈ ಮಧ್ಯೆ ಲಲಿತಂಗೆ
ಇಂಜನಿಯರ್ ಹರ್ಷ ಒಲಿದು ಬಂದ. ಅವರಿಬ್ಬರ ಪ್ರೇಮ ಪ್ರಕಟ ಆಗೋ
ವರೆಗೆ ತಾನು ಇನ್ನು ವಧುಪರೀಕ್ಷೆ ಎದುರಿಸ್ತಾ—ಡಾಕ್ಟರ್, ಇಂಜನಿಯರ್
ಅಂತ ಕನಸು ಕಾಣ್ತಾ ಕೂಡಬಾರದೂಂತ ನನ್ನ ಹತ್ತಿರ ವಿಚಾರಿಸಿದಳು.
ನಾನೇ ನಿಮ್ಮನ್ನ ಸೂಚಿಸಿದ್ದು.

ತಂಗಿ B.A, ಪರೀಕ್ಷೆಗೆ ಮುಂಚೇನೆ ತಾನು ತನ್ನ ಪ್ರೇಮ ಪ್ರಕಟಿಸಿ
ವಿವಾಹವಾಗಿ ಗೆದ್ದಳು. ಮುಂದಿನ ಆರು ತಿಂಗಳಲ್ಲಿ ಲಲಿತಂದು ವಿವಾಹ

ಆಗಿತ್ತು. ಆದರೆ ಲಲಿತನ ಐಶ್ವರ್ಯ, ವೈಭವಗಳನ್ನ ನೋಡ್ತಿದಾಗೆಲ್ಲಾ ಅಪ್‌ಸೆಟ್ ಆಗ್ತಾಳೆ" ಎಂದು ಹೇಳಿದಳು. ತನ್ನ ಒಳಗುಟ್ಟು, ತನ್ನ ಆಪ್ತ ಗೆಳತಿ ಮೂಲಕ ಗಂಡನಿಗೆ ತಿಳಿದು ಹೋಯಿತಲ್ಲ. ಇದು ಪರಿಮಳೆಗೆ ಮತ್ತಷ್ಟು ಅಳಲು. ಗೋವಿಂದ ಇದೇ ಸಮಯವೆಂದು ಹೇಳಿದ.

"ತಿಂಗಳಿಗೆ ಐನೂರು ನಮ್ಮಮ್ಮನಿಗೆ ಕಳಿಸಿದ್ರೇ ಇವತ್ತು ಅಮ್ಮನಿಗೆ ನಾವಿಷ್ಟು ಕಟಾಂಕಟಿ ವಿರೋಧಿಗಳಾಗ್ತಿರಲಿಲ್ಲ. ಒಂದು ವಾರ ಅಮ್ಮ ಬಂದಾಗ ಹೇಗಾಡಿದೀವಿ ನೋಡು. ಇದೆಲ್ಲಾ ಈಗ ಯೋಚಿಸಿದರೇ ನಾವೇ ಅಪರಾಧಿಗಳು" ಎಂದ.

"ಆಯ್ತು. ಮನೆ, ಮಗು ಎರಡು ವಿಷಯದಲ್ಲಿಯೂ ಸಣ್ಣ ಮಾತು ಕೇಳಿ ಸಾಕಾಗಿದೆ. ನನ್ನ ಒಡವೆ ಮಾರಿ ಹಾಕಿದ್ರು ಚಿಂತೆಯಿಲ್ಲ. ಈ ಸಲ ಡಿಸೆಂಬರ್ ಹೊತ್ತಿಗೆ ಮನೆ ಆಗಬೇಕು ಇನ್ಮೇಲೆ ಫ್ಯಾಮಿಲಿ ಪ್ಲಾನಿಂಗ್ ಬೇಡಾ...." ಎಂದಳು.

"ಅನ್ನಾವರ ಆಜ್ಞೇ...." ಎಂದ ಗೋವಿಂದ, ನಗೆಮುಖದಿಂದ.

ಈ ಘಟನೆ ನಡೆದು ಆರು ತಿಂಗಳಾಗಿತ್ತು. ಈಗ ಪರಿಮಳ ಮೂರು ತಿಂಗಳ ಗರ್ಭಿಣಿ. ಕಾಲೇಜು ಕೆಲಸ ಮಾತ್ರ ಸಾಕು ಎಂದು ಟ್ಯುಟೋರಿಯಲ್ಸ್ ಬಿಡಿಸಿದ್ದ. ಈ ಮಧ್ಯೆ ದಿನಾ ಹೊಟ್ಟೆನೋವು ಬರತೊಡಗಿತು ಡಾ. ಮೋಹನಾಂಗಿ ಅವಳನ್ನು ಪರೀಕ್ಷಿಸಿ—"ನೀವು ಬೆಡ್‌ರೆಸ್ಟ್ ಇರಬೇಕು ಮೂರು ತಿಂಗಳು ಕಾಲೇಜಿಗೆ ರಜಾ ಹಾಕಿ" ಎಂದಳು.

ಆ ದಿನ ಪರಿಮಳ ಚಿಂತಿಸುತ್ತ—"ಆಯ್ತು ನಮ್ಮ ಮನೆಯ ಕನಸು, ಕನಸಾದ ಹಾಗೆ. ಈಗಿನ್ನು ನಾಲ್ಕು ತಿಂಗಳು. ಈಗಿನಿಂದ ಮೂರು ತಿಂಗಳ ಬೆಡ್‌ರೆಸ್ಟ್ ಅಂದರೆ ಮುಂದೆ ಏಳನೆಯ ತಿಂಗಳು. ಏಳನೆಯ ತಿಂಗಳ ಮೇಲೆ ಏನು ಶಕ್ತಿ ಇರತ್ತೆ ? ಹೆರಿಗೆ ಆಗಿ ಮೂರು ತಿಂಗಳಾಗೋವರಿಗೆ ರಜವೆ ಬೇಕಾಗತ್ತೆ

"ಮನೆ ಒಂದೆರಡು ವರ್ಷ ತಡವಾಗಲಿ ಚಿನ್ನ. ಆದರೆ ಆರೋಗ್ಯ ಕಾಪಾಡಿಕೊ" ಎಂದ.

ಪರಿಮಳಾ ನಿರಾಶೆಯಿಂದ ನಕ್ಕಳು. ಮೂರು ತಿಂಗಳು ಪರಿಮಳ ತವರಿನಲ್ಲಿ ತಾಯಿಯ ಆರೈಕೆಯಲ್ಲಿ ನಿಂತಳು. ಗೋವಿಂದ ವಾರಕ್ಕೆರಡು ಬಾರಿ ಹೋಗಿ ಬಂದು ಮಾಡುತ್ತಿದ್ದ. ದಿನದಿನಕ್ಕೆ ಚೇತರಿಸಿಕೊಂಡು ಚಿನ್ನಗಾದಳು ಪರಿಮಳ. ಮನೆಮಟ್ಟದಲ್ಲಿ ಓಡಾಡಿದರೇ ಪರವಾಗಿಲ್ಲ. ಆದರೆ ಆರೇಳು ... ಕಿಲೋಮೀಟರ್ ಸ್ಕೂಟರಲ್ಲಿ ಹೋಗಬಾರದು ಎಂದಿದ್ದರು ಡಾಕ್ಟರ್. ಹೀಗಾಗಿ ಆರು ತುಂಬಿದ ಅವಳು ರಜಾ ಹಾಕಬೇಕಾಯಿತು.

"ಏನ್ರಿ ! ಇಷ್ಟು ವಿತೌಟ್ ಪೇ ಲೀವ್ ಆದಮೇಲೆ ನಮ್ಮ ಮನೆ ಬಡ್ಜೆಟ್‌ಗೆ ನಿಜವಾಗಿ ದುಡ್ಡು ಆಗತ್ತ ?" ಎಂದಳು.

"ನೀನು ಒಡವೆ ಮಾರಿದರೂ ಪ್ರಯೋಜನವಿಲ್ಲ....ಪರಿಮಳಾ....ನಾನು ಇಂಜನಿಯರ್ ಅವರನ್ನ ವಿಚಾರಿಸಿದೆ. ಈಗ ನಮ್ಮ ಕೈಲಿರೋ ಹಣಕ್ಕಿಂತ ಒಂದೂವರೆ ಲಕಾ ಜಾಸ್ತಿ ಬೇಕು. ಹೋದ ವರ್ಷಕ್ಕಿಂತ ಸಿಮೆಂಟ್, ಇಟ್ಟಿಗೆ ಎಲ್ಲಾ ಜಾಸ್ತಿ ಆಗಿದೆ. ಇದಲ್ಲದೇ ಆರು ತಿಂಗಳಿಂದ ಟ್ಯುಟೋರಿಯಲ್ ಮುಚ್ಚಿದೆ" ಎಂದ.

"ಹಾಗಾದರೆ ಒಂದೂವರೆ ಲಕ್ಷ ಕನಸೇ ಸರಿ. ನನ್ನ ಒಡವೆಗಳು ಮಾರಿದ್ರೆ ಐವತ್ತು ಸಾವಿರ ಸಿಗಬಹುದು " ಎಂದಳು.

"ನೀನು ತುಂಬಾ ಡೆಲಿಕೇಟಾಗಿದ್ದಿ. ಸುಖವಾಗಿ ಹೆರಿಗೆ ಆಗಿ ಗಂಡು ಮಗುವಿನ ತಾಯಿ ಆಗು ಮಗೂಗೆ ಆರು ತಿಂಗಳಾಗೋವರಿಗೆ ಮನೆಯ ಯೋಚನೆಯೇ ಬೇಡಾ....ಪ್ರಾಣಕ್ಕಿಂತ ಆಸ್ತಿ ಪಾಸ್ತಿ ದೊಡ್ಡದಲ್ಲ." ಎಂದ. ಪರಿಮಳ ಪತಿಯ ಮಾತನ್ನೊಪ್ಪಿ—

"ನಿಜಾಂದ್ರೆ ನಮ್ಮಮ್ಮನು ಇದನ್ನೇ ಹೇಳಿದಳು. ಸ್ಕ್ಯಾನಿಂಗ್ ಮಾಡಿಸಿದಾಗ ಗಂಡು ಮಗೂಂತ ಬಂದಿದೆ. ಅದಕ್ಕೆ ಸಂತೋಷ ಪಡು. ವಂಶೋಧ್ಧಾರಕನೇ ಒಂದು ದೊಡ್ಡ ಆಸ್ತಿ" ಎಂದಳು.

"ನನ್ನಂಥಾ ಮಗನಾದರೆ ತಂದೆ ತಾಯಿಗೆ ಏನು ಆಸ್ತಿ ? ಅಮ್ಮನ ಕೈಲಿದ್ದದ್ದು ಕಿತ್ಕೊಂಡೆ ನನ್ನ ಸಂಪಾದನೇಲಿ...ಅಪ್ಪಾ ಅಮ್ಮಂಗೆ ಮೂರು ಕಾಸು ಕೊಡಲಿಲ್ಲ ವಂಶೋಧ್ಧಾರಕ ಆಗಿ ತಾಯಿಗೆ ಏನು ಆಸೆ ಪೂರೈಸಿದೆ? ಇನ್ನು ಶಾರದಾನೇ ವಾಸಿ. ತಂಜಾವೂರು ಕಡೇ ತನ್ನತ್ತೆ ತಂಗಿ ಇದ್ದಾರಂತೆ. ಅಪ್ಪಾ ಅಮ್ಮನ್ನ ಆ ಕಡೇ ಕ್ಷೇತ್ರಗಳಿಗೆ ಕರ್ಕೊಂಡು ಹೋಗಿದ್ದಾಳೆ. ಜೊತೆಗೆ ತಿರುಪತಿ ಯಾತ್ರೆ ಮಾಡಿಸಿದ್ದಾಳೆ." ಎಂದ.

"ಯಾರು ಹೇಳಿದರು ಈ ಎಲ್ಲಾ ವಾರ್ತೆ ?" ಪರಿಮಳ ಕೊಂಚ ಬೇಸರದಿಂದ ಕೇಳಿದಳು.

"ನಿನ್ನೇ ನಿನ್ನ ಆರೋಗ್ಯ ವಿಚಾರಿಸಲಿಕ್ಕೆ ಅಣ್ಣಾ ಅತ್ತಿಗೆ ಬಂದಿದ್ದರು. ಗಂಟೆಗಟ್ಟಲೆ ಮಾತಾಡಿದರು. ಶಾರದನ ಕಾಗದ ಕೊಟ್ಟರು. ಮುಂದಿನ ತಿಂಗಳು ಮನೆ ಮುಗಿಯುತ್ತೆ. ಗೃಹ ಪ್ರವೇಶೋತ್ಸವ, ಶ್ರೀ ತಿರುಪತಿ ಸಮಾರಾಧನೆ ಎಲ್ಲಾ ಇಟ್ಕೋತೀವಿ ಆವಾಗ ಮೂರು ದಿನ ನೀವು ಗಂಡಾ ಹೆಂಡತಿ ಅಲ್ಲೇ ಬರಬೇಕು. ಪರಿಮಳಾಗೆ ಹಸಿರು ಸೀರೆ ಉಡಿಸಿ, ಒಂದು ಬೆಳದಿಂಗಳೂಟಾ ನಮ್ಮ ಹೊಸ ಮನೇಲಿ ಮಾಡಿಸಬೇಕೂಂತ ಅತ್ತಿಗೆ ಹೇಳಿದಳು." ಎಂದ.

"ಮನೆ ಮನೆ ಅಂತ ಕುಣಿದಾಡ್ತಿದ್ದೋರು ನಾವು. ಆದರೆ ನಾವಿನ್ನೂ ಹಾಗಿ ಕೂತಿದ್ದೀವಿ. ಅವರು ಸ್ವಂತ ಮನೆ ಮಾಡಿಕೊಂಡರು ಅವರ ಗೃಹ ಪ್ರವೇಶದ ಸಿಹಿ ಊಟಾ ನಾವು ಮಾಡಬೇಕಾಗಿದೆ" ಎಂದ.

"ಸದ್ಯಕ್ಕೆ ನಿನಗೆ ಸುಖವಾಗಿ ವ್ಯೈ ಕಳೆದರೆ, ಅದೇ ದೊಡ್ಡ ವಿಷಯ ಪರಿಮಳ....?" ಎಂದ. ಪರಿಮಳ ಅಳುತ್ತ—

"ಆದರೆ ನನ್ನ ಮನೋವ್ಯಥೆ ನಿಮಗೆ ಗೊತ್ತಿಲ್ಲ. ನಾಲು ವರ್ಷ ಹಗಲು ರಾತ್ರಿ ಕಾಲೇಜು, ಟ್ಯುಟೋರಿಯಲ್ ದುಡಿದೆ. ಮಕ್ಕಳು ಸಹಾ ಬೇಡಾಂತ ಘಟ್ಟಿ ಮನಸು ಮಾಡಿದೆ. ಆದರೆ ನನ್ನ ಎಲ್ಲಾ ಪ್ಲಾನ್ ತಲೆ ಕೆಳಗು ಆಯ್ತು. ಮೊನ್ನೆ ನಮ್ಮತ್ತಿಗೆ, ಲಲಿತ ನವಿರಾಗಿ ಹಂಗಿಸಿದರು ಏನಮ್ಮ ಪುತ್ರೋತ್ಸವದ ಊಟಾ....ಮಾತ್ರ ಕೊಡ್ತಿಯ್ಯಾ....? ಗೃಹ ಪ್ರವೇಶೋತ್ಸವದ ಊಟಾ ಯಾವಾಗ ?" ಎಂದು ನಕ್ಕರು" ಎಂದಳು.

"ಏನು ಮಾಡೋದು ಹೇಳು ? ಮನುಷ್ಯ ಎಷ್ಟೋ ಕನಸು ಕಟ್ತಾನೆ. ಕೆಲವು ನೆರವೇರೋದಿಲ್ಲ ಗೃಹ ಪ್ರವೇಶದ ಊಟಾ ಕೊಟ್ಟ ಮೇಲೆ ಮಕ್ಕಳ ಆಲೋಚನೆ ಅಂತ ಹೇಳ್ತಿದ್ದೆ. ಆದರೆ ಆದಾಗಲಿಲ್ಲ" ಎಂದ

"ಇಲ್ಲಾರಿ. ಇನ್ನೂ ಮೂರು ತಿಂಗಳಿವೆ. ಏನಾದರೂ ಮಾಡಿ ನಾವು ಗೃಹಪ್ರವೇಶೋತ್ಸವ ಮಾಡಲೇ ಬೇಕು" ಎಂದಳು.

"ದೇವರನ್ನ....ಹಿರಿಯರನ್ನ ಮರೆತು ಏನೊ ಸಾಧಿಸ್ತೀವಿ, ಅಂತ ಹೊರಟಾಗಲೇ ಹೀಗೆ ವಿಘ್ನಗಳು ಬರೋದು. ನೀನು ಒಪ್ಪಿದರೇ ನಮ್ಮ ತಂದೆ,

ತಾಯಿನ್ನ ಕರೆಸಿ ಮೂರು ತಿಂಗಳು ಇಟ್ಕೋತೀನಿ. ನಮ್ಮ ತಂದೆಯಿಂದ ಶ್ರೀ ಲಕ್ಷ್ಮೀದೇವಿಯ ಉಪಾಸನೆ ಇಡಿಸ್ತೀನಿ" ಎಂದ.

ಪರಿಮಳ ಬೇಸರದಿಂದ—"ಮಂತ್ರಕ್ಕೆ ಮಾವಿನಕಾಯಿ ಉದುರ ತ್ತಾಂದ್ರೆ ?" ಎಂದಳು.

"ಮರ ಹತ್ತಿ ರೆಂಬೆ ಅಲುಗಿಸಿ ನಾಲ್ಕು ವರ್ಷ ಪ್ರಯತ್ನಿಸಿದೆವಲ್ಲ. ಈಗ ಮಂತ್ರೋಪಾಸನೆ ಮಾಡೋಣಾ. ಟ್ಯುಟೋರಿಯಲ್ ಏನೋ ಇನ ಕಂ ಟ್ಯಾಕ್ಸ್ ಕಾರಣಗಳಿಗಾಗಿ ಮುಚ್ಚಿದೆ. ಅದು ನನಗೆ ಬಹಳ ಬೇಜಾರಾಗಿದೆ. ಖಾಸಗಿ ಕಾಲೇಜಿನ ಸಂಬಳ ನಮ್ಮ ಜೀವನೋಪಾಯಕ್ಕೆ ಸಾಕು. ನಾವು ಮೂರು ಕಾಸು ಕಾಣ್ತಿದ್ದದ್ದೇ ಟ್ಯುಟೋರಿಯಲ್‌ಯಿಂದ. ಇಬ್ಬರಿಂದ ಎರಡು ಸಾವಿರ ಸಿಗ್ತಿತ್ತು. ಅದು ಮುಚ್ಚಬಾರದು. ನಮ್ಮ ತಾಯಿ ಹಿರಿಯ ಮುತ್ತೈದೆ. ಶ್ರೀ ಲಕ್ಷ್ಮೀದೇವಿ ಸಮಾನ. ಅವರು ನೊಂದುಕೊಂಡು ಹೋಗಿದ್ದಾರೆ. ಅವರನ್ನ ಕರಿಸಿ ಚೆನ್ನಾಗಿ ಉಪಚರಿಸಿ ಅವರ ಮನಸು ಸಂತಸ ಪಡಿಸಬೇಕೂಂತಿದ್ದೆ" ಎಂದ.

ಪರಿಮಳ ಸಂಶಯದಿಂದ—"ಈಗ ಅವರನ್ನ ನಾವು ಓಲೈಸಲಿಕ್ಕೆ ಹೋದರೆ ದುಡ್ಡಿನಾಸೆಗೆ ಅನ್ಕೋತಾರೆ" ಎಂದಳು.

"ಈಗ ಅವರ ಹತ್ತಿರ ಏನು ದುಡ್ಡು ಉಳಿದಿಲ್ಲ. ಶಾರದನ ಮದುವೆ, ಅಣ್ಣನಿಗೆ ಸೈಟ್ ತೆಕ್ಕೊಟ್ಟು, ಅಣ್ಣನ ಮಗಳಿಗೆ N.S.C, ಉಳಿದದ್ದು ಅಮ್ಮನ ಹೆಸರಿನ ಠೇವಣಿ ಇದೆ. ಅದು ಆಕೆಯ ಕೈಖರ್ಚು."

"ನಮಗೇನು ಸಿಗದಿದ್ದ ಮೇಲೆ ಅವರನ್ಯಾಕೆ ಉಪಚರಿಸಬೇಕು ?"

"ದುಡ್ಡಿಗಾಗಿ ಮನುಷ್ಯರನ್ನ ಕಳ್ಕೋಬಾರದು ? ಆ ಹಳ್ಳಿ ಮುಕ್ಕ ಗಳು ಏನು ಮಾಡತ್ವೆ ? ಅವರಿಗ್ಯಾಕೆ ಹೆದರ್ಕೋಬೇಕೂಂತ ಮದುವೆ ಆದಾಗಿಂದಾ ಭೋದಿಸಿದ್ದಿ. ನಾನು ನಿನಗೆ ಮರುಳಾಗಿ ಕೆಲಸ ಸಿಕ್ಕೊಡನೇ ಹೆತ್ತ ತಂದೆ ತಾಯಿಗಳನ್ನ ಧಿಕ್ಕರಿಸಿ ನಾಲ್ಕು ವರ್ಷದಿಂದ ದೂರಾ ಮಾಡಿದ್ದೆ. ಆದರೆ ಮೊನ್ನೆ ಪ್ರಕರಣ ಆದಮೇಲೆ ಚಿಂತಿತನಾಗಿದ್ದೀನಿ. ನಾನು ಒಂದು ಮಗುವಿನ ತಂದೆ ಆಗ್ತಾ ಇದ್ದೀನಿ ಹೆತ್ತ ತಂದೆ ತಾಯಿ ಆಶೀರ್ವಾದ ಪಡೀ ಬೇಕೂಂತ ಇದೆ" ಎಂದ.

ಪರಿಮಳ ಚಿಂತೆಯಿಂದ—"ನಿಮ್ಮ ಮನಸ್ಸಿಗೆ ಬಂದ ಹಾಗೆ ಮಾಡಿ" ಎಂದಳು.

"ನಿನ್ನ ಒಪ್ಪಿಗೇನು ಇದ್ದರೆ ಕರೆ ತರ್ತೀನಿ. ಇಲ್ಲದಿದ್ದರೆ ಬೇಡಾ...." ಎಂದ.

"ನಾವು ಕರೆದರೂ ಅವರು ಬರಬೇಕಲ್ಲ. ಅವರಿಗೆ ನಮ್ಮ ಮೇಲೆ ಎಷ್ಟು ಕೋಪವಿದೆಯೊ ?" ಎಂದಳು.

ಈ ಕಾಗದಾ ಓದು. ಎಂದು ಒಂದು ಕಾಗದಾ ಕೊಟ್ಟ.

ಪರಿಮಳ ಕುತೂಹಲದಿಂದ ಆ ಕಾಗದ ಓದಿದಳು.

ಕು|| ಸೌ|| ಅತ್ತಿಗೆಗೆ ಶಾರದ ಮಾಡುವ ನಮಸ್ಕಾರಗಳು. ಇಲ್ಲಿ ನಾವುಗಳೆಲ್ಲರೂ ಕ್ಷೇಮ. ನಿಮ್ಮ ಕ್ಷೇಮ ಲಾಭಗಳಿಗೆ ಬರೆಯಿರಿ.

ಇಲ್ಲಿ ನಾವು ನಮ್ಮ ಯಜಮಾನರ ಚಿಕ್ಕಪ್ಪನ ಮನೆಯಲ್ಲಿ ಇದ್ದೇವೆ. ಅಮ್ಮನಿಗಂತು ಕಲ್ಯಾಣ ನಗರಿ ಪವಿತ್ರ ಕ್ಷೇತ್ರವೆನಿಸಿದ ಈ ಮಧುರೆ ಅಮ್ಮನಿಗೆ ಬಹಳ ಪ್ರಿಯವಾಗಿದೆ. ಇವರ ಚಿಕ್ಕಪ್ಪ, ಚಿಕ್ಕಮ್ಮ ಸಹ ಅಪ್ಪಾ ಅಮ್ಮನ ಹಾಗೆ ಭಾರಿ ದೈವಭಕ್ತರು ಅಪ್ಪನೊಡನೇ ನಮ್ಮ ಈ ಚಿಕ್ಕ ಮಾವನವರು ವೇದಗಳು, ಬ್ರಹ್ಮ ಸೂತ್ರಗಳು ಉಪನಿಷತ್, ಆರಣ್ಯಕಗಳು ಎಲ್ಲದರ ಬಗ್ಗೆ ಚರ್ಚಿಸ್ತಿರ್ತಾರೆ, ಅವರಿಗೆ ತೀರದ ಜ್ಞಾನದಾಹ. ನಿಮ್ಮಂತಹ ಸಜ್ಜನರು ನಮ್ಮ ಜೊತೆ ಒಂದು ತಿಂಗಳಿರುವುದೇ ನಮ್ಮ ಪುಣ್ಯ. ಇಲ್ಲಿನ ಇಪ್ಪತ್ತಾದರು ಶ್ರೀ ತಿರುಪತಿಗಳ ದರ್ಶನ ಮಾಡಿಸುತ್ತೇನೆ ಎಂದು ದಿನವು ಹತ್ತಿರದ ಕೆಲವು ಶ್ರೀ ವೈಷ್ಣವ ಕ್ಷೇತ್ರಗಳಗೆ ಕರೆದುಕೊಂಡು ಹೋಗುತ್ತಿದ್ದಾರೆ. ಶ್ರೀ ವೆಂಕಟಾದ್ರಿಯ ತಿರುಮಲೆ ತಿರುಪತಿ ಮಾತ್ರ ನಮಗೆ ಚೆನ್ನಾಗಿ ಗೊತ್ತಲ್ಲವೆ ? ಆದರೆ ತಮಿಳು ನಾಡಿನಲ್ಲಿ ಅಂಥಹುದೇ ನೂರೆಂಟು ಶ್ರೀ ಮಹಾವಿಷ್ಣು ಸನಿದಾನವಿದೆ. ನೂರೆಂಟು ದಿವ್ಯ ತಿರುಪತಿ ಎನ್ನುತ್ತಾರೆ. ಮಾಯಾರಮ್‌ನಿಂದ ರೈಲಿನಲ್ಲಿ ಹೊರಟು ಮುಂದೆ ತಿರುಪೊದರಿನಲ್ಲಿಳಿದು ನದಿ ದಾಟಿ....ಒಂದು ಮೈಲಿ ಬಂಡಿಯಲ್ಲಿ ಬಂದೆವು. ಅಲ್ಲಿ ತಿರುಕ್ಕಣ್ಣಪುರಂ ಎಂದು ಈ ಕ್ಷೇತ್ರ. ನಿತ್ಯ ಪುಷ್ಕರಣಿ ಎಂಬ ಇಲ್ಲಿನ ತೀರ್ಥದಲ್ಲಿ ಸ್ನಾನಮಾಡಿ ಉತ್ಪಲ ವರ್ತಕ ವಿಮಾನವೆಂಬ ಹೆಸರಿನ ಈ ದೇವಾಲಯ ಪ್ರವೇಶಿಸಿದೆವು. ಭವ್ಯವಾಗಿ ನಿಂತಿರುವ ದೇವನ ಹೆಸರು ಶೌರಿರಾಜ ಪೆರುಮಾಳ್ ಶ್ರೀ ಕಣ್ಣರ

ತಪ್ಪಸ್ಸಿಗೆ ಒಲಿದು ನಿಂತ ಸ್ವಾಮಿಯ ಬಲದ ಹಸ್ತನಾಗಿದ್ದಾನೆ. ಪ್ರಯೋಗಿಸು ವಂತೆ ಹಿಡಿದ ಸುದರ್ಶನ ಚಕ್ರ.

ಶ್ರೀ ಕಣ್ಣಪುರ ನಾಯಕಿ ಎಂಬ ಹೆಸರಿನಲ್ಲಿ ಶ್ರೀ ಲಕ್ಷ್ಮಿ ಇಲ್ಲಿ ತನ್ನರಸ ಶೌರಿರಾಜ ಪೆರುಮಾಳ್‌ನನ್ನು ಆರಾಧಿಸುತ್ತಾಳೆ. ಶೌರಿರಾಜನಿಗೆ ಪುಷ್ಪ, ಹಾಗು ತುಳಸಿ ಅರ್ಚನೆ ಮತ್ತು ಶ್ರೀ ಕಣ್ಣಪುರ ನಾಯಕಿಗೆ ಕುಂಕುಮಾ-ರ್ಚನೆ ಪೊಂಗಲ್ ನೇವೇದ್ಯ ಮಾಡಿಸಿ, ಮಂಗಳಾರತಿ ಮಾಡಿಸಿದೆವು.

ಶ್ರೀ ತಿರುವಾಲಿ ಎಂಬ ಮತ್ತೊಂದು ಕ್ಷೇತ್ರಕ್ಕೆ ಹೋಗಿದ್ದೆವು. ಎಗ್ಮೋರ್ ಟ್ರಿಚ್ಚಿ ಲೈನಿನಲ್ಲಿ ಪ್ರಯಾಣ ಮಾಡಿ ಬಂದೆವು. ಅಲಾತನಿ ಎಂಬ ದಿವ್ಯ ತೀರ್ಥದಲ್ಲಿ ಸ್ನಾನ ಮಾಡಿ ಅಷ್ಟಾಕ್ಷರ ವಿಮಾನಂ ಎಂಬ ಹೆಸರಿನ ದಿವ್ಯ ದೇವಾಲಯ ಪ್ರವೇಶಿಸಿ ಕಲ್ಯಾಣ ರಂಗನಾಥನ್, ವೇದರಾಜನ್ ಎಂಬ ಹೆಸರುಗಳಿಂದ ಕರೆಯಲ್ಪಡುವ ಶ್ರೀ ಮನ್ನಾರಾಯಣ ಸ್ವಾಮಿಯನ್ನು ನೋಡಿ ದೆವು. ಈ ದೇವರಿಗೆ ತಮಿಳರು ವಯಲಾಲಿ ಮನವಾಳನ್ ಎನ್ನುತಾರೆ. ಶ್ರೀ ಲಕ್ಷ್ಮಿದೇವಿಯನ್ನು ಇಲ್ಲಿ....ಅಮೃತವಲ್ಲಿ ತಾಯಿರ್ ಎನ್ನುತ್ತಾರೆ. ದೇವರಿಗೆ ಪುಳಿಯೋಗರೆ ನೈವೇದ್ಯ ಮಾಡಿಸಿ, ಶ್ರೀ ಲಕ್ಷ್ಮಿಗೆ ಮೊಸರನ್ನ ಮಾಡಿಸಿ ಪ್ರಸಾದ ಸ್ವೀಕರಿಸಿದೆವು.

ತಿರುಮಂಗೈ ಆಳ್ವಾರ್, ಅಲಾದನ್ ಕಂಜ, ಪ್ರಜಾಪತಿಗಳಿಗೆ ಒಲಿದು ಪ್ರತ್ಯಕ್ಷವಾದ ಈ ಕ್ಷೇತ್ರದ ದೇವರಾದ ಕಲ್ಯಾಣ ರಂಗನಾಥನನ್ನು ಅಮ್ಮ ಮಾತ್ರ ಶ್ರೀ ವೆಂಕಟೇಶ್ವರ ಎಂದೇ ನಮಸ್ಕರಿಸುತ್ತಿದ್ದಳು. ಇಲ್ಲಿಂದ ಮುಂದೆ ಶ್ರೀ ತಿರುನಾಗೈ ಎಂಬ ಕ್ಷೇತ್ರಕ್ಕೆ ಬಂದೆವು. ಇಲ್ಲಿನ ಸೂರ್ಯ ಪುಷ್ಕರಣಿ ತೀರ್ಥದಲ್ಲಿ ಸ್ನಾನ ಮಾಡಿ ಭದ್ರಕೋಟಿ ವಿಮಾನವೆಂಬ ಈ ದಿವ್ಯ ದೇವಾ ಲಯದಲ್ಲಿ ಸ್ವಾಮೀ ಶ್ರೀ ಸೌಂದರರಾಜನ್ ಎಂಬ ಹೆಸರಿನ ಶ್ರೀಹರಿಯನ್ನು ನೋಡಿ ಸಹಸ್ರ ತುಲಸಿ ಅರ್ಚನೆ ಮಾಡಿಸಿ, ಶಾಲ್ಯಾನ್ನ ನೇವೇದ್ಯ ಮಾಡಿಸಿ ದೆವು. ಈತನ ರಾಣಿ....ಸೌಂದರ್ಯವಲ್ಲಿ. ಶ್ರೀ ಲಕ್ಷ್ಮಿಯಾದ ಸೌಂದರ್ಯ ವಲ್ಲಿಗೆ ಸಹಸ್ರ ಲಕ್ಷ್ಮಿ ನಾಮದೊಡನೆ ಸಹಸ್ರ ಕುಂಕುಮಾರ್ಚನೆ ಮಾಡಿಸಿ ನೂರೆಂಟು ತೆಂಗಿನ ಕಾಯಿ ಒಡಿಸಿ, ನೇವೇದ್ಯ ಮಾಡಿಸಿದೆವು.

ಶ್ರೀ ನಾಗರಾಜ, ಶ್ರೀ ಬ್ರಹ್ಮ ಮುಂತಾದವರಿಗೆ ಪ್ರತ್ಯಕ್ಷನಾದ ಈ ದೇವರು ಮಹಾ ಕರುಣಾಸಿಂಧು, ಬಹಳ ರೂಪವಂತ.

ಇಲ್ಲಿ ದೇವರು ಮೂರು ಭಂಗಿಯಲ್ಲಿ ದರ್ಶನ ನೀಡುತ್ತಾನೆ. ಭುಜಂಗ

ಶಯನನಾಗಿ ಶ್ರೀ ರಂಗನಾಥ....ಪದ್ಮಾಸೀನನಾಗಿ ಇರುವ ಶ್ರೀ ಗೋವಿಂದ ರಾಜ....ನಿಂತ ಸ್ಥಿತಿಯಲ್ಲಿ ಕಾಣುವ ಶ್ರೀ ಸೌಂದರರಾಜನ್. ಈ ರೂಪದಲ್ಲಿ ಇದ್ದಾನೆ. ಇದಲ್ಲದೆ ಇಲ್ಲಿರುವ ಅಷ್ಟಭುಜ ನರಸಿಂಹ ಸ್ವಾಮಿ ಏಕಕಾಲದಲ್ಲಿ ದುಷ್ಟ ನಿಗ್ರಹ ಹಾಗು ಶಿಷ್ಟ ಪರಿಪಾಲನೆ ಮಾಡುತ್ತಿದ್ದಾನೆ. ಅಂದರೆ ಹಿರಣ್ಯ ಕಶ್ಯಪು ಸಂಸಾರ ಹಾಗು ಪ್ರಹ್ಲಾದ ಪಾಲದ ಎರಡು ಏಕಕಾಲದಲ್ಲಿ ನಡೆಯುತ್ತಿದೆ.

ಅತ್ತಿಗೆ....ಚಿಕ್ಕತ್ತಿಗೆ ಗರ್ಭಿಣಿ ಎಂದು ಬರೆದದ್ದು ಓದಿ, ಅಮ್ಮ ಸಂತೋಷ ಪಟ್ಟಳು. ಕಥಾನ್ ಬಾರ್ಡರಿನ ಒಂದು ರೇಶ್ಮೆ ಸೀರೆ ಕೊಂಡು ಕೊಂಡಳು. ಹಸಿರು ಬಣ್ಣದ ಜರಿ ಅಂಚಿನ ಸೀರೆ. ಹೇಗಿದ್ದರು ನೀವು ಅಣ್ಣ ತಮ್ಮಂದಿರು ಪರಸ್ಪರ ಬಂದು ಹೋಗಿ ಮಾಡುತ್ತೀರಿ. ನಿಮ್ಮನೆಯ ಗೃಹ ಪ್ರವೇಶೋತ್ಸವಕ್ಕೆ ಬಂದಾಗ ಒಂದು ಆರತಿ ಎತ್ತಿ, ಹಸಿರು ಬಳೆ ತೊಡಿಸಿ, ಸೀರೆ ಓದಿಸು. ನಾನು ಒಂದು ನಾಲ್ಕು ಬಗೆ ಸಿಹಿ ತಿಂಡಿ ಮಾಡ್ತೀನಿ" ಎಂದಿದ್ದಾಳೆ ಅಮ್ಮ. ಎಲ್ಲಿ ಯಾವ ದೇವಸ್ಥಾನಕ್ಕೆ ಹೋದರೂ ನಿನ್ನ ಹೆಸರಲ್ಲಿ, ಗೋವಿಂದನ .. ಹೆಸರಲ್ಲಿ ಅರ್ಚನೆ ಮಾಡಿಸುತ್ತಾಳೆ. ನಾನೇ ಒಮ್ಮೆ ಕೇಳಿದೆ."

"ಅಮ್ಮಾ ಸಂಸಾರ ಹೂಡಿ ನಾಲ್ಕು ವರ್ಷಗಳಾದರೂ ಒಮ್ಮೆ ಕೂಗಿ ಎಂಟು ದಿನ ಇಟ್ಟುಕೊಂಡಿಲ್ಲ. ಅನಂತನಿಗಾದರೂ ಕೊಂಚ ಧರ್ಮಭೀತಿ ಇದೆ. ಹೆಂಡತಿ ಗುಸುಮುಸು ಎದುರಿಸಿಯಾದರೂ ನಮಗೆ ಇರುವ ನಾಲ್ಕು ದಿನ ಚೆನ್ನಾಗಿ ನೋಡಿಕೊಳ್ತಿದ್ದ. ಆದರೆ ಗೋವಿಂದ ನಾವಿದ್ದ ಎಂಟು ದಿನ ಪೂರ್ತಿ ನಮ್ಮನ್ನು ಅವನ ಹೆಂಡತಿ ಆಡಳಿತಕ್ಕೊಪ್ಪಿಸಿ, ಹೇಗೆ ತಿರಸ್ಕಾರವಾಗಿ ನೋಡಿಕೊಂಡ. ಗೌರಮ್ಮನವರಿಗೆ ಕುಂಕುಮ ಕೊಡು....ಎಂದು ಹೇಳಿದ್ದನ್ನೇ ಗಂಡಾ ಹೆಂಡ್ತಿ ಹೇಗೆ ದಬಾಯಿಸಿದರು. ಅವರಿಗೇನು ಕಾಫಿ ಮಾಡಿ ಕೊಡು ಎನ್ನಲಿಲ್ಲ. ತೆಂಗಿನಕಾಯಿ ಎಲೆ ಅಡಿಕೆ ಕೊಡು ಎನ್ನಲಿಲ್ಲ. ಹಿರಿ ಮುತ್ತೈದೆ ಸಂಜೆ ಬಂದಿದ್ದಾರೆ, ಕುಂಕುಮ ಕೊಡಮ್ಮ....ಎಂದುದಕ್ಕೆ ಆ ದಿನ ರಾತ್ರಿ ಗಂಡಾ ಹೆಂಡತಿ ಜಗಳ ತೆಗೆದು ಹೇಗೆ ದಬಾಯಿಸಿದರು. ಇನ್ನೆಂದು ಆ ಅಣ್ಣಾ ಅತ್ತಿಗೆ ಮನೆಗೆ ಹೋಗಬಾರದಮ್ಮ ಎಂದೆ. ಅದಕ್ಕೆ ಅಮ್ಮ ನಕ್ಕು—

"ನೀನು ಬಿಸಿ ರಕ್ತದ ಹುಡುಗಿ. ನಿನಗೆ ಹಾಗೆನಿಸುವುದು ಸಹಜ. ಆದರೆ ಅಂಗಾಲಿಗೆ ಹೇಸಿಗೆ ಇಲ್ಲ. ಕರುಳಿಗೆ ನಾಚಿಕೆ ಇಲ್ಲ ಅಂತ ಗಾದೆ ಇದೆ. ನಾಳೆ

ಗೋವಿಂದಂಗೆ ಮಗು ಆದರೆ ಹೋಗಿ ನೋಡಿ ಬರ್‍ತೀನಿ" ಎಂದಳು.

"ಅಪ್ಪಾ, ಅಮ್ಮ ದೇವರಂಥವರು ಶ್ರೀಮಂತ ಅತ್ತೆ ಮಾವ ಸಿಕ್ಕಿದರು. ಚೆಲುವೆ, ವಿದ್ಯಾವತಿ ಹೆಂಡತಿ ಸಿಕ್ಕಿದಳೆಂದು ಗೋವಿಂದ ನಮ್ಮ ಹಳ್ಳಿ ಮರೆತ. ಆದರೆ ಅಮ್ಮ ಅನಂತನ್ನ ಎಷ್ಟು ಪ್ರೀತಿಸ್ತಾಳೊ ? ಗೋವಿಂದನ್ನು ಅಷ್ಟೇ ಪ್ರೀತಿಸ್ತಾಳೆ. ಇನ್ನು ಕಂಚಿ ಹಾಗು ಕೆಲವು ಬೇರೆ ಬೇರೆ ಕ್ಷೇತ್ರಗಳಿಗೆ ಹೋಗ್ತೀವಿ. ಮನೆ ಕೆಲಸ ಮುಕ್ತಾಯವಾಗುತ್ತಿದೆಯೆಂದು ತಿಳಿದು ಸಂತಸ... ಆಯಿತು. ನಾವು ಬಂದೊಡನೇ ಗೃಹ ಪ್ರವೇಶೋತ್ಸವ ಇಟ್ಟುಕೊಳ್ಳೋಣ ಎಂದು ಅಮ್ಮ ಹೇಳಿದ್ದಾಳೆ

ಇಂತಿ ನಿಮ್ಮ ಪ್ರೀತಿಯ ತಂಗಿ

ಶಾರದ

ಕಾಗದ ಓದಿ ಕೆಳಗಿಟ್ಟಳು. "ಇನ್ನು ಈ ಪಿಂಸಾ, ಚಕಮಕಿ ಸಾಕು. ನಾನು ಅಪ್ಪಾ ಅಮ್ಮಂಗೆ ಕ್ಷಮಾಪಣೇ ಕೇಳಿ ಕಾಗದಾ ಬರಿಬೇಕೂಂತಿದ್ದೀನಿ, ಏನಂತಿ ?" ಎಂದ.

ಪರಿಮಳ ಈಗ ಮೊದಲಿನಷ್ಟು ಅಹಂಕಾರಿಯಾಗಿರಲಿಲ್ಲ. ತನ್ನ ಕಾಲೇಜು ತನ್ನ ಟ್ಯುಟೋರಿಯಲ್ ಯಾವ ಸಂಪಾದನೆಯೂ ಇಲ್ಲ ಈಗ. ಆರು ತಿಂಗಳಿಂದ ಗಂಡನ ಸಂಪಾದನೆ ಮಾತ್ರ ತವರಿನವನು ಒಳ್ಳೆಯ ಅನುಕೂಲಸ್ಥರು. ತಾಯಿಯ ಮೈ ಮೇಲೆ ಐವತ್ತು ತೊಲದಷ್ಟು ಚಿನ್ನವಿತ್ತು ವಜ್ರದ ವಾಲೆ ಇತ್ತು. ಅದೆಲ್ಲಾ ಆಕೆಗೆ ತವರಿಂದ ಬಂದ ಬಳುವಳಿ. ಕಾಲೇಜು ಪ್ರಿನ್ಸಿಪಾಲರಾದ ತಂದೆ ಸೊಗಸಾದ ಮನೆ ಕಟ್ಟಿಸಿದ್ದರು ಬ್ಯಾಂಕಲ್ಲಿ ಬ್ಯಾಲೆನ್ಸ್ ಇಟ್ಟಿದ್ದರು. ಪೆನ್‌ಷನ್ ಹಾಗು ಬಡ್ಡಿ ಸೇರಿ ತಿಂಗಳಿಗೆ ಐದು ಸಾವಿರ ರೂಗಳು ಬರುತ್ತ ಇತ್ತು. ಅಣ್ಣಾ ರಾಜೇಶನ ಸಂಬಳ ಈಗಲು ಮನೇಗೇನು ಖರ್ಚಾಗುತ್ತಿರಲಿಲ್ಲ.

ಆದರೆ ತಾನು ಮೂರು ತಿಂಗಳು ಇರಲು ಹೋದಾಗ ಅತ್ತಿಗೆ ಒಂದು ತರಹ ಆಡಿದ್ದಳು. ತಾಯಿ ಸಿಡಿದೆದ್ದು...."ಇಲ್ಲಿ ನಿನ್ನ ಗಂಡನ ಸಂಪಾದನೆಯಿಲ್ಲ. ಮಗ ಸೊಸೆ ಹಂಗಿನಲ್ಲಿ ನಾವು ಇಲ್ಲ. ಈಗಲು ತಿಂಗಳಿಗೆ ಸಾವಿರಾರು ರೂಗಳು ಮನೆ ಖರ್ಚು ನಡಿಸ್ತಿರೋದು ಅವರ ಖರ್ಚಿಂದ. ಮಗಳನ್ನ ಮೂರು ತಿಂಗಳು ಇಟ್ಕೊಳ್ಳೋ ಹಕ್ಕು ನನಗಿದೆ. ಎಂದು ಹಾರಾಡಿದರು.

ಅತ್ತಿಗೆ ಅಳುತ್ತ ರೂಮ್ ಸೇರಿದವಳು ಆ ರಾತ್ರಿ ಊಟಕ್ಕೆ ಬರಲಿಲ್ಲ. ಅಣ್ಣಾ ಮಾರನೆಯ ದಿನ ಲಲಿತನಿಗೆ ಫೋನ್ ಮಾಡಿ ಕರಿಸಿಕೊಂಡ. ಗಂಟೆ ಗಟ್ಟಲೆ ಅಣ್ಣಾ ಅತ್ತಿಗೆ ದೂರು ಆಲಿಸಿ ಬಂದ ಲಲಿತ—ತಾಯಿಗೆ ಏನೇನೋ ಸಮಾಧಾನ ಮಾಡಿ—"ನೀನು ತಪ್ಪು ತಿಳ್ಕೊಂಡಿದ್ದಿ ಅಮ್ಮ. ಅತ್ತಿಗೆ ಆ ರೀತಿ ಅಂದಿಲ್ಲ. ಮೂರು ತಿಂಗಳಲ್ಲದಿದ್ದರೆ ಆರು ತಿಂಗಳು ಇರಲಿ. ಪರಿಮಳಾ....ಇಲ್ಲಿರೋ ವಿಷಯಕ್ಕೆ ಅವಳದೇನು ತಕರಾರಿಲ್ಲ ಟ್ಯಾಕ್ಸೀಲಿ.... ಡಾಕ್ಟರ ಹತ್ತಿರ ಹೋಗಿ ಬಂದರೂ ಟ್ಯಾಕ್ಸಿ ಫೀಸ್, ಡಾಕ್ಟರ ಫೀಸ್ ಅಮ್ಮ ಏಕೆ ಕೊಡಬೇಕು ? ಪರಿಮಳಂಗೆ ಅಂಥಾ....ಬಡತನ ಏನು ಬಂದಿದೆ ?" ಎಂದಳು.

ತಾಯಿ ಹಾರಾಡಿ—"ಹೌದೇ ಪರಿಮಳ ಬಡವಳು. ಒಬ್ಬ ವೈದಿಕ ಬ್ರಾಹ್ಮಣನ್ನ ಮಗನ್ನ ಮದುವೆ ಆಗಿದ್ದಾಳೆ. ನಿನ್ನ ಗಂಡಾ ಇಂಜನಿಯರ್- ನಿಮ್ಮತ್ತಿಗೆ ಗಂಡಾ ಇಂಜನಿಯರ್. ನಿಮ್ಮ ನಿಮ್ಮ ಗಂಡಂದಿರ ಸಂಪಾದನೆ ಚಿನ್ನ, ಬೆಳ್ಳಿ, ವಜ್ರವಾಗಿ ನಿಮ್ಮ ಮೈ ಮೇಲೆ ಕೂತಿದೆ. ನಿನ್ನ ಗಂಡಂಗೂ ಮನೆ ವಹಿವಾಟಿನ ಖರ್ಚಿಲ್ಲ. ನಿಮ್ಮ ಭಾವ ಕಂಟ್ರಾಕ್ಟರ್ ಆಗಿ ಲಕ್ಷಾಂತರ ಸಂಪಾದಿಸ್ತಾರೆ, ಮನೆ ನಿರ್ವಹಣೇ ಅವರದು. ಇಲ್ಲಿ ರಾಜೇಶನ ಮೇಲು ನಾವು ಮನೆ ಭಾರ ಹಾಕಿಲ್ಲ. ತಿಂಗಳಿಗೆ ಐದು ಸಾವಿರ ನಿಮ್ಮಪ್ಪನ ಹಣವೇ ಬರತ್ತೆ" ಎಂದರು.

"ಅಕ್ಕನ್ನ ಬಡವಳೂಂತ ನಾವು ಯಾವಾಗ ಅಡಿಕೊಂಡೆವಮ್ಮ" ಲಲಿತ ಮುಗ್ಧಳಾಗಿ ಕೇಳಿದಳು.

"ಸ್ವಂತ ಅಕ್ಕನ ಮೇಲೆ ನಿನಗೆ ಪ್ರೀತೀನೇ ಇಲ್ಲ. ಆ ಚಂದ್ರಕಲ ನಿನ್ನ ಗಂಡನ ತಂಗಿ. ಇಲ್ಲಿ ಅಣ್ಣನ ಹೆಂಡತಿ. ನಿಮ್ಮಿಬ್ಬರ ಒಗ್ಗಟ್ಟಿಗೆ ನಾನು ಅನ್ನಲ್ಲ. ಆದರೆ ನೀವಿಬ್ಬರು ಸೇರಿದಾಗ ಪರಿಮಳನ್ನ ಆಡ್ಕೊಳ್ಳೇವೇನು ? ಅಪ್ಪಾ ಸೈಟ್ ಕೊಟ್ಟರೂ ನಾಲ್ಕು ವರ್ಷ ಆದರೂ ಮನೆ ಕಟ್ಟಿಸಲಿಲ್ಲ. ಇನ್ನು ಮಗುವಾದ ಮೇಲಂತು ಕಾಲೇಜಿಗೆ ಏನು ಹೋಗ್ತಾಳೊ ' ಮಗ ದೊಡ್ಡೋನಾದ ಮೇಲೆ ಮನೆ ಕಟ್ಟಿಸ್ತಾನೆ. ಹಾಗೆ ಹೀಗೆ ಅಂತ ಅಂದ್ರಿ." ತಾಯಿ ಹಾರಾಡುತ್ತ ಕುಸಿದು ಬಿದ್ದರು.

ಲಲಿತ ಓಡಿ ಬಂದು ತಲೆಗೆ ನೀರು ತಟ್ಟಿ—"ಮೊದಲೆ ಬ್ಲಡ್ ಪ್ರೆಷರ್ ಇದೆ. ಸಣ್ಣ ಸಣ್ಣ ವಿಷಯಕ್ಕು ತೀರ ಎಕ್ಸೈಟ್ ಆಗ್ತಾಳೆ. ಅಣ್ಣಾ ಡಾಕ್ಟರಿಗೆ ಫೋನ್ ಮಾಡು" ಎಂದಳು.

ತಾಯಿಯಾ ಚೇತರಿಸಿಕೊಂಡು ನರಳುತ್ತ—"ಡಾಕ್ಟರೇನು ಬೇಕಾಗಿಲ್ಲ. ಈ ಥರಹ ಆದಾಗ ಮಾತ್ರೆ ಕೊಟ್ಟಿದ್ದಾರೆ ಕೊಡು. ನನ್ನ ರೂಮಿಗೆ ಹೋಗಿ ಮಲಕ್ಕೋತೀನಿ" ಎಂದರು.

ತಾಯಿಯೇನೋ ಹೋಗಿ ಮಲಗಿದರು ಅಣ್ಣಾ ಬೇಸರದಂದ "ನೀನು ಎಂಟು ದಿನದ ಮಟ್ಟಿಗೆ ಬಂದರೂ ಹಬ್ಬ ಇದ್ದಾಗೆ ಇರತ್ತೆ. ಈಗ ಏಕೋ ಒಂದು ತಿಂಗಳಿಂದ ಮನೇಲಿ ರಸಿಕಸಿ ಬೇಜಾರಾತದೆಯಮ್ಮ" ಎಂದ.

ಪರಿಮಳೆಗೆ ಕುಟುಕಿದ ಹಾಗೆ ಆಯಿತು. "ನಾನೇನು ಮಾಡಿದೆ ಅಣ್ಣಾ... ?" ಎಂದಳು

ಚಂದ್ರಕಲ ಅಳುತ್ತ—"ನೀವು ತಾಯಿಯಾ ಮಗಳು ಸೇರಿ....ಆ ದಿನ ಹಾಗೆ ಅಂದಿರಿ. ಈ ದಿನ ಹೀಗೆ ಅಂದಿರಿ" ಎಂದು ನಾಲ್ಕಾರು ಘಟನೆ ಹೇಳಿದಳು. ಅದೆಲ್ಲಾ ನಿಜವೂ ಇತ್ತು. ತಾಯಿಯಾ ಜಯಮ್ಮ ಸೊಸೆಯ ಬಗ್ಗೆ ಏನೇನೋ ಪರಿಮಳೆಯ ಬಳಿ ದೂರಿ–"ನಾನೇನು ಅವಳ ಹಂಗಿನಲ್ಲಿ ಇಲ್ಲ. ನಿಮ್ಮಪ್ಪನ ಹಣಾ ಕಾಸು, ಅವಳನ್ನ ಒಂದು ಪೈಸೆ ಕೇರ್ ಮಾಡಿಲ್ಲ" ಎಂದಿದ್ದರು.

ಪರಿಮಳ ಕೋಪದಿಂದ—"ಅಪ್ಪನ ಮನೆ ಅಂತ ನಾನು ಇಲ್ಲಿಗೆ ಬಂದಿದ್ದೀನಿ. ಅವಳನ್ನ ಏಕೆ ಓಲೈಸಲಿ ?" ಎಂದಿದ್ದಳು. ಅದೆಲ್ಲಾ ಈ ದಿನ ಚಂದ್ರಕಲ ಲಲಿತಳ ಎದುರಿಗೆ ಎತ್ತಿ ಆಡಿದಳು.

ಲಲಿತ ಬುದ್ಧಿ ಹೇಳುವಂತೇ—"ಹಾಗೆಲ್ಲಾ ಆಡಬಾರದು ಅಕ್ಕ. ಇದು ಅವಳ ಮನೆ. ನಾವಿಬ್ಬರು ಬಂದು ಹೋಗೋ ಅತಿಥಿಗಳು. ನಮ್ಮ ನಮ್ಮ ಮನೆ ಬೇರೆ. ಅಪ್ಪಾ ಅಮ್ಮ ನಮಗೇನು ಕಡಿಮೆ ಮಾಡಿದ್ದಾರೆ. ಒಂದು ಲಕ್ಷ ರೂ ಖರ್ಚು ಮಾಡಿ ಮದುವೆ ಮಾಡಿಲ್ಲವೇನು ? ನಿನಗು ಸೈಟ್ ಕೊಟ್ಟಿದ್ದಾರೆ. ನಿನ್ನ ಗಂಡಾ ಇಂಜನಿಯರ್ ಅಲ್ಲ ಅಂತ ಕಡಿಮೆ ಮಾಡಿದ್ದಾರಾ ? ಸ್ಕೂಟರ್ ಕೊಟ್ಟಿದ್ದಾರೆ ಐವತ್ತು ಸಾವಿರ ನಗದು ಕೊಟ್ಟಿದ್ದಾರೆ." ಎಂದು ಹೇಳುತ್ತಿದ್ದಂತೆಯೇ ಅಣ್ಣಾ ರಾಜೇಶ ಬಾಯಿ ಹಾಕಿ—

"ನಿಜ ಹೇಳೋದಾದರೇ ಅಪ್ಪನೇ ಆಗ ಅಂದಿದ್ರಮ್ಮ. ಆ ಹುಡುಗ ಏನು ಇಂಜನಿಯರಲ್ಲ. ಇಷ್ಟೆಲ್ಲಾ ಏಕೆ ಕೊಡಬೇಕು ? ಎಂದು. ಆಗ ನಾನೇ ಅಪ್ಪಂಗ ಬುದ್ಧಿ ಹೇಳಿದೆ. ಅಪ್ಪಾ ಡಾಕ್ಟರ್, ಇಂಜನಿಯರ್ ಅಂತ ಎರಡು ವರುಷ ಬೇರೆ ಬೇರೆ ವರಗಳು ನೋಡಿದ್ದೀರಿ. ಆದರೆ ಹತ್ತಾರು ವರ

ಗಳು ನೋಡಿದರೂ ಸೆಟ್ಲ್ ಆಗಲಿಲ್ಲ. ಆಮೇಲೆ ಅವಳಾಗಿ ಆ ಹುಡುಗನ್ನ ಪ್ರೀತಿಸಿದಳು. ಅವನು ನಿರುದ್ಯೋಗೀನೇ ಇರಲಿ, ಬಡವನೇ ಇರಲಿ. ಅವ ನಿಗೆ ಇಟ್ಟ ಎರಡೂವರೇ ಲಕ್ಷ ರೂ ಗಳು ಕೊಟ್ಟು ಬಿಡಿ ಅಂದೆ. ಒಂದು ಲಕ್ಷ ಸೈಟಿನ ಲೆಕ್ಕ, ಐವತ್ತು ಸಾವಿರ ಹತ್ತು ತೊಲ ಚಿನ್ನದ ಲೆಕ್ಕ ಜೊತೆಗೆ ಐವತ್ತು ಸಾವಿರ ಕ್ಯಾಶ್....ನಿನ್ನ ಗಂಡಂಗೆ ಸ್ಕೂಟರ್ ಜೊತೆಗೆ ನಿಮ್ಮ ಸೀರೆ ಬಟ್ಟೆ ಅವನ ಉಂಗುರ, ಗಡಿಯಾರ, ಫುಲ್ ಸೂಟ್ ಜೋಡಿ ಮಂಚ ಬೆಳ್ಳಿ ಸಾಮಾನು ಎಲ್ಲಕ್ಕೆ ಐವತ್ತು ಸಾವಿರ ಆಯ್ತಮ್ಮ. ಆಮೇಲೆ ಮದುವೆ ಖರ್ಚು" ಎಂದು ಏನೇನೋ ಹೇಳಿದ.

ತಂದೆ ಗಂಭೀರ ಸ್ವರದಲ್ಲಿ—"ನಿಮ್ಮಮ್ಮ ವಯಸ್ಸಾದೋಳು. ಸೊಸೆ ಬಗ್ಗೆ ಏನೇನೋ ಹೇಳ್ತಾಳೆ ಅಂತ ನೀನು ಅವಳ ಕೂಡ ತಾಳ ಹಾಕ್ಬೇಡಮ್ಮ. ನನ್ನ ಹತ್ತಿರ ಮಗ ಸೊಸೆಯು ಮೇಲೆ ಏನೇನೋ ಹೇಳಲಿಕ್ಕ ಬರ್ತಾಳೆ. ಅವಳಿಗೆ ಬ್ಲಡ್ ಪ್ರೆಷರ್ ಇದೆ. ಹಾರ್ಟ್ ವೀಕ್ ಇದೆ. ನಾನು ಜಾಸ್ತಿ ದಬಾಯಿಸಲ್ಲ. ಆದರೆ ಬ್ಯಾಂಕಲ್ಲಿಟ್ಟ ನನ್ನ ನಾಲ್ಕು ಲಕ್ಷ, ನನ್ನ ಪೆನ್‌ಷನ್, ಈ ಸ್ವಂತ ಮನೆ ಎಲ್ಲಕ್ಕಿಂತ ನನ್ನ ಮಗನ್ನ ನಾನು ಪ್ರೀತಿಸ್ತೀನಿ. ಮಗಳು ಅಳಿಯ ಜೋಡಿ ಜಕ್ಕಪಕ್ಕಿಗಳ ಹಾಗಿದ್ರೆ ಸಂತೋಷ ಪಡೋ ತಾಯಿಯಾ ಮಗ ಸೊಸೆ ಸುಖವಾಗಿದ್ರೆ ಏಕೆ ಸಂತೋಷ....ಪಡಬಾರದು ?" ಎಂದರು.

"ಅಮ್ಮ ಅಷ್ಟು ಕೆಟ್ಟೋಳಲ್ಲಪ್ಪಾ....ಹಾಗೆ ಸೊಸೆಯು ಮೇಲೆ ಏನು ಹೇಳಬಾರದ್ದು ಹೇಳಿಲ್ಲ" ಎಂದಳು.

"ಅವಳಿಗೆ ಜಾಸ್ತಿ ಪ್ರೋತ್ಸಾಹ ಕೊಡದಿದ್ದರೆ ಏನು ಹೇಳಲ್ಲ. ನೀನು ಹನ್ನೊಂದಾದರು ಕಟಿ ಕಟಿ ಮಾಡ್ತ ಏಕೆ ಮಾತಾಡ್ತಿರಬೇಕು. "ಅಮ್ಮ ನಂಗೆ ನಿದ್ದೆ ಬರ್ತ್ತೆ" ಅಂದ್ಬಿಡು. ನೀನು ಇಲ್ಲಿ ಬಂದಿರೋದು ನಿನ್ನ ಬೆಡ್ ರೆಸ್ಟ್ ಸಲುವಾಗಿ." ತಂದೆ ಎಂದರು.

"ಇನ್ನೊಬ್ಬರ ಐಶ್ವರ್ಯ ನೋಡಿ ಎಂದಿಗೂ ಕರುಬಬಾರದು. ಅಣ್ಣಾ ಕೈ ತುಂಬಾ ಸಂಪಾದಿಸದ್ದಾನೆ. ತಂದೇ ಮನೇಲಿ ಅವಳಿಗೆ ಬೇಕಾದ್ದು ಕೊಟ್ಟಿದ್ದಾರೆ. ಅವಳಿಗೆ ಬೇಕಾದ್ದಿದೆ. ಅದು ಅವಳ ಅದೃಷ್ಟ" ಎಂದಳು ಲಲಿತ. ಪಂಮಳ ಬೇಸರದಿಂದ

"ಅವಳ ಮೇಲೆ ನಂಗೇನು ಹೊಟ್ಟೆ ಕಿಚ್ಚಿಲ್ಲ" ಎಂದಳು. ಅವಳು ಆ

ರೀತಿ ಅಂದರು ತಂದೆ, ಅಣ್ಣಾ, ಅತ್ತಿಗೆ, ಲಲಿತ ಯಾರಿಗೂ ಅವಳ ಮೇಲೆ ನಂಬಿಕೆ ಇರಲಿಲ್ಲ. ತಂದೆ ಅತ್ತಿಗೆಯನ್ನು ಸ್ವಂತ ಮಗಳಿಗಿಂತ ಜಾಸ್ತಿ ಓಲೈಸುತ್ತಿದ್ದರು. ಚಂದ್ರಕಲಳಿಗೆ ಈ ಅತ್ತೆ ಮನೆಯಲ್ಲಿ ಏನು ಕಷ್ಟವೂ ಇರಲಿಲ್ಲ. ಗಂಡನ ಜೊತೆ ಡೈನಿಂಗ್ ಹಾಲಿಗೆ ಬಂದು ಉಣ್ಣುವುದು. ತವರು ಮನೆಯಿಂದ ಕಾರು ಬಳುವಳಿ ಕೊಟ್ಟಿದ್ದರು. ಮನಸು ಬಂದಾಗ ತವರಿಗೆ ಹೋಗುವುದು. ಇದ್ದೂರಲ್ಲೇ ತವರು ಮನೆ, ತಾಯಿಗೆ, ಅಣ್ಣಂದಿರಿಗೆ ಫೋನ್ ಮಾಡುವುದು. ಅತ್ತೆ ಜಯಮ್ಮ ಕೊಂಚ ಗಡಸು ಸ್ವಭಾವ. ಇಬ್ಬರು ಹೆಣ್ಣುಕ್ಕಳನ್ನು ಪ್ರೀತಿಸಿದಂತೇ ಅವರಿಗೆ ಚಂದ್ರಕಲಳನ್ನ ಪ್ರೀತಿಸ ಲಾಗಿರಲಿಲ್ಲ.

ಆದರೆ ಅವಳ ಬಗ್ಗೆ ಗಂಡನ ಬಳಿ ಏನು ಚಾಡಿ ಹೇಳಲು ಆಗುತ್ತಿರಲಿಲ್ಲ. "ನೋಡು ನಮ್ಮನೆ ವಂಶ ಬೆಳಗಲಿಕ್ಕೆ ಬಂದ ಹುಡುಗಿ ಅವಳು. ನಮ್ಮ ಪರಿಮಳ, ಲಲಿತಾಗಿಂತ ಅವಳೇ ನಂಗೆ ಒಂದು ತೂಕ ಜಾಸ್ತಿ" ಎನ್ನು ತ್ತಿದ್ದರು. ಲಲಿತಳ ಬಳಿಯೂ ಏನು ಹೇಳಿಕೊಳ್ಳುವ ಹಾಗಿರಲಿಲ್ಲ. ಲಲಿತ ಳಿಗೆ ತನ್ನ ಗಂಡನ ತಂಗಿ ವರಸೆಯ ಅವಳ ಮೇಲೆ ಪ್ರೀತಿ. ಜಯಮ್ಮ ತಮ್ಮ ಮನದಲ್ಲಿದ್ದ ಕುದಿ ಎಲ್ಲಾ ಪರಿಮಳಾ ಬಂದಾಗ ಹೊರ ಚೆಲ್ಲು ತ್ತಿದ್ದರು. ಪರಿಮಳೆಗೂ ಲಲಿತ, ಚಂದ್ರಕಲ ಒಂದಾಗಿ ತನ್ನ ದೂರಾ ಇಟ್ಟಿದ್ದಾರಲ್ಲ ಎಂದು ಅವಳ ಮೇಲೆ ಕೋಪವಿತ್ತು. ತಾಯಿಮಾ ದೂರಿದಾಗ ಪ್ರೋತ್ಸಾಹಿಸುತ್ತಿದ್ದಳು.

ಈಗ ಮೊದಲ ಭಾರಿ ಅವರೆಲ್ಲಾ ಒಟ್ಟಾಗಿ ನಿಂದಿಸಿದಾಗ ಈ ತವರು ಮನೆಯೇ ಜೇಡಪ್ಪಾ ಎನಿಸಿತು. ಆದರೇ ಇಲ್ಲಿ ತನಗೆ ಬೆಟ್‌ರೆಸ್ಟ್, ಒಳ್ಳೆ ಚಿಕಿತ್ಸೆ ಇದೆ. ಇದನ್ನು ಕೊರೆದು ಅಲ್ಲಿ ಹೋಗಿ ಏನು ಮಾಡಬೇಕು ?

ಇನ್ನೊಂದು ತಿಂಗಳು ಅಲ್ಲಿ ಇರಲೇ ಬೇಕು· ತಾಯಿಮಾ ಮೂರು ದಿನ ಸುಧಾರಿಸಿಕೊಂಡು ಚೆನ್ನಾಗಾದರು.

ಮತ್ತೆ ಮಗಳ ಮುಂದೆ ಸೊಸೆಯ ಬಗ್ಗೆ ಏನಾದರೂ ದೂರುತ್ತಿದ್ದರು· ಲಲಿತಳಂತೇ ತಾಯಿಯನ್ನು ಪ್ರತಿಭಟಿಸುವ ಧೈರ್ಯವೂ ತನಗಿಲ್ಲ. ದುಃಖ ಉಕ್ಕುಕ್ಕಿ ಬಂದಿತು. ಲಲಿತಳಿಗೆ ಅತ್ತೆ ಮನೆ ಬಲ ಚೆನ್ನಾಗಿದೆ. ಕಾರಿನಲ್ಲಿ ಓಡಾಟಾ....ಫ್ಯಾಮಿಲಿ ಡಾಕ್ಟರ್ ಎಲ್ಲಾ ಸೌಭಾಗ್ಯ ಇದೆ. ತನಗೆ ಯಾವ ಸೌಲಭ್ಯ ಇದೆ ? ಲಲಿತಳ ಮನೆಯಲ್ಲಿ ಅಡಿಗೆಯವರು ಆಳುಕಾಳು ಎಲ್ಲಾ

ಇದ್ದಾರೆ ತಾನು ಈ ಬಸುರಿ, ಬಾಣಂತನದಲ್ಲಿ ಈ ತಾಯಿ ಮನೆ ಅವಲಂಬಿಸಲೇ ಬೇಕಾಗಿದೆ ಮೂರು ತಿಂಗಳಿದ್ದು ಗಂಡನ ಮನೆಗೆ ಬಂದಳು. ಅವಳಿಗನಿಸಿತು ತನಗಾರು ಆಪ್ತರಿಲ್ಲ. ತಾಯಿ ರೂರುವುದು ಬಿಡುವುದಿಲ್ಲ ತಂದೆ, ಅಣ್ಣಾ, ಲಲಿತಾ ಎಲ್ಲಾ ತನ್ನನ್ನು ಅಪರಾಧಿಯಂತೆ ಕಾಣುತ್ತಿದ್ದಾರೆ. ತಾಯಿ ಅವರಾರನ್ನು ಲೆಕ್ಕಿಸುವುದಿಲ್ಲ. "ನನ್ನ ಮನೆ....ನನ್ನ ಕೈ....ಬಾಯಿ ಅವರಾರು ನನ್ನ ಬಾಯಿ ಮುಚ್ಚಿಸಲು" ಎನ್ನುತ್ತಾರೆ. ತಾಯಿ ವಯಸ್ಸಾದವರು ಅವರಿಗೆ ಈಗ ಯಾರ ಸ್ನೇಹವೂ ಬೇಡದೇ ಇರಬಹುದು. ಆದರೆ ತಾನು ಎಲ್ಲರಿಂದ ದೂರಾಗಿ ಅಸ್ಪೃಶ್ಯಳಂತೇ ಇರಬೇಕೆ ? ಲಲಿತ, ಚಂದ್ರಿಕಾ ಬೇಕೆಂದೇ ನನ್ನ ದೂರ ಮಾಡುತ್ತಾರೆ. ಇತ್ತ ಅತ್ತೆ ಮನೆಯವರನ್ನು ತಾನಾಗಿ ಏಕೆ ದೂರ ಮಾಡಿಕೊಳ್ಳಬೇಕು ? ಕಡೆಗೆ ಗಂಡನಿಗೆ ಹೇಳಿದಳು.

"ಗೃಹಪ್ರವೇಶೋತ್ಸವಕ್ಕೆ ಹೋಗೋಣ. ನಿಮ್ಮ ತಂದೆ ತಾಯಿ ಅವರನ್ನ ಕರೀರಿ ಒಂದು ತಿಂಗಳು ಇಟ್ಟುಕೊಂಡು ಉಪಚರಿಸಿ ಕಳಿಸೋಣಾ" ಎಂದಳು.

ಹೆಂಡತಿಯಲ್ಲಾದ ಬದಲಾವಣೆಗೆ ಗೋವಿಂದನು ಸಂತಸಗೊಂಡ.

ಮುಂದಿನ ತಿಂಗಳು ಗೃಹಪ್ರವೇಶೋತ್ಸವ ಇತ್ತು. ಜಯಲಕ್ಷ್ಮಿ ಬಂದು ಕರೆದಿದ್ದಳು. ಲಲಿತ ಬೇಕೆಂದೆ ಕಾರು ತಂದಳು.

"ಏನಮ್ಮ ನಿನ್ನ ವಾರಗಿತ್ತಿ ಮನೆ ಗೃಹಪ್ರವೇಶೋತ್ಸವ ಇದೆ ಬರ್‍ತೀಯಾ ? ನಾನು ಹೋಗ್ತಿದ್ದೀನಿ ನಮ್ಮ ಯಜಮಾನರಿಗೆ ರಜ ಇಲ್ಲ ಶಾರದಾ, ಜಯಲಕ್ಷ್ಮಿ ಬಂದು ಕರೆದಿದ್ದಾರೆ" ಎಂದಳು. ತಾನು ಬರುವುದಿಲ್ಲಾ ಎಂದು ತಿಳಿದಿದ್ದಳೇನೋ ?

ಆದರೆ ಗಂಡಾ ಹೆಂಡತಿ ಹೊರಡಲು ನಿಶ್ಚಯಿಸಿದ್ದರು. ಗೋವಿಂದ ಟ್ಯಾಕ್ಸಿ ಮಾಡುತ್ತೇನೆ ಎಂದಿದ್ದ. ಟ್ಯಾಕ್ಸಿ ಖರ್ಚು ಉಳಿಯಿತು. ಆರಾಮ ಎಂದುಕೊಂಡಳು. "ನಡೀ ನಾನು ಇವರು ಬರ್‍ತೀವಿ" ಎಂದಳು.

ಮುವ್ವತ್ತು, ನಲವತ್ತರ ಸೈಟಲ್ಲಿ ಕಟ್ಟಿದ ಮನೇ ಚೆನ್ನಾಗಿತ್ತು. ಪುಟ್ಟ ವರಾಂಡ ಹಾಲು ಎರಡು ಕೋಣೆಗಳು, ಅಡಿಗೆಮನೆ, ಬಚ್ಚಲು ಮನೆ ಹಿಂಭಾಗಕ್ಕೆ ಶೌಚಗೃಹ, ಹಿಂದುಗಡೆ ನಲ್ಲಿ ಹಾಕಿಸಿದ್ದ.

"ಹೇಗಿದೆಯಮ್ಮ....ಪರಿಮಳಾ ಮನೆ ?" ಎಂದ ಅನಂತ.

ಪರಿಮಳಾ ಯಾವ ಕಲ್ಪಿತ ಇಟ್ಟುಕೊಳ್ಳದೇ...."ಮನೆ ತುಂಬಾ

ಚೆನ್ನಾಗಿವೆ ಭಾವ ನನ್ನ ಕಲ್ಪನೆಯಲ್ಲಿಯೂ ಇಷ್ಟರ ಮಟ್ಟಿನ ಮನೆ ಇದೆ" ಎಂದಳು.

"ಅವಳು ಗೃಹಪ್ರವೇಶೋತ್ಸವದ ಊಟದ ಬದಲು ಪುತ್ರೋತ್ಸವದ ಊಟಾ ಕೊಡ್ತಾಳೆ ಇದು ನಮ್ಮ ಭಾವನ ಕರಾಮತ್ತು. ಲಲಿತ ಟೀಕಿಸಿದಳು. ಗೋವಿಂದ ಸುಮ್ಮನೆ ನಕ್ಕ.

"ಅಕ್ಕಾ....ನೀವು ಬಂದದ್ದು ಸಂತೋಷ ಇನ್ನು ಸ್ವಲ್ಪ ಹೊತ್ತಿಗೆ ನಿಮ್ಮ ನಾದಿನಿ ಸುಮಾನು ಬರ್ತಾಳೆ" ಎಂದಳು ಶಾರದ.

ಲಲಿತ ಸೀತಮ್ಮನವರಿಗೆ ನಮಸ್ಕರಿಸಿ.. "ಮಾಮಿ ನೂರೆಂಟು ದಿವ್ಯವಾದ ತಿರುಪತಿಗಳಿಗೆ ಹೋಗಿ ಬಂದಿದ್ದೀರಿ ಕ್ಷೇತ್ರಯಾತ್ರೆ ಮಾಡಿದವರಿಗೆ ನಮಸ್ಕರಿಸ ಬೇಕಲ್ವಾ ?" ಎಂದು ನಮಸ್ಕರಿಸಿದಳು.

"ಧೀರ್ಘಸುಮಂಗಲಿ ಭವ" ಎಂದು ಹರಸಿದರು ಸೀತಮ್ಮ.

ಪರಿಮಳ ಅಳುಕುತ್ತ ಬಂದು ಅತ್ತೆಗೆ ನಮಸ್ಕರಿಸಿದಳು. ಗೋವಿಂದ ತಾನು ಬಂದು ನಮಸ್ಕರಿಸಿದ ಗಂಡು ಮಗುವಿನ ತಂದೆ ತಾಯಿಗಳಾಗ್ತಿದ್ದೀರಿ. ಸುಖವಾಗಿ ಮೈ ಕಳೆದು ಆರೋಗ್ಯಶಾಲಿಗಳಾಗಿ ಬಾಳಮ್ಮಾ" ಎಂದರು ಸೀತಮ್ಮ.

"ಅಮ್ಮ ಅಪ್ಪಾ ಎಲ್ಲಿ ?" ಎಂದ ಗೋವಿಂದ, ಸೀತಮ್ಮ ಉತ್ತರಿಸಿ "ಡೆಪ್ಟಿಕಮಿಷನರ ಮನೆಗೆ ಹೋಗಿದ್ದಾರಪ್ಪಾ ಅನಂತನಿಗೆ ಈ ಸೈಟ್ ಸಿಗಲಿಕ್ಕೆ ಅವರ ಕಾರಣ" ಎಂದು ಆ ಬಗ್ಗೆ ಏನೇನೋ ಹೇಳುತ್ತಿದ್ದರು. ಅನಂತರ ಮಗನಿಗೆ,

"ಅವಳಿಗೆ ಜಾಸ್ತಿ ಕೈಲಾಗದಿದ್ದರೆ ಇಲ್ಲೇ ರೂಮಿನಲ್ಲಿ ಮಂಚಾ ಇದೆ ಮಲಗಿಕೋಂತ ಹೇಳಪ್ಪಾ" ಎಂದರು ಸೀತಮ್ಮ.

ತಾಯಿಯ ಅಂತಃಕರಣ ನೋಡಿ ಗೋವಿಂದನಿಗೆ ಸಂತೋಷವಾಯಿತು.

"ಪರಿಮಳಾ ಬಾ....ಮಲಗುವಿಯಂತೆ" ಎಂದ. ಪರಿಮಳಾಗೂ ತುಂಬಾ ಸಾಕಾಗಿತ್ತು. ಅಲ್ಲೇ ಇದ್ದ ರೂಮಿನಲ್ಲಿ ಮಲಗಿಬಿಟ್ಟಳು.

ಮೊದಲ ಪಂಕ್ತಿ ಊಟಕ್ಕೆ ಎದ್ದ ಪರಿಮಳಾಗೆ ಮಾವ ಕಾಣಿಸಿದರು. ಹೋಗಿ ನಮಸ್ಕರಿಸಿದಳು. "ಪುತ್ರವತಿ ಭವ ಶ್ರೀಧೀರ್ಘ ಸುಮಂಗಲಿ ಭವ" ಎಂದು ಆರ್ಶಿವದಿಸಿ ಆರೋಗ್ಯವಾಗಿದ್ದಿಯೇನಮ್ಮ....? ಎಂದರು.

"ಚೆನ್ನಾಗಿದ್ದೀನಿ ಮಾವಾ" ಎಂದಳು.

"ಊಟಾ ಆದ ಮೇಲೆ ಮತ್ತೆ ಕೋಣೆಗೆ ಬಂದು ಮಲಗಿದಳು. ಸೀತಮ್ಮ ಬಂದರು. "ಅತ್ತೆ ನೀವು ಮಲಗ್ತೀರಾ ?" ಎಂದು ಎದ್ದು ಕೂತಳು. "ನಾನು ಕೆಳಗೆ ಚಾಪೆ ಹಾಸಿ ಮಲಗ್ತೀನಿ ನೀನು ಬಸುರಿ ಹುಡುಗಿ ಮಂಚದ ಮೇಲೆ ಮಲಗಮ್ಮ." ಎಂದ. ಗೋವಿಂದಾ ಬಂದು ತಾಯಿಯ ಬಳಿ ಕುಳಿತ.

"ಅಮ್ಮ ನಮ್ಮನ್ನು ಕ್ಷಮಿಸಿದ್ರೇ ಸ್ವಲ್ಪ ದಿನ ನಮ್ಮನೆಗೇ ಬಾಮ್ಮ...." ಎಂದು ಪ್ರಾರಂಭಿಸಿ ಏನೇನೊ ಹೇಳಿದ. ಪರಿಮಳೆಯೂ ಎದ್ದು ಕುಳಿತು ಅತ್ತೆಯ ಪಾದ ಹಿಡಿದು ಕಂಬನಿ ಸುರಿಸಿದಳು. ಏನೇನೋ ಹೇಳಿದಳು.

"ಸರಿ ನಾನು ನಿಮ್ಮಪ್ಪಾ ಬರ್ತಿವೇಳು...." ಎಂದರು.

ತಂದೆ ಬಂದಾಗ ಗೋವಿಂದ ಕೇಳಿಕೊಂಡ. ಆಚಾರ್ಯರು ನಗುತ್ತ "ಈಗ ನಮ್ಮ ಬಳಿ ಏನಿಲ್ಲ....?" ಎಂದರು.

"ಅಪ್ಪಾ ಅನಂತನಿಗೆ ನೀವೇನು ಕೊಟ್ಟಿದ್ದರೂ ಕೋಪವಿಲ್ಲ. ನಂಗೆ ನಿಮ್ಮ ಆಶಿರ್ವಾದ ಮಾತ್ರ ಬೇಕು. ಹದಿನೈದು ದಿನ ಬಂದು ಇರಿ. ಸಂಸಾರ ಹೂಡಿದಾಗಿಂದ ತಂದೆ ತಾಯಿನ್ನ ಒಂದು ದಿನ ಕರೆಸಿ, ಆದರಿಸಿ, ಉಪಚರಿಸಿಲ್ಲ." ಎಂದ.

"ಹೋಗಿ ಬರೋಣೇಳಿ. ನಮಗೇನು ಅನಂತನು ಒಂದೇ....ಗೋವಿಂ-ದನೂ ಒಂದೇ...." ಎಂದರು ಸೀತಮ್ಮ. ಲಲಿತ ತನ್ನ ನಾದಿನಿ ಮನೆಗೆ ಮಧ್ಯಾಹ್ನವೇ ಹೊರಟು ಹೋದಳು.

ಸಂಜೆ ಸೀತಮ್ಮನೇ ಸೊಸೆಯನ್ನು ಮಣೆ ಮೇಲೆ ಕೂಡಿಸಿ, ಹಸಿರು ಬಳೆ ತೊಡಿಸಿ, ಅರಶಿನ ಕುಂಕುಮ ಹಚ್ಚಿ, ಹೂ ಮುಡಿಸಿ, ಹಸಿರು ರೇಶ್ಮೆ ಸೀರೆ ಕುಪ್ಪುಸ, ಐದು ಬಗೆ ಹಣ್ಣು, ಐದು ಬಗೆ ಸಿಹಿ ತಿಂಡಿಗಳನ್ನು ಉಡಿ ತುಂಬಿಸಿದರು. ಶಾರದ, ಜಯಲಕ್ಷ್ಮಿ ಆರತಿ ಎತ್ತಿದರು. ಅನಂತರ ಆ ರಾತ್ರಿ ಊಟವೂ ಅಲ್ಲೇ ಆಯಿತು. ಒಂಬತ್ತರ ಹೊತ್ತಿಗೆ ಗೋವಿಂದ ಟ್ಯಾಕ್ಸಿ ತಂದ. ತಂದೆ ತಾಯಿ ಹೆಂಡತಿಯರೊಡನೆ ಟ್ಯಾಕ್ಸಿಯಲ್ಲಿ ಮನೆಗೆ ಹೋದ.

ಜಯಲಕ್ಷ್ಮಿ ಕಿರಿ ಕಿರಿ ಮಾಡಿ—"ದುಡ್ಡಿನಾಸೆಗೆ ಕರ್ಕೊಂಡು ಹೋದ್ರೇನೊ ? ಈಗೇನಿದೆ ? ತಿಂಗಳಿಗೆ ಅತ್ತೆಗೆ ಐನೂರು ರೂಪಾಯಿ ಬಡ್ಡಿ ಬರತ್ತೆ. ಅದರ ಕೀವಣಿ ಅಂತು ಮುರಿಸೋ ಹಾಗಿಲ್ಲ" ಎಂದಳು. ಅನಂತ ನಕ್ಕು—

"ಹಿರಿಯರ ಮೇಲಿನ ಭಕ್ತಿಯಿಂದಲೇ ಕರ್ಕೊಂಡು ಹೋಗಿರಬಹುದು. ನಮಗೆ ಹೇಗೆ ತಂದೆ ತಾಯಿಯೋ ? ಅವನಿಗು ಹಾಗೆ ತಂದೆ ತಾಯಿ" ಎಂದ ಶಾರದ ನಕ್ಕು—"ದುಡ್ಡು ಕಾಸು ವಿಚಾರಿಸಬಹುದು. ಏನು ಇಲ್ಲ, ಏನು ಗಿಟ ಲ್ಲ, ಅನ್ನೋದು ಅರಿವಾದ ಮೇಲೆ ಒಂದು ವಾರದಲ್ಲಿ ಹಿಂದೆ ಓಡಿಸ್ತಾರೆ" ಎಂದಳು.

ಆದರೆ ಶಾರದಳ ಭವಿಷ್ಯ ನಿಜವಾಗಲಿಲ್ಲ. ಗೋವಿಂದನ ಮನೆಯಲ್ಲಿ ಸೀತಮ್ಮ ಒಂದು ತಿಂಗಳಿದ್ದರು ಪತಿಯ ಜೊತೆ, ಸೀತಮ್ಮ ಮಗನ ಮನೆ ಯಲ್ಲಿ ತಾವೇ ನಲ್ಲಿ ನೀರು ಹಿಡಿದು ಮಡಿಯಲ್ಲಿ ಅಡಿಗೆ ಮಾಡುತ್ತ ಇದ್ದರು. ಸೊಸೆಗೆ ಬೇಕಾದ ತಿಂಡಿ ತೀರ್ಥ ಮಾಡುತ್ತಿದ್ದರು.

"ಅಪ್ಪಾ ನಿಮ್ಮ ಕೈಲಿ ಏನಾದರೂ ಶ್ರೀ ಲಕ್ಷ್ಮೀದೇವಿ ಸ್ತೋತ್ರ ಮಾಡಿಸ ಬೇಕಾಗಿದೇ...." ಎಂದ. "ಶ್ರೀ ಸೂಕ್ತ ಪಾರಾಯಣ ಮಾಡ್ತೀನಿ." ಎಂದರು ತಂದೆ. ಒಂದು ತಿಂಗಳು ದಿನವು ಐದು ವಾರ ಪುನರವೃತ್ತಿ ಶ್ರೀ ಸೂಕ್ತ ಜಪಿಸಿ, ನಿತ್ಯವು ತುಪ್ಪದಿಂದ ಶ್ರೀ ಸೂಕ್ತ ಹೋಮ ಹವನ ನಡಿಸಿದರು. ಪ್ರತಿದಿನ ಜೋಡಿ ತೆಂಗಿನಕಾಯಿ ಒಡೆಯುತ್ತಿದ್ದರು. ಒಂದು ಪುಟ್ಟ ಬಟ್ಟ ಲಲ್ಲಿ ಮಡಿಯಲ್ಲಿ ಪಾಯಿಸ ಮಾಡಿ ತಂದಿಡುತ್ತಿದ್ದರು ಸೀತಮ್ಮ.

ಒಂದು ತಿಂಗಳ ನಂತರ ಐದು ಬ್ರಾಹ್ಮಣರಿಗೆ, ಮುತ್ತೈದೆಯರಿಗೆ ಊಟಕ್ಕೆ ಹೇಳಿ ಆ ದಿನವೇ ಅಣ್ಣಾ ಅತ್ತಿಗೆಗೆ ಊಟಕ್ಕೆ ಹೇಳಿದ್ದ. ಶಾರದಾಗು, ಶಾರದಳ ಗಂಡನಿಗೂ ಊಟಕ್ಕೆ ಹೇಳಿದ. ಶಾರದಾಳ ಗಂಡನಿಗೆ ಈ ವಿರಸದ ಸಮಾಚಾರ ಏನು ಗೊತ್ತಿರಲಿಲ್ಲ. ನೀವು ಏಕೆ ತಂಗಿಯ ಮದುವೆಗೆ ಬಂದಿರ ಲಿಲ್ಲ, ಎಂದು ಗೃಹ ಪ್ರವೇಶೋತ್ಸವದ ಸಂದರ್ಭದಲ್ಲಿ ಕೇಳಿದ್ದ. "ನಮ್ಮ ಮಿಸೆಸ್ ತುಂಬಾ .. ಅನಾರೋಗ್ಯದಲ್ಲಿದ್ದರು. ಅದಕ್ಕೆ ಬಂದಿರಲಿಲ್ಲ." ಎಂದು ಸುಳ್ಳು ಹೇಳಿದ್ದ. ಈಗ ಅಡಿಗೆಯವರನ್ನು ಕರಿಸಿ ಲಾಡು ಚಿರೋಟಿಯ ಅಡಿಗೆ ಮಾಡಿಸಿದ್ದ. ತಾಯಿಗೆ ರೇಶ್ಮೆಸೀರೆ ಕುಪುಸ, ತಂದೆಗೆ ರೇಶ್ಮೆ ಪಂಚೆ ಶಲ್ಯ ಹಾಗು ಶಾರದಳಿಗೆ ಮೆಟಲ್ ಶಿಫಾನ್ ಸೀರೆ ಅವಳ ಗಂಡನಿಗೆ ..ಶರ್ಟ್ ಪೀಸ್, ಜಯಲಕ್ಷ್ಮಿ ಅವಳ ಗಂಡನಿಗೆ ಶಲ್ಯ ಬ್ಲೌಸ್‌ಪೀಸ್ ನೀಡಿದರು. ತಂದೆ ತಾಯಿ ಅದೇ ದಿನ ಊರಿಗೆ ಹೊರಟರು. ಆಚಾರ್ಯರು ನಮಸ್ಕರಿಸಿದ ಮಗ ಸೊಸೆಗೆ "ನಿಮ್ಮ ಮನಸ್ಸಿನ ಸರ್ವಕಾರ್ಯ ಜಯವಾಗಲಿ...." ಎಂದು ಹರಿಸಿದರು.

"ಈ ಎಲ್ಲಾ ಉತ್ಸವದ ಖರ್ಚು ಹತ್ತು ಸಾವಿರ ರೂಗಳಾಯಿತು ಪರಿಮಳ" ಎಂದ....ಶಾವಿಟ್ಟರೆ ಇದ್ದಾಗ, "ಇಲ್ಲಿ ಬಿಡಿ. ಮನೆ ವಿಷಯ ಹೇಗು ತಡವಾಗಿದೆ. ನಾನೆದ್ದು ಸಂಪಾದಿಸ್ಲಿಕ್ಕೆ ಶುರು ಮಾಡಿದ ಮೇಲೆ ತಾನೆ ಮನೆ ವಿಷಯ ? ಈಗ ಒಡೆದಿದ್ದ ಮನುಷ್ಯರ ಮನಸ್ಸುಗಳನ್ನು ಕಟ್ಟಿದ್ದೇವಲ್ಲ" ಎಂದಳು.

ಇಲ್ಲಿಂದ ಮುಂದೆ ಹದಿನೈದು ದಿನಗಳಾಯಿತು. ಅವಳಿಗೆ ಎಂಟನೆಯ್ದ ತಿಂಗಳು ತುಂಬಿತು. ತಾಯಿ ಜಯಮ್ಮ ತಂದೆ ಶ್ರೀಪಾದರಾಯರು ಕಾರು ತಂದರು ಅವಳು ತವರು ಮನೆಗೆ ಹೋದಳು. "ದಿನಾ ಸಂಜೆ ಒಂದು ಗಂಟೇನಾದರೂ ಬಂದ್ಹೋಗಿ" ಎಂದು....ಗಂಡನಿಗೆ ಹೇಳಿ ಹೋದಳು. ಹೆರಿಗೆಗೆ ಒಂದು ಒಂದೂವರೆ ತಿಂಗಳು ಇತ್ತು. ಮಗು ಹುಟ್ಟಿ ಮೂರು ತಿಂಗಳಾದ ಮೇಲೆ ಇಲ್ಲಿ....ಕಳಿಸುವವರಿದ್ದರು. ಹೆಚ್ಚು ಕಡಿಮೆ ನಾಲ್ಕು ನಾಲ್ಕೂವರೆ ತಿಂಗಳು ಗೋಪಿನಾಥ ಒಂಟಿಯಾಗಿರಬೇಕಿತ್ತು.

ತಂದೆ ತಾಯಿಂದಿರೊಡನೆ ಪರಿಮಳ ಇಳಿಯುತ್ತಿದ್ದಂತೆ ಕಾಂಪೌಂಡಿನಲ್ಲಿ ಲಲಿತಳ ಕಾರು ಬಂತು ಲಲಿತಳು ಇಳಿದು....ಅವರೊಂದಿಗೆ ಒಳಗೆ ಬರುತ್ತ—ಒಂದು ಅನಿರೀಕ್ಷಿತ ಸಂತೋಷ ಸಮಾಚಾರ ಹೇಳಬೇಕಿದೆ ರಾಜಣ್ಣಾ...." ಎಂದಳು.

ಗಂಡನೊಡನೆ ಹಜಾರದ ಸೋಫಾ ಮೇಲೆ ಕುಳಿತು ಚದುರಂಗ ಆಡುತ್ತಿದ್ದ ಚಂದ್ರಕಲ ಎದ್ದು—"ನೀವು ಬಂದಾಗೆಲ್ಲಾ ಏನಾದರೂ ಸಂತಸದ ಸುದ್ದೀನೇ ? ಏನು ಹೇಳಿ ?" ಎಂದಳು.

"ಎರಡು ತಿಂಗಳು ನಾರ್ಥ್ ಟೂರ್ ಪ್ರೋಗ್ರಾಮ್ ಇದೆ. ನಮ್ಮ ಭಾವನ ಫ್ರೆಂಡ್ ಮನೋಹರಲಾಲ್ ಇದ್ದಾರಲ್ಲ....ದೆಹಲೀಲಿ ಅವರ ಗೆಸ್ಟ್ ಹೌಸಲ್ಲಿ ಇರೋದು. ದೆಹಲಿ, ಆಗ್ರ ಸುತ್ತಮುತ್ತ ತಿರುಗಾಡಿ ಅನಂತರ ಕಾಶಿ, ಅಲಹಾಬಾದ್, ಪ್ರಯಾಗ, ಮಥುರ ಎಲ್ಲಾ ಕಡೆ ಹೋಗಿ ಬರೋದು. ಇಲ್ಲಿ ಬಂದಾಗ ಮನೋಹರಲಾಲ್ ದೀಪಾಬೆನ್ ಅವರನ್ನ ಮೈಸೂರು, ನಂಜನಗೂಡು, ಶ್ರೀರಂಗಪಟ್ಣ, ತಿರುಮ ಕೂಡಲು ಎಲ್ಲಾ ಸುತ್ತಾಡಿಸಿದೆವಲ್ಲ. ಈ ಆ ಕಡೆ ಎಲ್ಲಾ....ನಮ್ಮನ್ನ ಸುತ್ತಾಡಿಸ್ತಾರಂತೆ. ನಿಮ್ಮನ್ನಾ ಅತ್ತಿಗೇನ್ನ ಖಂಡಿತ ಕರ್ಕೊಂಬನ್ನಿ ಅಂತಿದ್ದಾರೆ. ಇಲ್ಲಿ ಬಂದಿದ್ದಾಗ ನಮ್ಮ ಸುತ್ತಾಟಕ್ಕೆ ಕಂಪನಿ ಕೊಟ್ಟಿದ್ರಲ್ಲಾ—ಅವರಿದ್ದರೆ ನಮ್ಗೆ ಖಾಲಿ

ಟ್ರಿಪ್ ಪ್ರೆಷರ್ ಹೆಚ್ಚಾಕ್ತೇ ಅಂತ ಬರದಿದ್ದಾರೆ." ಎಂದಳು.

"ಖಂಡಿತ ಬರ್ತೀವಮ್ಮ. ಇವಳು ಈ ನಡುವೆ ಬೇಜಾರು ಅಂತಿದ್ದಳು. ನನಗೂ ರೊಟೀನ್ ವರ್ಕ್ ಬೇಜಾರಾಗಿದೆ. ನಾರ್ತ್ ಈ ಕಡೆಗಳಿಗೆ ಹೋಗ ಬೇಕಾದರೇ ಒಬ್ಬ ಪರಿಚಿತರಿದ್ದರೆ ಒಳ್ಳೇದೇ...." ಎಂದ ರಾಜಣ್ಣ. ಲಲಿತ ಬಾಯಿ ಹಾಕಿ

"ಇವಗು ಅದೇ ಅಂತಾರಣ್ಣಾ ...ಮನೋಹರಲಾಲ್ ದಂಪತಿಗಳು ಬರ್ತಾರೆ. ಸರಿ, ಆದರೆ ಇಲ್ಲಿಂದಾ ನಾವಿಬ್ಬರೇ ಹೊರಡೊಕ್ಕಿಂತ, ಚಂದ್ರಾ ರಾಜಣ್ಣ ಬಂದರೇ ನಮಗೆ ಸೇಫ್ಟಿ ಹಾಗ್ ಎಂಜಾಯ್ ಮಾಡೋ ದೃಷ್ಟಿ ಯಿಂದಲು ನಮ್ಮೋರೊಬ್ಬರು ಇರ್ತಾರೆ" ಎಂದರು.

"ಲಾಸ್ಟ್ ಮುಮೆಂಟಲ್ಲಿ ತಿಳಿಸ್ತಿದ್ದೀನಿ. ನಾಳೇನೇ ಬರಬೇಕು. ನಾಳೆ ಬೆಳಗ್ಗೆ ಹತ್ತು ಗಂಟೆಗೆ ಕಾರ್ ರೆಡಿ ಇರತ್ತೆ. ಅಲ್ಲಿಂದ್ಲೇ ಹೋಗೋದು." ಎಂದಳು.

ರಾಜಣ್ಣಾ ನಿರಾಳವಾಗಿ—"ಓ.ಕೆ. ಇವತ್ತು ಹೋಗಿ ಒಂಬತ್ತು ಗಂಟೆ ಮೇಲೆ ನಮ್ಮ ಭಾಸ್ ಚೀಫ್ ಇಂಜನಿಯರ್ ಅವರನ್ನ ಭೇಟಿ ಆಗ್ತೀನಿ. ರಜಾ ಬಗ್ಗೆ ಸಮಸ್ಯೆ ಇಲ್ಲ. ಕೊಡ್ತಾನೆ, ನಾವಿಬ್ಬರು ಸೇರಿ ಸೂಟ್‌ಕೇಸ್ ಸಿದ್ಧ ಪಡಿಸ್ತೀನಿ" ಎಂದ

"ನಾಳೆ ಬೆಳಿಗ್ಗೆ ಊಟಕ್ಕೆ ಅಲ್ಲೇ ಬಂದ್ಬಿಡಿ" ಲಲಿತ ನುಡಿದಾಗ.... O.K, ಎಂದ ರಾಜಣ್ಣಾ. ಈ ಸಂಭಾಷಣೆ ಆಲಿಸುತ್ತಿದ್ದ ಜಯಮ್ಮ ಹುಲಿ ಯಂತೇ ಅಬ್ಬರಿಸಿದರು

"ಮನೇಲಿ ಬಸುರಿ ಹುಡುಗಿ ಬಂದಾಗ, ನೀವು ಎರಡು ತಿಂಗಳು ದೂರದ ದೆಹಲಿ, ಆಗ್ರ ಅಂತ ಹೋದರೆ ಹೇಗ್ರೋ ? ತುಂಬಿದ ಬಸುರಿ....ಮನೆಗೆ ಬಂದಿದ್ದಾಳೆ. ರಾತ್ರಿ ಒಂದು ನೋವು....ಹತ್ತಿತು ...ಬಿಡ್ತು....ನೀವಿಬ್ಬರೂ ಇಲ್ಲದೇ ಇದ್ದರೆ ನಾವು ಗಂಡಾ ಹೆಂಡತಿ ಮುದುಕರು ಇಬ್ಬರು ಏನು ಮಾಡ ಬಲ್ಲೆವು ?" ಎಂದರು.

ರಾಜಣ್ಣಾ ಬೇಸರದಿಂದ—"ನಿನ್ನ ವಾದ ವಿಚಿತ್ರವಾಗಿದೆ ಅಮ್ಮ. ಅವಳು ಗರ್ಭಿಣಿ ಅವಳೂಂತ ನಾವು ಕಟ್ಟಿ ಹಾಕಿದ ಹಾಗೆ ಇಲ್ಲಿರಬೇಕಾ ? ಇದುವರೆಗೂ ಮದುವೆ ಆದಾಗಿಂದ ಗರ್ಭಿಣಿ, ಬಾಣಂತನ, ಮಗು ಚಿಕ್ಕ ದೂಂತ ಚಂದ್ರಾ ಎಲ್ಲಿಗೂ ಹೋಗಿರ್ಲಿಲ್ಲ. ಲಲಿತಂದು ಅದೇ ಸಮಸ್ಯೆ. ಈಗ

ಮಕ್ಕಳಿಗೆ ಎರಡೊರುಷ ತುಂಬಿದೆ. ಲಲಿತನ ಮಗೂನ್ನ ಲಲಿತನತ್ತಿ ನೋಡ್ಕೋತಾರೆ. ನಮ್ಮಗೂನ್ನ ನಮ್ಮತ್ತಿ ನೋಡ್ಕೋತಾರೆ. ಎರಡು ತಿಂಗಳು ಆರಾಮವಾಗಿ ಹೋಗಿ ಬರ್ತಿವಿ" ಎಂದ.

"ಇದು ನನ್ನ ಮನೆ. ನೀವು ನನ್ನ ಅನ್ನ ತಿಂದಿದ್ದೀರಿ. ಪರಿಮಳ ಈ ಸ್ಥಿತೀಲಿರೋವಾಗ ನೀವು ಹೋಗಬಾರದು" ಜಯಮ್ಮ ಆಜ್ಞೆ ಮಾಡು ವಂತೇ ಹೇಳಿದರು.

ಲಲಿತ ಅಣ್ಣಾ ಅತ್ತಿಗೆ ಪರವಾಗಿ ವಾದಿಸುತ್ತ—"ನಿನ್ನ ವಾದ ವಿಚಿತ್ರ ವಾಗಿದೆ ಅಮ್ಮ. ಅಕ್ಕನ ಬಾಣಂತನ ಆದರೆ ಅತ್ತಿಗೆ ಏನು ಮಾಡಬೇಕು....? ವೇದಮ್ಮನ್ನ ಅವರ ಮಗಳನ್ನ ಕರಿಸಿಕೊ....ಬಾಣಂತಿ ಅಡಿಗೆ....ಮಗೂಗೆ ನೀರು .. ಹಾಕೋದು...." ಎಲ್ಲಾ ಮಾಡ್ತಾರೆ. ಅಸ್ವತ್ರೆ ಅಲೆದಾಟ ಅವರ ಮಗಳು ವೀಣಾ ಮಾಡ್ತಾಳೆ. ಅತ್ತಿಗೆ ಇದ್ದು ಏನು ಮಾಡಬೇಕು ?" ಎಂದಳು. ಜಯಮ್ಮ ದೊಡ್ಡ ದನಿಯಲ್ಲಿ ಕೂಗಾಡುತ್ತ—

"ಈ ಇಲ್ಲಾಮಲ್ಲಿ ಕುದ್ರಗೇಡಿ ವಿದ್ಯೆಗಳು ನಿಂದೇ ಕಣೇ ನಿನ್ನ ಯೋಗ್ಯತೇ ನನಗೆ ಗೊತ್ತು. ಪರಿಮಳಾ ಬಡವಳೊಂತ ಅವಳ ಮೇಲೆ ನಿನಗೆ ತಾತ್ಸಾರ. ಆ ಚಂದ್ರಿಕಾ ಎಷ್ಟು ಕೆಟ್ಟ ಊಸರವಳ್ಳೀನೋ....ನಿಂದು ಅದಕ್ಕೆ ಕಿತಾಪತಿ ಇದೆ. ಬಸುರಿ ಹುಡುಗಿ ಇಂದು ಬಂದು ಕೂತಿದ್ದಾಳೆ. ಒಂದು ಆರತಿ ಎತ್ತಿದ್ದಿರಾ ? ಬರ್ತಾಲೆ ಒಂದು ಪ್ರೀತಿಯಿಂದ ಮಾತಾಡಿಸಿ ದ್ದೀರಾ ?" ಎಂದರು.

ಲಲಿತ ಅಳುತ್ತ ತಂದೆಯ ಕಡೆ ನೋಡಿ—"ನೋಡಪ್ಪಾ....ಅಮ್ಮ ಕಾರಣವಿಲ್ಲದೇ ಹೇಗೆ ಬೈತಾಳೆ. ಜಾಲಿ ಟ್ರಿಪ್ಪಿಗೇ ಬಾ ಅಂತ ಕರಿಯಲಿಕ್ಕೆ ಬಂದರೆ ಕುದ್ರಗೇಡಿ ವಿದ್ಯೇ....ಆಗತ್ತಾ ?" ಎಂದಳು.

"ಅಮ್ಮನಿಗೆ ಸ್ವಲ್ಪ ಈ ನಡುವೆ ತಲೆ ಕೆಟ್ಟ ಹಾಗೆ ಆಗಿಬಿಟ್ಟಿದೆ. ಚಂದ್ರಾನ್ನ ಕಂಡರೆ ಕಾರಣವಿಲ್ಲದೆ ಧುಸು ಮುಸು ಮಾಡ್ತಾಳೆ. ಹೀಗಾದರೇ ನಾವು ಇಲ್ಲಿರೋದು ಸಾಧ್ಯ ಇಲ್ಲ" ಎಂದ ರಾಜಣ್ಣಾ.

"ಸಾಧ್ಯ ಇಲ್ಲದೇ ಇದ್ದರೇ ಹೆಂಡತೀನ್ನ ಕಟ್ಟಿಕೊಂಡು ತೊಲಗಿ ಹೊರ ಟ್ಹೋಗು. ಹೇಗಿದ್ದರೂ ಮಾವನ ಮನೆ ಹತ್ತಿರ ಸೊಗಸಾದ ಬಂಗಲೆ ಕಟ್ಟಿಸಿಕೊಂಡಿದ್ದಿ. ಈ ಲಲಿತೀನೂ....ಅದೇ ಏರಿಯದಲ್ಲಿರ್ತಾಳೆ. ಹಾಗಲ

ಕಾಯಿ, ಬೇವಿನ ಕಾಯಿಗಳ ಹಾಗೆ ಒಟ್ಕಿಗಿದ್ದು ಪರಿಮಳಾನ್ನ ಮೇಲೆ ಕಟ್ಟಿ ಕಾರ್‍ತೀರಿ." ಎಂದರು. ರಾಜಣ್ಣಾ ಕೋಪದಿಂದ

"ಅಪ್ಪಾ... ಅಮ್ಮನ ಬಾಯಲ್ಲಿ ಹೀಗೆಲ್ಲಾ ಅನಿಸ್ಕೊಂಡು ನಾವು ಇಲ್ಲಿರಲಿಕ್ಕೆ ನಮಗೇನು ಗ ಹಚಾರ ? ನಾನು ಬಂಗ್ಲೆ ಕಟ್ಟಿಸಿದೀನಿ. ತಿಂಗಳಿಗೆ ನನಗು ಹತ್ತು ಸಾವಿರ ರೂ ಸಂಪಾದನೆ ಇದೆ. ತಂದೆ ತಾಯಿ ಅನ್ನೋ ಪ್ರೀತಿಗೆ ಇಲ್ಲಿದ್ದೀನಷ್ಟೆ," ಎಂದ.

ಶ್ರೀಪಾದರಾಯರು ಹೆಂಡತಿಗೆ ಬುದ್ದಿ ಹೇಳುತ್ತ—"ಜಯಾ ಕಾರಣಾ ಇಲ್ಲದೇ ಏಕೆ ಉದ್ರೇಕ ಪಡ್ತಿ ? ಪರಿಮಳಾ ಮೇಲೆ ನಿಂಗೆ ಪ್ರೀತಿ ಇರಬಹುದು. ಆ ಪ್ರೀತಿ ಭರದಲ್ಲಿ ಸದಾ ಬೇರೆ ಮಕ್ಕಳಿಗೆ ಅನ್ಯಾಯ ಮಾಡಬಾರದು ? ಗಂಡು ಮಗ ಬೇಸತ್ತು ದೂರಾ ಹೊರಟರೇ ನಾನು ಇಲ್ಲಿರ್ತೀನಿಂತ ತಿಳ್ಕೊಂಡ್ಯಾ ? ನಾನು ಯಾವಾಗಲು ಮಗ ಸೊಸೆ ಹತ್ತಿರ. ಹಾ ! ಇನ್ನೊಂದು ವಿಷಯ ತಿಳ್ಕೊ. ಈ ಬಂಗ್ಲೆ ನಾನು ರಾಜಣ್ಣನ ಹೆಸರಿಗೆ ಮೊನ್ನೆ ಬರೆದು ಕೊಟ್ಟಿದೀನಿ. ನಿನ್ನ ಬಾಯಲ್ಲಿ ಈ ತಿಂಗಳಲಿ ಎರಡು ಸಲ, ಹೊರಡು....ಹೊರಡು....ಅಂತ ಬಂತು. ಆಗ ಅವನು ನೊಂದ್ಕೊಂಡು ಹೋಗ್ತೀನಪ್ಪಾ....ಅಂದ ನಾನವರಿಗೆ ಸಮಾಧಾನ ಮಾಡಿ ತಂದೆ ತಾಯಿ ಇದ್ದೀವಿ. ಇದನ್ನ ಬಿಟ್ಟು ಹೋಗೊ ಮಾತಾಡಬೇಡಾ ಈ....ಬಂಗ್ಲೆ ನಿಂದೂಂತ ಅವನಿಗೆ ರಿಜಿಸ್ಟರ್ಡ್ ಮಾಡಿಸಿಕೊಟ್ಟೆ. ಈಗ ಅವನೇ ನಮ್ಮನ್ನ ಹೊರಗೆ ಹಾಕಬೇಕು" ಎಂದರು.

ಜಯಮ್ಮ ಅತ್ಯಂತ ಉದ್ರೇಕಗೊಂಡು—"ಎಂಥಾ ವಿಶ್ವಾಸ ದ್ರೋಹಿ ನೀವು ! ಸ್ವಯಾರ್ಜಿತವೆಲ್ಲಾ ಅವನ ಹೆಸರಿಗೆ ಮಾಡಿ....ಈಗಿಂದಾ ನಾವು ಅವರ ಪರಾಧೀನದಲ್ಲಿರಬೇಕಾ ? ಪರಿಮಳಾಗೆ ಮೊದಲಿಂದ ನೀವು ಅನ್ಯಾಯ ಮಾಡಿದಿರಿ. ಒಳ್ಳೇ ಡಾಕ್ಟರ್ ವರಾ ಬಂದಿದ್ದ. ಅವರಿಗೆ ನಾಲ್ಕು ಲಕ್ಷದ ವರೆಗೇ ಕೊಡಬೇಕಾಗತ್ತೇ ಬೇಡಾ ಅಂದಿರಿ. ಆಗ ಈ ರಾಜಣ್ಣನೂ ಹೆಣ್ಣು ಮಕ್ಕಳ ಬಡ್ಜೆಟ್ ಎರಡೂವರೆ ಲಕ್ಷ ಅಷ್ಟೇ....ಎಂದ. ಆದರೆ ಲಲಿತನ ಗಂಡ ಹರ್ಷನಿಗೆ ಬರಿ ಎರಡೂವರೆ ಲಕ್ಷ ಕೊಟ್ರೇನು ?" ಎಂದು ಏದುಸಿರು ಬಿಡುತ್ತಿದ್ದರು.

"ಲಲಿತ ಕೋಪದಿಂದ—"ಅಮ್ಮ ನಮ್ಮೆಜಮಾನರ ಹೆಸರು ನೀನು

ಎತ್ತ ಬೇಡಾ....ಅವರು ನನ್ನ ಮೇಲೆ ಪ್ರೀತಿಗೆ ಏನು ಬೇಡಾಂದರು. ಅಕ್ಕಂಗೆ ವಧು ಪರೀಕ್ಷೇಲಿ ಬಂದ ವರಗಳು ನಾಲ್ಕು ಲಕ್ಷ, ಐದು ಲಕ್ಷ ಕೇಳ್ತಿದ್ದರು. ಅಪ್ಪಾ ಹೆಣ್ಣು ಮಕ್ಕಳಿಗೆ ಇಟ್ಟಿದ್ದದ್ದು ಎರಡೂವರೆ ಲಕ್ಷ ಒಬ್ಬೊಬ್ಬರಿಗೆ" ಎಂದಳು.

ಜಯಮ್ಮ ರೋಷದಿಂದ—"ಸಾಕು ಬಾಯ್ಮುಚ್ಚೆ. ನಿಮ್ಮ ಅಪ್ಪಾ ನನಗೆ ಮೊನ್ನೇ ಬಾಯ್ಬಿಟ್ಟಿದ್ದಾರೆ. ನಿನ್ನ ಗಂಡಂಗೆ ಎರಡೂವರೆ ಲಕ್ಷಾ ಮಾತ್ರಾನ ಕೊಟ್ಟಿರೋದು. ಅದರ ಜೊತೆಗೆ ಎರಡು ಲಕ್ಷದ ಕಾರು ಕೊಟ್ಟಿಲ್ವಾ ? ಗೊತ್ತಾದರೆ ನಾನು ಗಲಾಟೆ ಮಾಡ್ತೀನಿ ಅಂತ ಸುಮ್ಮ ನಿದ್ದರು. ಮೊನ್ನೇ ಎಲ್ಲಾ ನನ್ನ ಬಳಿ ಬಾಯಿ ಬಿಟ್ಟರು" ಎಂದರು.

ರಾಜಣ್ಣಾ ಕೋಪದಿಂದ—"ಅದೆಲ್ಲಾ ಅಮ್ಮನ ಬಳಿ ಏಕೆ ಕೇಳಿಸ್ತೀಯಪ್ಪಾ ? ಆತ ಇಂಜನಿಯರ್....ನಮ್ಮ ಪ್ರೆಸ್ಟೀಜಗೆ ನಾವು ಕೊಟ್ವಿ. ಅವರು ನಮಗೆ ಕೊಟ್ಟಿಲ್ವಾ ? ಚಂದ್ರಾನ ತಂದೆ ನನಗೆ ಕಾರು ಕೊಟ್ಟಿಲ್ವಾ ?" ಎಂದ.

ಜಯಮ್ಮ ಕೋಪದಿಂದ—"ಅವರಸ್ಯಾಕೆ ಗದರಿಸ್ತೀಯೋ ? ಚಂದ್ರನ್ನ ಅಪ್ಪನಿಂದ ನೀನು ಏನೇನು ವಸೂಲು ಮಾಡಿದೆಯೋ ಅದು ಬೇರೆ ಪ್ರಶ್ನೆ. ಲಲಿತಂಗೆ ನಾವು ಇಟ್ಟಿದ್ದು ಎರಡೂವರೆ ಲಕ್ಷ. ನೀನು ಹೇಗೆ ಎರಡು ಲಕ್ಷ ನನಗೆ ತಿಳಿದ ಹಾಗ ಜಾಸ್ತಿ ಕೊಡಿಸಿದೆ. ಮೊನ್ನೆ ನಿಮ್ಮಪ್ಪನ್ನ ಹಳೇ ಡೈರೀಲಿ....ಸಾಂಕೇತಿಕವಾಗಿ ಗುರುತು ಹಾಕಿದ್ದು ನೋಡಿ ಬಾಯಿ ಬಿಡಿಸಿದೆ" ಎಂದರು.

ರಾಜಣ್ಣಾ ಕೋಪದಿಂದ—"ದೊಡ್ಡ ಸಾಹಸ....ಮಾಡ್ದಿ ಸುಮ್ನಿರಮ್ಮ. ಅಪ್ಪನ ಆಸ್ತಿ ಎಲ್ಲಾ ನನಗೆ ಸೇರಿದ್ದು. ಎರಡು ಲಕ್ಷ ನಾನೇ ಉದಾರವಾಗಿ ಹರ್ಷನಿಗೆ ಕೊಡಿಸಿದೆ. ನೀನು ಏನು ಮಾಡೋ ಹಾಗಿದ್ದಿ ?" ಎಂದ.

ಜಯಮ್ಮ ಕೋಪದಿಂದ—"ಅಪ್ಪು ತಂದೆ ಮಗ ನೀವು ಒಂದಾಗಿದ್ದಿರೇನು ? ನಾನೇನು ತೀರ ನಿರ್ಗತಿಕಳಲ್ಲ. ತಡೀ ಬಂದೆ." ಎಂದವರೇ ಒಳಗೆ ಹೋದರು.

"ಲಲಿತನ ಮದುವೇಲಿ ಎರಡು ಲಕ್ಷ ಜಾಸ್ತಿ ಕೊಟ್ಟಿದ್ದು ನೀವು ಏಕೆ ಬಾಯ್ಬಿಟ್ರಪ್ಪಾ....ಮೊದಲೇ ಅಮ್ಮನದು ಉದ್ರೇಕದ ಸ್ವಭಾವ"

"ಮೊನ್ನೆ ಯಾವುದೋ ಹಳೇ ಡೈರಿ ನಾಲ್ಕು ವರ್ಷದ್ದು ಹಿಡಿದು....ಬಗೆ

ಬಗೆಯಾಗಿ ತನೀಖೆ ಮಾಡಿದಳಪ್ಪಾ. ಲಲಿತನ ಮೇಲೆ ಆಣೆಯಿಡಿ. ಹರ್ಷನ ಮೇಲೆ ಆಣೆ ಇಡಿ. ಹೀಗೆಲ್ಲಾ ಹೇಳಿದಳು," ಎಂದು ಆ ಘಟನೆ ಹೇಳುತ್ತಿದ್ದರು.

ಅಷ್ಟರಲ್ಲಿ ಜಯಮ್ಮ ಒಂದು ಬೆಳ್ಳಿ ಆಭರಣದ ಪೆಟ್ಟಿಗೆ ತಂದು ಮಗಳಿಗೆ ಕುಂಕುಮಾ ಹಚ್ಚಿ ಕೊಟ್ಟು—"ನಿನಗೆ ನಿಮ್ಮಪ್ಪಾ ಎರಡು ಲಕ್ಷ ಮೋಸಾ ಮಾಡಿದ್ದಾರೆ. ಇಂಜನಿಯರ್, ಡಾಕ್ಟರ್ ಅಂತ ತಿಂದು ಹೆಚ್ಚಾ ದೋಣಿಗೆ ಕೊಡ್ತಿದ್ದಾರೆ. ನೀನು ಹಗಲು ರಾತ್ರಿ....ಕಾಲೇಜಲ್ಲಿ ದುಡಿದು ಮನೆ ಏಕೆ ಕಟ್ಟಿಸ್ತಿ. ಐವತ್ತು ತೊಲ ಚಿನ್ನ ಇದೆ. ಮಾರಿ ಹಾಕು. ನಿನ್ನ ಹೊರಗಿನ ದುಡಿತ ಸಾಕು. ಎಳೀ ಮಗೂನಿಟ್ಕೊಂಡು ಕಾಲೇಜು, ಟ್ಯುಟೋರಿಯಲ್ ಅಂತ ದುಡೀಬೇಡಾ....ನಾಳೆ ಈ ಹಣಾ ನಿನ್ನ ಗಂಡಂಗೆ ಕೊಡು. ಇದನ್ನ ಮಾರಿ ಹಾಕಿ "ನಿನ್ನ ಬಾಣಂತನ ಆಗೋದ್ರೊಳಗೇ....ಮನೆ ಕಟ್ಟಿ ಬಿಡಲಿ" ಎಂದರು. ಪರಿಮಳ ವ್ಯಥೆಯಿಂದ

"ಅಮ್ಮ ನಿನ್ನ ಬಂಗಾರ ಮಾರಿಯಾದರೂ ಮನೆ ಏಕೆ ಕಟ್ಟಬೇಕು ? ಅವಳ ಗಂಡಾ ಇಂಜನಿಯರ್ ! ಅವರ ಶ್ರೀಮಂತಿಕೆಯ ಪ್ರೆಸ್ಟೀಜಿಗೆ ಅವರಿಗೆ ಹಣಾ ಕೊಟ್ಟಿರಬಹುದು. ನನಗೆ ವಿದ್ಯೆ ಇದೆ. ನಾನು....ನನ್ನ ಗಂಡನ್ನ ಜೊತೆ ದುಡಿದು ಬದುಕ್ತೀನಿ" ಎಂದಳು.

"ಕುಂಕುಮಾ ಇಟ್ಟು ಕೊಟ್ಟಿದ್ದೀನಿ. ತಾಯಿ ಆಶಿರ್ವಾದ ನೀನು ತೆಗೆದುಕೊಳ್ಳಲೇ ಬೇಕು. ಮನೆ ಸಹ ನನಗೆ ತಿಳೀದೇ ಆ ಪಾಪಿ ಹೆಸರಿಗೆ ಮಾಡಿಸಿದ್ದಾರಂತೇ....ಬಾಣಂತನ ಆಗೋ ಹೊತ್ತಿಗೆ ನಿನ್ನ ಗಂಡಾ ಮನೆ ಕಟ್ಟಿಸಲಿ. ನಾನು ನಿನ್ನ ಮನೆಗೆ ಬಂದಿರ್ತೀನಿ. ಅವರ ಮಗಾ ಸೊಸೆ ಜೊತೆಗಿರಲಿ" ಮಾತಾಡುತ್ತ ತೀವ್ರವಾದ ಉದ್ರೇಕದಿಂದ ಕುಸಿದು ಬಿದ್ದರು. ರಾಯರು, ಲಲಿತ ಓಡಿ ಬಂದು ಅವರನ್ನು ಅವರ ಕೋಣೆಯಲ್ಲಿ ಮಲಗಿಸಿ ಮಾತ್ರೆ ನುಂಗಿಸಿದರು· ಆಕೆ ಆ ಮಾತ್ರೆ ನುಂಗಿದಾಗ ಅರೆ ಮಂಪರಿನಲ್ಲಿರುತ್ತಿದ್ದರು. ಪುನಃ ಎಲ್ಲಾ ನಡು ಮನೆಯಲ್ಲಿ ಚರ್ಚೆಗೆ ಕೂತರು.

"ಅಮ್ಮನಿಗೆ ಈ ಸಡುವೆ ಮುಟ್ಟು ನಿಂತ ಮೇಲೆ ಬಂದು ತರಹ ತಲೆ ಕೆಟ್ಟ ಹಾಗಾಗಿದೆ ಅಕ್ಕ. ನೀನು ಬಂದ ಮೇಲಂತೂ, ನಿನ್ನ ಮುಖಾ ನೋಡಿದರೇ ಇನ್ನಷ್ಟು ಉದ್ರೇಕ ತಾಳಿ, ನಮ್ಮನ್ನ ದ್ವೇಷಿಸ್ತಾಳೆ. ಅದಕ್ಕೆ ನಾನು ಎರಡು ತಿಂಗಳು ಅಣ್ಣಾ ಅತ್ತಿಗೇನ್ನ ಹೀಗೆ ಬೆಹಲಿ ಕಡೆ ಕರ್‍ಕೊಂಡು ಹೋಗ್ತಿ

ಹೋದು. ಇದು ನಮ್ಮ ಟ್ರೀ....ಪ್ಲಾನ್" ಎಂದಳು. ಪರಿಮಳ ನೊಂದು ಕೊಳ್ಳುತ್ತ—

"ನಾನೇನು ಮಾಡಲಮ್ಮ. ಬಾಣಂತನ ತವರು ಮನೆ ಅಂತ ಬಂದಿದ್ದೀನಿ" ಎಂದಳು. ರಾಜಣ್ಣಾ ಒರಟಾಗಿ—

"ಬಂದಿದ್ರೆ ಮೂರು ತಿಂಗಳು ಬಾಣಂತನ ಮಾಡಿಸಿಕೋ ...ವೇದಮ್ಮ ಅವರ ಮಗಳು ವೀಣಾ ಬರ್ತ್ತಾರೆ. ನನ್ನ ಹೆಂಡತಿ....ಜವಾನಿ ಹಾಗೆ ಯಾರ ಸೇವೆ ಮಾಡಲ್ಲ. ಮೊದಲು ಆ ಒಡವೆಯ ಪೆಟ್ಟಿಗೆ ಅಪ್ಪನ ಕೈಗೆ ಕೊಡು. ಮಗ ಸೊಸೆಗೆ ಸೇರಬೇಕಾದ ಒಡವೆ ಅದು" ಎಂದ.

"ಹೌದಕ್ಕ. ಅಮ್ಮನಿಗೆ ತಲೆ ಸರಿ ಇಲ್ಲ. ಉದ್ರೇಕದಲ್ಲಿ ಏನೋ ಒಂದು ಮಾಡ್ತಾಳೆ. ಇವತ್ತು ಕೊಟ್ಟ ವಿಷಯ ನಾಳೆ ಜ್ಞಾಪಕಾ ಇರಲ್ಲ. ನಮಗೆ ಮದುವೇಲಿ ಕೊಡಬೇಕಾದ....ಚಿನ್ನ, ಬೆಳ್ಳಿ ಎಲ್ಲಾ ಕೊಟ್ಟಿದ್ದಾರೆ. ಈಗ ಇಲ್ಲಿರೋದೆಲ್ಲಾ....ಅಣ್ಣನದು. ಆಗಾಗ ಪ್ರೀತಿ ವಿಶ್ವಾಸದಿಂದ ತವರಿಗೆ ಬಂದು ಹೋಗಿ ಮಾಡ್ಲಿಕ್ಕೆ ಅಣ್ಣಾ ಅತ್ತಿಗೆ ವಿಶ್ವಾಸ ಎಂದೆಂದು ನಾವು ಗಳಿಸಿ ಕೊಳ್ಳಬೇಕು ? ಅಪ್ಪಾ ಅಮ್ಮ ಎಷ್ಟು ದಿನ ಇರ್ತ್ತಾರೆ ?" ಎಂದಳು.

ಪರಿಮಳ ಬೇಸರದಿಂದ—"ನನಗೇನು ಈ ಒಡವೆಗಳ ಆಸೆಯಿಲ್ಲ. ನಾಳೆ ಅಮ್ಮನ ಕೈಗೆ ಕೊಟ್ಟು....ಅಮ್ಮನ ಅಲಮಾರಿನಲ್ಲಿಡಿಸ್ತೀನಿ" ಎಂದಳು.

"ಮತ್ತೆ ನಿನ್ನ ಕಿತಾಪತಿ ವಿದ್ಯೆ ತೆಗೆದ್ಯಲ್ಲ. ಇದು ನೀನು ಅಮ್ಮನಿಗೆ ಕೊಡೋದು. ಅಮ್ಮ ಮತ್ತೆ ಉದ್ರೇಕಗೊಂಡು ಜಗಳಾ ತೆಗೆಯೋದು. ಅಮ್ಮ ಕುಸಿದು ಬೀಳೋದು. ದಿನೇ ದಿನೇ ಹೀಗಾದ್ರೆ ಅಮ್ಮನ ಹೃದಯಕ್ಕೆ ಅಪಾಯ. ಒಂದ್ಸಲ ಹೀಗಾದ್ರೇ ಎಂಟು ದಿನ ಮೈ ಮರೆವಿರತ್ತೆ. ಸಂಬಂಧ ಪಟ್ಟ ವಿಷಯಾನು ಮರಿತಿರ್ತ್ತಾಳೆ. ಒಡವೆ ಪೆಟ್ಟಿಗೆ ಚಂದ್ರಕಲ ಕೈಗೆ ಕೊಡು." ಎಂದು ಗದರಿಸಿದಂತೇ ಹೇಳಿದ ರಾಜಣ್ಣಾ. ಪರಿಮಳ ಎದ್ದು ಆ ಒಡವೆ ಪೆಟ್ಟಿಗೆ ಚಂದ್ರಕಲಳಿಗೆ ಕೊಡಲು ಬಂದಳು. ತುಂಬಿದ ಬಸುರಿ ಭಾರವಾದ ಹೆಜ್ಜೆ ಇಡುತ್ತ–ಎದುರು ಸೋಫಾ ಬಳಿ ಬರುವ ಹೊತ್ತಿಗೆ–"ಅವಳಿಗೆ ಆ ಒಡವೆ ಪೆಟ್ಟಿಗೇ ಕೊಡಬೇಡಮ್ಮ. ಆ ಒಡವೆಗಳು ನಿನಗೆ ಸೇರಿದ್ದು." ಎಂದರು ತಂದೆ. ಅವರ ಸ್ವರ ಉಕ್ಕಿನಂತೇ ಹರಿತವಾಗಿತ್ತು. ಪರಿಮಳ ಕೊಂಚ ಬೆರಗಾಗಿ ಅವರ ಕಡೆ ನೋಡಿದಳು.

"ಅಪ್ಪಾ....ನಿಮಗೂ ತಲೆ ಕೆಟ್ಟಿದೆಯಾ ?" ಲಲಿತ ಕೂಗಿದಳು.

"ಹೌದು ! ಸ್ವಾರ್ಥದಿಂದ ನಿನ್ನ ಹಾಗು ರಾಜಣ್ಣನ ಹೃದಯ ಕೆಟ್ಟ.... ಉಗ್ರಾಣವಾಗಿದೆ. ಕೆಟ್ಟ ಗುಣಗಳ ಉಗ್ರಾಣ....ಹೆತ್ತ ತಾಯಿ ಮಗಳಿಗೆ ಕುಂಕುಮ ಇಟ್ಟುಕೊಟ್ಟ ವಸ್ತು ನೀವೇಕೆ ವಾಪಸ್ ಪಡೆಯುತ್ತೀರಿ ?" ಎಂದ ರಾತ ಗಂಭೀರವಾಗಿ.

"ಆದರೆ ಅದು ಐವತ್ತು ತೊಲ ಚಿನ್ನದ ಒಡವೆಗಳಪ್ಪಾ....ಎರಡೂವರೇ ಲಕ್ಷ ರೂ. ಗಳದು" ಎಂದ ರಾಜಣ್ಣಾ.

"ಇರಬಹುದು. ಅದರ ಜೊತೆ ನನ್ನ ಬ್ಯಾಂಕ್ ಬ್ಯಾಲೆನ್ಸ್‌ನಿಂದ ಇನ್ನೂ ಎರಡು ಲಕ್ಷ ರೂ ಸೇರಿಸಿ ಅವಳಿಗೆ ಕೊಡುತ್ತೇನೆ." ಎಂದರು.

ರಾಜಣ್ಣಾ ರೋಷದಿಂದ—"ನನಗೆ ಸೇರಬೇಕಾದ ನಿಮ್ಮ ಸಂಪಾದನೆ ಹಾಗೆ ಮನಸ್ಸಿ ಹಾಳು ಮಾಡಿದರೆ ನಾನು ಇಲ್ಲಿರುವುದಿಲ್ಲ. ಹೊರಟು ಹೋಗುತ್ತೇನೆ" ಎಂದ

"ಧಾರಾಳವಾಗಿ ಹೋಗು. ಆದರೆ ಯಾವುದು ನಿನಗೆ ಸೇರಬೇಕಾದ್ದು ? ಆರು ಲಕ್ಷ ರೂ ಬೆಲೆ ಬಾಳೋ ಈ ಬಂಗ್ಲೆ... ಬ್ಯಾಂಕಿನಲ್ಲಿರುವ ನಾಲ್ಕು ಲಕ್ಷ, ನಿಮ್ಮಮ್ಮನ ಒಡವೆಗಳು ಐವತ್ತು ತೊಲ ಎಲ್ಲಾ ನಿನ್ನದೆಂದೆ ಭಾವಿಸಿದ್ದೆ. ಆದರೆ ಮೊಟ್ಟ ಮೊದಲ ಭಾರಿ ನಿನ್ನ ಹಾಗು ಲಲಿತನ ಕಾರಾಸ್ಥಾನ ಅರಿವಾಗುತ್ತಿದೆ. ನನ್ನೆದುರೆ ಲಲಿತ ಹೇಗೆ ಮಾತಾಡುತ್ತಾಳೆ ? ತಂದೆ ತಾಯಿ ಎಷ್ಟು ದಿನ ಇರುತ್ತಾರೆ ? ಎನ್ನುತ್ತಾಳೆ. ಅದಕ್ಕಾಗಿ ಅಣ್ಣಾ ಅತ್ತಿಗೆಯನ್ನು ಹೊಂದಿಕೊಳ್ಳಬೇಕಂತೆ. ಹಿಂದೆ ಹರ್ಷ ಲಲಿತನ್ನ ಪ್ರೀತಿಸಿದಾಗ ಏನಂದಿದ್ದೆ ? ಪ್ರೀತಿಯೆ ಅವನಿಗೆ ಮುಖ್ಯ. ನೀವಿಟ್ಟಷ್ಟೇ ಹಣದಲ್ಲಿ ವಿವಾಹವಾಗುತ್ತದೇ.... ಎಂದೆ. ಆದರೆ ಮುಂದೆ ಹರ್ಷನ ಚಿಕ್ಕಪ್ಪನ ಮಗಳನ್ನು ನೀನು ವಿವಾಹವಾಗುವ ಸನ್ನಿವೇಶಾ ಹರ್ಷನಿಂದ ಒದಗಿತು. ಅವರು ಹತ್ತು ಲಕ್ಷದವರಿಗೆ ಮಗಳಿಗೆ ಕೊಡುವವರಿದ್ದರು.

ಅಪ್ಪಾ ಹರ್ಷನ ಮನೆಯವರು ಶ್ರೀಮಂತರು. ಅವರ ಬೇಡಿಕೆಗೆ ಅನುಗುಣವಾಗಿ ಕೊಡಿ. ನಿಮ್ಮ ದುಡ್ಡೆಲ್ಲಾ ನನ್ನದೇ ತಾನೇ ? ನನ್ನ ತಂಗಿಗೆ ನಾಲ್ಕು ಲಕ್ಷ ನನ್ನ ಪಾಲಿನದು ಸೇರಲಿ, ಎಂದು ಪೂಸಿ ಮಾಡಿ–ಒಟ್ಟು ಆರೂವರೆ ಲಕ್ಷ ರೂ ಬಳುವಳಿ ಕೊಡಿಸಿದೆ. ನಾಲ್ಕು ತಿಂಗಳ ಹಿಂದೆ ಪರಿಮಳನ ವಿವಾಹವಾಗಿತ್ತು. ನಾವುಎರ ಡೂವರೆ ಲಕ್ಷದಲ್ಲಿ ಗೋವಿಂದನಿಗೆ ಮುಗಿಸಿದ್ದೆವು. ಆದರೆ ಆ ಹುಡುಗ M.A, ಓದಿದ ನಿರುದ್ಯೋಗಿ. ಉದ್ಯೋಗ

ಸಹ ನೀವು ಕೊಡಿಸುತ್ತಿದ್ದೀರಿ ಇಲ್ಲಿ ಲಲಿತನ ಅತ್ತೆ ಮನೆಯವರು....ಅತಿ ಶ್ರೀಮಂತರು. ಅವರ ಅಂತಸ್ತಿಗೆ ತಕ್ಕ ಹಾಗೆ ಮಾಡಿಕೊಡಬೇಕು. ಅಮ್ಮ ನಿಗೆ ನಿಜವಾದ ವಿಷಯ ಹೇಳಬೇಡಿ. ಹೋದರೆ ನನ್ನ ಪಾಲಿನ ಹಣವೇ ತಾನೇ ? ಎಂದು ರಾಗ ಹಾಡಿದೆ. ಲಲಿತನ ಮದುವೆಗೆ ಆರೂವರೆ ಲಕ್ಷ ಖರ್ಚು ಮಾಡಿದೆ. ಆದರೆ ನಿನ್ನ ಭಾವನಿಂದ ನಿನಗೆ ಆರು ಲಕ್ಷ ರೂಗಳ ಸೊಗಸಾದ ಬಂಗ್ಲೆ, ಕಾರು, ಎರಡು ಲಕ್ಷ ರೂಗಳ ಚಿನ್ನ ಸಿಕ್ಕಿತು. ಇಷ್ಟು ಶ್ರೀಮಂತಿಕೆ ತಂದ ಹುಡುಗಿ ಅತ್ತೆಗೆ ಒಂದು ಚೂರು ಹೊಂದಿಕೊಳ್ಳಲಿಲ್ಲ. ಜಯಳದು ಸ್ವಲ್ಪ ಹಟದ ಸ್ವಭಾವ. ಸೊಸೆಯನ್ನು ದೂರುತ್ತಲೆ ಹೋದಳು. ಈ ಸೊಸೆಯೂ ಆ ಅತ್ತೆಗೆ ಹೆದರದೇ—ಇದ್ದೂರಲ್ಲೇ ಶ್ರೀಮಂತ ತಂದೆ ತಾಯಿ ಪ್ರೀತಿಸುವ ಪತಿ ಇದ್ದಾನೆ ಎಂದು ಅತ್ತೆಯನ್ನು ಧಿಕ್ಕರಿಸಿ ನಡೆದಳು. ಇದರ ಬಗ್ಗೆ ನಾನು ಯಾರನ್ನು ದೂರಲ್ಲ.

ಆದರೆ ತಾಯಿ ಪ್ರೀತಿಯಿಂದ ಕುಂಕುಮ ಹಚ್ಚಿ ತನ್ನ ಮಗಳಿಗೆ ತನ್ನ ಒಡವೆ ಕೊಟ್ಟರೆ ಅದನ್ನು ಕಿತ್ತುಕೊಳ್ಳಲು ನೀನು ಯಾರು ? ಅಂದು ಲಲಿತಳಿಗೆ ನಾಲ್ಕು ಲಕ್ಷ ರೂ ಖರ್ಚು ಮಾಡಿಸುವಾಗ .. ಹೋದರೇ ನನ್ನ ದುಡ್ಡೇ ತಾನೇ ಎಂದವನು....ಈಗೇಕೇ ಎರಡೂವರೆ ಲಕ್ಷಕ್ಕೆ ಹಾಗಾಡಿದೆ ? ಅಂದು ನಿನಗೆ ಲಲಿತಳ ಮೇಲೆ ಪ್ರೀತಿ ಇರಲಿಲ್ಲ. ಹರ್ಷನನ್ನು ಒಲಿಸಿಕೊಂಡು ಆ ಮೂಲಕ ಅವರ ಮೇಲೆ ನಮ್ಮ ಶ್ರೀಮಂತಿಕೆ ಪ್ರಭಾವ ಬೀರಿ ಅವರ ಚಿಕ್ಕಪ್ಪನ ಮಗಳನ್ನು ಪಡೆಯುವುದು. ಹೌದು ತಾನೆ ?" ಎಂದರು.

"ನಿಮಗೆ ಅಮ್ಮನ ಹಾಗೆ ತಲೆ ಕೆಟ್ಟಿದೆ. ಏನೇನೋ ಮಾತಾಡಬೇಡಿ ಅಪ್ಪಾ...." ಎಂದು ಕೂಗಿದ, ರಾಜಣ್ಣ.

"ಹೆಂಡತಿ ಗುಲಾಮಾ....ನನಗಲ್ಲ ತಲೆ ಕೆಟ್ಟಿರುವುದು ನಿನಗೆ. ನಾಳೆ ಲಾಯರನ್ನ ಕರಿಸಿ ಪರಿಮಳೆಗೆ ಅಧಿಕೃತವಾಗಿ ಈ ಒಡವೆ, ಹಾಗು ಬ್ಯಾಂಕಿನಿಂದ ಎರಡು ಲಕ್ಷ ಕೊಡಿಸುತ್ತೇನೆ ಮುಂದೆ ನಿಮ್ಮಿಬ್ಬರಿಂದ ಅವಳಿಗೆ ತೊಂದರೆ ಬರಬಾರದು. ಲಲಿತನಿಗೆ ಅವಳ ಮದುವೆಯಲ್ಲೇ ಆರೂವರೆ ಲಕ್ಷ ಕೊಡಲಾಗಿದೆ. ಚಿನ್ನ, ಕಾರು, ಸೈಟ್ ಇತ್ಯಾದಿ ರೂಪದಲ್ಲಿ, ನಿಮ್ಮಮ್ಮನ್ನ ಎದುರು ಮೊನ್ನೆ ನಾಲ್ಕು ಲಕ್ಷಾ ಜಾಸ್ತಿ ಎಂದು ಹೇಳಿದರೆ ಗದ್ದಲ ಮಾಡುತ್ತಾಳೇ, ಎಂದು ಎರಡೂವರೆ ಲಕ್ಷಾ ಮಾತ್ರ ಜಾಸ್ತಿ ಎಂದಿದ್ದೆ. ಅಲ್ಲಿಗೆ ಹೆಣ್ಣು ಮಕ್ಕಳಿಬ್ಬರಿಗೆ ಆರೂವರೆ ಲಕ್ಷಾ ಮುಟ್ಟಿದ ಹಾಗಾಗತ್ತೆ. ನಿನಗೆ

ಆರು ಲಕ್ಷಾ ಬೆಲೆ ಬಾಳೊ ಈ ಬಂಗ್ಲೆ, ಬ್ಯಾಂಕಲ್ಲಿ ಉಳಿದ ಎರಡು ಲಕ್ಷ ನಮ್ಮ ನಂತರ ನಿನಗೆ" ಎಂದು ಮಗನಿಗೆ ನುಡಿದರು.

ಲಲಿತ ಬೇಸರದಿಂದ—"ಇರ್ಲಿ ಬಿಡಣ್ಣಾ ನಿನಗೇನು ಕಡಿಮೆ ಆಗಿದೆ? ತಿಂಗಳಿಗೆ ಹತ್ತು ಸಾವಿರದವರೆಗೆ ಅರ್ನಿಂಗ್ ಇದೆ. ಚಂದಾ, ತಂದದ್ದೆ ಹತ್ತು ಲಕ್ಷ ಬೆಳದಿದೆ" ಎಂದಳು. ನಂತರ "ನಾಳೆ ಟ್ರಿಪ್ಪಿಗೆ ರೆಡಿಯಾಗಿ ಈ ಕದನ ಸಾಕು" ಎಂದಳು

ರಾಯರು ಮಗನಿಗೆ—"ನಿನ್ನ ಹೆಂಡತಿ ತಂದ ಬಂಗ್ಲೇ ತಿಂಗಳಿಗೆ ನಾಲ್ಕು ಸಾವಿರ ರೂ ಬಾಡಿಗೆ ಕೊಟ್ಟಿದ್ದಿ ಹೋಟಲಿನೋರಿಗೆ, ಹತ್ತು ವರ್ಷದ ಒಪ್ಪಂದ ಇದೆ. ಈ ನಾಲ್ಕು ವರ್ಷದಲ್ಲಿ ಆ....ಬಾಡಿಗೇನೇ ಎರಡು ಲಕ್ಷ ಕೂಡಿರಬಹುದಲ್ಲವಾ?" ಎಂದರು.

"ಏಕೆ ಅದರಲ್ಲಿ ಪರಿಮಳಿಗೆ ಪಾಲು ಕೊಡಿಸ್ತಿರೇನು?" ಎಂದ.

ಅವನ ಮಾತಿನ ವ್ಯಂಗ್ಯಕ್ಕೆ ಸಿಡಿದೆದ್ದ ಶ್ರೀ ಪಾದರಾಯರು—"ನಿನ್ನ ಸಂಪಾದನೇಲಾಗಲಿ, ನಿನ್ನ ಹೆಂಡತಿ ಕಡೆಯಿಂದ ತಂದ ದುಡಲ್ಲಾಗಲಿ ಒಂದು ಪೈಸೆ ನಾನು ಪಡೆದಿಲ್ಲ. ಈ ನಾಲ್ಕು ವರ್ಷದಿಂದ ಬ್ಯಾಂಕಿನ ಬಡ್ಡಿ ನನ್ನ ಪೆನ್‌ಷನ್‌ಯಿಂದಲೇ ಮನೇ ವೈಭವವಾಗಿ ನಡೀತಿದೆ. ಮಗಾ ಸೊಸೆಗೆ ನಾವು ಅನ್ನ ಹಾಕ್ತಿದ್ದೀವಿ ಮಗ ಸೊಸೆ ನಮಗೆ ಅನ್ನ ಹಾಕ್ತಿಲ್ಲ." ಎಂದು ನಿಲ್ಲಿಸಿದರು.

ರಾಜೇಶ ಬೇಸರದಿಂದ-"ಮತ್ತೆ ನೀವು ಅಮ್ಮನ ರಾಗವೇ ತೆಗೆದಿರಿ. ಹೆಂಡತಿ ಎದುರಿಗೆ ನೀವು ಹೀಗೆ....ಮಾತಾಡಿದರೇ ನನಗೆ ಎಷ್ಟು ಬೇಸರ ವಾಗತ್ತೆ ಗೊತ್ತ?" ಎಂದು "ತೀರ ನೀವು ಹೀಗಾಡಿ ನೋಯಿಸಿದರೇ ನಾನು ಬೇರೆ ಮನೆಗೆ ಹೋಗ್ತೀನಿ" ಎಂದ.

ರಾಯರು ಕಟುವಾಗಿ—"ಬೇರೆ ಮನೆಗೆ ಹೋಗೋದು ಬಿಡೋದು ನಿನ್ನ ಇಷ್ಟ. ನಾಳೆ ನಿಮ್ಮ ಜಾಲಿ ಟ್ರಿಪ್ ನಿಲ್ಲಿಸಬೇಕು. ಲಲಿತನಿಗೆ ನಾನು ಕಟ್ಟುನಿಟ್ಟು ಮಾಡಲ್ಲ. ಅವಳು ಬೇರೆ ಮನೆ ಹುಡುಗಿ. ಆದರೆ ನೀನು ಮನೆ ಯಜಮಾನ ಆಗಿ ತಂಗಿ ಬಾಣಂತನಕ್ಕೆ ಬಂದಾಗ ದೂರಾ ಓಡಬಾರದು. ಇನ್ಮೇಲೆ ತಿಂಗಳಿಗೆ ಎರಡು ಸಾವಿರ ಮನೆಗೆ ಕೊಡಬೇಕು. ಹಾಗಿದ್ರೆ ಮನೆ ನಿನ್ನ ಹೆಸರಿಗೆ ಬರೀತೀನಿ. ನೀನು ಈ ವಿಷಯಗಳಿಗೆ ಅವಿಧೇಯನಾಗಿ ತೀರ ಹೆಂಡತಿ ದಾಸನಾಗಿ, ತಾಯಿನ್ನ ಧಿಕ್ಕರಿಸ್ತಾ ನಡೆದರೇ ನೀನು ಬೇರೆ ಮನೆಗೆ

ಹೋಗು. ನಿನ್ನನ್ನ ಹೊರ ಹಾಕಿ ಆಸ್ತಿ ಕೊಡಲ್ಲ ಅಂದರೇ....ಅವಳಿಗೂ ಅವನ ಅವಿಧೇಯತೆಗೆ ಶಿಕ್ಷೆ ಕೊಟ್ರಲ್ಲ ಅಂತ ಸಂತೋಷವಾಗತ್ತೆ. ಅವಳ ಕಾಯಿಲೆಗಳು ಚೆನ್ನಾಗಿ ವಾಸಿಯಾಗುತ್ತೆ" ಎಂದರು.

"ಅಯ್ಯೋ ! ಇವರ ಆಸ್ತಿ ಯಾರಿಗೆ ಬೇಕು ? ನಮ್ಮಪ್ಪಾ ನನ ಗೇನು ಕಡಿಮೆ ಮಾಡಿದ್ದಾರೆ ? ಆ ಅತ್ತೆಗೆ ಅವಿಧೆಯಳಾಗಿರಲಿಕ್ಕೆ ನನಗೆ ಸಾಧ್ಯವಿಲ್ಲಾರಿ ?" ಎಂದಳು ಚಂದ್ರಕಲ.

"ಹಾಗಾದರೆ ಹೊರಟು ಬಿಡಿ. ಗೋವಿಂದ ನನಗೆ ವಿಧೇಯನಾಗಿದ್ದಾನೆ. ಅವನಿಗೆ ಈ ಮನೆ ಬರೆದು ಕೊಡ್ತೀನಿ. ಅಳಿಯ ಮಗಳ ಆಶ್ರಯದಲ್ಲಿರ್ತೀವಿ? " ಎಂದರು.

ರಾಜಣ್ಣಾ ಬಹು ಹೊತ್ತು ತಲೆ ತಗ್ಗಿಸಿ ಕೂತಿದ್ದ. "ಅಪ್ಪಾ....ನಾನು ಈ ಮನೆಯಿಂದ ದೂರ ಹೋಗಲಾರೆ" ಎಂದು ಬಂದು ತಂದೆಯ ಕಾಲು ಹಿಡಿದ. ರಾಯರು ಬಿಗುವಾಗಿ—

"ನಾಳೆ ಪ್ರಯಾಣಾ ಕ್ಯಾನ್ಸಲ್ ಮಾಡು. ಚಂದ್ರಾ ನೀನು ಮನೆ ಯಜಮಾನಿ. ಅಡಿಗೆ ಮನೆಗೆ ಹೋಗಿ ವೇದಮ್ಮನೋರ ಕೈಯಲ್ಲಿ ಅಡಿಗೆ.... ಏನೇನು ಮಾಡಿಸಬೇಕು ನೋಡ್ಕೊ. ವೀಣಂಗೆ ಹೇಳಿ....ಡೈನಿಂಗ್ ಟೇಬಲ್ ರೆಡಿ ಮಾಡಿಸು ಇಬ್ಬರು ನಾದಿನಿಯರು ಬಂದಿದ್ದಾರೆ. ಉಪಚರಿಸೋದು ನಿನ್ನ ಭಾರ" ಎಂದವರು ಪರಿಮಳೆ ಕಡೇ ತಿರುಗಿ—"ನಿಮ್ಮಮ್ಮ ನಿನಗೆ ಈ ಕೋಣೆ ಸಿದ್ದ ಪಡಿಸಿದ್ದಾಳೆ. ಹೋಗಿ ವಿಶ್ರಾಂತಿ ತಗೋಮ್ಮ ವೇದಮ್ಮ ನಿಗೆ ಹೇಳಿ ಬಾದಾಮಿ ಹಾಲು ಕಳಿಸ್ತೀನಿ. ಒಡವೆ ಪೆಟ್ಟಿಗೆ ನಿನ್ನ ರೂಮ- ಲ್ಲಿರೊ ಗಾಡ್ರೇಜ್ ಬೀರೂಲಿ ಇಟ್ಟು, ಲಾಕ್ ಮಾಡು" ಎಂದರು.

ಚಂದ್ರಕಲ ಮಂತ್ರಮುಗ್ಧಳಂತೇ ಅಡಿಗೆ ಮನೆ ಕಡೆ ಹೋದಳು. ಲಲಿತ ಎದ್ದು—"ನಾನು ರಾತ್ರಿ ಊಟಕ್ಕೆ ನಿಲ್ಲಲ್ಲಪ್ಪಾ....ಹೋಗ್ತೀನಿ. ಹಾಗಾ ದರೇ ನೀನು ನಾರ್ಥ್ ಟೂರ್‌ಗೆ ಬರಲ್ವೇನಣ್ಣಾ....?" ಎಂದಳು.

ರಾಯರು ನಕ್ಕು—"ನಿನ್ನ ಜೊತೆ ನಾರ್ಥ್ ಟೂರಿಗೆ ಬಂದರೆ ಎಂಟು ಲಕ್ಷ ರೂ ಗಳ ಆಸ್ತಿ ಕಳ್ಕೋತಾನೆ. ಅವನು ಬರಲ್ಲಮ್ಮ" ಎಂದರು. ಅಣ್ಣನ ಮುಖ ಒಂದು ನಿಮಿಷ....ನೋಡಿ ಲಲಿತ ಅಡಿಗೆ ಮನೆ ಕಡೆ ನಡೆದಳು. ರಾಜೇಶನೂ ಅಡಿಗೆ ಮನೆಗೆ ಅವರನ್ನು ಹಿಂಬಾಲಿಸಿದ.

ಒಡವೆ ಪೆಟ್ಟಿಗೆ ಹಿಡಿದು ತಂದೆಯ ಬಳಿ ಬಂದ ಪರಿಮಳಾ—"ಇದೆಲ್ಲಾ

ಏನಪ್ಪಾ ? ಅಮ್ಮ ಕೊಟ್ಟಳೂಂದರೂ ನನಗೆ ತೆಗೆದು ಕೊಳ್ಳೋಕ್ಕೆ ಭಯ ವಾಗತ್ತೆ" ಎಂದಳು.

"ಇಲ್ಲ. ನಿಜವಾಗಿ ಲಲಿತ, ರಾಜೇಶನ್ನ ನಾನು ಪ್ರೀತಿಸಿದಷ್ಟು ನಿನ್ನ ಪ್ರೀತಿಸ್ತಿರಲಿಲ್ಲ. ನಿಮ್ಮಮ್ಮನ ಮುದ್ದಿನ ಮಗಳು ನೀನು. ನಮ್ಮ ಅಂತ ಸ್ತಿಗೆ ಕಡಿಮೆ ಆದ ಒಂದು ಹುಡುಗನ್ನ ಪ್ರೀತಿಸಿ ಮದುವೆ ಆಗಿ ಹೋದವ ಳೂಂತ ನಿನ್ನ ಮೇಲೆ ಅಸ್ಸಮಾಧಾನವೂ ಇತ್ತು. ಆದರೆ ಈ ದಿನ ನನಗೆ ಅವರಿಬ್ಬರ ಕೆಟ್ಟ ಗುಣಾ ದಿಗ್ಭ್ರಮೆ ಆಯಿತು. ನನ್ನ ಪಾಲಿನ ಆರು ಲಕ್ಷ ಲಲಿತೆಗೆ ಸಲ್ಲಲಿ ಅಂತ ಹರ್ಷನಿಗೆ ಗುಟ್ಟಾಗಿ ಸಿಕ್ಕಾಪಟ್ಟೆ ವರದಕ್ಷಿಣೆ ಕೊಡಿಸಿದ.

ಹರ್ಷನ ಬೆಂಬಲ ಗಳಿಸಿ ಅತಿ ಶ್ರೀಮಂತರಾದ ಅವರ ಚಿಕ್ಕಪ್ಪನ ಮಗ ಳಾದ ಈ ಹುಡುಗೀನ್ನ ವಿವಾಹವಾಗಿ ಹತ್ತು ಲಕ್ಷದವರಿಗೆ ಬಳುವಳಿ ಪಡೆದ. ನನ್ನ ಸುಮಾರು ಹನ್ನೆರಡು ಲಕ್ಷಾ ಆಸ್ತಿ ತನ್ನದೇ ಅಂತ ಭ್ರಮಿಸಿದ್ದನೇನೊ ? ನಾನು ಎಲ್ಲಾ ಅವನಿಗೆ ಕೊಡೋನಿದ್ದೆ. ಆದರೆ ಈ ದಿನ ನಿನ್ನ ತಾಯಿ ಅಳ್ತ

ಲಲಿತನಿಗೆ ಅಷ್ಟೆಲ್ಲಾ ಕೊಟ್ರಿ. ಈ ಹುಡುಗಿ ಗಂಡನ ಜೊತೆ ಹಗಲು-ರಾತ್ರಿ ನಾಲ್ಕು ವರ್ಷ ದುಡಿದರೂ ಒಂದು ಸ್ವಂತ ಮನೆ ಕಟ್ಟಿಸ್ಲಿಕ್ಕಾಗಲಿಲ್ಲ ಎಂದದ್ದು ಕರಳು ಚುರುಕ್ಕೆಂದಿತು ಅವಳು ಒಡವೆ ಕೊಟ್ಟಾಗ ಒಬ್ಬ ಶ್ರೀಮಂತನ ಪತ್ನಿಯಾಗಿ ಅವಳಿಗೆ-ತನ್ನ ಸ್ವಂತ ಮಗಳಿಗೆ ಅಷ್ಟು ಕೊಡಲಿಕ್ಕೆ ಅಧಿಕಾರ ಇದೇ ಅಂತ ಸುಮ್ಮನಿದ್ದೆ. ಲಲಿತ, ರಾಜೇಶ ಸುಮ್ಮನಿದ್ದರೇ ನನ ಗಷ್ಟು ಪರಿಣಾಮವಾಗ್ತಿರಲಿಲ್ಲ.

ಆದರೆ ರಾಜೇಶನ ಅತಿ ಸ್ವಾರ್ಥ, ಲಲಿತಳ ಕೆಟ್ಟ ವಿದ್ಯೆ ನನ್ನ ಕೆರಳಿಸಿತು.

"ವಾಪಸ್ ಕೊಡು, ಅಮ್ಮ ತಲೆ ಕೆಟ್ಟವಳು. ಅವಳು ಕೊಟ್ಟ ಳೂಂತ ತಗೋತಾರ ? ಎಂದು ಧೂರ್ತತನ ಮಾಡಿದ ಅವನ ಕೆಟ್ಟ ವಿದ್ಯೆ ನನಗ ಕೋಪಾ ಬಂತು. ಅದಕ್ಕೆ ಪೂರಕವಾಗಿ ಲಲಿತಳ ಮಾತು. ನೀನು ಹೆದರಿಕೊಂಡು ವಾಪಸು ಕೊಟ್ಟಾಗ ನನ್ನ ಕರಳು ಚುರಕ್ ಅಂತು. ರಾಜೇಶನಿಗೆ ತಿಂಗಳಿಗೆ ಹತ್ತು ಸಾವಿರ ಸಂಪಾದನೆ ಇರೋ ಉದ್ಯೋಗ ಇದೆ. ಹೆಂಡತಿ ಕಡೇದು ಹತ್ತು ಲಕ್ಷ ಆಸ್ತಿ. ಈ ಒಡವೆ ನಿನ್ನ ಪಾಲಿಗೆ ಬಿಟ್ಟಿದ್ದರೂ ನನ್ನ ಕಡೆಯ ಎಂಟು ಲಕ್ಷ ರೂಗಳ ಆಸ್ತಿಯೂ ಅವನಿಗೆ ಸೇರ್ತಿತ್ತು. ಆದರೂ ಅವನ ಧೂರ್ತತನ, ತಾಯಿಯ ಒಡವೆಗಳು ತನ್ನ ಹೆಂಡತಿಯದೆಂದು ಅವನು

ಹಕ್ಕು ಸಾಧಿಸೋದು ನನಗೆ ಕೋಪಾ ಬಂತು. ಈ ತಂದೆ ತಾಯಿ ಇನ್ನೆಷ್ಟು ದಿನ ? ಅಣ್ಣನ್ನ ಓಲೈಸಬೇಕು, ಎಂಬ ಲಲಿತಳ ವಾಕ್ಯ ನನ್ನ ವ್ಯೈ ಉರಿಸಿತು. ಆರ್ಥಿಕವಾಗಿ, ದೈಹಿಕವಾಗಿ ನಾನು ಬಲಿಷ್ಠನಾಗಿದ್ದೀನಿ. ಇನ್ನು ನನಗೆ ಅರವತ್ತೆರಡು ವರ್ಷ. ರಿಟೈರಾದ ನಾಲ್ಕು ವರ್ಷಕ್ಕೆ ನನ್ನ ಮೂಲೆಗೆ ಕೂಡಿಸಲಿಕ್ಕೆ....ನೋಡ್ತಾರಲ್ಲ, ಅಂತ ನನ್ನ ಅಧಿಕಾರ ಚಲಾಯಿಸಿದೆ. ತಪ್ಪಾದರು" ಎಂದರು.

ಪರಮಳ ಹೆದರುತ್ತ—"ಆದರೂ ಆಸ್ತಿ ಕೊಡಲ್ಲ. ಮನೆ ಬಿಟ್ಟು ಹೋಗೂಂತ ನೀವೇದಾಗ ಅವನೆಲ್ಲಿ ಮನೆಬಿಟ್ಟು ಹೋಗ್ತಾನೋಂತ ಭಯವಿತ್ತಪ್ಪ" ಎಂದಳು.

"ನನಗು ಈ ಹಿಂದೆ ಅವನ ಮೇಲೆ ಆ ಥರ ಭಯವಿತ್ತು ಹೆಂಡತಿ ಮನೆ ಕಡೆ ಆಸ್ತಿ ಧಂಡಿಯಾಗಿದೆ. ನಾವು ನಮ್ಮ ಅಧಿಕಾರ ಚಲಾಯಿಸಲಿಕ್ಕೆ ಹೋದರೇ ಅವನನ್ನ ಎಲ್ಲಿ ಕಳ್ಕೋಬೇಕಾಗತ್ತೋ ಅಂತ ಹೆದರಿದ್ವಿ. ಆದರೆ ಈ ದಿನ ಎರಡು ಲಕ್ಷ ರೂ ಗಳ ಒಡವೆಗೆ ಅವನು ನಿನ್ನ ಬಳಿ ವಾಪಸ್ ಪಡೆಯಲು ಧಾವಿಸಿದಾಗ ಥಟ್ಟನೆ ನನಗೆ—ಇವನು ಲಲಿತಳಿಗೆ ನಾಲ್ಕು ಲಕ್ಷ ಉದಾರತನವನ್ನ ತೋರಿದ್ದು, ಸ್ವಾರ್ಥಕ್ಕೆ. ಹತ್ತು ಲಕ್ಷ ಗಳಿಸ್ಲಿಕ್ಕೆ ಎಂಬುದು ಅರಿವಾಯ್ತು. ಇಂಥಾ ಅಯೋಗ್ಯನ್ನ ದುಡ್ಡಿನ ಬಲದಿಂದಲೆ ಬದರಿಸಬೇಕನಿಸೋ ಹೊಸ ವಿಚಾರ ಹುಟ್ಟಿತು. ಗಂಡಾ ಹೆಂಡತಿ ಜಯನಿಗೆ ಒಂದು ಚೂರು ಹೆದರ್ತಿರಲಿಲ್ಲ. ಲಂಗು ಲಗಾಮಿಲ್ಲದ ಕುದುರೆಗಳ ಹಾಗಿದ್ದರು. ಜಾಸ್ತಿ ನಮ್ಮತನ ತೋರಿಸಿದರೇ ಎಲ್ಲಿ ಬೇರೆ ಹೋಗ್ತಾನೋ ಅಂತ ಹೆದರಿದ್ದೆ, ಆದರೆ ಪಾಪನ ಮನೆಯವರ ಮುಂದೆ ತಂದೆಯಿಂದ ಓಡಿಸಲ್ಪಟ್ಟ ನಿರ್ಗತಿಕನಾಗಿ ಹೋಗಿ ನಿಂತರ ಬೆಲೆ ಇರಲ್ಲ ಅಂತ ಅವನಿಗೂ ಗೊತ್ತಿದೆ. ಹೀಗಾಗಿ ಬಂದು ಕಾಲು ಹಿಡಿದ. ಒಟ್ಟಿನಲ್ಲಿ ಆಕಸ್ಮಿಕವಾಗಿ ಈ ಘಟನೆ ಆದದ್ದು ಒಳ್ಳೆಯದು. ನನಗು ಕಣ್ತೆರೆದ ಹಾಗಾಯಿತು. ನಿನಗು ನ್ಯಾಯ ಸಿಕ್ಕಿತು" ಎಂದರು.

* * * *

ಒಂದು ವಾರದಲ್ಲಿ ಜಯಮ್ಮ ಸರಿ ಹೋದರು ಮನೆಯಲ್ಲಿ ಅಗಾಧ ಬದಲಾವಣೆ. ಮಗ ಸೊಸೆ ಜಾಲಿ ಟ್ರಿಪ್ಪಿಗೆ ಹೊರಟಿಲ್ಲ. ಚಂದ್ರಕಲ ದಿನ್ಯಾ ಆತ್ಮೀಯವಾಗಿ ಅತ್ತೆ, ನಾದಿನಿಯರೊಂದಿಗೆ ಊಟಕ್ಕೆ ಕೂಡುತ್ತಿದ್ದಳು. ಗೋವಿಂದನಿಗೆ ಮನೆ ಕಟ್ಟಲು ರಾಯರು ಹಣಾ ಕೊಟ್ಟಾಗ ದಿಗ್ಭ್ರಾಂತ ನಾಗಿದ್ದ.

"ಮನ ಕಟ್ಟಿಸಿ ಉಳಿದ ಹಣಾ ಪೋಸ್ಟಾಫೀಸ್‌ನ ಡಿಪಾಸಿಟ್‌ನಲ್ಲಿಡು. ಎಳೇ ಮಗೂನ್ನ ಕರಕೊಂಡು ಅವಳೇನು ಕೆಲಸ ಮಾಡ್ತಾಳೆ. ತಿಂಗಳಿ ಗೊಂದು ಮೂರು ಸಾವಿರ ಅವಳ ಹೆಸರಲ್ಲಿ ಬರೋ ಹಾಗೆ ಇಡು. ಎಂದರು ಜಯಮ್ಮ. ಚಿನ್ನ ಹಾಗೂ ಕ್ಯಾಶ್ ಎರಡು ಸೇರಿ ನಾಲ್ಕೂವರೆ ಲಕ್ಷ ಪರಿ ಮಳೆಗೆ ಆಕಸ್ಮಿಕವಾಗಿ ಬಳುವಳಿ ಸಿಕ್ಕಾಗ ಗೋವಿಂದನಿಗೆ ದಿಗ್ಭ್ರಮೆ.

ಜಯಮ್ಮನಿಗೆ ಮಗಳ ಮೇಲೆ ಎಷ್ಟೇ ಪ್ರೀತಿಯಿದ್ದರೂ ಮಗಳಿಗೆ ಬಗೆ ಬಗೆ ತಿಂಡಿ ಮಾಡಿಸಿ ಕೊಡುವರು. ಸಾವಿರ, ಎಂಟುನೂರು ತಿಂಗಳ ಖರ್ಚಲ್ಲಿ ಉಳಿದರೇ ಸೀರೆ, ಒಡವೆ ತೆಗೆದು ಕೊಡುವರು. ಪರಿಮಳೆ ಬಳಿ ಬಗೆ ಬಗೆ ಸೀರೆಗಳು ಥಂಡಿಯಾಗಿದ್ದವು. ವಾಲೆ, ಜುಂಕಿ, ನೆಕ್ಲೆಸ್, ಎರಡೆಳೆ ಅವ ಲಕ್ಕಿ ಸರ ನಾಲ್ಕು ನಾಲ್ಕು ಮೆಣಸಿನ ಬಳೆಗಳು.. .ಎರಡು ಉಂಗುರಗಳಿದ್ದವು.

ತಂದೆ ಕೊಟ್ಟ ಸೈಟಿನಲ್ಲ ಮನೆ ಕಟ್ಟಿಸಬೇಕೆಂದು ನಾಲ್ಕು ವರ್ಷದಿಂದ ಹಣಾ ಕೂಡಿ ಹಾಕಿ ಸೋತಿದ್ದಳು. ಕಡಗೂ ಅವಳ ಕನಸು ನನಸಾಯಿತು. ಒಂದೂವರೆ ಲಕ್ಷ ರೂ ಕಡಿಮೆ ಬಿದ್ದ ಹಣಾ ಇನ್ನು ಎರಡು ವರ್ಷ ಕೂಡಿಡ ಬೇಕು. ಆ ಹೊತ್ತಿಗೆ ಸಿಮೆಂಟ್ ಕಬ್ಬಿಣದ ಬೆಲೆ ಎಷ್ಟು ಏರಿರುತ್ತದೊ ? ಎಳೇ ಮಗುವನ್ನು ಬಿಟ್ಟು ಶಾಲೆ, ಟ್ಯುಟೋರಿಯಲ್ ಹೋಗಬಲ್ಲೆನೆ ? ಎಂಬ ಎಲ್ಲಾ ಚಿಂತೆಗೆ ಪೂರ್ಣ ವಿರಾಮ ಹಾಡದಂತೇ ಅನಿರೀಕ್ಷಿತವಾಗಿ ಕೈತುಂಬಾ ಹಣಾ ಸಿಕ್ಕಿತ್ತು. ಜೊತೆಗೆ ಲಲಿತ ಪ್ರೇಮ ವಿವಾಹ ಎಂದು ಮೊದಲಿನಂತೇ ತನ್ನ ಬಳಿ ಜಂಭಾ ಕೊಡೆಯುವ ಹಾಗಿಲ್ಲ. ಆರು ಲಕ್ಷ ರೂಗಳ ಬಳುವಳಿ ಸ್ವೀಕರಿಸದೇ ಅವಳನ್ನು ವಿವಾಹವಾಗಿದ್ದಾನೆ. ಗಂಡು ಮಗನಾದ ತನ್ನ ಪಾಲಿಗೆ ಸೇರಬೇಕಾದ ದುಡ್ಡು, ನಾಲ್ಕು ಲಕ್ಷ ಕಡಿಮೆಯಾದರೂ ಪರವಾಗಿಲ್ಲ. ಅವರು ಕೇಳಿದ್ದು ಕೊಡಿ, ಎಂದು ಅಣ್ಣಾ ಗುಟ್ಟಾಗಿ ಕೊಡಿಸಿದ್ದಾನೆ. ಲಲಿತ ಓಡಾಡುವ ಕಾರು ತಂದೆ ಅಳಿಯನಿಗೆ ತೆಗೆದು ಕೊಟ್ಟದ್ದು.

"ನೋಡಿ ಇಷ್ಟು ದಿನ ಎಲ್ಲಾ ಗುಟ್ಟು ಗುಟ್ಟನಲ್ಲೇ ಇತ್ತು. ನಾಲ್ಕು

ವರ್ಷ ಆದರೂ ಅಮ್ಮನಿಗೆ ಸಹ ಗೊತ್ತಿಲ್ಲ. ಮೊನ್ನೇ ಅಪ್ಪನ ಹಳೇ ಡೈರಿ ಅಕಸ್ಮಾತ್ ನೋಡಿ ಜಗಳ ತೆಗೆದಳು. ಅಷ್ಟೆಲ್ಲಾ ಅಮ್ಮ ಕೆದಕಿ ಕೇಳಿದರೂ ನಮ್ಮ ತಂದೆ ಎರಡು ಲಕ್ಷ ಜಾಸ್ತಿ ಕೊಡಬೇಕಾಯಿತು ಅಂದಿದ್ದರಂತೆ. ನಿನ್ನೆ ಲಲಿತ ಇದ್ದಕ್ಕಿದ್ದ ಹಾಗೆ ಜಾಲಿ ಟ್ರಿಪ್ ಅಂತ ಅವರುಗಳನ್ನ ಕರಿಯಲಿಕ್ಕೆ ಬಂದಳು. ಅವರಿಬ್ಬರು ಎರಡು ತಿಂಗಳು ಜಾಲಿ ಟ್ರಿಪ್ ಅಂತ ನಾರ್ಥ್ ಟೂರ್ ಅಂತ ಹೊರಟು ನಿಂತರು. ಆಗ ಅಮ್ಮ ಜಗಳ ತೆಗೆದು....ರಹಸ್ಯ ಸ್ಫೋಟ ಮಾಡಿದ ಹಾಗೆ ಈ ದುಡ್ಡು ಕೊಡಿಸಿದಳು. ಅಷ್ಟು ಚಿನ್ನದ ಒಡವೆ ತಂದು ಕೊಟ್ಟಾಗಲು ನಂಗೆ ದಕ್ಕುತ್ತೆ ಅಂತ ಗ್ಯಾರಂಟಿ ಇರಲಿಲ್ಲ.

ಆದರೆ ಲಲಿತ ಆಡಿದ ಒಂದು ಅಹಂಕಾರದ ಮಾತಿಗೆ ಅಪ್ಪನೇ ಕೆರಳಿ ಪೂರ್ತಿ ರಹಸ್ಯ ಬಹಿರಂಗ ಮಾಡಿಸಿದರು. ಎರಡು ಲಕ್ಷ ಅಮೌಂಟ್ ಸಿಕ್ಕಿತು. ನಿಜಕ್ಕು ಇದೆಲ್ಲಾ ವಿಸ್ಮಯ ಅನಿಸತ್ತೆ. ಕನಸು ಮನಸಲ್ಲೂ ಗೊತ್ತಿರಲಿಲ್ಲ" ಎಂದಳು.

"ನಮ್ಮ ತಂದೆ ಶ್ರೀ ಸೂಕ್ತ ಮಂತ್ರ ಜಪ, ಹೋಮ ಮಾಡಿದ್ದು ಫಲಿಸಿದೆ ಅನ್ನು...." ಎಂದ ಗೋವಿಂದ ನಗುತ್ತ.

"ಓ ಮೈ ಗಾಡ್ ! ಅಲ್ಲಿಯವರೆಗೆ ನನ್ನ ಬುದ್ಧಿ ಓಡಲೇ ಇಲ್ಲ. ನಿಮ್ಮ ತಂದೆ ಶ್ರೀ ಸೂಕ್ತ ಜಪಾ ಹಿಡಿದಾಗ ಏನೋ ಒಂಥರ ನಂಬಿಕೆ ಹುಟ್ಟಿತ್ತು. ನಾಲ್ಕು ಲಾಟರಿ ಟಿಕೇಟ್ ಖರೀದಿಸಿದ್ದೆ. ಆದರೆ ಒಂದು ವಾರದ ನಂತರ ರಿಸಲ್ಟ್ ನೋಡಿದಾಗ....ಬಂದಿರಲಿಲ್ಲ. ಆದರೆ ಈಗ ಅನಿರೀಕ್ಷಿತವಾಗಿ ನಾಲ್ಕೂವರೆ ಲಕ್ಷ ರೂ ಲಾಭಾ ಆಗಿರೋದು ನೋಡಿದರೆ ಇದೆಲ್ಲಾ ಎಷ್ಟು ನಿಜ ಅನಿಸತ್ತೆ"

"ಹೀಗೆ ಬದುಕಿನಲ್ಲಿ ಚಿತ್ರ ವಿಚಿತ್ರ ತಿರುವು ನಡೆದು ಕೆಲವರಿಗೆ ಹಣಾ ಬಂದಿದೆ. ಶ್ರೀ ಲಕ್ಷ್ಮೀದೇವಿ ಮಹಿಮೆ ಸಾಧಾರಣವಲ್ಲ" ಎಂದ. ನಿಜಕ್ಕು ನಮ್ಮ ತಂದೆಗೆ ಮಗನ ಮೋಹ ಜಾಸ್ತಿ. ನನ್ನ ಹಣದಲ್ಲಿ ಐದು ಲಕ್ಷ ಇಬ್ಬರು ಹೆಣ್ಮಕ್ಕಳದು. ಉಳಿದ ಎಲ್ಲಾ ಆಸ್ತಿ ಮಗನಿಗೆ ಅಂತಾ ಇದ್ದರು. ಆದರೆ ಲಲಿತನ ಮದುವೆಗೆ ಅವನೇ ನಿಂತು ಆರೂವರೆ ಲಕ್ಷ ಕೊಡಿಸಿದ್ದಾನೆ ನಿಜಕ್ಕು ಲಲಿತನ ಅತ್ತೆ ಮಾವ ಅಂಥಾ ಶ್ರೀಮಂತರಲ್ಲ. ಅವರ ದೊಡ್ಡ ಮಗ ಕಂಟ್ರಾಕ್ಟರ್ ಆಗಿ ಚೆನ್ನಾಗಿ ಗಳಿಸಿ, ಬಂಗ್ಲೆ, ಕಾರು ಮಾಡಿಕೊಂಡಿದ್ದಾನೆ. ತಮ್ಮನ್ನ B.E. ಓದಿಸಿದ್ದಾನೆ. ಮೊನ್ನೆ ತಂಗಿ ಮದುವೇನು ಎರಡು ಲಕ್ಷ

ದವರಿಗೆ ಖರ್ಚು ಮಾಡಿ ಗ್ರ್ಯಾಂಡಾಗಿ ಮಾಡಿದ. ತಂದೆ ತಾಯಿ ಜೊತೆ ತಮ್ಮ, ತಮ್ಮನ ಹೆಂಡತಿ ಮಗನ್ನು ಇಟ್ಟುಕೊಂಡಿದ್ದಾನೆ. ಆತ ನಿಗು ಹೆಂಡತಿ ನಾಲ್ಕು ಮಕ್ಕಳಿದೆ. ಆತ ಸಂಪಾದಿಸಿದ ಆಸ್ತಿ ಆತನ ಹೆಂಡತಿ ಮಕ್ಕಳದು.

ಲಲಿತನ ಗಂಡನಿಗೆ B E, ಡಿಗ್ರಿ ಬಿಟ್ಟು ಏನು ಗತಿ ಇದೆ. ಅಪ್ಪಾ ಆರೂವರೆ ಲಕ್ಷ ಒಳಗೊಳಗೆ ಸುರಿದಿದ್ದರಿಂದ ಕಾರು, ಬಂಗ್ಲೆ, ಚಿನ್ನ ಇದೆ. ಆ ಬಂಗ್ಲೆ ಎಂಥಾದ್ದು ಈಗ ನಾವು ನಾಲ್ಕು ಲಕ್ಷ ರೂ ವೆಚ್ಚದಲ್ಲಿ ಕಟ್ಟಿಸ್ತಿದ್ದೀ ವಲ್ಲಾ ಅಂಥಾದ್ದು. ಅದನ್ನ ತಿಂಗಳಿಗೆ ಎರಡು ಸಾವಿರ ರೂಪಾಯಿ ಬಾಡಿಗೆಗೆ ಕೊಟ್ಟಿದ್ದಾರೆ. ಅವಳ ಗಂಡನಿಗೆ ಒಂದು ಆರು ಸಾವಿರ ರೂ ಬರತ್ತೆ. ಅವಳ ಭಾವನ ಮನೆ ಅಪಾರ ಐಶ್ವರ್ಯ ಅಂತು ಅವಳದಲ್ಲ. ಈಗ ನಾವು ಇರೋ ಮಟ್ಟದಲ್ಲೇ ಅವಳಿರ್ತಾಳೆ" ಎಂದಳು.

ಗೋವಿಂದ ನಗುತ್ತ—"ಅವಳ ಚಿಂತೆ ಬೇಡಾ ನೀನು ಇನ್ಮೇಲೆ ಸುಖ ವಾಗಿರು. ನಿನ್ನ ಬಾಣಂತನ ಮುಗಿಯೋ ಹೊತ್ತಿಗೆ ಮನೆ ಆಗತ್ತೆ. ಬ್ಯಾಂಕಲ್ಲಿ ಮೂರು ಲಕ್ಷ ರೂ ಇಡ್ತೀನಿ. ತಿಂಗಳಿಗೆ ಮೂರು ಸಾವಿರ ಬಡ್ಡಿ ಬರತ್ತೆ. ಜೊತೆಗೆ ನನ್ನ ಸಂಬಳ ಸಾಕಲ್ಲ" ಎಂದ.

"ಸಾಕು....ಸಾಕು...." ಎಂದಳು ಪರಿಮಳ.

ಸಿಸೇರಿಯನ್ ಹೆರಿಗೆಯಲ್ಲಿ ಮುದ್ದಾದ ಗಂಡು ಮಗನ ತಾಯಿ ಯಾದಳು ಪರಿಮಳ. ಮೂರು ತಿಂಗಳ ಬಾಣಂತನ ಮುಗಿಯುವ ಹೊತ್ತಿಗೆ ಚೇತರಿಸಿಕೊಂಡಳು. ಗೋವಿಂದ ಕಟ್ಟಿಸಿದ ಮನೆ ನಾಲ್ಕೂವರೆ ತಿಂಗಳಲ್ಲಿ ಪೂರ್ಣವಾಗಿತ್ತು ನಾಮಕರಣ ಹೂಡಿದಾಗ ಸೀತಮ್ಮ, ಹಯಗ್ರೀವ ಆಚಾರ್ಯರು, ಜಯಲಕ್ಷ್ಮಿ, ಅನಂತ ಶಾರದ ಅವಳ ಗಂಡಾ ಎಲ್ಲಾ ಎಂದಿದ್ದರು.

"ಮಾವಾ ಹೊಸ ಮನೆ ಗೃಹ ಪ್ರವೇಶೋತ್ಸವ ನೀವೇ ಮಾಡಿಸಬೇಕು. ಎಷ್ಟು ಬಗೆ ಶಾಸ್ತ್ರೋಕ್ತ ಹವನ ಹೋಮ ನಡಿಸಬೇಕೋ ಎಲ್ಲಾ ಮಾಡಿಸಿ" ಎಂದಳು.

"ಆಗಲ್ಲವಮ್ಮ...." ಎಂದರು ಆಚಾರ್ಯರು. ತನ್ನ ತವರು ಮನೆ ಗುಂಪಿನ ಆ ಬಳಗದಲ್ಲಿ ಅತ್ತೆ ಮಾವನಿಗೆ ಅವಳು ಜಾಸ್ತಿ ಉಪಚರಿಸಿದ್ದು ಗೋವಿಂದನಿಗೆ ಹೆಮ್ಮೆಯಾಗಿತ್ತು.

ಸೀತಮ್ಮನಿಗೂ ಈಗ ಅಂಥಾ ಬಡತನವಿರಲಿಲ್ಲ. ಮೊಮ್ಮಗನಿಗೆ ಎರಡು ತೊಲದ ಚಿನ್ನದ ಉಡಿದಾರ, ಪುಟ್ಟ ಪುಟ್ಟ ಕೈ ಬಳೆ ಹಾಕಿದರು. ತಾಯಿ ಜಯಮ್ಮ ಅವನ ಕೊರಳಿಗೆ ಒಂದೆಳೆ ಸಣ್ಣ ಚೈನ್, ಕಿವಿಗೆ ಒಂಟಿ ಮುರುವು ಮಾಡಿಸಿದರು. ವ ಎಂಬ ಹೆಸರಲ್ಲಿ ಮಗುವಿನ ಹೆಸರಿರಬೇಕೆಂದು ಶ್ರೀ ಹಯ ಗ್ರೀವ ಚಾರ್ಯರು ಹೇಳಿದ್ದರಿಂದ ಶ್ರೀ ವರಾಹ ವೆಂಕಟಕೃಷ್ಣ ಎಂದು ಮಗು ವಿಗೆ ಹೆಸರು ಇಟ್ಟರು. ವಿ. ವಿ. ಕೃಷ್ಣ....ಎಂದು ಶಾಲೆಯ ಹೆಸರು ಎಂದ ಗೋವಿಂದ.

ವರೂ....ವರೂ....ಎಂದು ಮಗನನ್ನು ಮುದ್ದಿಸುತ್ತಿದ್ದಳು.

"ನಮ್ಮ ತಿರುಪತಿ ವೆಂಕಪ್ಪನೇ" ಎನ್ನುತ್ತಿದ್ದರು ಸೀತಮ್ಮ. ಕೃಷ್ಣಾ ಎಂದು ಗೋವಿಂದ ದೂರದಿಂದ ಮಗನನ್ನು ಕೂಗಿದರೆ ಕಿಲಕಿಲ ನಗುತ್ತಿತ್ತು. ಮಗು. ನಾಮಕರಣ ವೈಭವವಾಗಿ ನಡಿಸಿ ಬೀಗಿತ್ತಿಗೆ ಸೀರೆ ಉಡುಸಿದರು ಜಯಮ್ಮ. ಸೀತಮ್ಮ ನಗುತ್ತ ನನ್ನ ಸೊಸೆಗೆ ಬಾಣಂತನ ಮಾಡಿದ್ದು ನೀವು. ನಾನು ನಿಮಗೆ ಸೀರೆ ಉಡಿಸಬೇಕು" ಎಂದು ಮಗ ತಂದಿದ್ದ ರೇಶ್ಮೆ ಸೀರೆ ಕುಪ್ಪುಸ ನೀಡಿದರು.

ನಾಮಕರಣ ಆದ ಎರಡು ತಿಂಗಳಿಗೆ ಸರಿಯಾಗಿ ಪರಿಮಳ, ಗೋವಿಂದ ಗೃಹ ಪ್ರವೇಶೋತ್ಸವ ಇಟ್ಟುಕೊಂಡರು. ಜಯಮ್ಮ ಐದನೆಯ ತಿಂಗಳು ವರಿಗೆ ಕಳಿಸಲ್ಲ ಎಂದಿದ್ದರು. ಲಲಿತಳ ಮಗನನ್ನು ಜಯಮ್ಮ ಜಾಸ್ತಿ ಎತ್ತಿ ಮುದ್ದಿಸಲಾಗಿರಲಿಲ್ಲ. ಅವರತ್ತೆ ಆ....ಮಗುವನ್ನು ತುಂಬಾ ಹಚ್ಚಿಕೊಂಡಿ ದ್ದರು. ಸೊಸೆ ಚಂದ್ರಕಲಾಳ ಮಗ ವೂ ಅವಳ ತವರಿನಲ್ಲೇ ಬೆಳೆಯು ತ್ತಿತ್ತು.

"ಚಂದ್ರಾ ಅತ್ತೆ ಮನೆಗೆ ಹೋದನೇಲೆ ನಮಗೆ ಭಣ ಭಣಾ ಅಂತಿತ್ತು. ಈಗ ಈ ಪುಟಾಣಿನ್ನ ನಾವೇ ಸಾಕ್ತೀವಿ" ಎಂದವರೆಲ್ಲಾ ಹೇಳುತ್ತಿದ್ದರು.

ಈಗ ಪರಿಮಳನ್ನ ಮಗನನ್ನು ಅವರು ಜಾಸ್ತಿ ಹೊಂದಿಕೊಂಡಿದ್ದರು. ಪರಿಮಳ ಈಗ ಚೆನ್ನಾಗಿ ಓಡಾಡುವ ಹಾಗಿದ್ದಳು ಗೃಹ ಪ್ರವೇಶೋತ್ಸವ ಮೂರು ದಿನ ವೈಭವವಾಗಿ ಇಟ್ಟುಕೊಂಡಳು. ಮೈಸೂರಲ್ಲೇ ಇದ್ದ ನೆಂಟರುಗಳು ಲಲಿತ, ಅವಳತ್ತಿಗೆ ಚಂದ್ರಕಲ ಶಾರದ, ಜಯಲಕ್ಷ್ಮಿ ಇಂಥಾವರೆಲ್ಲಾ ಬೆಳಗ್ಗೆ ಬಂದು ಸಂಜೆ ಹೋಗುತ್ತ ಇದ್ದರು. ಶಾಲೆಯವರು ಗೃಹ ಪ್ರವೇಶೋತ್ಸವದ ದಿನ ಬಂದು ಚಿರೋಟಿ ಹಾಲು ಕೀರಿನೂಟಾ ಉಂಡು ಹೋದರು.

"ಮನೆ ತುಂಬಾ ಚೆನ್ನಾಗಿದೇರಿ. ಅಂತು ನೀವು ಗೃಹ ಪ್ರವೇಶದ ಊಟಾ ಕೊಡಲಿಕ್ಕೆ ತಡ ಮಾಡಿದರೂ, ನಿಮ್ಮಗ ಹುಟ್ಟಿದ ಆರು ತಿಂಗಳಲ್ಲೇ ಗೃಹ ಪ್ರವೇಶದ ಊಟಾ ಮಾಡಿಸಿದ" ಎಂದು ತಮಾಶೆ ಮಾಡಿದರು. ಕಾಲೇಜು ಕೆಲಸಕ್ಕೆ ರಾಜಿನಾಮೆ ಕೊಟ್ಟ ಸುದ್ದಿ ಕೇಳಿದಾಗಂತು...."ಏನ್ರಿ ! ಮನೆ ಆಗ್ತಾಲೆ ಕಾಲೇಜ್ ಕೆಲಸಕ್ಕೆ ರಾಜಿನಾಮೆ ಕೊಟ್ರಿ. ಆರಾಮವಾಗಿ ಮನೇಲೆ ಕೂತು ಮಗನ್ನ ಆಡಿಸೋದೆ ಇನ್ಮೇಲೆ ಉದ್ಯೋಗವಾ ?" ಎಂದು ಟೀಕೆ ಮಾಡಿದರು. ಎಲ್ಲರ ಟೀಕೆ ಟಿಪ್ಪಣಿಗಳನ್ನು ನಗೆ ಮುಖದಿಂದ ಎದುರುಗೊಂಡಳು ಅವಳು. ಈಗವಳು ಜೀವನದಲ್ಲಿ ಗೆದ್ದಿದ್ದಳು. ಮುದ್ದಾದ ಮಗ, ಸೊಗಸಾದ ಮನೆ. ಆಚಾರ್ಯರು ಸೀತಮ್ಮನ್ನ ಮಾತ್ರ ಹದಿನೈದು ದಿನ ಮನೆಯಲ್ಲೇ ಇಟ್ಟುಕೊಂಡಳು "ಹೊಸ ಮನೆ ಶಾಂತಿಗೆ ಏನೇನು ಹವನ ಹೋಮ ಮಾಡ್ಬೇಕೋ ಎಲ್ಲಾ ಹೇಳಿ ಮಾವಾ....ಶಾಸ್ತ್ರೋಕ್ತವಾಗಿ ನೀವು ಹೇಳಿದ್ದಂಗೆ ಮಾಡ್ತೀವಿ" ಎಂದು ಹೇಳಿದಳು.

ಶ್ರೀಲಕ್ಷ್ಮಿ, ಮಹಾವಿಷ್ಣು, ಶ್ರೀ ಬ್ರಹ್ಮ ಸರಸ್ವತಿ, ಶ್ರೀ ಶಿವ-ಪಾರ್ವತಿಯರ ಬಗ್ಗೆ....ಮಹಾ ಪೂಜೆ ಹೋಮ, ಶ್ರೀ ಗಣಪತಿ ಹೋಮ, ಶ್ರೀ ಪವಮಾನ ಹೋಮ, ಶ್ರೀ ನವಗ್ರಹ ಹೋಮ, ಶ್ರೀ ಸುದರ್ಶನ ಹೋಮ ಹೀಗೆ ಸಾಂಗಿತವಾಗಿ, ದಿವಸಕ್ಕೆ ನೂರಾರು ಜನ ಬ್ರಾಹ್ಮಣರಿಗೆ ಊಟಾ ಮಾಡಿಸಿ, ಐದು ದಿನ ಶಾಸ್ತ್ರೋಕ್ತ ಕಾರ್ಯಕ್ರಮ ನಡಿಸಿದ್ದರು. ಶ್ರೀ ಸೂಕ್ತ ಹೋಮ, ಹವನ, ಜಪಾ, ಇನ್ನೊಂದ್ಸಲ ಇಟ್ಕೊಳ್ಳಿ ಮಾವ. ಹದಿನೈದು ದಿನ ನಮ್ಮ ಮನೇಲಿ ಇದ್ಬಿಡಿ" ಎಂದರು.

"ಇಲ್ಲಮ್ಮ ಅನಂತನ ಮನೆಗೆ....ಹೋಗಬೇಕು" ಎಂದು ರಾಯರು ರಾಗ ಹಾಡಿದರು. ಆದರೆ ಸೀತಮ್ಮನೇ ಗಂಡನಿಗೆ—"ಅನಂತನ ಮನೆಗೆ ಬರೋ ವರ್ಷ ಬಂದಾಗ ಹೋದರೇ ಆಯಿತು. ಈಗ ಇನ್ನೊಂದು

ಹದಿನೈದು ದಿನ ಗೋವಿಂದನ್ನ ಮಗನ್ನ ಆಡಿಸಬೇಕೂಂತ ಆಸೆ ಇದೇ....ಇಲ್ಲೀ ಇರೋಣಾ...." ಎಂದರು.

ಆಚಾರ್ಯರು ಹದಿನೈದು ದಿನ ಶಾಸ್ತ್ರೋಕ್ತವಾಗಿ ಶ್ರೀಲಕ್ಷ್ಮಿದೇವಿಗೆ ಶ್ರೀ ಸೂಕ್ತ ಜಪ ದಿನಕ್ಕೆ ಹನ್ನೆರಡು ಭಾರಿ ಮಾಡುತ್ತ ಹೋಮ, ಹವನು ಜಪಾ ನಡಿಸಿದರು. ಗೋವಿಂದ ತಾಯಿಗೆ ಮಡಿಯಲ್ಲಿ ಸಹಾಯ ಮಾಡ ತ್ತಿದ್ದ. ಆಕೆ ಅನ್ನ, ಪಾಯಸ, ಕೋಪ್ಪೆ, ನೈವೇದ್ಯಕ್ಕೆ ತಂದಿಡುತ್ತಿದ್ದರು.

ಕಡೆ ದಿನ ಅಡಿಗೆಯವರನ್ನು ಕರೆಸಿ ಹೋಳಿಗೆ, ಲಾಡು ಅಡಿಗೆ ಮಾಡಿಸಿ, ನೂರು ಜನದ ಊಟಾ ಮಾಡಿಸಿದರು.

ಆಚಾರ್ಯರು, ಸೀತಮ್ಮ ಊರಿಗೆ ಹೋಗುವಾಗ ಪರಿಮಳ....ಸೀರೆ ಖಣ, ಪಂಚೆ ಶಲ್ಯ ಕೊಟ್ಟದ್ದಲ್ಲದೇ ಅತ್ತೆ ಕೊರಳಿಗೆ ಎರಡೆಳೆ ಅವಲಕ್ಕಿ ಸರ ಹಾಕಿದಳು.

ಸೀತಮ್ಮ ತಬ್ಬಿಬ್ಬಾಗಿ—"ಇದೆಲ್ಲಾ ಏನಮ್ಮ....? ಸೀರೆ ಪಂಚೆ ಉಡು ಗರೆ ಗೃಹಪ್ರವೇಶೋತ್ಸವದ ಪರವಾಗಿ ಸ್ವೀಕರಿಸ್ತೀವಿ. ಆದರೆ ಚಿನ್ನ ಬಣ್ಣಾ ಏನಮ್ಮ?" ಎಂದರು.

"ಅಲ್ಲತ್ತೆ ಇದು ನಮ್ಮ ಪ್ರೀತಿಯ ಕಾಣಿಕೆ ನೀವು ತಗೊಳ್ಳೀ ಬೇಕು. ನಿಮ್ಮ ಮಗನಿಗೆ ಹಿಂದೆಲ್ಲಾ ನೀವು ತುಂಬಾ ಹಣದ ಸಹಾಯ ಮಾಡಿದ್ದೀರಿ" ಎಂದಳು. ಸೀತಮ್ಮ ನೊಂದುಕೊಂಡು

"ತಾಯಿ ಮಗನಿಗೆ ಹಣಾ ಕೊಟ್ಟರೆ ಸಹಾಯವೇನಮ್ಮ. ಅನಂತನ ಹಾಗೆ B.A, ಗೆ ನಿಲ್ಲಿಸಲಿಕ್ಕೆ ಅವನಿಗೆ ಇಷ್ಟ ಇರಲಿಲ್ಲಾ. M.A, ಓದ್ತೀನಿ ಅಂದ. ಅನಂತ ಕಳಿಸ್ತಿದ್ದ ಹಣಾ ಇತ್ತು. ನಾನು ಚೂರು ಪಾರು ಕಳಿ ಸ್ತಿದ್ದೆ. ಅದೆಲ್ಲಾ ಏನು ಲೆಕ್ಕಾ....? ಏನೋ ಒಂದು ವಿಷಯ್ಯಾಳೆ. ಹಂಗಿಸಿ ಬಿಟ್ಟ" ಎಂದರು.

"ಆಗ ನೀವು ಹಂಗಿಸಿದ್ದಕ್ಕೆ ಖಂಡಿತ ಕೋಪಾ ಇಲ್ಲ ಅತ್ತೆ. ಶಾರದನ್ನ ಮದುವೆಗೆ ನಾವು ಇಪ್ಪತ್ತೈದು ಸಾವಿರವಾದರೂ ಕೊಡಬೇಕಾಗಿತ್ತು. ಆದರೆ ಸ್ವಂತ ಮನೆ ಮಾಡ್ಕೋಬೇಕೂನ್ನೋ ಮೋಹದಲ್ಲಿ, ತುಂಬಾ ಕಟುವಾಗಿ ವರ್ತಸಿದೆ. ಈಗ ನಾನು ಮನೆ ಆದ ಸಂತೋಷಕ್ಕೆ ಇದನ್ನ ಕೊಡ್ತಿದ್ದೀನಿ" ಎಂದಳು.

ಆಚಾರ್ಯರು—"ತಗೋ....ಸೀತಾ. ಇನ್ನು ಚೆನ್ನಾಗಿ ಅಭಿವೃದ್ಧಿ

ಆಗೋಂತ ಹೃತ್ಪೂರ್ವಕವಾಗಿ ಹರಿಸು. ತಾಯಿ ಹರಕೆ ಎಂದು ವಿಫಲ ವಾಗಲ್ಲ" ಎಂದರು ಸೀತಮ್ಮ ಸರಾ ಧರಿಸಿ ಮಗಾ ಸೊಸೆಗೆ—"ದಿನದಿನಕ್ಕೆ ನಿಮ್ಮ ಐಶ್ವರ್ಯ ಅಭಿವೃದ್ಧಿ ಆಗಲಿ. ಆಯುರಾರೋಗ್ಯ ಐಶ್ವರ್ಯದಿಂದ ಸುಖವಾಗಿರಿ" ಎಂದು ಹರಿಸಿದರು.

ಮೊಮ್ಮಗನ್ನೆತ್ತಿ ಮುದ್ದಾಡಿ ಊರಿಗೆ ಹೋದರು. ಎಂಟು ದಿನದ ನಂತರ ಗೋವಿಂದ ತನ್ನ ಹಿರಿಯ ಸಹೋದ್ಯೋಗಿ ಸೇತು ಮಾಧವನ್ ಅವರ ಜೊತೆ ಬಂದ. ಅವಳು ಅದೇ ಕಾಲೇಜಿನಲ್ಲಿ ಕೆಲಸ ಮಾಡುತ್ತ ಇದ್ದದ್ದರಿಂದ ರಿಂದ ಅವರ ಪರಿಚಯವಿತ್ತು. "ಬನ್ನಿ ಸಾರ್....ನಮಸ್ಕಾರ" ಎಂದಳು

ಆತ ನಗುತ್ತ—"ಏನಮ್ಮ....ಹಾಯಾಗಿ ಮಗೂನ್ನ ಆಡಿಸ್ತಾ ಮನೇಲಿ ಕೂತು ಬಿಟ್ಟಿರಿ" ಎಂದರು.

"ಏನು ಮಾಡೋದು ಸಾರ್....ಮನೆ ಬೀಗ ಹಾಕಿ ಹಗಲಿರುಳು ಹೊರಗೆ ದುಡಿಯೋದು ಬೇಡಾಂತಿದ್ದೀನಿ" ಎಂದಳು.

"ಮನೆ ಬೀಗಾ ಹಾಕದೇ ದುಡಿಯೋ ಒಂದವಕಾಶ ತಂದಿದ್ದೀನಿ. ನಿಮ್ಮ ಮನೆ ಮಹಡಿ ಮೇಲಿನ ಹಜಾರ, ಕೆಳಗಿನ ವರಾಂಡದ ಎರಡು ರೂಮ್ ಬಿಟ್ಕೊಡಿ. ಶ್ರೀ ವರಹ ವೆಂಕಟೇಶ್ವರ ವಿದ್ಯಾಲಯ" ಪ್ರಾರಂಭಿಸೋಣಾ ... ತುಂಬಾ ಸ್ಟುಡೆಂಟ್ಸ್ ಕೇಳ್ತಿದ್ದಾರೆ, ನಮ್ಮದು ಚಿಕ್ಕ ಮನೆ. ನಮ್ಮ ತಂದೆ ತಾಯಿ, ಓದ್ತಾ ಇರೋ ನನ್ನ ಮೂರು ಮಕ್ಕಳಿಗೆ ಸಾಕು ನಿಮ್ಮ ಮನೆ ದೊಡ್ಡದಾಗಿದೆ. ಅವಕಾಶ ಕೊಡಿ ತಿಂಗಳಿಗೆ ಸಾವಿರ ರೂ ಬಾಡಿಗೆ ಕೊಡ್ತೀನಿ. ಗೋವಿಂದ ಬೆಳಗ್ಗೆ ಕ್ಲಾಸಸ್ ತಗೊಳ್ಳಿ. ಅವರ ಜೊತೆ ಮೋಹನ್ ಬರ್ತಾರೆ. ನಾನು ಇರ್ತೀನಿ ಸಂಜೆ ನೀವು, ನನ್ನ ಮಿಸೆಸ್, ನಾನು ಮೂರು ಜನ ಹೇಳೋಣಾ ...ಗೋವಿಂದಂಗೆ, ಸಾವಿರ, ನಿಮಗೆ ಸಾವಿರ ಅಂದ್ಕೊಂಡಿದ್ದೀನಿ. ವಿದ್ಯಾನಿಧಿ ಇನ್‌ಸ್ಟ್ಯೂಟ್ ಮುಚ್ಚಿದ ಮೇಲೆ ನಾವೆಲ್ಲಾ ಬರಿ ಕಾಲೇಜು ಸಂಬಳಾ ನಂಬಿಕೊಂಡಿರಬೇಕಾಗಿದೆ.

ಪ್ರೊ॥ ಮೋಹನ್ ನಿವೃತ್ತರಾಗಿದ್ದಾರಲ್ಲ ಅವರು ಹಾಗು ನಿಮ್ಮ ಹೆಸರಲ್ಲಿರಲಿ. ನಾವು ಬಂದು ಕೆಲಸ ಮಾಡ್ತೀವಿ. ನೇರವಾಗಿ ನಾನೇ ಮನೇಲಿ ಇಟ್ಕೊಳ್ಳೋ ಹಾಗಿಲ್ಲ. ಆದರೆ ಸ್ಟೂಡೆಂಟ್ಸ್ ಬರೋದು ಮಾತ್ರ ನನ್ನ ಹೆಸರು ಕೇಳಿಯೆ" ಎಂದರು.

"ಹೌದು ! ಸಾರ್....ನಿಮ್ಮ ಈ ಯೋಜನೆಗೆ ನನ್ನ ಒಪ್ಪಿಗೆ ಇದೆ.

ಬೆಳಿಗ್ಗೆ ಸಂಜೆ ಕೂತಿದ್ದು ನನಗೂ ಬೇಜಾರನಿಸತ್ತೆ. ಸಂಜೆ ಆರರಿಂದ ಎಂಟರ ವರಿಗೆ ಕ್ಲಾಸ್ ತಗೋತೀನಿ. ಆಗ ಇವರು ಮಗೂನ್ನ ನೋಡ್ಕೋತಾರೆ" ಎಂದಳು.

ಎಲ್ಲಾ ವಿಷಯ ಚರ್ಚಿಸಿ ಆತ ಹೊರಟುಬಿಟ್ಟರು. ಈ ಯೋಜನೆ ಪ್ರಕಾರ ಆತನಿಗೆ ಆತನ ಪತ್ನಿಗೆ ತಿಂಗಳಿಗೆ ಎಂಟು ಸಾವಿರದವರಿಗೆ ಆದಾಯ ವಿತ್ತು. ಅವರು ಅಷ್ಟು ಪ್ರತಿಭಾವಂತರ ಹೌದು! ಆದರೆ ಮನೆಯಲ್ಲೇ ಕುಳಿತರು. ತಮಗೆ ತಿಂಗಳಿಗೆ ಮೂರು ಸಾವಿರ ಸಿಗುವ ಯೋಚನೆ ಅವಳಿಗೆ ಇಷ್ಟವಾಯಿತು. ದೊಡ್ಡ ಮನೆ, ಮಹಡಿ, ವರಾಂಡದ ಎರಡು ರೂಮ್ ಬಾಡಿಗೆಗೆ ಕೊಟ್ಟರೆ ಅವರಿಗೆ ನೀರು ಬಚ್ಚಲ ಮನೆ ಶೌಚ ಗೃಹ ಕಟ್ಟಿಸಿ ಕೊಡಬೇಕಾಗುತ್ತದೆ. ಸ್ಯಕ್ಕೆ ಇದೆಲ್ಲಾ ಬೇಡಾ. ಸ್ವಲ ದುಡ್ಡು ಕೊಡಲಿ, ಎಂದು ಅಂದುಕೊಂಡಿದ್ದಳು ತಾಯಿಯಾ ಒಡವೆ ಮಾರಿ ಇಟ್ಟ ಹಣಾ ತಿಂಗಳಿಗೆ ಮೂರು ಸಾವಿರ ಬಡ್ಡಿ ತರುತ್ತಿತ್ತು. ಅವಳ ಸ್ವಂತ ಒಡವೆಗಳು ಹತ್ತೂ ತೊಲದ್ದು....ಅದರಲ್ಲಿಯೂ ಎರಡೆಳೆ ಸರ ಅತ್ತೆಗೆ ಕೊಟ್ಟಿದ್ದಳು.

"ನೋಡಿ, ನಿಜಕ್ಕೂ ನಿಮ್ಮ ತಂದೆ ತಾಯಿ ಕಾಲಿಟ್ಟಾಗೆಲ್ಲಾ ನಮಗೆ ಒಳ್ಳೆದಾಗತ್ತೆ" ಎಂದಳು.

"ಹಿರಿಯರ ಆಶೀರ್ವಾದ, ದೇವರ ಕೃಪೆ ಇದ್ದರೇ ಮನುಷ್ಯನ ಜೀವನದಲ್ಲಿ ಐಶ್ವರ್ಯ ಅಭಿವೃದ್ಧಿ ಆಗೋದು....ಸತತವಾಗಿ ಒಳ್ಳೊಳ್ಳೆ ದೇವರ ಸೇವೆ ನಡಿಸಿ, ದೇವರ ಕೃಪೆ ಗಳಿಸಬೇಕು. ಹಿರಿಯರನ್ನ ಓಲೈಸಿ ಅವರ ಮನಸ್ಸು ಸಂತೋಷ ಪಡಿಸ್ತಿರಬೇಕು. ಆಗಲೇ ನಮ್ಮ ಬದುಕಿನ ಪ್ರಗತಿ" ಎಂದ ಗೋವಿಂದ. ಪರಿಮಳ ಗಂಡನ ಮಾತನ್ನೊಪ್ಪಿ—

"ನಿಜಾಂದ್ರೇ ಮೊದಲು ಈ ಬದುಕಿನ ಗುಟ್ಟು, ನಮಗೆ....ಗೊತ್ತಿರಲಿಲ್ಲ. ನಮ್ಮ ವಿದ್ಯಾ, ನಮ್ಮ ಸಂಪಾದನೇ, ನಮ್ಮ ಹಿರಿಮೆ ಯಾರನ್ಯಾಕೆ ಓಲೈಸಬೇಕೂಂತ ಎಲ್ಲರನ್ನ ತಿರಸ್ಕಾರವಾಗಿ ಕಾಣ್ತಿದ್ದೆ. ಆ ದಿನಗಳಲ್ಲಿ ನಿಜಕ್ಕು ನಮ್ಮ ಬದುಕಿಗೆ ಏನು ಪ್ರಗತಿ ಸಿಕ್ಕಿರಲಿಲ್ಲ" ಎಂದಳು.

"ಸಾಧ್ಯವಾದರೇ ವೇದಮ್ಮನ್ನ ಅಡಿಗೆಗೆ ಹಾಕ್ಕೊ. ಅವರ ಮಗಳು ವೀಣಾನ್ನ ಮಗೂನ್ನ ನೋಡಿಕೊಳ್ಳಲಿಕ್ಕೆ ಹಾಕ್ಕೊ. ತಿಂಗಳಿಗೆ ಐನೂರು ರೂ ಹೋದರೂ ಚಿಂತೇಯಿಲ್ಲ" ಎಂದ.

"ಹೌದೂಂದ್ರೆ ಈ ತುಂಟನ್ನ ನಾನ್ನೊಬ್ಬಳೇ ಈ ನಡುವೆ ಸುಧಾರಿಸ್ಲಿಕ್ಕೆ ಆಗಲ್ಲ" ಎಂದಳು ಪರಿಮಳ.

ತನ್ನನ್ನೂ ತಾಯಿ ತುಂಟ ಎಂದಿದ್ದು ಅರಿವಾಯಿತೇನೋ ಎಂಬಂತೇ ಕೋಪದಿಂದ ಚೀರಿ ಅಳತೊಡಗಿದ ವರಾಹ ವೆಂಕಟಕೃಷ್ಣ. "ವರು ...ನೀನು ತುಂಟಾ ಅಲ್ಲಪ್ಪಾ, ತುಂಬಾ ಜಾಣಾ .. ಒಳ್ಳೇ ಮುದ್ದು ಮರಿ" ಎಂದು ಮಗುವನ್ನೆತ್ತಿಕೊಂಡು ಅಪ್ಪಿ ಸಂತೈಸತೊಡಗಿದಳು. ಗೋವಿಂದ ಹೆಮ್ಮೆಯಿಂದ ಮಗುವನ್ನು ಸಂತೈಸುತ್ತಿದ್ದ ಮಡದಿಯನ್ನೇ ನೋಡುತ್ತಿದ್ದ. ಅವನ ಹೃದಯದಲ್ಲಿ ತೃಪ್ತಿ....ತುಂಬಿತ್ತು.

— 0 — 0 —

# ಕೀರ್ತಿ ಪ್ರಕಾಶನ

2, ಎಸ್ ಡಿ. ಎಂ ಲೇನ್.

ಮನವರ್ತಿಪೇಟೆ, ಬೆಂಗಳೂರು-53